'ಟರ್ಮಿನಲ್‌ಗೆ ಬಂದ ಮೂವರು ಅಲ್ಲಿದ್ದ ಓಡಾಡಿ, ಲಾರಿ ಚಾಲಕರ ಮೊಬೈಲ್, ಪರ್ಸ್ ಕದಿಯಲು ಯತ್ನಿಸಿದ್ದಾರೆ. ಅವರಲ್ಲಿ ಸಿಕ್ಕಿಬಿದ್ದ ಒಬ್ಬರನ್ನು ಲಾರಿ ಚಾಲಕರು ಮನಬಂದಂತೆ ಥಳಿಸಿದ್ದಾರೆ. ತೀವ್ರ ಸ್ವರೂಪದ ಗಾಯಗಳಿಂದ ಅವರು ಮೃತಪಟ್ಟಿದ್ದು ತನಿಖೆಯಿಂದ ಗೊತ್ತಾಗಿದೆ' ಎಂದು ತೋರಣಗಲ್ಲು ಠಾಣೆ ಪೊಲೀಸರು ತಿಳಿಸಿದ್ದಾರೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶದ ಅರ್ಮಾನ್ ಮತ್ತು ಅಫ್ಜಲ್ ಎಂಬ ಇಬ್ಬರು ಲಾರಿ ಚಾಲಕರನ್ನು ವಶಕ್ಕೆ ಪಡೆಯಲಾಗಿದೆ. ಘಟನೆಗೆ ಕಾರಣರಾದ ಇತರರ ಪತ್ತೆಗೆ ಕಾರ್ಯಾಚರಣೆ ಮುಂದುವರೆದಿದೆ. ಮೃತ ವ್ಯಕ್ತಿ ಹೊರರಾಜ್ಯದವರೆಂದು ಗೊತ್ತಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಡೆಕಾಯ್' ಕಾರ್ಯಾಚರಣೆ ನಡೆಸಿದ ಆರೋಗ್ಯ ಇಲಾಖೆ ಅಧಿಕಾರಿಗಳು

ಭ್ರೂಣ ಲಿಂಗ ಪತ್ತೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ಹಲವು ದಿನಗಳಿಂದ ಹೆಣ್ಣು ಭ್ರೂಣಗಳ ಲಿಂಗ ಪತ್ತೆ ಮಾಡುತ್ತಿದ್ದ ಆರೋಪಿಗಳನ್ನು ಸೆರೆ ಹಿಡಿಯಲು ಆರೋಗ್ಯಾಧಿಕಾರಿಗಳ ತಂಡ ವಿಶೇಷ ಕಾರ್ಯಾಚರಣೆ ನಡೆಸಿ, ಮೂವರನ್ನು ಸ್ಥಳದಲ್ಲೇ ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಲ್ಲಿ ಯಶಸ್ವಿಯಾಗಿದೆ.

ತಾಲ್ಲೂಕಿನ ಬಿಂಡಿಗನವಲೆ ಹೋಬಳಿಯ ದೇವರ ಮಾವಿನಕೆರೆಯ ತೋಟದ ಮನೆಯ ಮೇಲೆ ಗುರುವಾರ ರಾತ್ರಿ ದಾಳಿ ನಡೆಸಿದ ಅಧಿಕಾರಿಗಳು, ಹಾಸನ ಜಿಲ್ಲೆಯ ಕೊಣನೂರಿನ ಮನೋಹರ್, ಮಂಡ್ಯದ ಗುತ್ತಲು ರಸ್ತೆಯ ಖಾಸಗಿ ಆಸ್ಪತ್ರೆಯ ಸಿಬ್ಬಂದಿ ನಾಗಮಣಿ, ಮಾವಿನಕೆರೆಯ ತೋಟದ ಮನೆಯ ಮಾಲೀಕ ಧನಂಜಯ್ ಅವರನ್ನು ಬಂಧಿಸಿದರು.

ಕಾರ್ಯಾಚರಣೆ ವೇಳೆ, ಸ್ಕ್ಯಾನಿಂಗ್ ಮಾಡುತ್ತಿದ್ದ ಪಾಂಡವಪುರ ತಾಲ್ಲೂಕಿನ ಆರೋಪಿ ಅಭಿ ತಲೆಮರೆಸಿಕೊಂಡಿದ್ದು, ಆತ ಬೆಂಗಳೂರಿನ ಬೈಯಪ್ಪನಹಳ್ಳಿ ಮತ್ತು ಪಾಂಡವಪುರ ತಾಲ್ಲೂಕಿನಲ್ಲಿ ನಡೆದಿದ್ದ ಹೆಣ್ಣು ಭ್ರೂಣ ಲಿಂಗ ಪತ್ತೆ ಪ್ರಕರಣದ ಆರೋಪಿಯೂ ಆಗಿದ್ದ ಎನ್ನಲಾಗಿದೆ. ವಾಹನದಲ್ಲಿದ್ದ ಅಬಾರ್ಷನ್ ಕಿಟ್‌ಗಳು ಮತ್ತು ಗ್ರಾಹಕರಿಂದ ಪಡೆದಿದ್ದ ₹43 ಸಾವಿರವನ್ನು ವಶಕ್ಕೆ ಪಡೆದಿದ್ದಾರೆ. ಬೆಳ್ಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಕ್ರಾಸ್ ಬಳಿ ಹೋಟೆಲ್‌ವೊಂದರಲ್ಲಿ ಹೆಣ್ಣು ಭ್ರೂಣ ಲಿಂಗ ಪತ್ತೆ ಪ್ರಕರಣದ ಆರೋಪಿಯ ವಿಚಾರಣೆ ನಡೆಸಿದ ಡಿಎಚ್‌ಒ ಡಾ. ಮೋಹನ್ ಕುಮಾರ್

'ಡೆಕಾಯ್' ಗರ್ಭಿಣಿಯಿಂದ ಪತ್ತೆ: ತೋಟದ ಮನೆಯಲ್ಲಿ ಹೆಣ್ಣು ಭ್ರೂಣ ಲಿಂಗ ಪತ್ತೆ ಮಾಡುತ್ತಿದ್ದ ಜಾಲವನ್ನು ಸೆರೆ ಹಿಡಿಯಲು 'ಡೆಕಾಯ್' ಮಹಿಳೆಯನ್ನು (ಆರೋಗ್ಯ ಇಲಾಖೆಯಿಂದ ಕಾರ್ಯಾಚರಣೆಗಾಗಿ ಕಳುಹಿಸಿದ್ದ ಗರ್ಭಿಣಿ) ಮಂಡ್ಯದಿಂದ ಆತನ ಪತಿಯೊಂದಿಗೆ ಪೂರ್ವ ನಿಯೋಜಿತವಾಗಿ ವಾಹನವೊಂದರಲ್ಲಿ ಜಿ.ಪಿ.ಎಸ್ ಅಳವಡಿಸಿ ಬೆಳ್ಳೂರು ಕ್ರಾಸ್‌ಗೆ ಕಳುಹಿಸಿದ್ದರು.

ಮಹಿಳೆಯ ಪತಿಯನ್ನು ಅಲ್ಲಿಯೇ ಇಳಿಸಿದ ಏಜೆಂಟ್ ನಾಗಮಣಿ, ಮಹಿಳೆಯನ್ನು ಮತ್ತೊಂದು ವಾಹನದಲ್ಲಿ ತೋಟದ ಮನೆಗೆ ಕರೆದೊಯ್ದರು. ಅಲ್ಲಿ ಅಭಿ ಮೂಲಕ ಸ್ಕ್ಯಾನಿಂಗ್ ಮಾಡಿಸಿ ಭ್ರೂಣ ಪತ್ತೆ ಮಾಡಿದರು. ನಂತರ ಆ ಮಹಿಳೆ ಹಾಗೂ ಭ್ರೂಣ ಲಿಂಗ ಪತ್ತೆಗೆ ಬಂದಿದ್ದ ಹಾಸನದ ದಂಪತಿ ಯನ್ನು ಒಂದೇ ವಾಹನದಲ್ಲಿ ಬೆಳ್ಳೂರು ಕ್ರಾಸ್‌ಗೆ ಕರೆತಂದ ಕೂಡಲೇ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ಆರೋಪಿಗಳನ್ನು ಬಂಧಿಸಿದರು.

ಆರೋಗ್ಯ ಇಲಾಖೆಯ ಉಪನಿರ್ದೇಶಕ ವಿವೇಕ್ ಅವರೊಂದಿಗೆ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಬೆಟ್ಟಸ್ವಾಮಿ, ಡಿಎಚ್‌ಒ ಡಾ.ಮೋಹನ್ ಕುಮಾರ್ ಮತ್ತು ಬೆಳ್ಳೂರು ಪಿ.ಎಸ್.ಐ ರವಿಕುಮಾರ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.



ಸ್ಕ್ಯಾನಿಂಗ್ ಸೆಂಟರ್‌ನಲ್ಲಿ ನಮೂದಿಸಿಕೊಂಡ ಗರ್ಭಿಣಿಯರು ಮೂರು ತಿಂಗಳಾದರೂ ಮತ್ತೆ ಬರದಿದ್ದರೆ, ಅಂಥವರ ಮೇಲೆ ವಿಶೇಷ ನಿಗಾ ಇಟ್ಟಿದ್ದೇವೆ
ಡಾ.ರಮೇಶ್, ಟಿಎಚ್‌ಒ, ನಾಗಮಂಗಲ

ಮಂಡ್ಯ ಜಿಲ್ಲೆಯಲ್ಲಿ ಹೆಣ್ಣು ಭ್ರೂಣ ಲಿಂಗ ಪತ್ತೆ ಜಾಲವನ್ನು ಬೇಧಿಸಲು ವಿಶೇಷ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸುವಲ್ಲಿ ನಮ್ಮ ತಂಡ ಯಶಸ್ವಿಯಾಗಿದೆ
ಡಾ.ಮೋಹನ್ ಕುಮಾರ್, ಡಿಎಚ್‌ಒ, ಮಂಡ್ಯ

ಸುದ್ದಿ 2 ನಿಮಿಷ

ನೀನಾಸಂ: 'ಕಲೆಗಳ ಸಂಗಡ ಮಾತುಕತೆ' ಅ. 2ರಿಂದ

ಶಿವಮೊಗ್ಗ: ಹೆಗ್ಗೋಡಿನ ನೀನಾಸಂ ಸಂಸ್ಥೆಯಲ್ಲಿ ಅ. 2ರಿಂದ 6ರವರೆಗೆ 5 ದಿನಗಳ ಕಾಲ 'ಕಲೆಗಳ ಸಂಗಡ ಮಾತುಕತೆ' ಕಾರ್ಯಕ್ರಮ ಆಯೋಜಿಸಲಾಗಿದೆ.

ಎರಡೂವರೆ ದಶಕಗಳಿಂದ ಪ್ರತಿವರ್ಷ ಚಲನಚಿತ್ರ-ಸಂಸ್ಕೃತಿ ಶಿಬಿರ ಆಯೋಜಿಸುತ್ತಿರುವ ನೀನಾಸಂ ಎರಡು ವರ್ಷಗಳಿಂದ ಅದರ ಪರಿಷ್ಕೃತ ರೂಪವಾದ 'ಕಲೆಗಳ ಸಂಗಡ ಮಾತುಕತೆ' ಕಾರ್ಯಕ್ರಮ ಆಯೋಜಿಸುತ್ತಿದೆ.

ನಿರ್ದಿಷ್ಟ ವಿಷಯಗಳ ಕುರಿತ ಉಪನ್ಯಾಸ, ಗೋಷ್ಠಿ, ಸಂವಾದಗಳು ಇರುವುದಿಲ್ಲ. ಬದಲಿಗೆ ರಂಗಭೂಮಿ, ಸಾಹಿತ್ಯ, ಸಂಗೀತ, ಸಿನಿಮಾ, ಚಿತ್ರಕಲೆ ಮೊದಲಾದ ಕಲಾ ಪಠ್ಯಗಳ ಪ್ರಸ್ತುತಿ ಮತ್ತು ಅವನ್ನು ಕುರಿತ ಚರ್ಚೆಗಳು ಇರುತ್ತವೆ. 5 ದಿನ ಸಂಜೆ 'ತಿರುಗಾಟ' ಮತ್ತು ನೀನಾಸಂ ನಾಟಕಗಳ ಸೇರಿದಂತೆ ಕಲಾ ಪ್ರಯೋಗಗಳ ಉತ್ಸವ ಸಾರ್ವಜನಿಕರಿಗೆ ತೆರೆದಿರುತ್ತದೆ.

ಈ ಮಾತುಕತೆಗೆ ಕರ್ನಾಟಕ ಮತ್ತು ಹೊರಗಿನ ಬೇರೆಬೇರೆ ರಾಜ್ಯಗಳ ಕಲಾವಿದರು, ವಿದ್ಯಾರ್ಥಿಗಳು, ಲೇಖಕರು ಉತ್ಸಾಹಿಗಳು ಬರುತ್ತಾರೆ. ಆಸಕ್ತರೂ ಸೀಮಿತ ಸಂಖ್ಯೆಯಲ್ಲಿ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಹಾಗೆ ಬರುವವರು ಐದೂ ದಿನ ಪೂರ್ಣಾವಧಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ಅಗತ್ಯ, ಭಾಗಶಃ ಪಾಲ್ಗೊಳ್ಳಲು ಅವಕಾಶ ಇಲ್ಲ.

ಹೆಚ್ಚಿನ ವಿವರಗಳು ಮತ್ತು ನೋಂದಣಿಗಾಗಿ www.ninasam.org ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಶಿರೂರು: ಟ್ರಕ್ ಅವಶೇಷ ಪತ್ತೆ

ಕಾರವಾರ: ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿದು, ಒಂದು ತಿಂಗಳಾಗಿದೆ. ದುರ್ಘಟನೆಯಲ್ಲಿ ಕಾಣೆಯಾದ ಮೂವರ ಪತ್ತೆಗೆ ಮತ್ತು ಗಂಗಾವಳಿ ನದಿಯಲ್ಲಿ ಮುಳುಗಿದ ಲಾರಿ ಹೊರತೆಗೆಯಲು ಶುಕ್ರವಾರ ಕಾರ್ಯಾಚರಣೆ ವೇಗ ಪಡೆಯಿತು. ನದಿಗೆ ಉರುಳಿದ್ದ ಗ್ಯಾಸ್ ಟ್ಯಾಂಕರ್ ವಾಹನದ ಕೆಲ ಅವಶೇಷಗಳು ಸಿಕ್ಕಿವೆ.

ಮುಳುಗು ತಜ್ಞ ಈಶ್ವರ ಮಲ್ಪೆ ಮತ್ತು ತಂಡ, ನೌಕಾದಳದ ಮುಳುಗು ತಜ್ಞರು, ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ ಸದಸ್ಯರು, ಸ್ಥಳೀಯ ಮೀನುಗಾರರು ಸೇರಿ ಕಾರ್ಯಾಚರಣೆ ನಡೆಸಿದ್ದಾರೆ. ಯಲ್ಲಾಪುರ ಭಾಗದಲ್ಲಿ ಮಳೆ ಸುರಿದ ಪರಿಣಾಮ ಗಂಗಾವಳಿ ನದಿಯಲ್ಲಿ ನೀರಿನ ಮಟ್ಟ ರಭಸ ಪಡೆದಿದೆ.

'ನದಿಯಲ್ಲಿ ಬಿದ್ದ ಮರಗಳಿಗೆ ಕಬ್ಬಿಣದ ಹಗ್ಗ ಕಟ್ಟಲಾಗಿದೆ. ಕ್ರೇನ್‌ನಿಂದ ಅವುಗಳನ್ನು ಎಳೆದು, ದಡಕ್ಕೆ ತರಲಾಗುವುದು. ನಂತರ ಮುಂದಿನ ಕಾರ್ಯಾಚರಣೆ ಮುಂದುವರಿಸಲಾಗುವುದು' ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ತಿಳಿಸಿದ್ದಾರೆ.

ಭ್ರೂಣಹತ್ಯೆ: ಇಬ್ಬರು ಅಧಿಕಾರಿಗಳು ಅಮಾನತು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಿಲ್ಲೆಯ ಮಹಾಲಿಂಗಪುರದಲ್ಲಿ ನಡೆದ ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದಿನ ಜಿಲ್ಲಾ ಆರೋಗ್ಯ ಅಧಿಕಾರಿ (ಡಿಎಚ್‌ಒ) ಡಾ.ರಾಜಕುಮಾರ ಯರಗಲ್ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಡಿ.ಬಿ.ಪಟ್ಟಣ ಶೆಟ್ಟಿ ಅಮಾನತುಗೊಂಡಿದ್ದಾರೆ.

ಮಹಾಲಿಂಗಪುರದಲ್ಲಿ ಕಳೆದ ಮೇ 27 ರಂದು ಕೊಲ್ಹಾಪುರ ಜಿಲ್ಲೆಯ ಸೋನಾಲಿ ಕದಂ ಎಂಬ ಮಹಿಳೆಯ ಭ್ರೂಣ ಗರ್ಭಪಾತ ಮಾಡಿದ್ದು, ಆ ದಿನದಂದೇ ಅವರು ಮೃತಪಟ್ಟಿದ್ದರು. ಈ ಪ್ರಕರಣದಲ್ಲಿ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಹಿನ್ನೆಲೆಯಲ್ಲಿ ಡಾ.ಯರಗಲ್ ಹಾಗೂ ಡಾ. ಪಟ್ಟಣಶೆಟ್ಟಿ ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ ಇಲಾಖಾ ವಿಚಾರಣೆ ಬಾಕಿಯಿಟ್ಟು ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಇಬ್ಬರನ್ನೂ ಅಮಾನತುಗೊಳಿಸಿ ಆದೇಶ ಹೊರಡಿಸಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಜಮಖಂಡಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಜಿ.ಎಸ್.ಗಲಗಲಿ ಮತ್ತು ಮಹಾಲಿಂಗಪುರ ಸಮುದಾಯ ಆರೋಗ್ಯ ಕೇಂದ್ರದ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಅಮೋಜವ್ವ ಬಿದರಿ ಅವರನ್ನು ಪ್ರಸ್ತುತ ಹುದ್ದೆಯಿಂದ ವರ್ಗಾಯಿಸಿ ಅವರ ಸೇವೆಯನ್ನು ಕೂಡಲೇ ಹಿಂಪಡೆಯಲಾಗಿದೆ.

ನಾಗರಹೊಳೆ: ಸೀಮಾ ಮೊದಲ ನಿರ್ದೇಶಕಿ

ಮೈಸೂರು: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮೊದಲ ನಿರ್ದೇಶಕಿಯಾಗಿ ಪಿ. ಎ. ಸೀಮಾ ಅಧಿಕಾರ ಸ್ವೀಕರಿಸಿದ್ದಾರೆ. ರಾಜ್ಯದ ಹುಲಿ ಸಂರಕ್ಷಿತ ಪ್ರದೇಶ ಗಳಲ್ಲಿ ವನ್ಯಜೀವಿಗಳ ಸಾಂದ್ರತೆ ಹೆಚ್ಚಿರುವ ಖ್ಯಾತಿಯ ನಾಗರಹೊಳೆಗೆ ಇದೇ ಮೊದಲ ಬಾರಿ ಮಹಿಳಾ ಅಧಿಕಾರಿಯನ್ನು ಸರ್ಕಾರ ನಿಯೋಜಿಸಿದೆ. ಕೊಡಗು ಜಿಲ್ಲೆಯ ಪೊನ್ನಂಪೇಟೆಯ ಅವರು 2017ರ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿ. ಈ ಹಿಂದೆ ಮಡಿಕೇರಿ, ಮೈಸೂರು, ಮಂಡ್ಯ ಹಾಗೂ ಹುಣಸೂರು ಅರಣ್ಯ ವಿಭಾಗದಲ್ಲಿ ಡಿಸಿಎಫ್ ಆಗಿ ಸೇವೆ ಸಲ್ಲಿಸಿದ್ದರು.

ಆನೆ ಕಾರ್ಯಪಡೆ ಡಿಸಿಎಫ್ ಆಗಿದ್ದ ಅವರು, ಕೆ.ಆರ್.ನಗರದಲ್ಲಿ ಕಾಡಾನೆ ಹಿಮ್ಮೆಟ್ಟಿಸುವ ಕಾರ್ಯಾಚರಣೆ ಮೂಲಕ ಗಮನ ಸೆಳೆದಿದ್ದರು.

ಮೈಸೂರು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಡಾ.ಮಾಲತಿ ಪ್ರಿಯಾ, ಬಿಳಿಗಿರಿ ರಂಗನಾಥ ಬೆಟ್ಟ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿಯಾಗಿ ದೀಪಾ ಜೆ. ಕಂಟ್ರಾಕ್ಟರ್ ಅವರು ಸೇವೆ ಸಲ್ಲಿಸುತ್ತಿದ್ದಾರೆ. ಸೀಮಾ ಅವರೊಂದಿಗೆ ಮೈಸೂರು ಭಾಗದಲ್ಲಿ ಪ್ರಮುಖ ಹುದ್ದೆ ನಿಭಾಯಿಸುತ್ತಿರುವ ಮಹಿಳಾ ಅಧಿಕಾರಿಗಳ ಸಂಖ್ಯೆ ಮೂರಕ್ಕೇರಿದೆ.

ಕ್ರಷರ್ ತ್ಯಾಜ್ಯ ನೇರವಾಗಿ ಚಿಕ್ಕದೇವರಾಯಸಾಗರ ನಾಲೆಗೆ

ನಾಲೆ ನೀರಲ್ಲಿ ಜಲ್ಲಿ ತ್ಯಾಜ್ಯ!

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ತಾಲ್ಲೂಕಿನ ಹಂಗರಹಳ್ಳಿ ಸಮೀಪದಲ್ಲಿರುವ ಜಲ್ಲಿ ಕ್ರಷರ್‌ನಿಂದ ತ್ಯಾಜ್ಯವನ್ನು ನೇರವಾಗಿ ಚಿಕ್ಕದೇವರಾಯಸಾಗರ (ಸಿಡಿಎಸ್) ನಾಲೆಗೆ ಬಿಡುತ್ತಿದ್ದು, ನೀರು ಕಲುಷಿತಗೊಂಡಿದೆ.

ಕ್ರಷರ್‌ನಲ್ಲಿ ಕಲ್ಲನ್ನು ಪುಡಿ ಮಾಡಿ ಜಲ್ಲಿ ಮತ್ತು ಎಂ- ಸ್ಯಾಂಡ್ ತಯಾರಿಸಿದ ಬಳಿಕ ಉಳಿಯುವ ತ್ಯಾಜ್ಯವನ್ನು ನಾಲೆಗೆ ಬಿಡಲಾಗುತ್ತಿದೆ. ಶುಕ್ರವಾರವೂ ಮುಂಜಾನೆ 6ರಿಂದ ಮಧ್ಯಾಹ್ನ 12 ಗಂಟೆಯವರೆಗೂ ತ್ಯಾಜ್ಯವನ್ನು ನಾಲೆಗೆ ಬಿಡಲಾಗಿದೆ. ಹಂಗರಹಳ್ಳಿ, ಮುಂಡುಗದೊರೆ, ವಡಿಯಾಂಡಹಳ್ಳಿ, ಅರಕೆರೆ ಮಾರ್ಗವಾಗಿ ಬನ್ನೂರು ಕಡೆಗೆ ಹರಿಯುವ ನಾಲೆಯಲ್ಲಿ ಹಾಲು ಹರಿಯುತ್ತಿರುವಂತೆ ಕಂಡು ಬಂತು.

ತ್ಯಾಜ್ಯವನ್ನು ನೇರವಾಗಿ ಹರಿಸುತ್ತಿರುವುದರಿಂದ ನೀರು ಕಲುಷಿತವಾಗಿದ್ದು, ನಾಲೆಯ ಉದ್ದಕ್ಕೂ ಮೀನುಗಳು ಸತ್ತು ತೇಲುತ್ತಿವೆ. ಕೃಷಿ ಜಮೀನಿಗೂ ನೀರು ಹರಿಯುತ್ತಿದ್ದು, ಬೆಳೆಗಳು ನಾಶವಾಗುವ ಭಯ ರೈತರನ್ನು ಕಾಡುತ್ತಿದೆ. ಜಾನುವಾರುಗಳಿಗೆ ನಲ್ಲಿ ನೀರನ್ನು ಕುಡಿಸಲಾಗುತ್ತಿದೆ.

'ಹಂಗರಹಳ್ಳಿ ಬಳಿ, ನಾಲೆ ಏರಿಯ ಪಕ್ಕದಲ್ಲೇ ಇರುವ ಕ್ರಷರ್‌ನಿಂದ ತ್ಯಾಜ್ಯವನ್ನು ರಾತ್ರಿ ವೇಳೆ ಬಿಡಲಾಗುತ್ತಿತ್ತು. ಈಗ ಹಗಲಲ್ಲೇ ಹರಿಸಲಾಗುತ್ತಿದೆ. ನೀರು ನೋಡಿದರೆ ಭಯವಾಗುತ್ತದೆ. ಹತ್ತಾರು ಗ್ರಾಮಗಳ ರೈತರು ಈ ನೀರನ್ನೇ ನೆಚ್ಚಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಬೆಳೆ ನಷ್ಟವಾದರೆ ಯಾರು ಹೊಣೆ? ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ದಿನಪೂರ್ತಿ ನಾಲೆಯ ನೀರು ರಾಡಿಯಾಗಿದ್ದರೂ ಗಮನಕ್ಕೆ ಬಂದಿಲ್ಲವೆ?' ಎಂದು ಅರಕೆರೆ ಗ್ರಾಮದ ರೈತ ಕೃಷ್ಣೇಗೌಡ, ವಡಿಯಾಂಡಹಳ್ಳಿಯ ಕುಮಾರ ಆಕ್ರೋಶ ವ್ಯಕ್ತಪಡಿಸಿದರು.

'ನಾಲೆಗೆ ತ್ಯಾಜ್ಯ ಬಿಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ತ್ಯಾಜ್ಯ ಸೇರದಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ತಾಲ್ಲೂಕು ಕಚೇರಿ ಮತ್ತು ನೀರಾವರಿ ಇಲಾಖೆ ಕಚೇರಿ ಎದುರು ಧರಣಿ ನಡೆಸುತ್ತೇವೆ' ಎಂದು ವಡಿಯಾಂಡಹಳ್ಳಿ, ಗೊಬ್ಬರಗಾಲ, ಅರಕೆರೆ ಗ್ರಾಮಗಳ ರೈತರು ಎಚ್ಚರಿಸಿದ್ದಾರೆ.

ಶ್ರೀರಂಗಪಟ್ಟಣ ತಾಲ್ಲೂಕಿನ ಹಂಗರಹಳ್ಳಿ ಬಳಿ ಇರುವ ಜಲ್ಲಿ ಕ್ರಷರ್‌ನಿಂದ ತ್ಯಾಜ್ಯವನ್ನು ಚಿಕ್ಕದೇವರಾಯಸಾಗರ (ಸಿಡಿಎಸ್) ನಾಲೆಗೆ ಬಿಡುತ್ತಿದ್ದು, ನಾಲೆಯ ನೀರು ಶುಕ್ರವಾರ ಕಲುಷಿತಗೊಂಡಿತ್ತು

ನಾಲೆಗೆ ಕ್ರಷರ್‌ನಿಂದ ತ್ಯಾಜ್ಯವನ್ನು ಬಿಡುತ್ತಿರುವ ವಿಷಯ ಗೊತ್ತಾಗಿಲ್ಲ. ಕಂದಾಯ ನಿರೀಕ್ಷಕರು ಮತ್ತು ಸಿಬ್ಬಂದಿಯನ್ನು ಕಳುಹಿಸಿ ಮಾಹಿತಿ ಪಡೆಯುತ್ತೇನೆ. ನಾಲೆಗೆ ತ್ಯಾಜ್ಯ ಬಿಡುತ್ತಿರುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು
ಪರಶುರಾಮ ಸತ್ತಿಗೇರಿ, ತಹಶೀಲ್ದಾರ್, ಶ್ರೀರಂಗಪಟ್ಟಣ

ಬಿಜೆಪಿ ಅತೃಪ್ತರ ಸಭೆಗೆ ಹೈಕಮಾಂಡ್ ತಡೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬಿಜೆಪಿಯ 'ಅತೃಪ್ತ' ನಾಯಕರು ಆಗಸ್ಟ್ 21ರಂದು ಬೆಂಗಳೂರಿನಲ್ಲಿ ಕರೆದಿದ್ದ ಸಭೆಗೆ ಹೈಕಮಾಂಡ್ ತಡೆ ಒಡ್ಡಿದೆ. ಸಭೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ' ಎಂದು ಶಾಸಕ ರಮೇಶ ಜಾರಕಿಹೊಳಿ ಆಪ್ತವಲಯ ಖಚಿತಪಡಿಸಿದೆ.

'ಮುಡಾ' ಹಗರಣ ವಿರೋಧಿಸಿ ಬಿಜೆಪಿ ನಾಯಕರು ಬೆಂಗಳೂರಿನಿಂದ ಮೈಸೂರಿನವರೆಗೆ ನಡೆಸಿದ ಪಾದಯಾತ್ರೆ ಪೂರ್ಣಗೊಂಡ ಬಳಿಕ ಆಗಸ್ಟ್ 11ರಂದು ಬೆಳಗಾವಿಯ ರೆಸಾರ್ಟ್‌ನಲ್ಲಿ ಬಿಜೆಪಿಯ ಅತೃಪ್ತ ನಾಯಕರು ಸಭೆ ನಡೆಸಿದ್ದರು. ಶಾಸಕರಾದ ರಮೇಶ ಜಾರಕಿಹೊಳಿ, ಬಸನಗೌಡ ಪಾಟೀಲ ಯತ್ನಾಳ, ಮಾಜಿ ಸಂಸದರಾದ ಅಣ್ಣಾಸಾಹೇಬ ಜೊಲ್ಲೆ, ಪ್ರತಾಪ ಸಿಂಹ, ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವರಾದ ಅರವಿಂದ ಲಿಂಬಾವಳಿ, ಕುಮಾರ ಬಂಗಾರಪ್ಪ, ಜೆಡಿಎಸ್ ಮುಖಂಡ ಎನ್.ಆರ್ ಸಂತೋಷ ಸೇರಿ ಹಲವು ಮುಖಂಡರು ಪಾಲ್ಗೊಂಡಿದ್ದರು.

ಮೈಸೂರು–ಬೆಂಗಳೂರು ಪಾದ ಯಾತ್ರೆಗೆ ಪರ್ಯಾಯವಾಗಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಭ್ರಷ್ಟಾಚಾರ ಖಂಡಿಸಿ 'ಕೂಡಲಸಂಗಮದಿಂದ ಬಳ್ಳಾರಿವರೆಗೆ' ಪಾದಯಾತ್ರೆ ಮಾಡಲು ತೀರ್ಮಾನಿಸಿದ್ದರು. ಪಾದಯಾತ್ರೆ ಸಿದ್ಧತೆಗೆ ಆಗಸ್ಟ್ 21ರಂದು ಬೆಂಗಳೂರಿನಲ್ಲಿ 50ಕ್ಕೂ ಹೆಚ್ಚು ಭಿನ್ನಮತೀಯರ ಸಭೆ ಕರೆಯಲು ರಮೇಶ ಜಾರಕಿಹೊಳಿ, ಬಸನಗೌಡ ಪಾಟೀಲ ಯತ್ನಾಳ್ ಸಿದ್ಧತೆ ನಡೆಸಿದ್ದರು. ವರಿಷ್ಠರು ಮಧ್ಯಪ್ರವೇಶಿಸಿದ್ದು, ಸಭೆ ನಡೆಸದಂತೆ ಸೂಚಿಸಿದ್ದಾರೆ.

ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ ಅವರು ಅತೃಪ್ತ ನಾಯಕರನ್ನು ಆಗಸ್ಟ್ 19ರಂದು ದೆಹಲಿಗೆ ಕರೆದಿದ್ದಾರೆ. ಅಲ್ಲಿ ನೀಡುವ ನಿರ್ದೇಶನದ ಬಳಿಕ ಮುಂದಿನ ನಿರ್ಧಾರ ಮಾಡಲಾಗುವುದು ಎಂದು ಜಾರಕಿಹೊಳಿ ಆಪ್ತರು ಹೇಳಿದ್ದಾರೆ.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು-560 064. ವೆಬ್‌ಸೈಟ್: www.rwf.indianrailways.gov.in
ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/ಪಿ1/004/2024-25 ದಿನಾಂಕ: 14.08.2024

ಭಾರತದ ಅಧ್ಯಕ್ಷರ ಪರವಾಗಿ, ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಭಾರತೀಯ ರೈಲ್ವೆ ಇ-ಪೋರ್ಟಲ್- www.ireps.gov.in ನಲ್ಲಿ ಈ ಕೆಳಗಿನ ಸಾಮಗ್ರಿಗಳ ಪೂರೈಕೆಗಾಗಿ ಆಸಕ್ತ ಮಾರಾಟಗಾರರಿಂದ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ದಾಖಲೆಗಳು ಮತ್ತು ಟೆಂಡರ್ ತಿದ್ದುಪಡಿ, ಯಾವುದಾದರೂ ಇದ್ದರೆ, ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿರುತ್ತದೆ.

ಕ್ರ.	ಟೆಂಡರ್ ಸಂ.	ಅಂತಿಮ ದಿನಾಂಕ	ವಿವರಣೆ	ಪ್ರಮಾಣ
1	ಪಿ1241882	26-08-24	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ಆಸ್ಬೆಸ್ಟೋಸ್ ಗ್ಯಾಸ್ಕೆಟ್	417703 ಸಂ.
2	ಪಿ1241615	26-08-24	IS-1749: 1984 ಪ್ರಕಾರ ಮ್ಯಾಗ್ನೆಸೈಟ್ ಇಟ್ಟಿಗೆಗಳು ಟೈಪ್-1 (1) ಗಾತ್ರ 35X115/76X75 - 680 ಸಂಖ್ಯೆ. (2) ಗಾತ್ರ, 230X114X75 MM - 4148 ಸಂಖ್ಯೆ.	
3	ಪಿ1241901	28-08-24	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ಲ್ಯಾಡಲ್ ಲೈನಿಂಗ್ಗಾಗಿ ಬ್ರಿಕ್ಸ್ ಆರ್ಚ್ ಹೈ ಅಲ್ಯುಮಿನಾ 70%	618ಸೆಟ್‌ಗಳ
4	ಪಿ1241725	29-08-24	ಸ್ಟೇನ್‌ಲೆಸ್ ಸ್ಟೀಲ್ ಪ್ಲೇಟ್ 6 ಎಂಎಂ ದಪ್ಪ	8000 ಕೆಜಿ
5	ಪಿ1241914	02-09-24	ಥರ್ಮೋ ಕಪಲ್ ಟೆಂಪರೇಚರ್ ಮೆಷಿನಿಂಗ್ ಯೂನಿಟ್	37 ಸೆಟ್
6	ಪಿ1242141	03-09-24	ಫೇಸ್ ಮಿಲ್ಲಿಂಗ್ ಕಟ್ಟರ್ 1RH-04 ಸೆಟ್ ಮತ್ತು 2 LH-04 ಸೆಟ್	
7	ಪಿ1241903	06-09-24	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ಡೋಮ್ ಸ್ಲೀವ್ಸ್ ಮತ್ತು ಡ್ರಾಯಿಂಗ್	243130 ಸಂ.
8	ಪಿ1241548ಎ	06-09-24	ಕ್ಯಾಸ್ಟರ್ ಆಯಿಲ್	16800 ಕೆಜಿ
9	ಪಿ1241925	23-09-24	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ಗ್ರಾಫೈಟ್ ಎಲೆಕ್ಟ್ರೋಡ್ಸ್	755 ಎಂಟಿ
10	ಪಿ1241923	04-11-24	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ಗ್ರಾಫೈಟ್ ಪುಡಿ	1343 ಎಂಟಿ

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ನಗರಸಭಾಕಾರ್ಯಾಲಯ ಹೊಸಪೇಟೆ.
ಕ್ರಸಂ/ನಸಹೊ/ಆಶಾ/ನಗರಸಭೆ ನಿಧಿ/68-ಮಾನವ ಸಂಪನ್ಮೂಲ/ಟೆಂಡರ್/2024-25 ದಿನಾಂಕ:14.08.2024.
ಟೆಂಡರ್ ಪ್ರಕಟಣೆ(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ)

2024-25 ನೇ ಸಾಲಿನ ನಗರಸಭೆ ನಿಧಿ ಅನುದಾನದಡಿಯಲ್ಲಿ ಈ ಕೆಳಗಿನಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮಾವಳಿಯಂತೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸರಬರಾಜುದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.govt.in ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದು. ಪ್ರಿ ಬಿಡ್ ಮೀಟಿಂಗ್ ದಿನಾಂಕ:23.08.2024 ಬೆಳಿಗ್ಗೆ 11.00 ಕ್ಕೆ, ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 30.08.2024 ಸಂಜೆ 5.00 ಗಂಟೆ ವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 31.08.2024 ಸಂಜೆ 5.30 ಗಂಟೆಗೆ, ಟೆಂಡರ್‌ಗಳನ್ನು ತೆರೆಯುವ ಸ್ಥಳ ನಗರಸಭೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 02.09.2024. ಬೆಳಿಗ್ಗೆ 11.00 INDENT No. DMA/2024-25/SE3483 ಟೆಂಡರ್‌ಗೆ ಇಟ್ಟ ಮೊತ್ತ ಅಂದಾಜು ಮೊತ್ತ ರೂ.180.00 ಲಕ್ಷ, ಠೇವಣಿ(90 ದಿನಗಳ ವ್ಯಾಲಿಡಿಟಿ) ರೂ. 2,70,000.00 ಟೆಂಡರ್ ಪ್ರೋಸೆಸ್ಸಿಂಗ್ ಫೀ, ಇ-ಪ್ರೋಕ್ಯೂರ್‌ಮೆಂಟ್ ನಿಗಧಿ ಪಡಿಸಿದಂತೆ, ಹೆಚ್ಚಿನ ಮಾಹಿತಿಗಾಗಿ ಕೆಲಸದಂದು ಕಛೇರಿ ವೇಳೆಯಲ್ಲಿ ಕಾರ್ಯಾಲಯದ ಹೊಸಪೇಟೆ ಕಛೇರಿ ಕೆಲಸದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/-ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಪರಿಸರ), ನಗರಸಭೆ ಹೊಸಪೇಟೆ
ಸಹಿ/-ಪೌರಾಯುಕ್ತರು, ನಗರಸಭೆ ಹೊಸಪೇಟೆ
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/194

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಸರ್ವಜ್ಞನಗರ ವಿಭಾಗ, 7ನೇ ಮಹಡಿ, ಪಿ.ಯು. ಕಟ್ಟಡ, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560 001.
ಸಂಖ್ಯೆ: ಕಾಪಾಅ(ಸನ)/ಕೆಪಿಪಿಪಿ/ಟೆಂಡರ್/05/2024-25 ದಿನಾಂಕ: 16.08.2024
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
ದ್ವಿಲಕೋಟೆ ಪದ್ಧತಿ (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ 4)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, (ಸರ್ವಜ್ಞನಗರ ವಿಭಾಗ), ಪೂರ್ವ ವಲಯ, ಇವರು, ಬೃ.ಬೆಂ.ಮ.ಪಾ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ಸರ್ವಜ್ಞನಗರ ಕ್ಷೇತ್ರದ, ಎಂ ಎಸ್ ನಗರ, ಲಾಜರ್ ರಸ್ತೆಯಲ್ಲಿರುವ ಧೋಬಿ ಘಾಟಿಗೆ ಯಂತ್ರೋಪಕರಣಗಳನ್ನು ಒದಗಿಸುವುದು ಮತ್ತು ಅಳವಡಿಸುವುದು. ಕಾಮಗಾರಿಗಿಟ್ಟ ಅಂದಾಜು ಮೊತ್ತ ₹.200.00 ಲಕ್ಷಗಳು, ಇಎಂಡಿ: ರೂ. 3,00,000/- (1.00 ಲಕ್ಷ ಇ-ಪಾವತಿ ಮೂಲಕ ಉಳಿದ ರೂ.2,00,000/- ಬಿಜಿ/ಎಫ್‌ಡಿಆರ್ ಗಳನ್ನು ತಾಂತ್ರಿಕ ಬಿಡ್ ತೆರೆಯುವ ಮುಂಚೆ ಸಲ್ಲಿಸತಕ್ಕದ್ದು)

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 23.08.2024 ಸಂಜೆ 4:00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 18.09.2024ರ ಸಂಜೆ 4:00 ಗಂಟೆಯವರೆಗೆ. (3) ತಾಂತ್ರಿಕ ಬಿಡ್ ಟೆಂಡರ್‌ಗಳನ್ನು ದಿನಾಂಕ 19.09.2024ರ ಸಂಜೆ 4:30 ಗಂಟೆಗೆ ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು.(4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 19.09.2024ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (5) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 27.08.2024ರ ಸಂಜೆ 4:00 ಗಂಟೆಗೆ ನಡೆಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ,
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ-577501)
ಇ-ಮೇಲ್ :E-Mail-ka.chitradurga.dudc@gmail.com
ನಂ. ಜಿ.ನ.ಕೋ(2)ನಗರೋತ್ಥಾನ ಹಂತ 04/ಸಿ.ಆರ್ 62/2024-25 ದಿ: 16.08.2024
ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ ಇವರು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ರ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಪುರಸಭೆ ಮತ್ತು ನಾಯಕನಹಟ್ಟಿ ಪಟ್ಟಣ ಪಂಚಾಯಿತಿಯ ಒಟ್ಟು ರೂ. 611.80ಲಕ್ಷಗಳ ಮೊತ್ತದಲ್ಲಿ 09 ಕಾಮಗಾರಿಗಳಿಗೆ (ಕನಿಷ್ಠ ಮೊತ್ತ ರೂ.11.51ಲಕ್ಷ ಹಾಗೂ ಗರಿಷ್ಠ ಮೊತ್ತ ರೂ.99.00 ಲಕ್ಷಗಳಾಗಿರುತ್ತದೆ. ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸಿದ ಪಿ.ಡಬ್ಲ್ಯೂ.ಡಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW 1, 2 & 3 ಪ್ರಕಾರ ಐಟಂವಾರು ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ.

ಇಂಡೆಂಟ್ ಸಂಖ್ಯೆ (1) DMA/2024-25/RD/WORK_INDENT26095 (2) DMA/2024-25/RD/WORK_INDENT26089 (3) DMA/2024-25/WS/WORK_INDENT26091, (4) DMA/ 2024-25/RD/WORK_INDENT 26020, (5) DMA/2024-25/OW/WORK_INDENT 26017, (6) DMA/2024-25/OW/WORK_INDENT26014, (7) DMA/2024-25/RD/WORK_ INDENT 25908, (8) DMA/2024-25/RD/WORK_INDENT26023 ಮತ್ತು (9) DMA/2024-25/RD/WORK_INDENT26027. ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿ, ಟೆಂಡರ್ ದಾಖಲೆಗಳು ಮತ್ತು ಇತರೆ ಸೂಚನೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ (http://ww.kppp.karnataka.gov.in). ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಹಾಗೂ ಠೇವಣಿ ಮತ್ತು ಟೆಂಡರ್ ಫೀ ಗಳನ್ನು ಆನ್‌ಲೈನ್‌ನಲ್ಲಿ (http://ww.kppp.karnataka.gov.in). ಪಾವತಿಸತಕ್ಕದ್ದು.

ಟೆಂಡರ್ ವೇಳಾಪಟ್ಟಿ :- (1) ಪ್ರಶ್ನೆ / ಮಾಹಿತಿಗಾಗಿ ಸಲ್ಲಿಸುವ ಕೊನೆಯ ದಿನಾಂಕ 22-08-2024 ಬೆಳಿಗ್ಗೆ 11.30 ಗಂಟೆ (2) ಭರ್ತಿ ಮಾಡಿದ ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 28-08-2024 ಸಂಜೆ 5.30 ಗಂಟೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 29-08-2024 ಸಂಜೆ 5.30 ಗಂಟೆ (4) ಹಣಕಾಸು ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಟೆಂಡರ್ ನಿಬಂಧನೆಗಳ ಬಗ್ಗೆ ಏನಾದರೂ ಬದಲಾವಣೆಯಾದರೂ ಅಥವಾ ದಿನಾಂಕ ಮುಂದೂಡಿದರು ಸಹ ಈ ಬಗ್ಗೆ ಮಾಹಿತಿಯನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸುವುದಿಲ್ಲ.

DIPR/CTA/KSMCA/ 194/2024-25
ಸಹಿ/- ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ

"KRISHNA BHAGYA JALA NIGAM LIMITED"
(A GOVT.OF KARNATAKA UNDERTAKING)
ಕಾರ್ಯಾಲಯ ಕಾರ್ಯಪಾಲಕಅಭಿಯಂತರರು ಕೃಭಾಜನಿನಿ, ಆಬದಂಕಾ ವಿಭಾಗ, ಹುನಗುಂದ- 587 118
Telephone NO. 08351-261110 e-mail : eearbcdivn@gmail.com
ಸಂ:ಕೃಭಾಜನಿ(ನಿ)/ಆಬದಂಕಾ/ವಿಹು/ಡಿಬಿ/2024-25/492 ದಿನಾಂಕ:14/08/2024
ಅಲ್ಪಾವಧಿ ಕೋಟೇಶನ್

ಈ ಕಛೇರಿಯ ಅಧೀನದಲ್ಲಿ ಬರುವ ಹನಿ ನೀರಾವರಿ ಯೋಜನೆಯ ನಿರ್ವಹಣಾ ಕಾಮಗಾರಿಗೆ ಈ ಕೆಳಕಂಡ ಐಟಂಗಳ ದರ ನಿಗದಿಪಡಿಸಲು ಅಧೀಕೃತ ಸಮಾಲೋಚಕರು/ ಗುತ್ತಿಗೆದಾರರು ಇವರಿಂದ ಜಿ.ಎಸ್.ಟಿ. ಸೇರಿದಂತೆ ಅಲ್ಪಾವಧಿ ಕೊಟೇಶನ್ /ಟೆಂಡರ್ ಅಹ್ವಾನಿಸಲಾಗಿದೆ. ಈ ಕಚೇರಿಗೆ ದಿನಾಂಕ: 27.08.2024ರ ಸಾಯಂಕಾಲ 05.00 ಘಂಟೆಯೊಳಗೆ ಸಲ್ಲಿಸಲು ಸೂಚಿಸಲಾಗಿದೆ.

1)Maintenance of SCADA System from Ramthal (Marol)2nd stage Pump house (870Hp vertical turbine pump)to Drip Sump well (2 lakh capacity, 15mins retention time)of Drip irrigation system including Subscription of system software for SCADA system, UPS Maintenance, Wiring, Level Transmitter and Documentation including required man powerfor 7 months. 2)Operation and Maintenance of SCADA System of Ramthal (Marol) Drip irrigation system of 12300Ha (168Hp to 422Hp centrifugal pumps) including Subscription of SCADA system,software Drip irrigation system, Data server charges and data sim charges for automation system for pump house and field distribution system , checking, repairing and supervising automation works of solenoid valve of micro irrigation system with required man power for 7 months. 3)Operation and Maintenance of SCADA System of Ramthal (Marol) Drip irrigation system of 11700Ha(335Hp to 422Hp centrifugal pumps) including Subscription of SCADA system, software Drip irrigation system, Data server charges and data sim charges for automation system for pump house and field distribution system, checking, repairing and supervising automation works of solenoid valve of micro irrigation system with required man power for 7 months. 4)Overhauling of the, horizontal split case centrifugal pump of make M/s Kirloskar brothers LIMNTED of capacity 168Hp to 422Hp,dismantling rectifying after cleaning of dismantled parts of pump like bearing shafts,guide rings,tandem bearing impeller, discharge LT motor etc. By wire brush including complete. Assembling and erection of pump by blue matching, and coupling the assembled pump with LT Motor, complete cabling connections, including consumables and erection labour chargesfor Operation and Maintenance of pumps of Ramthal (Marol) Drip irrigation system.

ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿ(ನಿ), ಆ.ಬ.ದಂ.ಕಾ. ವಿಭಾಗ ಹುನಗುಂದ ಇವರ ಕಛೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ. ಸದರಿ ಕೊಟೇಶನ್‌ಗಳನ್ನು ದಿನಾಂಕ: 28.08.2024ರ ಬೆಳಿಗ್ಗೆ 11.45 ಘಂಟೆಗೆ ಕಾರ್ಯಪಾಲಕ ಅಭಿಯಂತರರು, ಕೃಭಾಜನಿ(ನಿ), ಆ.ಬ.ದಂ. ಕಾಲುವೆ ವಿಭಾಗ, ಹುನಗುಂದ ಕಛೇರಿಯಲ್ಲಿ ತೆರೆಯಲಾಗುವುದು.
ಸಂಪರ್ಕಿಸುವ ಈ-ಮೇಲ್ ವಿಳಾಸ. :eearbcdivn@gmail.com.
ಸಂಪರ್ಕಿಸುವದೂರವಾಣಿ ಸಂಖ್ಯೆ:..M. No.8660871627
ಸಹಿ/-ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ. ಆಬದಂಕಾ ವಿಭಾಗ, ಹುನಗುಂದ.
DIPR/BGK/RO-NO-177/KSMCA/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಪಂ.ರಾ.ಇಂ ವಿಭಾಗ-ಮಡಿಕೇರಿ
ಸಂ:ಕಾ.ಇಂ/ಪಂ.ರಾ.ಇಂ.ವಿ./ಎಇ/ಟೆಂಡರ್ ಸಂಖ್ಯೆ/03/529/2024-25 ದಿ:14.08.2024
ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ 5054-ಮಾನ್ಯ ಮುಖ್ಯಮಂತ್ರಿ ವಿಶೇಷ ಯೋಜನೆಯಡಿಯಲ್ಲಿ ಮಡಿಕೇರಿ ವಿಧಾನ ಸಭಾ ಕ್ಷೇತ್ರಕ್ಕೆ ಅನುಮೋದನೆಗೊಂಡಿರುವ ಈ ಕೆಳಗಿನ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ವೇದಿಕೆ ಪದ್ಧತಿಯಲ್ಲಿ ಕೆ.ಡಬ್ಲ್ಯೂ-3 ನಿಬಂಧನೆಗೊಳಪಟ್ಟು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಟೆಂಡರಿನಲ್ಲಿ ಭಾಗವಹಿಸಲು ಕೋರಿದೆ.

ಕ್ರ ಸಂ.	ಕಾಮಗಾರಿಯ ವಿವರಗಳು
1	ಸೋಮವಾರಪೇಟೆ ಉಪವಿಭಾಗದ (1) ಪ್ಯಾಕೇಜ್: 01/24-25, ಮೊತ್ತ: ರೂ.80.00 ಲಕ್ಷ, ವರ್ಗ:ಸಾಮಾನ್ಯ, ಇಂಡೆಂಟ್ ನಂ: (2) ಪ್ಯಾಕೇಜ್: 02/ 24-25, ಮೊತ್ತ: ರೂ.99.00 ಲಕ್ಷ, ವರ್ಗ: ಸಾಮಾನ್ಯ, ಇಂಡೆಂಟ್ ನಂ:7812 (3) ಪ್ಯಾಕೇಜ್: 03/24-25, ಮೊತ್ತ ರೂ. 71.00 ಲಕ್ಷ, ವರ್ಗ ಸಾಮಾನ್ಯ, ಇಡೆಂಟ್ ನಂ.:7834 (4) ಪ್ಯಾಕೇಜ್ ನಂ.: 04/24-25, ಮೊತ್ತ: ರೂ.71.00 ಲಕ್ಷ, ವರ್ಗ: ಎಸ್.ಟಿ.ಇಂಡೆಂಟ್‌ನಂ: (5) ಪ್ಯಾಕೇಜ್: 05/24-25, ಮೊತ್ತ ರೂ. 82.00 ಲಕ್ಷ, ವರ್ಗ: ಎಸ್.ಟಿ., ಇಂಡೆಂಟ್ ನಂ. : (6) ಪ್ಯಾಕೇಜ್: 06/24-25, ಮೊತ್ತ ರೂ, 77.00 ಲಕ್ಷ, ವರ್ಗ ಸಾಮಾನ್ಯ, ಇಂಡೆಂಟ್ ನಂ. 7845, (7) ಪ್ಯಾಕೇಜ್: 07/24-25, ಮೊತ್ತ ರೂ. 85.50 ಲಕ್ಷ, ವರ್ಗ ಸಾಮಾನ್ಯ ಇಂಡೆಂಟ್ ನಂ. 7866, (8) ಪ್ಯಾಕೇಜ್ : 08/24-25, ಮೊತ್ತ : ರೂ. 94.00 ಲಕ್ಷ, ವರ್ಗ : ಎಸ್.ಸಿ. ಇಂಡೆಂಟ್ ನಂ.: 7952 (9) ಪ್ಯಾಕೇಜ್: 10/24-25, ಮೊತ್ತ ರೂ. 80.00 ಲಕ್ಷ, ವರ್ಗ ಸಾಮಾನ್ಯ, ಇಂಡೆಂಟ್ ನಂ: 7962, (10) ಪ್ಯಾಕೇಜ್: 11/24-25, ಮೊತ್ತ ರೂ. 94.00 ಲಕ್ಷ, ವರ್ಗ : ಸಾಮಾನ್ಯ ಇಂಡೆಂಟ್ ನಂ. 7849, (11) ಪ್ಯಾಕೇಜ್ 12/24-25, ಮೊತ್ತ ರೂ. 83.50 ಲಕ್ಷ, ವರ್ಗ ಎಸ್.ಸಿ. ಇಂಡೆಂಟ್ ನಂ. 7957, (12) ಪ್ಯಾಕೇಜ್: 13/24-25, ಮೊತ್ತ ರೂ. 91..00 ಲಕ್ಷ, ವರ್ಗ ಸಾಮಾನ್ಯ, ಇಂಡೆಂಟ್ ನಂ. 7959, (13) ಪ್ಯಾಕೇಜ್: 14/24-25, ಮೊತ್ತ: ರೂ. 77.00 ಲಕ್ಷ, ವರ್ಗ: ಸಾಮಾನ್ಯ, ಇಂಡೆಂಟ್ ನಂ. 7851 (14) ಪ್ಯಾಕೇಜ್: 15/24-25 ಮೊತ್ತ ರೂ. 94.50 ಲಕ್ಷ, ವರ್ಗ: ಎಸ್.ಸಿ. ಇಂಡೆಂಟ್ ನಂ. 7854, (15) ಪ್ಯಾಕೇಜ್ 16/24-25, ಮೊತ್ತ ರೂ.99.50 ಲಕ್ಷ, ವರ್ಗ ಸಾಮಾನ್ಯ, ಇಂಡೆಂಟ್ ನಂ. 7857 (16) ಪ್ಯಾಕೇಜ್ 18/24-25, ಮೊತ್ತ : ರೂ. 55.00 ಲಕ್ಷ, ವರ್ಗ: ಸಾಮಾನ್ಯ ಇಂಡೆಂಟ್ ನಂ. 7960 (17) ಪ್ಯಾಕೇಜ್ : 23/24-25, ಮೊತ್ತ ರೂ. 71.00 ಲಕ್ಷ, ವರ್ಗ ಸಾಮಾನ್ಯ, ಇಡೆಂಟ್ ನಂ. 7961.
2.	ಮಡಿಕೇರಿ ಉಪವಿಭಾಗದ (1) ಪ್ಯಾಕೇಜ್:19/24-25, ಮೊತ್ತ: ರೂ, 71.00 ಲಕ್ಷ, ವರ್ಗ: ಸಾಮಾನ್ಯ. ಇಂಡೆಂಟ್‌ನಂ:7871 (02) ಪ್ಯಾಕೇಜ್: 20/24-25, ಮೊತ್ತ: ರೂ. 92.00ಲಕ್ಷ, ವರ್ಗ: ಸಾಮಾನ್ಯ, ಇಂಡೆಂಟ್ ನಂ:7880 (03) ಪ್ಯಾಕೇಜ್ : 21/24-25, ಮೊತ್ತ ರೂ. 86.00 ಲಕ್ಷ, ವರ್ಗ ಎಸ್.ಸಿ., ಇಂಡೆಂಟ್ ನಂ. 7882 (22) ಪ್ಯಾಕೇಜ್ 22/24-25, ಮೊತ್ತ ರೂ. 71.00 ಲಕ್ಷ, ವರ್ಗ ಸಾಮಾನ್ಯ ಇಂಡೆಂಟ್ ನಂ. 7883.

ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 05-09-2024, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 06-09-2024, ಆರ್ಥಿಕ ಬಿಡ್ ತೆರೆಯುವ ದಿನಾಂಕ: 09.09.2024 ಗಳಾಗಿದ್ದು, ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ www.kppp.karnataka.gov.inನಲ್ಲಿ ಪಡೆಯಬಹುದು. ಪ್ಯಾಕೇಜ್‌ವಾರು ಕಾಮಗಾರಿಗಳ ವಿವರಗಳನ್ನು ಆಯಾ ಉಪ ವಿಭಾಗ/ ವಿಭಾಗದಲ್ಲಿ ಪಡೆಯಬಹುದು.

ಕಾರ್ಯಪಾಲಕ ಇಂಜಿನಿಯರ್ ಪಂ.ರಾ.ಇಂ ವಿಭಾಗ - ಮಡಿಕೇರಿ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಮುಇಂ(ವಿ)/ಎಸ್‌ಎಲ್‌ಡಿಸಿ/ಅಇಂವಿ-ಸ್ಕಾಡ/ಕಾನಿಇಂ(ಡಿ)/ಸಕಾನಿಇಂ-ಯೋ/2024-25/2059-65 ದಿನಾಂಕ: 14.08.2024
ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು, ಈ ಕೆಳಗಿನ ಬಿಡ್ ವಿಚಾರಣೆ ಸಂಖ್ಯೆಗಳ ಸಂಬಂಧ ಟೆಂಡರ್‌ಗಳನ್ನು ಆಹ್ವಾನಿಸಿದೆ.:

(1) ಕವಿಪ್ರನಿನಿ/ಮುಇಂವಿ/ಎಸ್‌ಎಲ್‌ಡಿಸಿ/ಅಇಂ(ವಿ)-ಸ್ಕಾಡ/011/2023-24 (ಕರೆ-3)ರನ್ವಯ ಕವಿಪ್ರನಿನಿ ಯಲ್ಲಿ ಸ್ಕಾಡ ಸ್ವಯಂಚಾಲಿತ ಮೀಟರ್ ರೀಡಿಂಗ್(AMR) ಪರಿಹಾರಗಳನ್ನು ಸ್ಥಾಪಿಸಲು ಕವಿಪ್ರನಿನಿಯ ಉಪ-ಕೇಂದ್ರಗಳಲ್ಲಿ ಅಸ್ತಿತ್ವದಲ್ಲಿರುವ IF ಪಾಯಿಂಟ್ ಎನರ್ಜಿ ಮೀಟರ್‌ಗಳೊಂದಿಗೆ ಡೇಟಾ ಕಾನ್ಸಂಟ್ರೇಟರ್ ಘಟಕಗಳ (DCU) ಪೂರೈಕೆ, ಸ್ಥಾಪನೆ, ವೈರಿಂಗ್, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವುದು.

(2) ಕವಿಪ್ರನಿನಿ/ಮುಇಂವಿ/ಎಸ್‌ಎಲ್‌ಡಿಸಿ/ಅಇಂ(ವಿ)-ಸ್ಕಾಡ/017/2023-24 (ಕರೆ-2)ರನ್ವಯ ಕವಿಪ್ರನಿನಿ ಯಲ್ಲಿ ಸ್ಕಾಡ ಸ್ವಯಂಚಾಲಿತ ಮೀಟರ್ ರೀಡಿಂಗ್(AMR) ಪರಿಹಾರಗಳನ್ನು ಸ್ಥಾಪಿಸಲು ಕವಿಪ್ರನಿನಿ ಮತ್ತು ಎಸ್ಕಾಂ ಉಪ-ಕೇಂದ್ರಗಳಲ್ಲಿ ಅಸ್ತಿತ್ವದಲ್ಲಿರುವ 11ಕೆವಿ ಫೀಡರ್ ಎನರ್ಜಿ ಮೀಟರ್‌ಗಳೊಂದಿಗೆ ಡೇಟಾ ಕನ್ಸೆಂಟ್ರೇಟರ್ ಘಟಕಗಳ (DCU) ಪೂರೈಕೆ, ಸ್ಥಾಪನೆ, ವೈರಿಂಗ್, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವುದು.

ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಕೆಪಿಪಿ ಪೋರ್ಟಲ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ವೆಬ್‌ಸೈಟ್ https://kppp.karnataka.gov.inಗೆ ದಿನಾಂಕ: 19.08.2024ರಂದು ಅಥವಾ ನಂತರ ಲಾಗಿನ್ ಆಗಿ ಪಡೆಯಬಹುದು. ಬಿಡ್‌ಗಳ ಸ್ವೀಕೃತಿಯ ಕೊನೆಯ ದಿನಾಂಕವನ್ನು ಕೆಪಿಪಿ ಪೋರ್ಟಲ್‌ನಲ್ಲಿ ನಮೂದಿಸಲಾಗಿದೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ಕೆಪಿಪಿ ಪೋರ್ಟಲ್‌ನಲ್ಲಿ ನಮೂದಿಸಲಾಗಿದೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕದ ವಿಸ್ತರಣೆ/ತಿದ್ದುಪಡಿ ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.

ಸಹಿ/-ಮುಖ್ಯ ಇಂಜಿನಿಯರ್(ವಿದ್ಯುತ್), ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕವಿಪ್ರನಿನಿ, ನಂ. 28, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 009, ದೂ.: 080-22267034.

THE BIGGEST INDEPENDENCE SALE
ON ELECTRONICS & HOME APPLIANCES

ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ

GIRIAS LOWEST PRICES OF THE YEAR

Upto 75% OFF

ಕೊನೆಯ 2 ದಿನಗಳು

HDFC BANK
10% INSTANT DISCOUNT
UPTO ₹3,000 ON HDFC CREDIT & DEBIT CARD EMI *T&C Apply

ಕ್ಯಾಶ್ ಬ್ಯಾಕ್ ಬೊನಾಂಜಾ
UPTO 20%*

ಯಾವುದೇ ಮೊಬೈಲ್ ಖರೀದಿಸಿ ಮತ್ತು ಪಡೆಯಿರಿ
10% CASH BACK
5G MOBILES ₹10,990 ಮೇಲ್ಪಟ್ಟು
ಫ್ಲಾಟ್ 83% ರಿಯಾಯಿತಿ*
₹3,999 ಮೌಲ್ಯದ LAPCARE BT HEAD PHONE ಖರೀದಿಯ ಮೇಲೆ

ಯಾವುದೇ ಲ್ಯಾಪ್‌ಟಾಪ್ ಖರೀದಿಸಿ ಮತ್ತು ಪಡೆಯಿರಿ
10% CASH BACK
₹27,999 ಮೇಲ್ಪಟ್ಟು
ಫ್ಲಾಟ್ 85% ರಿಯಾಯಿತಿ*
₹7,999 ಮೌಲ್ಯದ ZEBRONICS SMART WATCH ಖರೀದಿಯ ಮೇಲೆ

BIGGEST OPEN BOX SALE
ತ್ವರೆಮಾಡಿ !!! ಸೀಮಿತ ಸ್ಟಾಕ್ಸ್

SAMSUNG 55 NEO ಕ್ಯೂಎಲ್‌ಇಡಿ 4K SMART TV
SPECIAL PRICE ₹89,990
ನಗದು ಪಾವತಿಗಳು ಇಲ್ಲ

SONY 65 4K ULTRA HD SMART LED GOOGLE TV
SPECIAL PRICE ₹72,990
ನಗದು ಪಾವತಿಗಳು ಇಲ್ಲ

SAMSUNG 385 LTR TWIN COOLING PLUS™ DOUBLE DOOR REFRIGERATOR
SPECIAL PRICE ₹39,990
ನಗದು ಪಾವತಿಗಳು ಇಲ್ಲ

LG 655 LTR SIDE-BY-SIDE REFRIGERATOR WITH SMART INVERTER COMPRESSOR, HYGIENE FRESH+™, DOORCOOLING+™, SMART
SPECIAL PRICE ₹81,990
ನಗದು ಪಾವತಿಗಳು ಇಲ್ಲ

NVY LOWEST PRICE CHALLENGE 4K LED
48% OFF
NVY Official LED partner of RCB

Model	Price	EMI
43 4K SMART	₹20,560	₹1,713
55 4K SMART	₹29,490	₹2,458

ಯಾವುದೇ ಎಲ್.ಇ.ಡಿ ಟಿವಿ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 48% ರಿಯಾಯಿತಿ*
₹13,490 ಮೌಲ್ಯದ PHILIPS SOUNDBAR ಖರೀದಿಯ ಮೇಲೆ

ಯಾವುದೇ ರೆಫ್ರಿಜರೇಟರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 42% ರಿಯಾಯಿತಿ*
₹13,990 ಮೌಲ್ಯದ KAFF CHIMNEY ಖರೀದಿಯ ಮೇಲೆ

ಯಾವುದೇ ವಾಷಿಂಗ್ ಮೆಷಿನ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 31% ರಿಯಾಯಿತಿ*
₹880 ಮೌಲ್ಯದ VIJAYALAKSHMI DRY IRON ಖರೀದಿಯ ಮೇಲೆ

ಯಾವುದೇ ಡ್ರೈಯರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 62% ರಿಯಾಯಿತಿ*
₹3,990 ಮೌಲ್ಯದ NIRLEP 4 PCS COOKWARE SET ಖರೀದಿಯ ಮೇಲೆ

ಯಾವುದೇ ಡಿಶ್‌ವಾಶರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 39% ರಿಯಾಯಿತಿ*
₹990 ಮೌಲ್ಯದ BUTTERFLY NON STICK COOKWARE ಖರೀದಿಯ ಮೇಲೆ

ಯಾವುದೇ ಏರ್ ಕಂಡಿಷನರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 48% ರಿಯಾಯಿತಿ*
₹39,900 ಮೌಲ್ಯದ 43 SMART UHD 4K LED ಖರೀದಿಯ ಮೇಲೆ

ಯಾವುದೇ ಮೈಕ್ರೋವೇವ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 32% ರಿಯಾಯಿತಿ*
₹1,650 ಮೌಲ್ಯದ V-GUARD ROOM HEATER ಖರೀದಿಯ ಮೇಲೆ

ಯಾವುದೇ ಕಿಚನ್ ಅಪ್ಲೈಯನ್ಸಸ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 85% ರಿಯಾಯಿತಿ*
₹20,000 ಮೌಲ್ಯದ FIRE-BOLTT SMART WATCH ಖರೀದಿಯ ಮೇಲೆ

ಯಾವುದೇ ಹೋಮ್ ಥಿಯೇಟರ್/ಸೌಂಡ್ ಬಾರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 50% ರಿಯಾಯಿತಿ*
₹5,490 ಮೌಲ್ಯದ PHILIPS PARTY SPEAKER ಖರೀದಿಯ ಮೇಲೆ

ಫೈನಾನ್ಸ್ ಬೊನಾಂಜಾ
1 ಇ.ಎಮ್.ಐ ಉಚಿತ*

ಫೈನಾನ್ಸ್ ಕ್ಯಾಶ್ ಬ್ಯಾಕ್ ಬೊನಾಂಜಾ
UPTO ₹7,500 ಕ್ಯಾಶ್ ಬ್ಯಾಕ್*

5% INSTANT DISCOUNT* SBI card
#Min. Trxn.: ₹15,000: Max. Discount: ₹3,000 per card. Valid only on EMI Trxn. Validity: 01 Aug - 31 Aug 2024. T&C Apply

FINANCE POWERED BY Groww
0% EMI
MIN PRODUCT VALUE ₹10,000

ಎಕ್ಸ್‌ಚೇಂಜ್ ಬೊನಾಂಜಾ
UPTO ₹25,000
ವರೆಗಿನ ಹಳೆಯ ಎಲೆಕ್ಟ್ರಾನಿಕ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು ಎಕ್ಸ್‌ಚೇಂಜ್ ಮೇಲೆ

GIRIAS THE CONSUMER DURABLE PEOPLE Since 1971

ಅಂದ್ರಹಳ್ಳಿ 95918 35070 । ಅತ್ತಿಬೆಲೆ 99009 77747 । ಆರ್.ಟಿ.ನಗರ 91080 65665 । ಆನೇಕಲ್ 9036289556 । ಇಂದಿರಾನಗರ 9035499255 । ಉತ್ತರಹಳ್ಳಿ 90362 89563 । ಕತ್ರಿಗುಪ್ಪೆ 9035499288 । ಕನಕಪುರ ಮುಖ್ಯ ರಸ್ತೆ 90082 20739 । ಕುಣಿಗಲ್ 90362 89546 । ಕೆಂಗೇರಿ 99009 77712 । ಕೆಆರ್ ಪುರಂ 9019929881 । ಕೋರಮಂಗಲ 90354 11200 । ಕೋಲಾರ 90082 20791 । ಗಾಂಧಿನಗರ 9035499311 । ಗೌರಿಬಿದನೂರು 90354 99244 । ಚನ್ನಪಟ್ಟಣ 9035023186 । ಚಿಂತಾಮಣಿ 90362 89552 । ಚಿಕ್ಕಜಾಲ 95918 32080 । ಚಿಕ್ಕಬಳ್ಳಾಪುರ 9591561669 । ಜಯನಗರ 90354 99077 । ಜಾಲಹಳ್ಳಿ ಕ್ರಾಸ್ 9008220804 । ತಿಪಟೂರು 90362 89548 । ತುಮಕೂರು 90082 18009 । ದೊಡ್ಡಬಳ್ಳಾಪುರ 77602 12888 । ನಾಗರಭಾವಿ 90354 99191 । ನೆಲಮಂಗಲ 9606922798 । ಬಾಗೇಪಲ್ಲಿ 9036289562 । ಬನಶಂಕರಿ 9035499199 । ಬನ್ನೇರುಘಟ್ಟ ರೋಡ್ 9035422500 । ಬಸವನಗುಡಿ 90354 99244 । ಬಾಗೇಪಲ್ಲಿ 9036289562 । ಭಾರ್ತಿಯಾ ಮಾಲ್ 70900 00981 । ಮಾದನಾಯಕನಹಳ್ಳಿ 90362 89550 । ಮತ್ತಿಕೆರೆ 90352 22377 ।ಮಲ್ಲೇಶ್ವರಂ 90354 99233 । ಮಾಗಡಿರಸ್ತೆ 90362 89557 । ಮಾರತ್‌ಹಳ್ಳಿ 90354 99011 । ಮಾಲೂರು 9036984484 । ಮೈಸೂರು ರಸ್ತೆ 90354 99188 । ಯಲಹಂಕ 9036001315 । ರಾಜಾಜಿನಗರ 9035499144 । ರಾಮನಗರ 9606922697 । ವಿಜಯನಗರ 96069 22795 ।ಶಿರಾ 9035023188 । ಸದಾಶಿವನಗರ 9035499088 । ಸಹಕಾರನಗರ 90199 29882 । ಹಿರಿಯೂರು 9035023185 । ಹೆಚ್‌ಆರ್‌ಬಿಆರ್ ಲೇಔಟ್ 90354 99177 । ಹೆಬ್ಬಗೋಡಿ 90350 50023 । ಹೆಸರಘಟ್ಟ ಮುಖ್ಯ ರಸ್ತೆ 90362 89551 । ಹೊಸಕೋಟೆ 90362 89545 । ಹೊಸೂರು 04344 243633 । ಹೊಸೂರು ರಸ್ತೆ 9035499022

STORE LOCATOR

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ರಿಯಾಯಿತಿ. ರೂ.7500 ವರೆಗಿನ ಬಜಾಜ್ ಕ್ಯಾಶ್ ಬ್ಯಾಕ್ / ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುವ ವೋಚರ್‌ಗಳು ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು 3 ಇಎಂಐ ಅನ್ನು ತೆರವುಗೊಳಿಸಿದ ನಂತರ ಗ್ರಾಹಕರ ಬ್ಯಾಂಕ್ ಖಾತೆ / ಬಿಎಫ್‌ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ.*ಉತ್ತಮ ಕೆಲಸದ ಸ್ಥಿತಿಯಲ್ಲಿರಲು ಎಂ.ಆರ್.ಪಿ ಮತ್ತು ಉತ್ಪನ್ನದ ಮೇಲೆ ಮಾನ್ಯವಾದ ಎಕ್ಸ್‌ಚೇಂಜ್ ಆಫರ್. ಹಳೆಯ ಉತ್ಪನ್ನದ ಸ್ಥಿತಿಯನ್ನು ಆಧರಿಸಿ ವಿನಿಮಯ ಮೌಲ್ಯವು ಭಿನ್ನವಾಗಿರುತ್ತದೆ.

161 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.

SHOP ONLINE @ www.giriasindia.com

"like" us on facebook HTTPS://WWW.FACEBOOK.COM/GIRIAS.INDIA

WE SUPPORT ROUND TABLE INDIA LADIES CIRCLE INDIA
www.roundtableindia.org www.ladiescircleindia.org

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಒಡಹುಟ್ಟಿದವರ 'ರಕ್ಷಾ' ಬಾಂಧವ್ಯ

ಸ್ಮಿತಾ ಶಿರೂರ

ರಕ್ಷಾ ಬಂಧನ ಅರ್ಥಾತ್ ರಾಖಿ ಹಬ್ಬ ಮತ್ತೆ ಬಂದಿದೆ. ಅಣ್ಣ-ತಂಗಿ, ಅಕ್ಕ-ತಮ್ಮನ ಬಾಂಧವ್ಯ ಸಾರಿ ಹೇಳಲು ಸಾವಿರಾರು ಮಾದರಿಯ ರಾಖಿಗಳು ಮಾರುಕಟ್ಟೆಯಲ್ಲಿ ಮಿಂಚುತ್ತಿವೆ. ಸ್ವತಃ ತಾವೇ ದಾರ, ವುಲನ್ ಹೆಣೆದು ಸುಂದರ ರಾಖಿ ಕೈಯಾರೆ ತಯಾರಿಸಿ ಅಣ್ಣತಮ್ಮನಿಗೆ ಕಟ್ಟಲು ಬಯಸುವ ಅಕ್ಕತಂಗಿಯರೂ ಇದ್ದಾರೆ.

'ಹೆಣ್ಣಿನ ಜನುಮಕೆ ಅಣ್ಣ ತಮ್ಮರು ಬೇಕು
ಬೆನ್ನ ಕಟ್ಟುವರು ಸಭೆಯೊಳಗೆ
ಸಾವಿರ ಹೊನ್ನ ಕಟ್ಟುವರು ಉಡಿಯೊಳಗೆ..'

ಈ ಜನಪದ ಹಾಡು ಒಡಹುಟ್ಟಿದವರ ಒಡನಾಟದ ಸವಿಯನ್ನು ತೆರೆದಿಡುತ್ತದೆ. ಶ್ರಾವಣ ಹುಣ್ಣಿಮೆಯಂದು ರಕ್ಷಾ ಬಂಧನದ ಸೊಬಗು ಅರಳುತ್ತದೆ. ಸಹೋದರನ ಆರೋಗ್ಯ, ಆಯಸ್ಸಿಗಾಗಿ ಸಹೋದರಿ ಬಯಸಿದರೆ, ಸಹೋದರಿಯನ್ನು ಸದಾ ಕಾಲ ರಕ್ಷಿಸಲು ಮತ್ತು ಪ್ರೀತಿಸಲು ಸಹೋದರ ಭರವಸೆ ನೀಡುತ್ತಾನೆ. ಸಹೋದರಿ ಸಹೋದರನಿಗೆ ಆರತಿ ಮಾಡಿ ರಾಖಿ ಕಟ್ಟುತ್ತಾಳೆ. ರಾಖಿ ಕಟ್ಟುವಾಗ ತಟ್ಟೆಯಲ್ಲಿ ಅಕ್ಷತೆ, ಕುಂಕುಮ, ಶ್ರೀಗಂಧ, ಸಿಹಿ, ಆರತಿ ಇರಬೇಕು. ಸಹೋದರನಿಗೆ ಆರತಿ ಮಾಡಿ ತಲೆಗೆ ಅಕ್ಷತೆ ಹಾಕಿ, ಹಣೆಗೆ ಕುಂಕುಮ, ಗಂಧವಿಟ್ಟುನಂತರ ಸಿಹಿ ತಿನ್ನಿಸುವ ಪದ್ಧತಿಯಿದೆ. ರಾಖಿ ಇಡುವ ತಟ್ಟೆಯನ್ನು ಹೂಗಳಿಂದ ಸುಂದರವಾಗಿ ಅಲಂಕೃತಗೊಳಿಸಿ ಈ ದಿನವನ್ನು ಇನ್ನಷ್ಟು ಸುಂದರಗೊಳಿಸುವ ಕಲೆಯನ್ನೂ ಕಾಣಬಹುದು.

ಕಾಲ ಉರುಳುತ್ತಿದ್ದರೂ ರಾಖಿಗಳ ಕ್ರೇಜ್ ಅಂತೂ ಜನರಲ್ಲಿ ಕಮ್ಮಿಯಾಗಿಲ್ಲ. ರಾಖಿಗಳ ವೈವಿಧ್ಯ ಕಂಡರೆ ಅಣ್ಣತಮ್ಮಂದಿರಿಲ್ಲದ ಹುಡುಗಿಯೂ ತನಗೂ ಒಬ್ಬ ಅಣ್ಣನಿದ್ದಿದ್ದರೆ ಎಂದು ಯೋಚಿಸದೇ ಇರುವುದಿಲ್ಲ. ಸ್ವಂತ ಅಣ್ಣ-ತಮ್ಮಂದಿರಿಗಷ್ಟೇ ಅಲ್ಲದೇ ಸುತ್ತಮುತ್ತಲಿನ ಹುಡುಗರಿಗೂ ರಾಖಿ ಕಟ್ಟಿ ಸಿಹಿ ತಿನಿಸುವ ರೂಢಿ ಬೆಳೆದು ಬಂದಿರುವುದರಿಂದ ರಾಖಿಗೆ ಈಗ ಸಕತ್ ಬೇಡಿಕೆ. ಪುರುಷ-ಮಹಿಳೆ ಎನ್ನುವ ಭೇದವಿಲ್ಲದೇ ಎಲ್ಲರಿಗೂ ರಾಖಿ ಕಟ್ಟಿ ಪರಸ್ಪರ ರಕ್ಷಣೆ ಮಾಡಬೇಕೆನ್ನುವ ಭಾವ ಬಿತ್ತುವ ಹಲವು ಸಂಘಟನೆಗಳೂ ನಮ್ಮಲ್ಲಿವೆ.

ರಾಖಿ ಸಡಗರ ಹೆಚ್ಚಳ

ಸಹೋದರ-ಸಹೋದರಿಯರ ಬಾಂಧವ್ಯಕ್ಕೆ ಮೆರುಗು ನೀಡುವ ರಾಖಿ ಹಬ್ಬದ ಸಡಗರ ವರ್ಷ-ವರ್ಷವೂ ಹೆಚ್ಚಳವಾಗುತ್ತಿದೆ. ದಾರಗಳಿಗೆ ಮಣಿ ಪೋಣಿಸಿದಂಥ ರಾಖಿಗಳು ಹೆಚ್ಚಾಗಿ ಮಾರಾಟವಾಗುತ್ತವೆ. ₹ 10ರಿಂದ ಆರಂಭಿಸಿ ₹ 200 ದರದ ರಾಖಿಗಳನ್ನು ಮಹಿಳೆಯರು, ಯುವತಿಯರು ಖರೀದಿಸುತ್ತಾರೆ. ಈಚೆಗೆ ಆನ್‌ಲೈನ್ ಮೂಲಕ ತರಿಸುವ ಪರಿಪಾಠ ಹೆಚ್ಚುತ್ತಿದೆ ಎಂದು ಹುಬ್ಬಳ್ಳಿಯ ರಾಖಿ ಹೋಲ್‌ಸೇಲ್ ಮಾರಾಟಗಾರರಾದ ಹನುಮಾನ್ ಸಿಂಗ್ ಜಿ. ಪುರೋಹಿತ್ ತಿಳಿಸಿದರು.

ಹುಬ್ಬಳ್ಳಿಯಲ್ಲಿ ರಾಖಿ ಹಬ್ಬಕ್ಕಾಗಿ ಮಾರುಕಟ್ಟೆಯಲ್ಲಿ ರಾಖಿ ಖರೀದಿಸುತ್ತಿರುವ ಯುವತಿ ಚಿತ್ರ/ ಗೋವಿಂದರಾಜ ಜವಳಿ

ಕುಂಬಳ ಬೀಜ, ಸವತೆ ಬೀಜ, ಕಲ್ಲಂಗಡಿ ಬೀಜ, ಬಾಳೆಯ ಎಲೆ, ಥರಥರದ ಹೂಗಳು, ಇತರ ಪರಿಸರಸ್ನೇಹಿ ವಸ್ತುಗಳು ಹಾಗೂ ಮನೆಯಲ್ಲೇ ಇರುವ ಕೆಲವು ವಸ್ತುಗಳಿಂದಲೇ ಸುಂದರ ರಾಖಿ ತಯಾರಿಸಬಹುದು. ಅಂಗವಿಕಲ, ಬುದ್ಧಿಮಾಂದ್ಯ ಮಕ್ಕಳು ತಯಾರಿಸಿದ ರಾಖಿಗಳಿಗೂ ವಿಶೇಷ ಬೇಡಿಕೆಯಿದೆ. ಸಮಾಜ ಸೇವಾ ಮನೋ ಭಾವದವರು, ಮಾನವೀಯ ಅಂತಃಕರಣ ಉಳ್ಳವರು ಇಂಥ ರಾಖಿಗಳನ್ನು ಖರೀದಿಸಿ ಈ ವಿಶೇಷ ಜನರ ಸ್ವಾವಲಂಬನೆಗೂ ದಾರಿ ಮಾಡಿಕೊಡುತ್ತಿದ್ದಾರೆ. ರೇಷ್ಮೆ ದಾರದಿಂದ ಮಾಡಿದ ರಾಖಿಗಳಿಗೂ ವಿಶೇಷ ಮಹತ್ವವಿದೆ.

ರಕ್ಷಾ ಸೂತ್ರವೇ ರಾಖಿ: ಹಲವು ವರ್ಷಗಳಿಂದ ರಾಖಿಗಳಲ್ಲಿ ನವಿಲುಗರಿ ಬಹಳವಾಗಿ ಬಳಕೆಯಾಗುವ ಚಿತ್ರ. ಕೃಷ್ಣನ ಕೈ ಬೆರಳಿಗೆ ಸುದರ್ಶನ ಚಕ್ರ ತಾಗಿ ಗಾಯವಾದಾಗ ಹೆಚ್ಚು ರಕ್ತ ಹೋಗದಿರಲಿ ಎಂದು ದ್ರೌಪದಿ ತನ್ನ ಸೀರೆಯ ಸೆರಗಿನ ತುಂಡು ತೆಗೆದು ಆತನ ಮಣಿಕಟ್ಟಿಗೆ ಕಟ್ಟುತ್ತಾಳೆ. ಇದರಿಂದ ಹರ್ಷಗೊಂಡ ಕೃಷ್ಣ ಅದನ್ನು 'ರಕ್ಷಾ ಸೂತ್ರ' ಎಂದು ಕರೆದ ಎನ್ನಲಾಗುತ್ತದೆ. ಅವಳ ಕಾಳಜಿಗೆ ಮೆಚ್ಚಿ ಅವಳಿಗೆ ರಕ್ಷಣೆಯ ಭರವಸೆ ನೀಡುತ್ತಾನೆ. ಮುಂದೆ ದುಶ್ಯಾಸನ ದ್ರೌಪದಿಯ ವಸ್ತ್ರಾಪಹರಣ ಮಾಡಿದ ಸಂದರ್ಭದಲ್ಲಿ ಅಕ್ಷಯ ವಸ್ತ್ರವನ್ನು ಕೃಷ್ಣ ಪ್ರದಾನ ಮಾಡುತ್ತಾನೆ. ಸಹೋದರತ್ವದ ಈ ರಕ್ಷಣೆಯ ಭರವಸೆಯ ಭಾವವೇ ರಾಖಿ ಹಬ್ಬಕ್ಕೆ ತಳಹದಿ ಎಂಬ ಮಾತಿದೆ. ಇನ್ನೂ ಹಲವು ಕಥೆಗಳು ರಾಖಿ ಹಬ್ಬದ ಜೊತೆ ತಳಕು ಹಾಕಿಕೊಂಡಿವೆ.

ಹಿನ್ನೆಲೆ ಏನೇ ಇರಲಿ ರಾಖಿಗಳಲ್ಲಿ ನವಿಲಿನ ಚಿತ್ರಕ್ಕೆ ಹೆಚ್ಚಿನ ಮನ್ನಣೆ. ಗರಿಬಿಚ್ಚಿದ ನವಿಲು, ಕೃಷ್ಣ, ಕೊಳಲು ಹಾಗೂ ನವಿಲುಗರಿ, ಕೃಷ್ಣನ ಚಿತ್ರಗಳಿರುವ ರಾಖಿಗಳಿಗೆ ಸಾಂಪ್ರದಾಯಿಕ ಮನ್ನಣೆ ಲಭ್ಯವಿದೆ. ಅದು ಬಿಟ್ಟರೆ ಗಣೇಶನ ವಿಧವಿಧ ಚಿತ್ತಾರಗಳು ಲಭ್ಯವಿವೆ. ಅರಳಿದ ಕಮಲ, ಶಂಖ, ರುದ್ರಾಕ್ಷಿ, ಹಲವು ವಿಧದ ಮಣಿಗಳು, ಕುಂದನ್‌ಗಳು, ವುಲನ್, ಹಂಸ, ಓಂ ಆಕಾರ, ಸ್ವಸ್ತಿಕ್ ಹೀಗೆ.... ಹಲವು ಆಕೃತಿಗಳು ಕಾಯಂ ಆಗಿ ಬಳಕೆಯಾಗುತ್ತವೆ.

ಭಾರತೀಯ ಚಿತ್ರಕಲಾ ಪ್ರಕಾರಗಳೂ ರಾಖಿಗಳ ಚಿತ್ತಾರದಲ್ಲಿ ಹಾಸು ಹೊಕ್ಕಾಗಿವೆ. ಮಧುಬನಿ, ವರ್ಲಿ, ಮೀನಾಕರಿ ಕಲೆ ಇರುವ ರಾಖಿಗಳು ಖ್ಯಾತವಾಗಿವೆ. ಬುಕ್ ಮಾರ್ಕರ್‌ಗಳಂತೆ ಬಳಸಬಲ್ಲ ರಾಖಿ, ಬಾಲ್ಯದ ಅನುಬಂಧವನ್ನು ನೆನಪಿಸುವ ವಸ್ತುಗಳನ್ನು ಹಾಕಿ ತಯಾರಿಸಿದ ರಾಖಿ, ಲೆದರ್‌ನಲ್ಲಿ ಮಾಡಿದ ಹಲವು ವಿನ್ಯಾಸಗಳು, ಹಳೆಯ ಭಾವಚಿತ್ರ ಇರುವ ರಾಖಿ, ಕಾಗದವನ್ನು ಸುತ್ತಿ ಮಾಡಿದಂಥವು, ಕಸೂತಿಯ ತುಂಡು ಇರುವಂಥದ್ದು, ಆಕರ್ಷಕ ಸೂಕ್ತಿಗಳಿರುವಂಥವು, ಸಹೋದರ ಎಂಬ ಒಕ್ಕಣೆ ಇರುವಂಥವು, ರಾಷ್ಟ್ರಧ್ವಜ ಚಿತ್ರ ಇರುವ ಹೀಗೆ ಇನ್ನೂ ಕಲ್ಪನೆಗೆ ಮೀರಿದಂಥ ವಿಧಗಳು ಇವುಗಳಲ್ಲಿ ಬಂದಿವೆ. ಇಮೋಜಿಗಳ ಕಾಲವಾದ್ದರಿಂದ ಅವುಗಳಂತೂ ಇದ್ದೇ ಇವೆ.

ಮಕ್ಕಳಿಗಾಗಿ ವಿಶೇಷ: ಮಕ್ಕಳ ಮನಗೆದ್ದಿರುವ ಎನಿಮೇಟೆಡ್ ಕಾರ್ಟೂನ್‌ಗಳ ಪಾತ್ರಗಳೂ ರಾಖಿ ವಿನ್ಯಾಸಗಳಾಗಿ ರೂಪು ತಳೆದಿವೆ. ಛೋಟಾ ಭೀಮ್, ಡೊರೆಮಾನ್, ಸ್ಪೈಡರ್ ಮ್ಯಾನ್, ಬ್ಯಾಟ್ ಮ್ಯಾನ್, ಪೆಪ್ಪಾ ಪಿಗ್, ಪಾ ಪೆಟ್ರೋಲ್‌ಗಳಂಥ ಮಕ್ಕಳ ನೆಚ್ಚಿನ ಕಾರ್ಟೂನ್‌ಗಳ ಪಾತ್ರಧಾರಿಗಳನ್ನು ಕೈಯಲ್ಲಿ ಕಟ್ಟಿಕೊಳ್ಳಲು ಚಿಕ್ಕಮಕ್ಕಳಿಗೆ ಖುಷಿಯಾಗುವ ಕಾರಣ ಪಾಲಕರು ಇಂಥವೇ ಕ್ರಿಯೇಟಿವ್ ರಾಖಿಗಳನ್ನು ಖರೀದಿಸುತ್ತಿದ್ದಾರೆ.

ಮಣಿಗಳನ್ನು ಪೋಣಿಸಿ ಮಾಡಿದಂಥ ರಾಖಿಗಳು ಜನರ ಮನಗೆದ್ದಿವೆ. ಹಲವು ದುಬಾರಿ ರಾಖಿಗಳು ಬ್ರೇಸ್ಲೆಟ್ ಮಾದರಿಯಲ್ಲಿಯೂ ಬರುತ್ತಿವೆ. ಕೆಟ್ಟ ದೃಷ್ಟಿ ನಿವಾರಿಸುವ ಸಂಕೇತದ ರಾಖಿ ಕಳೆದ ವರ್ಷದಿಂದ ಸದ್ದು ಮಾಡುತ್ತಿದೆ. ಕಪ್ಪು, ನೀಲಿ ಹಾಗೂ ಬಿಳಿಯ ಬಣ್ಣದ ಸಂಯೋಜನೆಯ ಈ ರಾಖಿಗೆ ಬಹಳ ಬೇಡಿಕೆ ಸೃಷ್ಟಿಯಾಗಿದೆ. ಬರ್ಗರ್, ಪಿಜ್ಜಾ, ಜಿಲೇಬಿ ಹಾಗೂ ಕೆಲವು ಜನಪ್ರಿಯ ಆಹಾರ ಪದಾರ್ಥಗಳ ಚಿತ್ರಗಳಿರುವ ರಾಖಿಗಳೂ ಆಹಾರ ಪ್ರಿಯರ ಮನಸ್ಸು ಕದ್ದಿವೆ. ಪ್ರಾಣಿಗಳ ಚಿತ್ರಗಳುಳ್ಳ ರಾಖಿಗಳು ಪ್ರಾಣಿ ರಕ್ಷಣೆಯ ಮಹತ್ವವನ್ನು ಸಾರಿ ಹೇಳುತ್ತವೆ.

ಉಡುಗೊರೆಯೂ ವಿಶೇಷ: ಕುಟುಂಬದಲ್ಲಿ ಅಥವಾ ತವರಿನಲ್ಲಿ ತಂದೆ-ತಾಯಿಯ ನಂತರ ಹೆಣ್ಣುಮಕ್ಕಳಿಗೆ ಇರುವ ಬಲವಾದ ಸಂಬಂಧ ಸಹೋದರರದ್ದು. ಒಡಹುಟ್ಟಿದವರಲ್ಲಿ ಸಂಬಂಧ ಬಲಗೊಳಿಸುವ ರಾಖಿ ಹಬ್ಬದಲ್ಲಿ ಉಡುಗೊರೆಯೂ ಮಹತ್ವದ ಪಾತ್ರ ಹೊಂದಿದೆ. ಸಹೋದರರಿಗಾಗಿಯೇ ಒಂದು ದಿನ ಸಂಭ್ರಮ ಪಡುವ ಸಹೋದರಿಯರಿಗೆ ಉಡುಗೊರೆ ನೀಡುವ ಸಂಪ್ರದಾಯ ನಡೆದು ಬಂದಿದೆ. ಹೀಗಾಗಿ ಅಕ್ಕನಿಗೆ, ತಂಗಿಗೆ ಏನು ಉಡುಗೊರೆ ಕೊಡಲಿ ಎಂಬ ಚಿಂತೆ ಹುಡುಗರ ಪಾಲಿಗೆ ಇದ್ದೇ ಇರುತ್ತದೆ.

ಪುಟ್ಟ ಮಕ್ಕಳಿಗಾದರೆ ರಾಖಿ ಹಾಗೂ ಉಡುಗೊರೆ ಎರಡನ್ನೂ ಪಾಲಕರೇ ಖರೀದಿಸಿ ಕೊಡುತ್ತಾರೆ. ಶೋಕೇಸ್‌ನಲ್ಲಿ ಪ್ರದರ್ಶನಕ್ಕೆಂದು ಇಡುವುದಕ್ಕಿಂದ ಉಪಯುಕ್ತ ವಸ್ತುಗಳನ್ನೇ ಉಡುಗೊರೆಯಾಗಿ ನೀಡುವುದು ಸೂಕ್ತ. ಚಾಕೊಲೆಟ್, ಚಿತ್ರಕಥಾ ಪುಸ್ತಕಗಳು, ಪರ್ಸ್, ಬಳೆಗಳು, ಕಂಪಾಸ್, ಪೆನ್ ಸೆಟ್, ಡೈರಿ, ನೋಟ್‌ಬುಕ್, ಶಬ್ದಕೋಶ ಹೀಗೆ... ಹೀಗೆ ಆಯ್ಕೆಗೆ ಹಲವು ಅವಕಾಶಗಳಿವೆ. ಯುವತಿಯರಿಗಾದರೆ ಸೀರೆ, ಡ್ರೆಸ್, ಜುವೆಲರಿ, ಪುಸ್ತಕ, ಮೇಕ್‌ಅಪ್ ಸೆಟ್, ಬಳೆ, ವ್ಯಾನಿಟಿ ಬ್ಯಾಗ್ ಉಡುಗೊರೆ ನೀಡುವ ರೂಢಿ ಬೆಳೆದು ಬಂದಿದೆ. ಗೃಹಿಣಿಯರಿಗೆ ಸೀರೆ, ವ್ಯಾನಿಟಿ ಬ್ಯಾಗ್, ಪರ್ಸ್, ಡ್ರೆಸ್, ಸ್ವೆಟರ್, ಉಂಗುರ, ಬಳೆ, ನೆಕ್ಲೆಸ್ ಹೀಗೆ ಹಲವು ಉಡುಗೊರೆಗಳನ್ನು ಕೊಡಿಸಬಹುದು. ಹೀಗೆ ಸಹೋದರಿಯರ ಅಗತ್ಯ ಅರಿತು ಅದನ್ನೇ ಹುಡುಕಿ ತಂದು ಕೊಡುವ ಅಣ್ಣತಮ್ಮಂದಿರಿದ್ದಾರೆ. ಹಣವನ್ನು ನೀಡಿ ಇಷ್ಟವಾದುದನ್ನು ತೆಗೆದುಕೋ ಎನ್ನುವ ಸಹೋದರರೂ ಇದ್ದಾರೆ. ಒಟ್ಟಿನಲ್ಲಿ ಸಹೋದರ-ಸಹೋದರಿಯ ಬಾಂಧವ್ಯಕ್ಕೆ ರಾಖಿ ಹಬ್ಬ ಮೆರುಗು ತರುತ್ತಿದೆ.

ಕೆಸುವಿನ ಎಲೆ ವಿಶೇಷ

ಮಳೆಗಾಲ ಬಂತೆಂದರೆ ಕೆಸುವು ಎಲ್ಲೆಂದರಲ್ಲಿ ಹುಟ್ಟಿ ಬೆಳೆಯುತ್ತದೆ, ಕೆಸುವಿನಲ್ಲಿ ಅನೇಕ ವಿಧಗಳಿವೆ ಕರಿಕೆಸು, ಸಲಾಡ್ ಕೆಸು, ಮರೆಗೆಸು, ಮಕ್ಕಳಕೆಸು, ಹಾಲು ಕೆಸು ಇವು ಬಾಯಿ ತುರಿಸದ ಕೆಸುಗಳು, ಕೆಸುವಿನ ಎಲೆಯಲ್ಲಿ ವಿಟಮಿನ್ ಎ, ಸಿ, ಬಿ, ಫೋಲೇಟ್, ಮ್ಯಾಂಗನಿಸ್, ತಾಮ್ರ, ಪೊಟ್ಯಾಷಿಯಂ, ಕಬ್ಬಿಣದಂಶ ಇರುತ್ತದೆ. ಸಾಕಷ್ಟು ನಾರಿನಂಶ ಕೂಡ ಇದೆ. ಕೆಸುವಿನ ಎಲೆಯಲ್ಲಿ ವಿಟಮಿನ್ ಹಾಗೂ ಆ್ಯಂಟಿ ಆಕ್ಸಿಡೆಂಟ್ ಅಂಶವಿರುವುದ್ದರಿಂದ ಕೆಸುವಿನ ಎಲೆ ಸೇವಿಸುವುದ್ದರಿಂದ ಅನೇಕ ಪ್ರಯೋಜನಗಳನ್ನು ಪಡೆಯಬಹುದು. ಇಂಥ ಕೆಸುವಿನ ಎಲೆಯ ರುಚಿಕರ ತಿನಿಸುಗಳ ರೆಸಿಪಿ ನೀಡಿದ್ದಾರೆ ಪ್ರಭಾ ಶಾಸ್ತ್ರಿ.

ರಸಾಸ್ವಾದ

ಕೆಸುವಿನ ಸೊಪ್ಪಿನ ಪಕೋಡ

ಬೇಕಾಗುವ ಸಾಮಗ್ರಿಗಳು: ಕೆಸುವಿನ ಎಲೆ ಹೆಚ್ಚಿದ್ದು- 1 ಬಟ್ಟಲು, ಕಡ್ಲೆಹಿಟ್ಟು- 1 ಬಟ್ಟಲು, ಕೆಂಪು ಮೆಣಸಿನ ಪುಡಿ – 1 ಚಮಚ, ಹಸಿ ಮೆಣಸು – 2, ಉಪ್ಪು, ಕರೆಯಲು ಎಣ್ಣೆ.

ಮಾಡುವ ವಿಧಾನ: ಹೆಚ್ಚಿದ ಕೆಸುವಿನ ಎಲೆ, ಕಡ್ಲೆಹಿಟ್ಟು, ಕೆಂಪು ಮೆಣಸಿನ ಪುಡಿ, ಹೆಚ್ಚಿದ ಹಸಿಮಣಸು ಹಾಕಿ, ಉಪ್ಪು ಹಾಕಿ ಕಲೆಸಿ ನೀರು ಹಾಕಿ ಗಟ್ಟಿಯಾಗಿ ಪಕೋಡ ಹಿಟ್ಟಿನಂತೆ ಕಲೆಸಿ, ಒಲೆಯ ಮೇಲೆ ಎಣ್ಣೆ ಕಾಯಿಸಲು ಇಟ್ಟು, ಕಾದ ಎಣ್ಣೆಗೆ ಕಲೆಸಿದ ಹಿಟ್ಟನ್ನು ಪಕೋಡ ಹಾಕಿದ ಹಾಗೆ ಸ್ವಲ್ಪ ಸ್ವಲ್ಪವೇ ಹಾಕಿ ಮಧ್ಯಮ ಉರಿಯಲ್ಲಿ ಹೊಂಬಣ್ಣ ಬರುವವರೆಗೂ ಕರಿದು ತೆಗೆಯಿರಿ, ಗರಿಗರಿಯಾದ ಪಕೋಡ ರೆಡಿ.

ಕೆಸುವಿನ ಸೊಪ್ಪಿನ ಅಂಬೊಡೆ

ಬೇಕಾಗುವ ಸಾಮಗ್ರಿಗಳು: ಕಡ್ಲೆಬೇಳೆ – 1 ಬಟ್ಟಲು, ಕೆಸುವಿನ ಸೊಪ್ಪು ಸಣ್ಣಗೆ ಹೆಚ್ಚಿದ್ದು – 1 ಬಟ್ಟಲು, ಹಸಿ ಮೆಣಸು – 4, ಕರಿಯಲು ಎಣ್ಣೆ, ಉಪ್ಪು.

ಮಾಡುವ ವಿಧಾನ: ಕಡ್ಲೆಬೇಳೆಯನ್ನು ನಾಲ್ಕು ಗಂಟೆ ನೆನಸಿಕೊಂಡು, ನೀರು ಬಸಿದು ತರಿತರಿಯಾಗಿ ರುಬ್ಬಿಕೊಳ್ಳಿ, ಅದಕ್ಕೆ ಹೆಚ್ಚಿದ ಕೆಸುವಿನ ಸೊಪ್ಪು, ಹೆಚ್ಚಿದ ಹಸಿಮೆಣಸು, ಉಪ್ಪು ಹಾಕಿ ಕಲೆಸಿ, ಎಣ್ಣೆ ಕಾಯಿಸಲು ಇಟ್ಟು ಕಲೆಸಿದ ಹಿಟ್ಟನ್ನು ಸ್ವಲ್ಪ ತೆಗೆದುಕೊಂಡು ಕೈಯಲ್ಲಿ ತಟ್ಟಿ ಎಣ್ಣೆಯಲ್ಲಿ ಹಾಕಿ ಮಧ್ಯಮ ಉರಿಯಲ್ಲಿ ಹೊಂಬಣ್ಣ ಬರುವವರೆಗೆ ಕರಿದು ತೆಗೆಯಿರಿ ಗರಿಗರಿಯಾದ ಅಂಬೊಡೆ ರೆಡಿ.

ಕೆಸುವಿನ ಸೊಪ್ಪಿನ ಚಟ್ನಿ

ಬೇಕಾಗುವ ಸಾಮಗ್ರಿಗಳು: ಕೆಸುವಿನ ಎಲೆ – 10, ಈರುಳ್ಳಿ- 1, ಅಕ್ಕಿ – 1 ಕಪ್, ಕಾಯಿತುರಿ – ಕಾಲು ಕಪ್ಪು, ಕಡ್ಲೆಬೇಳೆ – 5 ಚಮಚ, ಉದ್ದಿನ ಬೇಳೆ – 1 ಚಮಚ, ಧನಿಯಾ – 3 ಚಮಚ, ಮೆಂತ್ಯ – 2 ಚಮಚ, ಜೀರಿಗೆ – 1 ಚಮಚ, ಕೆಂಪು ಮೆಣಸು – 6, ಹುಣಸೆಹಣ್ಣು ಅಡಿಕೆ ಗಾತ್ರದ್ದು, ಕರಿ ಬೇವು – 1 ಕಡ್ಡಿ, ಉಪ್ಪು, ಬೆಲ್ಲ – 1 ಚಮಚ, ಎಣ್ಣೆ ಅರ್ಧ ಕಪ್.

ಮಾಡುವ ವಿಧಾನ: ಅಕ್ಕಿಯನ್ನು ಎರಡು ಗಂಟೆ ಕಾಲ ನೆನಸಿಕೊಳ್ಳಬೇಕು, ಕೆಂಪು ಮೆಣಸಿನ ಕಾಯಿ, ಮೆಂತ್ಯ, ಧನಿಯಾ, ಜೀರಿಗೆ, ಉದ್ದಿನ ಬೇಳೆ, ಕಡ್ಲೆ ಬೇಳೆ, ಕರಿ ಬೇವು ಹಾಕಿ ಎರಡು ಚಮಚ ಎಣ್ಣೆ ಹಾಕಿ ಹುರಿದುಕೊಂಡು ತಣ್ಣಗಾದ ಮೇಲೆ ಮಿಕ್ಸಿ ಜಾರಿಗೆ ಹಾಕಿ ಹುಣಸೆ ಹಣ್ಣು, ತೆಂಗಿನ ತುರಿ ಹಾಕಿ ರುಬ್ಬಿ, ನೆನಸಿದ ಅಕ್ಕಿಯನ್ನು ನೀರು ಬಸಿದು ಹಾಕಿ ಗಟ್ಟಿಯಾಗಿ ರುಬ್ಬಿ ತೆಗೆಯಿರಿ. ಅದಕ್ಕೆ ಉಪ್ಪು, ಬೆಲ್ಲ ಸಣ್ಣಗೆ ಹೆಚ್ಚಿದ ಈರುಳ್ಳಿ, ಸಣ್ಣಗೆ ಹೆಚ್ಚಿದ ಕೆಸುವಿನ ಸೊಪ್ಪು ಹಾಕಿ ಕಲೆಸಿ, ತವಾ ಒಲೆಯ ಮೇಲೆ ಇಟ್ಟು ಕಾದ ಮೇಲೆ ಕಲೆಸಿದ ಹಿಟ್ಟನ್ನು ಹರಡಿ ಎಣ್ಣೆ ಹಾಕಿ ಎರಡು ಕಡೆ ಬೇಯಿಸಿ ತೆಗೆಯಿರಿ.

ಕೆಸುವಿನ ಸೊಪ್ಪಿನ ಬೋಂಡಾ

ಬೇಕಾಗುವ ಸಾಮಗ್ರಿಗಳು: ಕೆಸುವಿನ ಎಲೆ – 4, ಕಡ್ಲೆಹಿಟ್ಟು – 1 ಕಪ್ಪು, ಕೆಂಪು ಮೆಣಸಿನ ಪುಡಿ – 2 ಚಮಚ, ಉಪ್ಪು, ಟೂತ್ ಪಿಕ್, ಕರಿಯಲು ಎಣ್ಣೆ.

ಮಾಡುವ ವಿಧಾನ: ಕಡ್ಲೆ ಹಿಟ್ಟು, ಕೆಂಪು ಮೆಣಸಿನ ಪುಡಿ, ಉಪ್ಪು ಹಾಕಿ ಮಿಕ್ಸ್ ಮಾಡಿ, ನೀರು ಹಾಕಿ ಬೊಂಡಾ ಹಿಟ್ಟಿನ ಹದಕ್ಕೆ ಕಲೆಸಿ ಎಣ್ಣೆ ಕಾಯಲು ಇಟ್ಟು ಎಲೆಯನ್ನು ಕಟ್ ಮಾಡಿಕೊಂಡು ಜಿಗ್‌ಜಾಗ್ ಆಗಿ ಮಡಚಿ ಟೂತ್ ಪಿಕ್ ಚುಚ್ಚಿ ಕಲೆಸಿಟ್ಟ ಹಿಟ್ಟಿನಲ್ಲಿ ಅದ್ದಿ ಎಣ್ಣೆಯಲ್ಲಿ ಬಿಡಿ.ಹೊಂಬಣ್ಣ ಬರುವವರೆಗೆ ಕರಿದು ತೆಗೆಯಿರಿ.

ಅಂತರಂಗ

ಅಕ್ಷರ ದಾಮ್ಲೆ

ಸಾವಿನ ಶೋಕದಿಂದ ಹೊರತರುವುದು ಹೇಗೆ?

ನನ್ನ ಸ್ನೇಹಿತೆಯ ಮಗಳಿಗೆ ಹದಿಮೂರು ವರ್ಷ. ಈಚೆಗೆ ತಂದೆಯನ್ನು ಕಳೆದುಕೊಂಡಿದ್ದಾಳೆ. ಯಾವುದರಲ್ಲಿಯೂ ಆಸಕ್ತಿ ಇಲ್ಲ. ಶೂನ್ಯವನ್ನು ದಿಟ್ಟಿಸುತ್ತ, ಏಕಾಂಗಿಯಾಗಿರಲು ಬಯಸುತ್ತಾಳೆ. ನಿರಂತರ ಶೋಕದಿಂದ ಆಚೆ ತರುವುದು ಹೇಗೆ? ಆಪ್ತಸಮಾಲೋಚನೆಯ ಅಗತ್ಯವಿದೆಯೇ? ಮನೆಯಲ್ಲಿಯೇ ನೀಡಬಹುದಾದ ಭಾವನಾತ್ಮಕ ಬೆಂಬಲದ ಕುರಿತೂ ಚೂರು ಹೇಳಿ.

ಸಾಮಾನ್ಯವಾಗಿ ಒಂದು ಮಾತಿದೆ. ಮಗಳಿಗೆ ತಂದೆಯ ಜತೆ ಮತ್ತು ಮಗನಿಗೆ ತಾಯಿಯ ಜೊತೆ ಹೆಚ್ಚಿನ ಆಪ್ತತೆ ಇರುತ್ತದೆ ಅಂತ. ಇದು ಮನೋವೈಜ್ಞಾನಿಕವಾಗಿಯೂ ಒಪ್ಪಿತವಾದದ್ದೇ. ಅಂತೆಯೇ, ಈ13 ವರ್ಷದ ಕೂಸಿಗೆ ತಂದೆಯ ಜೊತೆ ಬಹಳ ಆಪ್ತತೆ ಇದ್ದಿರಬೇಕು. ಹಾಗಿರುವಾಗ, ಅವರನ್ನು ಕಳೆದುಕೊಂಡ ದುಃಖ ಆಕೆಯನ್ನು ಅತಿಯಾಗಿ ಕಾಡುತ್ತಿದೆ. ಆಪ್ತ ವ್ಯಕ್ತಿ ಇನ್ನಿಲ್ಲವಾದಾಗ ಅದು ಉಂಟುಮಾಡುವಂತಹ ಖಾಲಿತನವನ್ನು ವಿವರಿಸುವುದಕ್ಕೆ ಸಾಧ್ಯವಿಲ್ಲ. ಹಾಗಂತ ಅದೇ ಮನಸ್ಥಿತಿಯಲ್ಲಿ ಉಳಿದುಬಿಟ್ಟರೆ ಅದು ಇನ್ನಷ್ಟು ತೊಂದರೆಗಳಿಗೆ ಕಾರಣವಾಗುತ್ತದೆ. ಹಾಗಾಗಿ ಆಕೆಯನ್ನು ದುಃಖದ ಮಡುವಿನಿಂದ ಹೊರತರುವುದು ಅಗತ್ಯ. ಕಳೆದುಕೊಂಡು ಒಂದಷ್ಟು ದಿನ ಕಳೆದ ಮೇಲೆ, ನಿಧಾನವಾಗಿ ಅದರಿಂದ ಹೊರಬರುವುದಕ್ಕೆ ಸಹಾಯ ಮಾಡಬೇಕು. ಅದಕ್ಕೆ ಮನಶ್ಶಾಸ್ತ್ರೀಯ ಚಿಕಿತ್ಸೆ ಕೊಡಿಸಿದರೆ ಒಳ್ಳೆಯದು. ಅದಕ್ಕೂ ಮೊದಲು ಆಕೆಯ ತಾಯಿ ಆಕೆಗೆ ಧೈರ್ಯವನ್ನು ತುಂಬಬೇಕು. ತಂದೆಯಿಂದ ಕಲಿತಿರುವಂತಹ ಉತ್ತಮ ಗುಣಗಳನ್ನು, ಹವ್ಯಾಸಗಳನ್ನು, ಮೌಲ್ಯಗಳನ್ನು ಮತ್ತು ಜೀವನ ಕೌಶಲಗಳನ್ನು ತನ್ನ ಜೀವನದಲ್ಲಿ ಉತ್ತಮ ರೀತಿಯಲ್ಲಿ ಅಳವಡಿಸಿಕೊಂಡು, ಗುರಿಯನ್ನು ಸಾಧಿಸುವತ್ತ ಪ್ರೇರೇಪಿಸಬೇಕು. ಭೌತಿಕವಾಗಿ ಆಕೆಯ ತಂದೆ ಇಲ್ಲವಾದಾರೂ, ಮಾನಸಿಕವಾಗಿ ಅವರನ್ನು ಆಕೆ ತನ್ನ ಹೃದಯದಲ್ಲಿ ಇಟ್ಟುಕೊಂಡು ತನ್ನ ಜೀವನದ ಮಜಲುಗಳನ್ನು ಹತ್ತುತ್ತಾ, ಕೃತಜ್ಞತೆಯನ್ನು ಸಲ್ಲಿಸುತ್ತಾ ಮುಂದುವರಿಯುವಂತೆ ಪೋಷಿಸಬೇಕು. ಆಕೆಯನ್ನು ಚಿತ್ರ ಬಿಡಿಸುವ ಅಥವಾ ಕವನ ರಚಿಸುವ ಅಥವಾ ಇನ್ಯಾವುದಾದರೂ ಆಕೆಗೆ ಇಷ್ಟವಾಗುವ ಒಂದಷ್ಟು ಹೊಸ ಹವ್ಯಾಸಗಳಿಗೂ ಹಚ್ಚಬಹುದು. ಆಕೆಯಲ್ಲಿ ಜೀವಿಸುವ ಪ್ರವೃತ್ತಿ (Living instinct) ಹೆಚ್ಚುತ್ತದೆ. ಮತ್ತು ಅಂತಃಶಕ್ತಿ ವೃದ್ಧಿಸುತ್ತದೆ. ಹೀಗೆ ಮಾಡಿದ ಮೇಲೂ ವ್ಯತ್ಯಾಸ ಕಂಡುಬರದಿದ್ದಲ್ಲಿ, ಮನಃಶ್ಶಾಸ್ತ್ರಜ್ಞರ ಬಳಿ ತಪ್ಪದೇ ಕರೆದುಕೊಂಡು ಹೋಗಿ.

ಶ್ರಾವಣದ ಪೂಜೆಗೆ ಆಕರ್ಷಕ ಹತ್ತಿಹಾರ

ಕೃಷ್ಣಿ ಶಿರೂರ

ಶ್ರಾವಣ ಎಂದರೆ ಹಬ್ಬಗಳ ಸರಣಿ. ಶ್ರಾವಣ ಎಂದರೆ ಪೂಜೆಗಳ ಸಂಭ್ರಮ. ಮಂಗಳಗೌರಿ, ವರಮಹಾಲಕ್ಷ್ಮಿ, ನಾಗರ ಪಂಚಮಿ ಪೂಜೆ ಹೀಗೆ ಸಾಲು ಸಾಲು ಪೂಜೆಗಳಿಗೆಲ್ಲ ಹತ್ತಿಯ ಹಾರಗಳನ್ನು ಬಳಸುವ ಸಂಪ್ರದಾಯ ಮೊದಲಿನಿಂದಲೂ ನಮ್ಮ ಸಂಸ್ಕೃತಿಯಲ್ಲಿ ನಡೆದುಕೊಂಡು ಬಂದಿದೆ. ಈ ಹತ್ತಿ ಹಾರಕ್ಕೆ 'ಗೆಜ್ಜೆ ವಸ್ತ್ರ' ಎಂಬ ಸಾಂಪ್ರದಾಯಿಕ ಹೆಸರೂ ಇದೆ.

ಮೊದಲೆಲ್ಲ ಹತ್ತಿ ಎಳೆಗಳನ್ನು ತೆಗೆದುಕೊಂಡು ಒಂದೊಂದು ಅಂಗುಲದ ಅಂತರದಲ್ಲಿ ಕುಂಕುಮದಿಂದ ಒತ್ತಿ ಸರಳ ಹಾರವನ್ನು ಸಿದ್ಧಪಡಿಸಿ ದೇವರ ಕೊರಳಿಗೆ ಹಾಕುತ್ತಿದ್ದರು. ಅದೇ ಹಾರಕ್ಕೆ ಶಿರಸಿ ಸಮೀಪದ ಬೊಮ್ನಳ್ಳಿಯ ಅರ್ಚನಾ ಹೊಸ ರೂಪ ನೀಡಿ ಆಕರ್ಷಕಗೊಳಿಸಿದ್ದಾರೆ. ವಿಶೇಷ ಪೂಜೆಗಳಿಗಾಗಿ ಅರ್ಚನಾ ಬೊಮ್ನಳ್ಳಿ ಸುಂದರ ಗೆಜ್ಜೆ ವಸ್ತ್ರ ಸಿದ್ಧಪಡಿಸಿಕೊಟ್ಟು, ದೇವತಾರಾಧನೆ ಜೊತೆಗೆ ಕಲಾರಾಧನೆಗೂ ಒತ್ತು ಕೊಟ್ಟಿದ್ದಾರೆ.

ಉದ್ದ ಎಳೆಗಳ ಹತ್ತಿ (ಬೊಯ್ಲಡ್ ಕಾಟನ್), ಫೆವಿಕಲ್, ಕತ್ತರಿ, ಸಂತ್ರದ ತಗಡು, ಟಿಕ್ಲಿ ಇಷ್ಟು ಪರಿಕರವಿದ್ದರೆ ಅರ್ಚನಾ ಕೈಗಳಲ್ಲಿ ವೈವಿಧ್ಯಮಯ ಗೆಜ್ಜೆ ವಸ್ತ್ರ ರೆಡಿ. ಕಳೆದ 20 ವರ್ಷಗಳಿಂದ ಈ ಹತ್ತಿ ಹಾರ ಮಾಡುವ ಹವ್ಯಾಸ ಬೆಳೆಸಿಕೊಂಡಿರುವ ಅವರು, ಯೂಟ್ಯೂಬ್‌ನಲ್ಲಿ ಸಿಕ್ಕ ಹತ್ತಿಹಾರದ ವಿಡಿಯೊ ನೋಡಿ ತಾವೂ ವಿಭಿನ್ನ ಹತ್ತಿಹಾರ ಮಾಡುವ ಕಲೆಯನ್ನು ಕರಗತ ಮಾಡಿಕೊಂಡರು. ನಂತರದ ದಿನಗಳಲ್ಲಿ ತಮ್ಮದೇ ಕೌಶಲ ಬಳಸಿ ಒಂದಕ್ಕಿಂತ ಒಂದು ಭಿನ್ನ ರೂಪಗಳಲ್ಲಿ ಹತ್ತಿಹಾರ ಸಿದ್ಧಪಡಿಸಿ ದೇವಸ್ಥಾನಗಳಿಗೆ ನೀಡಿದ್ದಾರೆ.

ಸಾಮಾನ್ಯವಾಗಿ ಶ್ರಾವಣ ಮಾಸದಲ್ಲಿ ಮಳೆಯೂ ಜೋರು. ಹಳ್ಳಿಗಳಲ್ಲಿ ಹೆಂಗಸರು ಮನೆಯಲ್ಲಿ ಈ ಸಮಯದಲ್ಲಿ ನಿತ್ಯದ ದೇವರ ಪೂಜೆಗೆ ಬೇಕಾದ ದೀಪದ ಬತ್ತಿ ಹಾಗೂ ನಾಗರಪಂಚಮಿ ಮೊದಲಾದ ಹಬ್ಬಗಳಲ್ಲಿ ಬಳಸಲು ಕಲಾತ್ಮಕ ಹತ್ತಿಹಾರದ ರಚನೆಯಲ್ಲಿ ತೊಡಗುತ್ತಾರೆ. ಮಳೆಗಾಲದಲ್ಲಿ ಹೊರಗಡೆ ಗಿಡಗಳಲ್ಲಿ ಹೂವಿನ ಲಭ್ಯತೆ ಕಮ್ಮಿ. ಹತ್ತಿಯಿಂದ ತಯಾರಿಸಿದ ಹಾರವು ದೇವರಿಗೆ ಅರ್ಪಿಸಲು ಅನುಕೂಲವೂ ಹೌದು.

ಹತ್ತಿಹಾರ ಕಲೆ ಶಿವಮೊಗ್ಗ ಜಿಲ್ಲೆಯಲ್ಲಿ ಹೆಚ್ಚು ಬಳಕೆಯಲ್ಲಿ ಇದೆ. ಅರ್ಚನಾ ಅವರ ತವರು ಸಾಗರ ತಾಲ್ಲೂಕಿನ ಹೆಗ್ಗೋಡು ಬಳಿ ಕೆರೇಕೈ. ತವರಲ್ಲಿ ಕಲಿತ ಕಲೆಯನ್ನು ಶಿರಸಿ ಭಾಗದ ಮಹಿಳೆಯರಿಗೆ ಪರಿಚಯಿಸುವ ಕೆಲಸವನ್ನೂ ಮಾಡುತ್ತಿದ್ದಾರೆ. ಮನೆಯಲ್ಲಿ ನಡೆಯುವ ಪೂಜೆಗಳಲ್ಲದೆ ಪ್ರತೀ ವರ್ಷ ಈ ಭಾಗದ ದೇವಸ್ಥಾನಗಳಲ್ಲಿ ವಿಶೇಷ ನಡೆದಾಗ ಹತ್ತಿಹಾರದ ಸೇವೆ ಸಲ್ಲಿಸುತ್ತಿದ್ದಾರೆ.

ಆಸಕ್ತ ಮಹಿಳೆಯರಿಗೆ ಹತ್ತಿಹಾರ ತಯಾರಿಸುವ ತರಬೇತಿ ಕಾರ್ಯಕ್ರಮ ನೀಡಿದ್ದು, ಈ ತನಕ ನೂರಾರು ಬಗೆಯ ಹತ್ತಿಹಾರ, ಆರತಿ ತಟ್ಟೆ ತಯಾರಿಸಿದ್ದಾರೆ.

> ಶ್ರಾವಣ ಎಂದರೆ ಹಬ್ಬಗಳ ಸರಣಿ, ಶ್ರಾವಣ ಎಂದರೆ ಸಂಭ್ರಮ. ಪೂಜೆ, ಪುನಸ್ಕಾರ, ಧಾರ್ಮಿಕ ಕಾರ್ಯಗಳಿಗೆಲ್ಲ ಶ್ರಾವಣ ಮಾಸವೇ ಪ್ರಸಕ್ತ ಎಂಬ ಮಾತೂ ಇದೆ. ಮಂಗಳಗೌರಿ, ವರಮಹಾಲಕ್ಷ್ಮಿ, ನಾಗರ ಪಂಚಮಿ, ಸತ್ಯನಾರಾಯಣ ಪೂಜೆ ಹೀಗೆ ಸಾಲು ಸಾಲು ಪೂಜೆಗಳಿಗೆಲ್ಲ ಹತ್ತಿಯ ಹಾರಗಳನ್ನು ಬಳಸುವ ಸಂಪ್ರದಾಯ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಈ ಹತ್ತಿಹಾರಕ್ಕೆ ಗೆಜ್ಜೆ ವಸ್ತ್ರ ಎಂಬ ಸಾಂಪ್ರದಾಯಿಕ ಹೆಸರೂ ಇದೆ.



ಹತ್ತಿಹಾರ ಸಿದ್ಧಪಡಿಸುತ್ತಿರುವ ಅರ್ಚನಾ ಬೊಮ್ನಳ್ಳಿ

ಪಶ್ಚಿಮಘಟ್ಟ ಭೂ ಪರಿವರ್ತನೆಗೆ ತಡೆ

ಪ್ರಜಾವಾಣಿ ವಾರ್ತೆ

ಈಶ್ವರ ಖಂಡ್ರೆ

ಬೆಂಗಳೂರು: ಜೀವವೈವಿಧ್ಯ ತಾಣ ಪಶ್ಚಿಮಘಟ್ಟ ಸಂರಕ್ಷಣೆಗೆ 'ಪ್ರಾದೇಶಿಕ ನಿಯಂತ್ರಣ ಮತ್ತು ಸಮಗ್ರ ಯೋಜನೆ' ನಿಯಮಗಳನ್ನು ರೂಪಿಸಲು ಸರ್ಕಾರ ಮುಂದಾಗಿದೆ.

ಈ ಕುರಿತು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಟಿಪ್ಪಣಿ ಕಳುಹಿಸಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ, 'ಪಶ್ಚಿಮಘಟ್ಟ ಉಳಿಸಲು ಹೊಸ ನಿಯಮಗಳನ್ನು ರೂಪಿಸುವ ಅಗತ್ಯವಿದ್ದು, ಅಲ್ಲಿಯವರೆಗೂ ಭೂ ಪರಿವರ್ತನೆಯ ಎಲ್ಲ ಪ್ರಸ್ತಾವಗಳನ್ನೂ ತಡೆಹಿಡಿಯಬೇಕು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದು, ಇದಕ್ಕೆ ಸೂಕ್ತ ಕ್ರಮವಹಿಸಿ' ಎಂದು ಉಲ್ಲೇಖಿಸಿದ್ದಾರೆ.

ಹಿಮಾಚಲ ಪ್ರದೇಶದಲ್ಲಿ ಭೂಪರಿವರ್ತನೆ ಮತ್ತು ಕಟ್ಟಡ ನಿರ್ಮಾಣಕ್ಕೆ ನಿರ್ದಿಷ್ಟ ಹಾಗೂ ಪ್ರತ್ಯೇಕವಾದ ನಿಯಮ ರೂಪಿಸಲಾಗಿದೆ. ಪಶ್ಚಿಮ ಘಟ್ಟ ವ್ಯಾಪ್ತಿಯ ನಗರ ಮತ್ತು ಗ್ರಾಮಾಂತರ ಪ್ರದೇಶಗಳ ವ್ಯಾಪ್ತಿಯಲ್ಲಿ ಭೂ-ಉಪಯೋಗ ಮತ್ತು ಭೂ ಪರಿವರ್ತನೆ ಸೇರಿದಂತೆ ಕಟ್ಟಡ ನಿರ್ಮಾಣಕ್ಕೆ ಕಂದಾಯ ಇಲಾಖೆ, ನಗರಾಭಿವೃದ್ಧಿ, ಪೌರಾಡಳಿತ, ನಗರ ಮತ್ತು ಗ್ರಾಮಾಂತರ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಸಮನ್ವಯದಲ್ಲಿ ಭೂ ಉಪಯೋಗ ಸ್ವರೂಪ ಕುರಿತಂತೆ ಹೊಸ ಪ್ರಾದೇಶಿಕ ನಿಯಂತ್ರಣ ಮತ್ತು ಸಮಗ್ರ ಯೋಜನೆ ರೂಪಿಸಬೇಕು ಎಂದಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ತಜ್ಞರನ್ನು ಒಳಗೊಂಡ ಉನ್ನತಾಧಿಕಾರ ಸಮಿತಿ ಸಭೆಯ ಅನುಮೋದನೆ ನಂತರ ಪ್ರಸ್ತಾವನೆಯನ್ನು ಕಡತದಲ್ಲಿ ಮಂಡಿಸುವಂತೆ ತಿಳಿಸಿದ್ದಾರೆ.

ಕಸ್ತೂರಿ ರಂಗನ್ ವರದಿಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರ ಈಚೆಗೆ ಮತ್ತೊಮ್ಮೆ ಹೊರಡಿಸಿರುವ ಅಧಿಸೂಚನೆ ಕುರಿತು ಸಚಿವ ಸಂಪುಟದ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಸಚಿವರು ವಿವರಿಸಿದ್ದಾರೆ.

ಕೋಲ್ಕತ್ತದಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ, ಕೊಲೆ ಖಂಡಿಸಿ ನಿಮ್ಹಾನ್ಸ್ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ನಿಮ್ಹಾನ್ಸ್‌ನ ನ್ಯೂರೋ ಕೇಂದ್ರದ ಬಳಿ ಶುಕ್ರವಾರ ಸಂಜೆ ಮೋಂಬತ್ತಿ ಬೆಳಗಿ ಮೌನ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಮೋಂಬತ್ತಿ ಹಿಡಿದು ಪ್ರತಿಭಟಿಸಿದ ವೈದ್ಯರು, ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲ್ಕತ್ತದ ಆರ್.ಜಿ. ಕರ್ ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿರುವುದನ್ನು ವಿರೋಧಿಸಿ ನಗರದ ವಿವಿಧೆಡೆ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು ಶುಕ್ರವಾರ ಸಂಜೆ ಉರಿಯುವ ಮೋಂಬತ್ತಿ ಹಿಡಿದು ಮೌನ ಮೆರವಣಿಗೆ ನಡೆಸಿದರು.

ನಿಮ್ಹಾನ್ಸ್ ಆವರಣದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ನೂರಾರು ಮಂದಿ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು ಮೋಂಬತ್ತಿ ಹಿಡಿದು ಸಾಗಿದರು. ನಿಮ್ಹಾನ್ಸ್‌ನ ನ್ಯೂರೋ ಕೇಂದ್ರದಿಂದ ಆರಂಭವಾದ ಮೆರವಣಿಗೆಯಲ್ಲಿ ಮೌನವಾಗಿ ಸಾಗಿದರು. ವೈದ್ಯ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಶಿವಾಜಿನಗರದ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು, ಬೋಧಕರು ಹಾಗೂ ಬೌರಿಂಗ್ ಆಸ್ಪತ್ರೆಯ ವೈದ್ಯರು ಕೂಡ ಪ್ರತಿಭಟನೆ ನಡೆಸಿದರು.

ಎಸ್.ಜಿ. ಬಾಳೇಕುಂದ್ರಿ ವೃತ್ತದಿಂದ ಬೌರಿಂಗ್ ಆಸ್ಪತ್ರೆಯವರೆಗೂ ಮೆರವಣಿಗೆಯಲ್ಲಿ ಸಾಗಿದ ಪ್ರತಿಭಟನಕಾರರು, ವೈದ್ಯ ವಿದ್ಯಾರ್ಥಿನಿ ಮೇಲೆ ದೌರ್ಜನ್ಯ ಎಸಗಿ, ಕೊಲೆ ಮಾಡಿದವರನ್ನು ಶಿಕ್ಷಿಸುವಂತೆ ಆಗ್ರಹಿಸಿದರು.

ನೆಹರೂ ತಾರಾಲಯ ನಿರ್ದೇಶಕರ ಬೇಡಿಕೆಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ಸಚಿವ ಬೋಸರಾಜು

ತಾರಾಲಯ ಆಧುನೀಕರಣ: ಸ್ಪಂದನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜವಾಹರಲಾಲ್ ನೆಹರೂ ತಾರಾಲಯದಲ್ಲಿ ತಾಂತ್ರಿಕ ಆಧುನೀಕರಣಕ್ಕೆ ಅಗತ್ಯವಿರುವ ಪ್ರಸ್ತಾವನೆ ಸಲ್ಲಿಸುವಂತೆ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಾರಾಲಯಕ್ಕೆ ಶುಕ್ರವಾರ ಭೇಟಿ ನೀಡಿದ ಅವರು, ಸ್ಮಾರ್ಟ್ ಸಿಟಿ ಯೋಜನೆಯಡಿ ನಡೆಸುತ್ತಿರುವ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ತಾರಾಲಯದಲ್ಲಿ ಈಗ ಇರುವ ಅನಲಾಗ್ ಪ್ರೊಜೆಕ್ಟರ್‌ಗಳ ತಾಂತ್ರಿಕ ಉಪಕರಣಗಳು ಬಹಳ ಹಳೆಯವು. ಇವುಗಳನ್ನು ಬದಲಿಸುವ ಮೂಲಕ ನೂತನ ತಂತ್ರಜ್ಞಾನದ ಎಲ್ಇಡಿ ಪ್ರೊಜೆಕ್ಟರ್‌ಗಳನ್ನು ಅಳವಡಿಸುವುದು ಬಹಳ ಮುಖ್ಯ ಎಂದು ತಾರಾಲಯ ನಿರ್ದೇಶಕ ಬಿ.ಆರ್.ಗುರುಪ್ರಸಾದ್ ಅವರು ಸಚಿವರ ಗಮನಕ್ಕೆ ತಂದರು. ಇದಕ್ಕೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದರು.

ಜವಾಹರಲಾಲ್ ನೆಹರೂ ತಾರಾಲಯ

ಸ್ಮಾರ್ಟ್ ಸಿಟಿ ಯೋಜನೆ ಅಡಿ ಬಿಬಿಎಂಪಿ ವತಿಯಿಂದ ತಾರಾಲಯದ ಆವರಣದಲ್ಲಿ ಆಧುನಿಕ ಸಭಾಂಗಣ, ಕ್ಲಾಸ್‌ರೂಂ ಸೇರಿ ಹಲವು ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಈ ಕಟ್ಟಡದ ಕಾಮಗಾರಿ ಸೆ.15 ರೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಆಗಸ್ಟ್ 22 ರಂದು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಒಳಗೊಂಡ ಸಭೆ ಆಯೋಜಿಸುವಂತೆ ಅವರು ಸೂಚಿಸಿದರು.

ಟೆಲಿಸ್ಕೋಪ್ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿ: ಈ ಬಾರಿಯ ಆಯವ್ಯಯದಲ್ಲಿ 883 ವಸತಿಶಾಲೆಗಳಿಗೆ ಟೆಲಿಸ್ಕೋಪ್ ಒದಗಿಸಲು ಅಗತ್ಯ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಟೆಲಿಸ್ಕೋಪ್‌ಗಳನ್ನು ಖರೀದಿಸಲು ಈಗಾಗಲೇ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಆದಷ್ಟು ಶೀಘ್ರದಲ್ಲಿ ಈಪ್ರಕ್ರಿಯೆಪೂರ್ಣಗೊಳಿಸಲಾಗುವುದು. ತಾರಾಲಯದ ಸಹಯೋಗದಲ್ಲಿ ತರಬೇತಿ ಶಿಬಿರಗಳನ್ನು ಆಯೋಜಿಸಲಾಗುವುದು. ಆಯಾ ವಲಯವಾರು ತರಬೇತಿ ಶಿಬಿರಗಳಲ್ಲಿ ಟೆಲಿಸ್ಕೋಪ್ ಬಳಕೆ, ಅದರ ಮೂಲಕ ಅಧ್ಯಯನ ಮತ್ತು ಬೋಧನೆ ಹಾಗೂ ಅದನ್ನು ಸುಸ್ಥಿತಿಯಲ್ಲಿ ಇಡುವ ಬಗ್ಗೆ ವಿಜ್ಞಾನ ಶಿಕ್ಷಕರಿಗೆ ತರಬೇತಿ ನೀಡಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್, ತಾರಾಲಯ ನಿರ್ದೇಶಕ ಬಿ.ಆರ್.ಗುರುಪ್ರಸಾದ್ ಮತ್ತು ಅಧಿಕಾರಿಗಳು ಇದ್ದರು.

ರಿಲಯನ್ಸ್‌ನಿಂದ ಡಿಜಿಟಲ್ ಇಂಡಿಯಾ ಸೇಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಡಿಜಿಟಲ್‌ನಿಂದ ಆಗಸ್ಟ್ 18ರ ವರೆಗೆ 'ಡಿಜಿಟಲ್ ಇಂಡಿಯಾ ಸೇಲ್' ನಡೆಯಲಿದೆ. ಈ ಮಾರಾಟದಲ್ಲಿ ಗ್ರಾಹಕರು ರಿಯಾಯಿತಿ ದರದಲ್ಲಿ ಎಲೆಕ್ಟ್ರಾನಿಕ್ ವಸ್ತುಗಳನ್ನು ಖರೀದಿಸಬಹುದಾಗಿದೆ.

ರಿಲಯನ್ಸ್ ಡಿಜಿಟಲ್ ಮಳಿಗೆ ಮತ್ತು ಮೈ ಜಿಯೊ ಮಳಿಗೆಗಳಲ್ಲಿ ಗ್ರಾಹಕರಿಗೆ ಈ ಸೌಲಭ್ಯ ದೊರೆಯಲಿದೆ. ಶೇ 25ರ ವರೆಗೆ ರಿಯಾಯಿತಿ ಮತ್ತು ಇಎಂಐ ಸೌಲಭ್ಯ ಪಡೆಯಬಹುದಾಗಿದೆ ಎಂದು ಕಂಪನಿ ತಿಳಿಸಿದೆ.

55 ಇಂಚಿನ ಯುಎಚ್‌ಡಿ ಟಿ.ವಿಯ ಆರಂಭಿಕ ಬೆಲೆ ₹29,900, ಐಫೋನ್ 13ರ ದರ ₹47,600, ಐಫೋನ್ 15ರ ಬೆಲೆ ₹63,600 ಆಗಿದೆ. ಇಂಟೆಲ್ ಕೋರ್ ಐ5 ಲ್ಯಾಪ್‌ಟಾಪ್ ₹39,999ಕ್ಕೆ ದೊರೆಯಲಿದೆ. ಹವಾ ನಿಯಂತ್ರಕಗಳಿಗೆ ₹6 ಸಾವಿರದ ವರೆಗೆ ರಿಯಾಯಿತಿ ಸಿಗಲಿದೆ ಎಂದು ತಿಳಿಸಿದೆ.

ಕಟ್ಟಡದಿಂದ ಜಿಗಿಯಲು ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ 42 ವರ್ಷದ ವಿಕಾಸ್ ಎಂಬುವರು ವಸತಿ ಕಟ್ಟಡದಿಂದ ಜಿಗಿಯಲು ಪ್ರಯತ್ನಿಸಿದ್ದು, ಪೊಲೀಸರು ಮತ್ತು ಸಾರ್ವಜನಿಕರು ಅವರನ್ನು ರಕ್ಷಿಸಿದ್ದಾರೆ.

ಮಧ್ಯಾಹ್ನ 1.45ರ ಸುಮಾರಿಗೆ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ನಾಲ್ಕು ಅಂತಸ್ತಿನ ಮನೆಯ ಮಹಡಿಯಿಂದ ಕೆಳಗೆ ಜಿಗಿಯುವುದಾಗಿ ಬೆದರಿಕೆ ಹಾಕಿದ್ದಾರೆ. ಪೊಲೀಸ್ ಅಧಿಕಾರಿಗಳು ಮತ್ತು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಮನವೊಲಿಸಲು ಪ್ರಯತ್ನಿಸಿದರು.

ಒಂದು ಗಂಟೆಗೂ ಹೆಚ್ಚು ಕಾಲ ವಿಕಾಸ್ ಅವರೊಂದಿಗೆ ಮಾತುಕತೆ ನಡೆಸಿ, ಮನವೊಲಿಸುವಲ್ಲಿ ಯಶಸ್ವಿಯಾದರು. ಎಚ್‌ಎಸ್‌ಆರ್ ಲೇಔಟ್ ಠಾಣೆಯ ಇಬ್ಬರು ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು ಮತ್ತು ಕಾನ್‌ಸ್ಟೆಬಲ್‌ಗಳು ಹಾಗೂ ಸ್ಥಳೀಯರ ಸಹಾಯದಿಂದ ಆತನನ್ನು ರಕ್ಷಿಸುವಲ್ಲಿ ಯಶಸ್ವಿಯಾದರು.

ಕಾನ್‌ಸ್ಟೆಬಲ್‌ಗಳ ಅಮಾನತು

ಬೆಂಗಳೂರು: ಮುಖಂಡರೊಬ್ಬರ ಜನ್ಮದಿನದ ಪಾರ್ಟಿಯಲ್ಲಿ ಭಾಗವಹಿಸಿದ್ದ ಚಿಕ್ಕಜಾಲ ಪೊಲೀಸ್ ಠಾಣೆಯ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಅಮಾನತುಗೊಳಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದ್ದಾರೆ. ಇಬ್ಬರೂ ಗಾಂಜಾ ಸೇವಿಸಿರಲಿಲ್ಲ ಎಂಬುದು ಪರೀಕ್ಷೆಯಿಂದ ಗೊತ್ತಾಗಿದೆ. ಆದರೆ ಅವರು ಪಾರ್ಟಿಯಲ್ಲಿ ಭಾಗಿಯಾಗಿ ರುವುದು ಸಾಬೀತಾಗಿದೆ. ಕರ್ತವ್ಯ ಲೋಪದ ಕಾರಣಕ್ಕೆ ಅಮಾನತು ಮಾಡಲಾಗಿದೆ ಎಂದು ಹೇಳಿದ್ದಾರೆ.

'ಅತ್ಯಾಚಾರ: ರಾಹುಲ್ ಮೌನವೇಕೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂಡಿ ಒಕ್ಕೂಟ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ನಡೆಯುತ್ತಿರುವ ಅತ್ಯಾಚಾರ ಮತ್ತು ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ ರಾಹುಲ್ ಗಾಂಧಿ ಮತ್ತು ಪ್ರಿಯಾಂಕ ವಾದ್ರಾ ಮೌನವಾಗಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಆರೋಪಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ನಡೆದ ವೈದ್ಯೆಯ ಅತ್ಯಾಚಾರ ಮತ್ತು ಕೊಲೆ ಪ್ರಕರಣ, ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧದ ಅಕ್ರಮಗಳ ಆರೋಪಗಳ ಬಗ್ಗೆ ಇವರಿಬ್ಬರೂ ಮೌನವಹಿಸಿದ್ದಾರೆ' ಎಂದು ಹರಿಹಾಯ್ದರು.

ತವರು ಮನೆಗೆ ನೀಡಿದ್ದ ಹಣ, ಆಭರಣ ● ತನಿಖೆ ಬಳಿಕ ಸತ್ಯ ಬಹಿರಂಗ

ದರೋಡೆ ಕತೆ ಕಟ್ಟಿದ್ದ ಪಿಎಸ್ಐ ಪತ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶೋಕನಗರ ಪೊಲೀಸ್ ಠಾಣೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಪುಟ್ಟಸ್ವಾಮಿ ಅವರ ಮನೆಯಲ್ಲಿ ದರೋಡೆ ನಡೆದಿಲ್ಲ. ಮನೆಯಲ್ಲಿರಿಸಿದ್ದ ಹಣವನ್ನು ಅಧಿಕಾರಿಯ ಪತ್ನಿಯೇ ತನ್ನ ಸಂಬಂಧಿಕರಿಗೆ ಕೊಟ್ಟು, ದರೋಡೆಯ ಕತೆ ಕಟ್ಟಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ತಿಳಿಸಿದರು.

ಜುಲೈ 11ರಂದು ಮನೆಗೆ ನುಗ್ಗಿದ ಕಳ್ಳರು ಕೈಕಾಲು ಕಟ್ಟಿ, ಬಾಯಿಗೆ ಬಟ್ಟೆ ತುರುಕಿ ₹12 ಲಕ್ಷ ನಗದು, ಚಿನ್ನಾಭರಣ ದೋಚಿ ಪರಾರಿಯಾಗಿದ್ದರು ಎಂದು ಕೋರಮಂಗಲ ಠಾಣೆಗೆ ಪುಟ್ಟಸ್ವಾಮಿ ಅವರ ಪತ್ನಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿದ್ದರು.

'ಹಲವು ಆಯಾಮಗಳಲ್ಲಿ ತನಿಖೆ ನಡೆಸಿದ ಕೋರಮಂಗಲ ಪೊಲೀಸರಿಗೆ, ಘಟನೆ ನಡೆದ ದಿನ ಪುಟ್ಟಸ್ವಾಮಿ ಅವರ ಮನೆಗೆ ಹೊರಗಿನ ವ್ಯಕ್ತಿಗಳು ಬಂದಿರುವ ಸುಳಿವು ಪತ್ತೆಯಾಗಿರಲಿಲ್ಲ. ಬಳಿಕ ಕೂಲಂಕಷವಾಗಿ ದೂರುದಾರರು ಮತ್ತು ಸಂಬಂಧಿಕರ ವಿಚಾರಣೆ ನಡೆಸಿದಾಗ ದರೋಡೆ ನಡೆದಿಲ್ಲ ಎಂಬುದು ಗೊತ್ತಾಯಿತು' ಎಂದು ದಯಾನಂದ್ ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ತವರು ಮನೆಯ ಆರ್ಥಿಕ ಬಿಕ್ಕಟ್ಟಿನ ವೇಳೆ ಸಹಾಯಕ್ಕಾಗಿ ಹಣ ಮತ್ತು ಚಿನ್ನಾಭರಣ ನೀಡಿ, ಬಳಿಕ ಕಟ್ಟು ಕಥೆ ಕಟ್ಟಿ ಪ್ರಕರಣ ದಾಖಲಿಸಿರುವುದು ತಿಳಿದು ಬಂದಿದೆ. ಹಣ ಪಡೆದಿರುವವರ ಮಾಹಿತಿ ಲಭ್ಯವಾಗಿದೆ. ಅವರಿಂದ ₹12 ಲಕ್ಷ ನಗದು ಹಾಗೂ 114 ಗ್ರಾಂ ಚಿನ್ನಾಭರಣವನ್ನು ವಶಕ್ಕೆ ಪಡೆಯಲಾಗುವುದು' ಎಂದರು.

ಪುಟ್ಟಸ್ವಾಮಿ ಕೂಡ ಸತ್ಯ ಮರೆಮಾಚಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವುದು ಡಿಸಿಪಿ ನೇತೃತ್ವದಲ್ಲಿ ನಡೆದ ತನಿಖೆಯಲ್ಲಿ ದೃಢಪಟ್ಟಿದೆ. ಅವರ ವಿರುದ್ಧವೂ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮನೆಗಳ ಬೀಗ ಮುರಿದು ಕಳ್ಳತನ ● ಆರೋಪಿಗಳಿಂದ ₹1.86 ಕೋಟಿ ಮೌಲ್ಯದ ಚಿನ್ನಾಭರಣ ವಶ

ಕಾಡಿನಲ್ಲಿ ಬಂಡೆ ಕೆಳಗೆ ಬಚ್ಚಿಟ್ಟಿದ್ದ ಚಿನ್ನ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಮನೆಗಳ ಬೀಗ ಮುರಿದು ಚಿನ್ನಾಭರಣ ಕಳವು ಮಾಡಿದ್ದ ಎಂಟು ಆರೋಪಿಗಳನ್ನು ಬಂಧಿಸಿ, ₹1.86 ಕೋಟಿ ಮೌಲ್ಯದ 1 ಕೆ.ಜಿ. 455 ಗ್ರಾಂ. ತೂಕದ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿಗಳ ವಿರುದ್ಧ ಕೊಲೆ, ದರೋಡೆ, ಮನೆ ಕಳ್ಳತನ, ಹಾಗೂ ಅಪಹರಣ ಪ್ರಕರಣಗಳು ದಾಖಲಾಗಿವೆ. ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರುಗಳನ್ನು ವಶಕ್ಕೆ ಪಡೆಯಲಾಗಿದೆ.

81 ಲಕ್ಷ ಮೌಲ್ಯದ ಆಭರಣ: ಮೇ 11ರಂದು ಗಿರಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಬನಶಂಕರಿ ನಿವಾಸಿಯೊಬ್ಬರು ಕಣ್ಣಿನ ಆಸ್ಪತ್ರೆಗೆ ಶಸ್ತ್ರಚಿಕಿತ್ಸೆಗೆ ತೆರಳಿದ್ದರು. ಆ ಸಂದರ್ಭದಲ್ಲಿ ಮನೆಯ ಬೀಗ ಒಡೆದು ಚಿನ್ನಾಭರಣ ಕಳವು ಮಾಡಲಾಗಿತ್ತು.

ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ ಪೊಲೀಸರು, ಕಳ್ಳತನ ಮಾಡಿದ ಆಭರಣಗಳೊಂದಿಗೆ ಕಾಡಿಗೆ ಪರಾರಿಯಾಗಿದ್ದ ನೆಲಮಂಗಲದ ಸೋಲೂರು ನಿವಾಸಿ ನರಸಿಂಹ ರೆಡ್ಡಿ ಹಾಗೂ ವಿನು ಚಕ್ರವರ್ತಿ ಎಂಬುವವರನ್ನು ಬಂಧಿಸಿದ್ದಾರೆ. ನರಸಿಂಹರೆಡ್ಡಿ ವಿರುದ್ಧ 49 ಹಾಗೂ ವಿನು ವಿರುದ್ಧ ಆರು ಪ್ರಕರಣಗಳು ದಾಖಲಾಗಿವೆ. ನೆಲಮಂಗಲ ಬಳಿಯ ಗುಡೇಮಾರನಹಳ್ಳಿ ಹಾಗೂ ಕೃಷ್ಣಗಿರಿಯ ಅರಣ್ಯ ಪ್ರದೇಶದಲ್ಲಿ ನರಸಿಂಹರೆಡ್ಡಿ ಬಚ್ಚಿಟ್ಟುಕೊಳ್ಳುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಒಂಟಿ ಮನೆಗಳು, ಬೀಗ ಹಾಕಿದ ಮನೆಗಳನ್ನೇ ಗುರಿಯಾಗಿಸಿಕೊಂಡು ಯಾರೂ ಇಲ್ಲದ ವೇಳೆ ಮನೆಗಳ ಬೀಗ ಒಡೆದು ಕಳ್ಳತನ ಮಾಡಿ, ಅದೇ ಹಣದಲ್ಲಿ ಕಾರು ಖರೀದಿ ಮಾಡಿದ್ದ. ಇಬ್ಬರೂ ಹಲವು ಪ್ರಕರಣಗಳಲ್ಲಿ ಭಾಗಿಯಾಗಿ, ಜಾಮೀನಿನಲ್ಲಿ ಮೇಲೆ ಹೊರ ಬಂದಿದ್ದಾರೆ. ಕಾಡಿನ ಬಂಡೆ ಕೆಳಗೆ ಹೂತಿಟ್ಟಿದ್ದ ಹಾಗೂ ಗಿರವಿ ಇಟ್ಟಿದ್ದ ಒಟ್ಟು ₹81.25 ಲಕ್ಷ ಮೌಲ್ಯದ ಚಿನ್ನಾಭರಣ, 1 ಕೆ.ಜಿ 141 ಗ್ರಾಂ. ತೂಕದ ಆಭರಣ ವಶಕ್ಕೆ ಪಡೆಯಲಾಗಿದೆ ಎಂದರು.

ಪ್ರೇಯಸಿಗೆ ನೀಡಿದ್ದ ಆಭರಣ: ಕುಮಾರಸ್ವಾಮಿ ಲೇಔಟ್ ಠಾಣಾ ವ್ಯಾಪ್ತಿಯ ಫೈಜ್ ಮಸೀದಿ ಬಳಿಯ ಮನೆಯ ಬೀಗ ಒಡೆದು ಚಿನ್ನ ಮತ್ತು ಬೆಳ್ಳಿ ಕಳ್ಳತನ ಮಾಡಿದ್ದ ರಘು ಅಲಿಯಾಸ್ ಪೆಪ್ಸಿ (26) ಮತ್ತು ಕಾರ್ತಿಕ್ ಅಲಿಯಾಸ್ ಎಸ್ಕೇಪ್ ಕಾರ್ತಿಕ್ (36) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ ₹ 31 ಲಕ್ಷ ಮೌಲ್ಯದ 470 ಗ್ರಾಂ. ಚಿನ್ನ, 3 ಕೆ.ಜಿ ಬೆಳ್ಳಿ ಗಟ್ಟಿ ವಶಕ್ಕೆ ಪಡೆಯಲಾಗಿದೆ.

ಆರೋಪಿ ರಘು, ಕಳವು ಮಾಡಿದ್ದ ಚಿನ್ನವನ್ನು ಪ್ರೇಯಸಿ ಹಾಗೂ ಸ್ನೇಹಿತರಿಗೆ ನೀಡುತ್ತಿದ್ದ. ಜೊತೆಗೆ ಬೆಂಗಳೂರು ಮತ್ತು ಹೈದರಾಬಾದ್‌ನಲ್ಲಿ ಅಡವಿಟ್ಟಿದ್ದ. ಬನಶಂಕರಿಯ ಕಾವೇರಿನಗರದಲ್ಲಿರುವ ಆತನ ಪ್ರೇಯಸಿಯ ಮನೆಯಿಂದ 48 ಗ್ರಾಂ. ತೂಕದ ಚಿನ್ನ ಹಾಗೂ ಗಿರವಿ ಅಂಗಡಿಯಲ್ಲಿ ಅಡವಿಟ್ಟಿದ್ದ ಚಿನ್ನಾಭರಣ ಪಡೆಯಲಾಗಿದೆ. ರಘು ವಿರುದ್ಧ 27, ಕಾರ್ತಿಕ್ ವಿರುದ್ಧ 38 ಪ್ರಕರಣಗಳು ದಾಖಲಾಗಿವೆ. ಈ ಇಬ್ಬರು ತಲೆ ಮರೆಸಿಕೊಂಡಿದ್ದರು ಎಂದು ಎಂದು ಪೊಲೀಸರು ತಿಳಿಸಿದ್ದಾರೆ.

ನಾಲ್ವರು ಕಳ್ಳರ ಬಂಧನ

ಮಹದೇವಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಾಸವಿರುವ ನಿವಾಸಿಯೊಬ್ಬರ ಮನೆಯಲ್ಲಿ ಕಳ್ಳತನ ಮಾಡಿದ್ದ ಕೆ.ಜಿ.ಎಫ್.ನ ಜ್ಞಾನ ಪ್ರಕಾಶ್, ಪ್ರೇಮ್‌ಕುಮಾರ್, ಶಿವಕುಮಾರ್ ಎಂಬುವವರನ್ನು ಬಂಧಿಸಿ, ₹75 ಲಕ್ಷ ಮೌಲ್ಯದ 844 ಗ್ರಾಂ. ಚಿನ್ನಾಭರಣ, 3 ಕೆ.ಜಿ. ಬೆಳ್ಳಿ ಹಾಗೂ ಎರಡು ಲ್ಯಾಪ್‌ಟಾಪ್ ವಶಪಡಿಸಿಕೊಳ್ಳಲಾಗಿದೆ.

ದಿನಪತ್ರಿಕೆಗಳು ಬಿದ್ದಿರುವ, ಲೈಟ್ ಆಫ್ ಆಗಿರುವ ಅಥವಾ ಚಪ್ಪಲಿಗಳು ಕಾಣದ ಮನೆಗಳನ್ನು ಗುರಿಯಾಗಿಸಿಕೊಂಡು ಕಳ್ಳತನ ಮಾಡುತ್ತಿದ್ದರು. ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಆಧರಿಸಿ ಆರೋಪಿಗಳನ್ನು ಬಂಧಿಸಿದ್ದಾರೆ.

ಬಂಧನದಿಂದ ಮಹದೇವಪುರ, ಕೆ.ಆರ್.ಪುರ, ಎಚ್‌ಎಎಲ್, ಕಾಡುಗೋಡಿ, ವರ್ತೂರು ಸೇರಿದಂತೆ ವಿವಿಧೆಡೆ ಎಸಗಿದ್ದ 18 ಮನೆ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಗಿರಿನಗರ ಹಾಗೂ ಮಹದೇವರ ಪೊಲೀಸ್ ಠಾಣಾ ಸಿಬ್ಬಂದಿಗೆ ತಲಾ ₹25 ಸಾವಿರ ನಗದು ಬಹುಮಾನವನ್ನು ಕಮಿಷನರ್ ಘೋಷಿಸಿದ್ದಾರೆ.

ಮನೆ ಕೆಲಸಕ್ಕೆ ಸೇರಿದ 2ನೇ ದಿನವೇ ಕಳ್ಳತನ

ಮನೆಕೆಲಸಕ್ಕೆ ಸೇರಿದ ಎರಡನೇ ದಿನವೇ ಚಿನ್ನಾಭರಣ ಕಳವು ಮಾಡಿ ಪರಿಯಾಗಿದ್ದ ಒಡಿಶಾದ ಮಾಲಾ ಶರ್ಮಾ (42) ಎಂಬಾಕೆಯನ್ನು ಮಹದೇವಪುರ ಪೊಲೀಸ್ ಠಾಣೆ ಪೊಲೀಸರು ಬಂಧಿಸಿ, ₹12 ಲಕ್ಷ ಮೌಲ್ಯದ ₹181 ಗ್ರಾಂ. ತೂಕದ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಠಾಣಾ ವ್ಯಾಪ್ತಿಯ ಎ.ನಾರಾಯಣಪುರದಲ್ಲಿ ವಾಸವಿರುವ ನಿವಾಸಿ ಮನೆಯಿಂದ ಕಳವು ಮಾಡಿ ಆರೋಪಿ ದೆಹಲಿಗೆ ಪರಾರಿಯಾಗಿದ್ದಳು. ಮೂಲತಃ ಒಡಿಶಾ ನಿವಾಸಿಯಾಗಿದ್ದು, ಕುಟುಂಬದವರು ದೆಹಲಿಯಲ್ಲಿ ವಾಸವಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಯುವತಿ ಕೊಲೆ: ಪಿ.ಜಿ. ಮಾಲೀಕನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಭಾರ್ಗವಿ ಪೇಯಿಂಗ್ ಗೆಸ್ಟ್ (ಪಿಜಿ)ಯಲ್ಲಿ ನಡೆದಿದ್ದ ಯುವತಿ ಕೊಲೆ ಪ್ರಕರಣ ಆಧರಿಸಿ ಪಿ.ಜಿ. ಮಾಲೀಕರ ವಿರುದ್ಧ ಕೋರಮಂಗಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸೂಕ್ತ ಭದ್ರತೆ ಹಾಗೂ ಸುರಕ್ಷತಾ ಕ್ರಮ ಕೈಗೊಳ್ಳದೆ ಜೀವಹಾನಿಗೆ ಕಾರಣವಾದ ಆರೋಪದ (ಬಿಎನ್‌ಎಸ್ 125) ಅಡಿಯಲ್ಲಿ ಭಾರ್ಗವಿ ಪಿ.ಜಿ. ನಡೆಸುತ್ತಿದ್ದ ಶ್ಯಾಮಸುಂದರ್ ರೆಡ್ಡಿ ಹಾಗೂ ಕಟ್ಟಡದ ಮಾಲೀಕ ವಿಜಯ್‌ಕುಮಾರ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಜುಲೈ 23ರ ರಾತ್ರಿ 11 ಗಂಟೆಯಾದರೂ ಪಿ.ಜಿ. ಗೇಟ್ ತೆರೆದಿತ್ತು. ಭದ್ರತಾ ಸಿಬ್ಬಂದಿ ಇರಲಿಲ್ಲ. ಈ ಲೋಪಗಳನ್ನು ಬಳಸಿಕೊಂಡೇ ಅಭಿಷೇಕ್ ಘೋಸಿ ಪಿ.ಜಿ. ಪ್ರವೇಶಿಸಿ, 303ರ ಕೊಠಡಿಯಲ್ಲಿ ವಾಸವಿದ್ದ ಕೃತಿಕುಮಾರಿ (23) ಅವರನ್ನು ಹೊರಗೆ ಎಳೆದು ಚಾಕುವಿನಿಂದ ಇರಿದು ಹತ್ಯೆಗೈದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದ ತನಿಖಾ ವರದಿ ಹಾಗೂ ಪೊಲೀಸ್ ಮಾರ್ಗಸೂಚಿ ಉಲ್ಲಂಘನೆ ಕುರಿತ ವರದಿ ಲಗತ್ತಿಸಿ ಭಾರ್ಗವಿ ಲೇಡೀಸ್ ಪಿ.ಜಿ. ಲೈಸೆನ್ಸ್ ರದ್ದುಗೊಳಿಸಲು ಶಿಫಾರಸು ಮಾಡಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ವ್ಹೀಲಿ ಮಾಡುತ್ತಿದ್ದ ಯುವಕರು

ವ್ಹೀಲಿ: 44 ಯುವಕರ ವಶ, 33 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ವ್ಹೀಲಿ ಮಾಡುತ್ತಿದ್ದ ಯುವಕರನ್ನು ಯಲಹಂಕ ಪೊಲೀಸರು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿದ್ದಾರೆ.

ಯಲಹಂಕದ ಚಿಕ್ಕಜಾಲ ಬಳಿಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಗುರುವಾರ ಸಂಜೆ ಹಲವು ಬೈಕ್‌ಗಳಲ್ಲಿ ಯುವಕರು ವ್ಹೀಲಿ ಮಾಡುತ್ತಿದ್ದರು. ಸಾರ್ವಜನಿಕರು ಇದನ್ನು ತಮ್ಮ ಮೊಬೈಲ್ ನಲ್ಲಿ ಸೆರೆಹಿಡಿದಿದ್ದರು. ಈ ವೇಳೆ ಯುವಕನೊಬ್ಬ ಕೈ ತೋರಿಸಿ ಕಾರಿನಲ್ಲಿದ್ದವರಿಗೆ ಬೆದರಿಕೆ ಸಹ ಹಾಕಿದ್ದ. ಈ ದೃಶ್ಯವನ್ನು ಕಾರಿನಲ್ಲಿದ್ದ ಪ್ರಯಾಣಿಕರೊಬ್ಬರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು.

'ಬೈಕ್ ನಲ್ಲಿ ವ್ಹೀಲಿ ನಡೆಸುವ ಮೂಲಕ ವಾಹನ ಸವಾರರ ಪ್ರಾಣಕ್ಕೆ ಕುತ್ತು ತರುತ್ತಿದ್ದಾರೆ. ಇಂತಹ ಯುವಕರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಮನವಿ ಮಾಡಿದ್ದರು. ಕಾರ್ಯಾಚರಣೆ ನಡೆಸಿದ ಪೊಲೀಸರು, ಯುವಕರನ್ನು ವಶಕ್ಕೆ ಪಡೆದು ವಿಚಾರಣೆ ಆರಂಭಿಸಿದ್ದಾರೆ.

ಉತ್ತರ ವಿಭಾಗದ ದೇವನಹಳ್ಳಿ ಸಂಚಾರ ಪೊಲೀಸ್ ಠಾಣೆಯಲ್ಲಿ ಒಂಬತ್ತು, ಯಲಹಂಕ ಠಾಣೆಯಲ್ಲಿ ಆರು, ಹೆಬ್ಬಾಳ ಠಾಣೆಯಲ್ಲಿ 18 ಪ್ರಕರಣ ದಾಖಲಾಗಿವೆ. ವ್ಹೀಲಿ ನಡೆಸುತ್ತಿದ್ದ 36 ಜನರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಆರು ಪ್ರಕರಣಗಳಲ್ಲಿ ಬಾಲಕರು ಭಾಗಿಯಾಗಿದ್ದು, ಪೋಷಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಆರೋಪಿಗಳ ಚಾಲನಾ ಪರವಾನಗಿ (ಡಿ.ಎಲ್) ಅಮಾನತುಗೊಳಿಸುವಂತೆ ಸಾರಿಗೆ ಇಲಾಖೆಗೆ ಶಿಫಾರಸು ಮಾಡಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಕರೆ: 26 ಬ್ಯಾಂಕ್ ಖಾತೆಗಳಿಗೆ ಹಣ ವರ್ಗ

ನಿವೃತ್ತ ಎಂಜಿನಿಯರ್‌ಗೆ ₹2.21 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಮೊಹಮ್ಮದ್ ಶಾಖಿಬ್

ಯೂಸಫ್ ಸೇಠ್

ಸಾಲೋಮನ್ ರಾಜ

ಮೊಹಮ್ಮದ್ ಆಯಾನ್

ಅಹ್ಸಾನ್ ಅನ್ಸಾರಿ

ಬೆಂಗಳೂರು: ತಮ್ಮ ಹೆಸರಿಗೆ ಬಂದಿರುವ ಪಾರ್ಸೆಲ್‌ನಲ್ಲಿ ಮಾದಕ ವಸ್ತು ಪತ್ತೆಯಾಗಿದೆ ಎಂದು ಕರೆ ಮಾಡಿ ಬೆದರಿಸಿದವರು ಸೂಚಿಸಿದ ಖಾತೆಗಳಿಗೆ ಕೊಡಗು ಜಿಲ್ಲೆಯ ನಿವೃತ್ತ ಅಧಿಕಾರಿಯೊಬ್ಬರು ₹2.21 ಕೋಟಿ ವರ್ಗಾವಣೆ ಮಾಡಿ ಮೋಸ ಹೋಗಿದ್ದಾರೆ!

ಈ ವಂಚನೆ ಜಾಲವನ್ನು ಭೇದಿಸಿರುವ ಸಿಐಡಿ ಸೈಬರ್ ಅಪರಾಧ ವಿಭಾಗದ ಘಟಕದ ಪೊಲೀಸರು ಬೆಂಗಳೂರಿನ ಮೊಹಮ್ಮದ್ ಶಾಖಿಬ್, ಮೊಹಮ್ಮದ್ ಅಯಾನ್, ಅಹ್ಸಾನ್ ಅನ್ಸಾರಿ, ಸಾಲೋಮನ್ ರಾಜ ಹಾಗೂ ದುಬೈ ಮೂಲದ ಯೂಸುಫ್ ಸೇಠ್ ಎಂಬುವವರನ್ನು ಬಂಧಿಸಿದ್ದಾರೆ. ಅವರಿಂದ ₹1.70 ಕೋಟಿ ನಗದು, 7,700 ಅಮೆರಿಕನ್ ಡಾಲರ್ ಮತ್ತು ವಂಚನೆ ಹಣದಲ್ಲಿ ಖರೀದಿಸಿದ್ದ ಬೆಂಜ್ ಕಾರನ್ನು ವಶಪಡಿಸಿಕೊಂಡಿದ್ದಾರೆ.

ವಂಚಿಸಿದ್ದು ಹೇಗೆ?: ಮೇ ತಿಂಗಳಲ್ಲಿ ದುಬೈನಿಂದ ವಂಚಕನೊಬ್ಬ ರಾಜ್ಯ ಸರ್ಕಾರದ ಇಲಾಖೆಯೊಂದರಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಸಿವಿಲ್ ಎಂಜಿನಿಯರ್ ಒಬ್ಬರ ಮೊಬೈಲ್‌ಗೆ ಕರೆ ಮಾಡಿ, ಫೆಡೆಕ್ಸ್ ಕಂಪನಿಯಿಂದ ಮಾತನಾಡುತ್ತಿರುವುದಾಗಿ ಪರಿಚಯಿಸಿಕೊಂಡಿದ್ದ.

'ನಿಮ್ಮ ಹೆಸರಿಗೆ ಪಾರ್ಸೆಲ್ ಬಂದಿದೆ. ಅದರಲ್ಲಿ ಮಾದಕವಸ್ತು ಇದ್ದು, ಜಪ್ತಿ ಮಾಡಲಾಗಿದೆ. ನಿಮ್ಮನ್ನು 'ಡಿಜಿಟಲ್ ಅರೆಸ್ಟ್'(ಪೊಲೀಸರ ಸೋಗಿನಲ್ಲಿ ಆನ್‌ಲೈನ್‌ನಲ್ಲಿ ವಿಚಾರಣೆ ನಡೆಸುವುದು) ಮಾಡಲಾಗಿದೆ. ಕ್ರೈಂ ಪೊಲೀಸ್‌ರ ಜತೆ ಮಾತನಾಡಿ, ಇಂತಿಷ್ಟು ಹಣ ನೀಡಿ ಇತ್ಯರ್ಥಪಡಿಸಿಕೊಳ್ಳಬೇಕು' ಎಂದು ಹೇಳಿ ವಾಟ್ಸ್‌ಆ್ಯಪ್‌ನಲ್ಲಿ ಪೊಲೀಸ್ ಸೋಗಿನಲ್ಲಿದ್ದ ಬೇರೊಬ್ಬ ವ್ಯಕ್ತಿಗೆ ಕರೆಯನ್ನು ವರ್ಗಾಯಿಸಿದ್ದ' ಎಂದು ಸಿಐಡಿ ಅಧಿಕಾರಿಗಳು ತಿಳಿಸಿದ್ದಾರೆ.

ಬಳಿಕ ಕ್ರೈಂ ಪೊಲೀಸ್ ಅಧಿಕಾರಿಗಳು ಎಂದು ಹೇಳಿಕೊಂಡು ವಾಟ್ಸ್‌ಆ್ಯಪ್ ಕರೆ ಮೂಲಕ ನಿವೃತ್ತ ಅಧಿಕಾರಿಯನ್ನು ಸಂಪರ್ಕಿಸಿ, ಮತ್ತೆ ಬೆದರಿಸಿದ್ದರು. ಆತಂಕಗೊಂಡ ನಿವೃತ್ತ ಎಂಜಿನಿಯರ್, ತನ್ನ ಬ್ಯಾಂಕ್ ಖಾತೆಯಿಂದ ಆರೋಪಿಗಳು ಹೇಳಿದ ಖಾತೆಗಳಿಗೆ ಒಟ್ಟು ₹2,21,40,000ವನ್ನು ಆರ್.ಟಿ.ಜಿ.ಎಸ್ ಮೂಲಕ ವರ್ಗಾವಣೆ ಮಾಡಿದ್ದರು.

ಇಷ್ಟಕ್ಕೆ ಸುಮ್ಮನಾಗದ ವಂಚಕರು ಕೆಲ ದಿನಗಳ ಬಳಿಕ ಮತ್ತೆ ಕರೆ ಮಾಡಿ, ಇತರೆ ಬ್ಯಾಂಕ್ ಖಾತೆಗಳ ವಿವರ ನೀಡಿ ಹಣ ವರ್ಗಾಯಿಸುವಂತೆ ಬೆದರಿಸಿದ್ದರು.

ಇದರಿಂದ ಸಂಶಯಗೊಂಡ ನಿವೃತ್ತ ಅಧಿಕಾರಿ, ಕೊಡಗಿನ ಸಿಇಎನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣವನ್ನು ಸಿಐಡಿ ಸೈಬರ್ ಅಪರಾಧ ವಿಭಾಗಕ್ಕೆ ವರ್ಗಾಯಿಸಲಾಗಿತ್ತು.

ಪ್ರಕರಣದ ತನಿಖೆ ಕೈಗೊಂಡ ಸಿಐಡಿ ಪೊಲೀಸರು, ಹಣ ವರ್ಗಾವಣೆಯಾದ ಖಾತೆಗಳ ವಿವರಗಳನ್ನು ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಿದ್ದಾರೆ. ಭಾರತೀಯ ಬ್ಯಾಂಕ್ ಖಾತೆಗಳನ್ನು ಬಳಸಿರುವುದು ಹಾಗೂ ವಂಚನೆಯ ಹಣ 26 ಬ್ಯಾಂಕ್ ಖಾತೆಗಳಿಗೆ ವರ್ಗಾವಣೆಯಾಗಿರುವುದು ಗೊತ್ತಾಗಿದೆ.

ತಲೆಮರೆಸಿಕೊಂಡಿರುವ ಇನ್ನೂ 3 ಆರೋಪಿಗಳಿಗಾಗಿ ಶೋಧ ಮುಂದುವರಿದಿದೆ ಎಂದು ಸಿಐಡಿ ತಿಳಿಸಿದೆ.

'ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ವಂಚನೆ'

'ಮೊಬೈಲ್‌ನಿಂದ ಅಶ್ಲೀಲ ಸಂದೇಶ ರವಾನೆ, ಮಾದಕವಸ್ತು ಪ್ರಕರಣದಲ್ಲಿ ಸಿಲುಕಿಸುವುದಾಗಿ ಸರ್ಕಾರಿ ಅಧಿಕಾರಿ, ಪೊಲೀಸರು, ತನಿಖಾ ಸಂಸ್ಥೆಗಳ ಅಧಿಕಾರಿಗಳ ಸೋಗಿನಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ಕರೆಮಾಡಿ, 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಬೆದರಿಸಿ ಹಣ ಸುಲಿಗೆ ಮಾಡುವುದು ಹೆಚ್ಚುತ್ತಿದೆ. ಜನರು ಇಂತಹ ಸೈಬರ್ ವಂಚನೆಗಳ ಬಗ್ಗೆ ಎಚ್ಚರದಿಂದಿರಬೇಕು. ಮೋಸಕ್ಕೆ ಒಳಗಾದರೆ ತಕ್ಷಣ ಪೊಲೀಸರಿಗೆ ತಿಳಿಸಬೇಕು' ಎಂದು ಪೊಲೀಸರು ಹೇಳಿದ್ದಾರೆ.

ನಿಗಾ ಇಡಲು ಸಿ.ಸಿ.ಟಿ.ವಿ.ಕ್ಯಾಮೆರಾ ಹಾಕಿಸಿದ್ದ ಪತ್ನಿ

ನಾಪತ್ತೆಯಾದ ಟೆಕಿ ನೊಯ್ಡಾದಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯ ಮೇಲೆ ಮುನಿಸಿಕೊಂಡು ಕೊಡಿಗೇಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಟಾಟಾನಗರದ ಮನೆಯಿಂದ ಇತ್ತೀಚೆಗೆ ನಾಪತ್ತೆಯಾಗಿದ್ದ ಸಾಫ್ಟ್‌ವೇರ್ ಎಂಜಿನಿಯರ್ ವಿಪಿನ್ ಗುಪ್ತ ಅವರನ್ನು ನೋಯ್ಡಾದಲ್ಲಿ ಪತ್ತೆಹಚ್ಚಿ ನಗರಕ್ಕೆ ಕರೆತರಲಾಗಿದೆ.

ತಿರುಪತಿಗೆ ತೆರಳಿದ್ದ ವಿಪಿನ್ ಕೇಶಮುಂಡನ ಮಾಡಿಸಿಕೊಂಡಿದ್ದಾರೆ. 'ನಾನೇ ಮನೆ ಬಿಟ್ಟು ಬಂದಿದ್ದೇನೆ, ವಾಪಸ್ ಮನೆಗೆ ಹೋಗಲಾರೆ. ಪತ್ನಿ ಮಾನಸಿಕವಾಗಿ ಹಿಂಸೆ ನೀಡುತ್ತಿದ್ದು, ನನ್ನನ್ನು ನಿಯಂತ್ರಿಸಲೆಂದೇ ಮನೆಗೆ ಸಿ.ಸಿ.ಟಿ.ವಿ. ಕ್ಯಾಮೆರಾ ಹಾಕಿಸಿದ್ದಾಳೆ. ಆಕೆಯ ಕಾಟದಿಂದ ನೊಂದು ಮನೆ ಬಿಟ್ಟು ಬಂದಿದ್ದೇನೆ' ಎಂದು ವಿಪಿನ್ ಅಳಲು ತೋಡಿ ಕೊಂಡರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿಪಿನ್ ಗುಪ್ತಾ

ಮನೆಯಿಂದ ಬೈಕ್‌ನಲ್ಲಿ ಹೊರಟ ವಿಪಿನ್, ವಾಹನವನ್ನು ಹೆಬ್ಬಾಳದಲ್ಲಿ ನಿಲ್ಲಿಸಿದ್ದರು. ಬಳಿಕ ಅಲ್ಲಿಂದ ಬಸ್ ಮೂಲಕ ತಿರುಪತಿಗೆ ತೆರಳಿದ್ದರು. ಅಲ್ಲಿಂದ ಬಸ್‌ಗಳ ಮೂಲಕ ನೊಯ್ಡಾ ತಲುಪಿದ್ದಾರೆ. ಮನೆ ಬಿಟ್ಟು ಹೋಗಿರುವ ಕುರಿತು ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಳಿಸಿವೆ.

ಲಖನೌದ ವಿಪಿನ್ ಗುಪ್ತ, ಪತ್ನಿ ಶ್ರೀಪರ್ಣಾ ಮತ್ತು ಇಬ್ಬರು ಪುತ್ರಿಯರ ಜೊತೆಗೆ ಟಾಟಾನಗರದ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿದ್ದರು. ಜೂನ್‌ನಲ್ಲಿ ಉದ್ಯೋಗ ತೊರೆದಿದ್ದರು. ಹೊಸ ಉದ್ಯೋಗಕ್ಕಾಗಿ ಹುಡುಕಾಟ ನಡೆಸುತ್ತಿದ್ದರು.

ಆಗಸ್ಟ್ 4ರಂದು ಮಧ್ಯಾಹ್ನ 12.42ಕ್ಕೆ ಮನೆಯಿಂದ ದ್ವಿಚಕ್ರ ವಾಹನ ತೆಗೆದುಕೊಂಡು ಹೊರಗೆ ಹೋಗಿದ್ದರು. ವಾಪಸ್ ಬಂದಿರಲಿಲ್ಲ. ಈ ಬಗ್ಗೆ ಅವರ ಪತ್ನಿ ಕೊಡಿಗೇಹಳ್ಳಿ ಠಾಣೆಗೆ ದೂರು ನೀಡಿದ್ದರು. ಪತಿಯನ್ನು ಹುಡುಕಿಕೊಡಿ ಎಂದು ಸಾಮಾಜಿಕ ಜಾಲತಾಣ 'ಎಕ್ಸ್' ನಲ್ಲೂ ವಿಡಿಯೊ ಮೂಲಕ ಪೊಲೀಸರಿಗೆ ಮನವಿ ಮಾಡಿದ್ದರು.

ವಿಪಿನ್ ಅವರು ಈ ಹಿಂದೆಯೂ ಒಮ್ಮೆ ನಾಪತ್ತೆ ಆಗಿ, ಮೊಬೈಲ್ ಸಹ ಸ್ವಿಚ್ಡ್‌ಆಫ್‌ಮಾಡಿಕೊಂಡಿದ್ದರು. ಗೋವಾದಲ್ಲಿ ಅವರನ್ನು ಪತ್ತೆಹಚ್ಚಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

ನಗರದಲ್ಲಿ ಶುಕ್ರವಾರ ನಿರಂತರ ವರ್ಷಧಾರೆ • ಸಂಚಾರಕ್ಕೆ ಅಡ್ಡಿ • ಸಾಲುಗಟ್ಟಿ ನಿಂತ ವಾಹನಗಳು

ಮಳೆ: ರಸ್ತೆಯಲ್ಲೇ ಹರಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಶುಕ್ರವಾರ ಮಳೆಯಾಗಿದ್ದು, ಹಲವೆಡೆ ಚರಂಡಿ ವ್ಯವಸ್ಥೆ ಸರಿ ಇಲ್ಲದೇ ನೀರು ರಸ್ತೆಯಲ್ಲೇ ಹರಿಯಿತು.

ಜಯನಗರ, ಹೆಬ್ಬಾಳ, ಎಂ.ಜಿ. ರಸ್ತೆ, ಶಿವಾಜಿನಗರ, ಯಶವಂತಪುರ, ಹಂಪಿನಗರ, ಕೋರಮಂಗಲ, ಜ್ಞಾನಭಾರತಿ, ವಿವಿ ಪುರ, ಗಾಂಧಿನಗರ, ರಾಜಾಜಿನಗರ ಸಹಿತ ವಿವಿಧ ಪ್ರದೇಶಗಳಲ್ಲಿ ಭಾರಿ ಮಳೆ ಸುರಿಯಿತು.

ಆಟೊ ಮೇಲೆ ಉರುಳಿದ ಮರ: ವಿಜಯನಗರದ ಎಂ.ಸಿ. ಬಡಾವಣೆಯಲ್ಲಿ ಬೃಹದಾಕಾರದ ಮರವೊಂದು ಚಲಿಸುತ್ತಿದ್ದ ಆಟೊ ಮೇಲೆ ಉರುಳಿಬಿದ್ದಿತು. ಆಟೊ ಸಂಪೂರ್ಣವಾಗಿ ಜಖಂಗೊಂಡಿದೆ. ಆಟೊದಲ್ಲಿದ್ದ ಚಾಲಕ ಮತ್ತು ಇಬ್ಬರು ಪ್ರಯಾಣಿಕರು ಗಾಯಗೊಂಡಿದ್ದಾರೆ.

ಸರ್ವಜ್ಞ ಜಂಕ್ಷನ್ ಬಳಿ ರಸ್ತೆಗೆ ಅಡ್ಡವಾಗಿ ಮರ ಬಿದ್ದಿರುವುದರಿಂದ ಬಿಜಿಎಸ್ ಗ್ರೌಂಡ್ ಕಡೆಗೆ ಹೋಗುವ ವಾಹನಗಳಿಗೆ ಅಡಚಣೆ ಉಂಟಾಯಿತು.

ಸಾಗರ್ ಜಂಕ್ಷನ್ ಬಳಿ ನೀರು ನಿಂತಿದ್ದರಿಂದ ಡೇರಿ ಸರ್ಕಲ್ ಕಡೆಗೆ ಸಾಗುವ ವಾಹನಗಳಿಗೆ ತೊಡಕುಂಟಾಯಿತು. ಕೆಂಪಾಪುರದ ಬಳಿ ರಸ್ತೆಯೇ ಚರಂಡಿಯಂತಾಗಿದ್ದರಿಂದ ಹೆಬ್ಬಾಳದ ಮೇಲ್ಸೇತುವೆ ಕಡೆಗೆ ವಾಹನಗಳು ಸಾಗಲು ಅಡ್ಡಿಯಾಯಿತು. ವೀರಣ್ಣಪಾಳ್ಯ ಬಳಿ ನೀರು ನಿಂತು ಜನರು, ವಾಹನ ಸವಾರರು ಪರದಾಡಿದರು. ಕುವೆಂಪು ಸಿಗ್ನಲ್ ಬಳಿ ರಸ್ತೆಯಲ್ಲಿ ನೀರು ನಿಂತು ಭದ್ರಪ್ಪ ಲೇಔಟ್ ಕಡೆಗೆ ಸಂಚಾರ ನಿಧಾನವಾಗಿದ್ದರಿಂದ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತವು.

ಮಳೆ ವಿವರ: ವಿದ್ಯಾಪೀಠ 2.5 ಸೆಂ.ಮೀ., ಕೊಡಿಗೆಹಳ್ಳಿ 2.4 ಸೆಂ.ಮೀ., ನಾಯಂಡಹಳ್ಳಿ 2.2 ಸೆಂ.ಮೀ., ವಿದ್ಯಾರಣ್ಯಪುರ 2.1 ಸೆಂ.ಮೀ., ಯಲಹಂಕ 1.8 ಸೆಂ.ಮೀ., ರಾಜರಾಜೇಶ್ವರಿನಗರ 1.7 ಸೆಂ.ಮೀ., ವಿಶ್ವನಾಥ ನಾಗೇನಹಳ್ಳಿ 1.4 ಸೆಂ.ಮೀ., ವಿಶ್ವೇಶ್ವರಪುರ 1.2 ಸೆಂ.ಮೀ., ಮಾರುತಿ ಮಂದಿರ 1.1 ಸೆಂ.ಮೀ., ಹೆರೋಹಳ್ಳಿ 1 ಸೆಂ.ಮೀ. ಮಳೆ ದಾಖಲಾಗಿದೆ.



ನಗರದ ಆರ್‌ಎಂವಿ ಎರಡನೇ ಹಂತದ ಪೆಬಲ್ ಬೇ ಅಪಾರ್ಟ್‌ಮೆಂಟ್ ಬಳಿ ಇರುವ ಅಂಡರ್‌ಪಾಸ್‌ನಲ್ಲಿ ಶುಕ್ರವಾರ ಮಳೆನೀರು ನಿಂತು ವಾಹನ ಸವಾರರು ಪರದಾಡಿದರು

ನಗರದ ಸಾಗರ್ ಜಂಕ್ಷನ್‌ನಲ್ಲಿ ಮಳೆ ನೀರು ರಸ್ತೆಯಲ್ಲಿಯೇ ಹರಿದಿದ್ದರಿಂದ ಪಾದಚಾರಿಗಳಿಗೆ, ವಾಹನ ಸಂಚಾರಿಗಳಿಗೆ ತೊಡಕುಂಟಾಯಿತು

ಸರ್ವಜ್ಞ ಜಂಕ್ಷನ್ ಬಳಿ ರಸ್ತೆಗೆ ಅಡ್ಡವಾಗಿ ಮರ ಬಿದ್ದಿತ್ತು

– ಪ್ರಜಾವಾಣಿ ಚಿತ್ರಗಳು

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 66/11 ಕೆ.ವಿ. ವಿಕ್ಟೋರಿಯಾ ಉಪವಿಭಾಗದಲ್ಲಿ ತುರ್ತು ನಿರ್ವಹಣಾ ಕಾರ್ಯ ನಡೆಯುವುದರಿಂದ ಶನಿವಾರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5ರವರೆಗೆ ಈ ಕೆಳಕಂಡ ಸ್ಥಳಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: 'ಎಸ್‌ಜೆಪಿ ರಸ್ತೆ, ಒಟಿಸಿ ರಸ್ತೆ, ಎಸ್.ಪಿ ರಸ್ತೆ, ಅವೆನ್ಯೂ ರಸ್ತೆ, ಗೋಡೌನ್ ರಸ್ತೆ, ಟ್ಯಾಕ್ಸಿ ಸ್ಟ್ಯಾಂಡ್, ವಿಕ್ಟೋರಿಯಾ ಆಸ್ಪತ್ರೆ ಕಾಂಪೌಂಡ್, ನೆಫ್ರಾಲಜಿ, ಮಿಂಟೊ, ಗ್ಯಾಸ್ಟ್ರೋ ಎಂಟರಾಲಜಿ ಆಸ್ಪತ್ರೆ ಮತ್ತು ಅಲೈಡ್ ಆಸ್ಪತ್ರೆಗಳು, ಜೆ.ಸಿ ರಸ್ತೆ, ಜೆ.ಸಿ ರಸ್ತೆ 1ನೇ ಕ್ರಾಸ್, ಎ.ಎಂ. ಲೇನ್, ಕಲಾಸಿಪಾಳ್ಯ ಮುಖ್ಯ ರಸ್ತೆ, ಎಂ.ಟಿ.ಬಿ ರಸ್ತೆ, ಕುಂಬಾರ ಗುಂಡಿ ರಸ್ತೆ, ಶಿವಾಜಿ ರಸ್ತೆ, ಸಿಟಿ ಮಾರ್ಕೆಟ್ ಕಾಂಪ್ಲೆಕ್ಸ್, ಬಿ.ವಿ.ಕೆ. ಅಯ್ಯಂಗಾರ್ ರಸ್ತೆ, ಗ್ರೇನ್ ಬಜಾರ್ ರಸ್ತೆ, ನಗರ್ತ ಪೇಟೆ, ತಿಗಳರಪೇಟೆ, ಎನ್, ಆರ್ ರಸ್ತೆ, ಒಟಿಸಿ ರಸ್ತೆಯ ಭಾಗ, ಪಿಸಿ ಲೇನ್, ಪಿಪಿ ಲೇನ್, ಉಸ್ಮಾನ್ ಖಾನ್ ರಸ್ತೆ, ಎಸ್‌ಜೆಪಿ ಪರ್ಕ್, ಬಸಪ್ಪ ವೃತ್ತ, ಕೆಆರ್ ರಸ್ತೆ, ಕೋಟೆ ಬೀದಿ, ಕಲಾಸಿಪಾಳ್ಯ ಮುಖ್ಯ ರಸ್ತೆ, ಪಟ್ನೂಲ್‌ಪೇಟೆ, ಹಳೆ ಕಸಾಯಿಖಾನೆ ರಸ್ತೆ, ನಗರ್ತ ಪೇಟೆ ಮುಖ್ಯರಸ್ತೆ, ಕುಂಬಾರಪೇಟೆ ಮುಖ್ಯರಸ್ತೆ, ಅಪ್ಪುರಾಯಪ್ಪ ಲೇನ್, ಎಂಬಿಟಿ ರಸ್ತೆ, ಪಿಳ್ಳಪ್ಪ ಲೇನ್, ಸಿಆರ್ ಸ್ವಾಮಿ ಬೀದಿ, ಮೇಧರಪೇಟೆ, ಚಿಕ್ಕಪೇಟೆ, ಕೆ.ಜಿ.ರಸ್ತೆಯ ಭಾಗ, ಆರ್.ಟಿ.ರಸ್ತೆ, ಚಿಕ್ಕಪೇಟೆ ಮುಖ್ಯರಸ್ತೆ, ಒಟಿಪೆಟ್, ಒಟಿಸಿ ರಸ್ತೆ, ಗುಂಡೋಪಂಥ್ ಬೀದಿ, ಮಾಮೂಲ್‌ಪೇಟೆ, ಬೆಳ್ಳಿ ಬಸವಣ್ಣ ದೇವಸ್ಥಾನದ ಬೀದಿಯ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಗಣೇಶ ಚತುರ್ಥಿ: ವಿಶೇಷ ರೈಲು ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣೇಶ ಚತುರ್ಥಿ ಅವಧಿಯಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ಕಡಿಮೆಗೊಳಿಸಲು ಬೆಂಗಳೂರಿನಿಂದ ಬೆಳಗಾವಿ ಮತ್ತು ವಿಜಯಪುರ ಮಾರ್ಗಗಳಲ್ಲಿ ವಿಶೇಷ ರೈಲು ಕಾರ್ಯಾಚರಣೆ ನಡೆಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಸೆಪ್ಟೆಂಬರ್ 5ರಂದು ಸಂಜೆ 7.30ಕ್ಕೆ ಯಶವಂತಪುರದಿಂದ ಹೊರಡುವ ರೈಲು ಸೆ.6ರಂದು ಬೆಳಿಗ್ಗೆ 7.15ಕ್ಕೆ ಬೆಳಗಾವಿ ತಲುಪಲಿದೆ. ಅಂದು ಬೆಳಿಗ್ಗೆ 8.45ಕ್ಕೆ ಬೆಳಗಾವಿಯಿಂದ ಹೊರಟು ರಾತ್ರಿ 8ಕ್ಕೆ ಯಶವಂತಪುರ ನಿಲ್ದಾಣ ತಲುಪಲಿದೆ. ಸೆ.6ರಂದು ರಾತ್ರಿ 10.15ಕ್ಕೆ ಯಶವಂತಪುರದಿಂದ ಹೊರಡುವ ರೈಲು ಸೆ.7ರಂದು ಬೆಳಿಗ್ಗೆ 10.15ಕ್ಕೆ ಬೆಳಗಾವಿ ತಲುಪಲಿದೆ. ಸೆ.8ರಂದು ಸಂಜೆ 5.30ಕ್ಕೆ ಬೆಳಗಾವಿಯಿಂದ ಹೊರಟು ಮರುದಿನ ಬೆಳಿಗ್ಗೆ 4.30ಕ್ಕೆ ಯಶವಂತಪುರ ತಲುಪಲಿದೆ.

ಈ ರೈಲುಗಳು ಎರಡೂ ದಿಕ್ಕುಗಳಲ್ಲಿ ತುಮಕೂರು, ಅರಸೀಕೆರೆ, ಬೀರೂರು, ದಾವಣಗೆರೆ, ಹರಿಹರ, ಹಾವೇರಿ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಧಾರವಾಡ, ಅಳ್ನಾವರ, ಲೋಂಡಾ ಮತ್ತು ಖಾನಾಪುರ ನಿಲ್ದಾಣಗಳಲ್ಲಿ ನಿಲುಗಡೆ ಇರಲಿದೆ. ರೈಲುಗಳು ಒಟ್ಟು 22 ಬೋಗಿಗಳನ್ನು ಹೊಂದಿರಲಿವೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ (ಎಸ್‌ಎಂವಿಟಿ) ಸೆ.5 ಮತ್ತು 7ರಂದು ರಾತ್ರಿ 9ಕ್ಕೆ ಹೊರಡುವ ವಿಶೇಷ ಎಕ್ಸ್‌ಪ್ರೆಸ್ ರೈಲು ಸೆ.6 ಮತ್ತು 8ರಂದು ಮಧ್ಯಾಹ್ನ 2.05ಕ್ಕೆ ವಿಜಯಪುರ ತಲುಪಲಿದೆ. ಸೆ.6 ಮತ್ತು 8ರಂದು ವಿಜಯಪುರದಿಂದ ಹೊರಡುವ ರೈಲು ಸೆ.7 ಮತ್ತು 9ರಂದು ಬೆಳಿಗ್ಗೆ 11.15ಕ್ಕೆ ಎಸ್‌ಎಂವಿಟಿ ತಲುಪಲಿದೆ.

ಈ ರೈಲುಗಳು ಚಿಕ್ಕಬಾಣಾವರ, ತುಮಕೂರು, ಅರಸೀಕೆರೆ, ಬೀರೂರು, ಚಿಕ್ಕಜಾಜೂರು, ಚಿತ್ರದುರ್ಗ, ರಾಯದುರ್ಗ, ಬಳ್ಳಾರಿ ಕಂಟೋನ್ಮೆಂಟ್, ತೋರಣಗಲ್ಲು, ಹೊಸಪೇಟೆ, ಕೊಪ್ಪಳ, ಗದಗ, ಬಾದಾಮಿ, ಬಾಗಲಕೋಟೆ ಮತ್ತು ಆಲಮಟ್ಟಿ ನಿಲ್ದಾಣಗಳಲ್ಲಿ ನಿಲುಗಡೆ ನೀಡಲಿವೆ. ಈ ರೈಲುಗಳು ಒಟ್ಟು 18 ಬೋಗಿಗಳನ್ನು ಒಳಗೊಂಡಿರುತ್ತವೆ.

ಮುಂಗಡ ಬುಕ್ಕಿಂಗ್ ಮತ್ತು ವೇಳಾಪಟ್ಟಿ ಮಾಹಿತಿಗಾಗಿ www.enquiry.indianrail.gov.in ಜಾಲತಾಣಕ್ಕೆ ಭೇಟಿ ನೀಡಬಹುದು. ಅಥವಾ 139ಕ್ಕೆ ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬಹುದು.

ತಾತ್ಕಾಲಿಕ ನಿಲುಗಡೆ: ತಾಳಗುಪ್ಪ-ಮೈಸೂರು ಎಕ್ಸ್‌ಪ್ರೆಸ್ ರೈಲಿಗೆ ಪ್ರಾಯೋಗಿಕ ಆಧಾರದ ಮೇಲೆ ಮಲ್ಲೇಶ್ವರ ನಿಲ್ದಾಣದಲ್ಲಿ ಮೂರು ತಿಂಗಳು ಅಂದರೆ ಅಕ್ಟೋಬರ್ 22ರಿಂದ ಜನವರಿ 21ರವರೆಗೆ ಒಂದು ನಿಮಿಷ ತಾತ್ಕಾಲಿಕ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ.

ಈ ರೈಲು ಮಲ್ಲೇಶ್ವರ ನಿಲ್ದಾಣಕ್ಕೆ ಬೆಳಿಗ್ಗೆ 4.34ಕ್ಕೆ ಬಂದು, ನಿರ್ಗಮಿಸಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಹಿರಿಯ ವಕೀಲ ಪುಟ್ಟೇಗೌಡರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನ ಹಿರಿಯ ವಕೀಲ ಕೆ.ಎನ್.ಪುಟ್ಟೇಗೌಡ ಅವರಿಗೆ, 'ಬೆಂಗಳೂರು ವಕೀಲರ ಸಂಘ'ದಿಂದ ಬುಧವಾರ ಸಿಟಿ ಸಿವಿಲ್ ಕೋರ್ಟ್ ಸಂಕೀರ್ಣದಲ್ಲಿ ಸನ್ಮಾನಿಸಲಾಯಿತು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್ ಮಾತನಾಡಿ, 'ಬೆಂಗಳೂರು ವಕೀಲರ ಸಹಕಾರ ಸಂಘವನ್ನು ಹುಟ್ಟು ಹಾಕಿದವರಲ್ಲಿ ಪುಟ್ಟೇಗೌಡರೂ ಪ್ರಮುಖರು. ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ಅನ್ನು ಯಶಸ್ವಿಯಾಗಿ ಮುನ್ನಡೆಸಿದ ಶ್ರೇಯಸ್ಸು ಅವರದು' ಎಂದು ಶ್ಲಾಘಿಸಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ, ಶಾಸಕ ಎಸ್.ಸುರೇಶ್ ಕುಮಾರ್, ಬೆಂಗಳೂರು ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ, ಖಜಾಂಚಿ ಎಂ.ಟಿ.ಹರೀಶ್, ವಿಧಾನ ಪರಿಷತ್ ಮಾಜಿ ಸಭಾಪತಿ ಬಿ.ಎಲ್. ಶಂಕರ್, ಧಾರಾವಾಹಿ ನಿರ್ದೇಶಕ ಟಿ.ಎನ್. ಸೀತಾರಾಂ ಭಾಗವಹಿಸಿದ್ದರು.

ಹಿರಿಯ ವಕೀಲ ಕೆ.ಎನ್.ಪುಟ್ಟೇಗೌಡ ಅವರನ್ನು ಬೆಂಗಳೂರು ವಕೀಲರ ಸಂಘದಿಂದ ಸನ್ಮಾನಿಸಲಾಯಿತು. ಸಂಘದ ಖಜಾಂಚಿ ಎಂ.ಟಿ. ಹರೀಶ್, ಪ್ರಧಾನ ಕಾರ್ಯದರ್ಶಿ ಟಿ.ಜಿ. ರವಿ, ರಾಜ್ಯ ವಕೀಲರ ಪರಿಷತ್ ಸದಸ್ಯ ಆರ್. ರಾಜಣ್ಣ, ಸಂಘದ ಪದಾಧಿಕಾರಿ ಸಿ.ಆರ್. ಮುನಿಯಪ್ಪ ಗೌಡ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್, ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಭಾಗವಹಿಸಿದ್ದರು

ಸಡಗರದಿಂದ ವರಮಹಾಲಕ್ಷ್ಮಿ ಹಬ್ಬ ಆಚರಣೆ

ಹೂವುಗಳಿಂದ ವಿಶೇಷ ಅಲಂಕಾರ; ದೇವಾಲಯಗಳಲ್ಲಿ ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದ ಭಕ್ತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ಸಡಗರ, ಸಂಭ್ರಮದಿಂದ ವರಮಹಾಲಕ್ಷ್ಮಿ ಹಬ್ಬವನ್ನು ಆಚರಿಸಲಾಯಿತು. ಹಬ್ಬದ ಪ್ರಯುಕ್ತ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು.

ಮಾರುಕಟ್ಟೆಯಲ್ಲಿ ಒಂದೆಡೆ ಬೆಲೆ ಏರಿಕೆಯ ಬಿಸಿಯಿದ್ದರೂ, ಹೂವಿನ ಬೆಲೆ ಗಗನಕ್ಕೆ ಏರಿದ್ದರೂ, ನಗರದಲ್ಲಿ ಹಬ್ಬದ ಆಚರಣೆಗೆ ಯಾವುದೇ ರೀತಿಯ ಕುಂದುಂಟಾಗಲಿಲ್ಲ. ಮನೆ ಹಾಗೂ ದೇವಾಲಯಗಳಲ್ಲಿ ಹಬ್ಬದ ಸಡಗರ ಇಮ್ಮಡಿಗೊಂಡಿತ್ತು. ಲಕ್ಷ್ಮೀದೇವಿ ಆರಾಧಿಸಿದ ಭಕ್ತರು, ಸಮೃದ್ಧಿ, ಸುಖ–ಶಾಂತಿ ಹಾಗೂ ಆರೋಗ್ಯ ಕರುಣಿಸುವಂತೆ ಪ್ರಾರ್ಥಿಸಿದರು.

ಮಹಿಳೆಯರು ಮುಂಜಾನೆಯೇ ಮನೆಗಳ ಮುಂದೆ ಬಣ್ಣ ಬಣ್ಣದ ರಂಗೋಲಿ ಬಿಡಿಸಿ, ಅಂಗಳವನ್ನು ಚಿತ್ತಾಕರ್ಷಕಗೊಳಿಸಿದ್ದರು. ಬಾಗಿಲಿಗೆ ತಳಿರು ತೋರಣ ಕಟ್ಟಿ ಸಿಂಗರಿಸಿದ್ದರು. ಹಲವು ಮಂದಿ ಕಳಸ ವಿಟ್ಟು ಪೂಜಿಸಿದರೆ, ಮತ್ತೆ ಕೆಲವರು ಕಳಸಕ್ಕೆ ಸೀರೆಯುಡಿಸಿ, ಆಭರಣಗಳನ್ನು ಹಾಕಿ ಭಕ್ತಿಭಾವ ಮೆರೆದರು. ಕೆಲವೆಡೆ ಲಕ್ಷ್ಮಿಯ ಮೊಗವಾಡ ಇರಿಸಿ ಪೂಜಿಸಿದರು.

ಮನೆಯಲ್ಲಿನ ದೇವರ ಕೋಣೆಯನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಲಕ್ಷ್ಮಿದೇವಿ ಫೋಟೊ ಎದುರು ಹಣ, ಒಡವೆ, ಸಿಹಿ ತಿಂಡಿ ಹಾಗೂ ವಿವಿಧ ಬಗೆಯ ಹಣ್ಣು–ಹೂವು ಇಟ್ಟು ಪೂಜೆ ಸಲ್ಲಿಸಿದರು. ಕೆಲ ಮನೆಗಳಲ್ಲಿ ಲಕ್ಷ್ಮಿ ಕಳಶ ಪ್ರತಿಷ್ಠಾಪಿಸಿ, ಸೀರೆ ಹಾಗೂ ಹೂವುಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು.

ಆರ್ಥಿಕವಾಗಿ ಸ್ಥಿತಿವಂತರ ಮನೆಗಳಲ್ಲಿ ಚಿನ್ನಾಭರಣ ಹಾಗೂ ಹಣ ಇಟ್ಟು ಪೂಜೆ ಮಾಡಿದರೆ, ಬಡ ಹಾಗೂ ಮಧ್ಯಮ ವರ್ಗದ ಜನರು ಹೂವು, ಹಣ್ಣುಗಳಿಂದ ಸಂಪತ್ತಿನ ಅಧಿದೇತೆಯನ್ನು ಆರಾಧಿಸಿದರು. ಅಕ್ಕಪಕ್ಕದ ಮನೆಗಳ ಮಹಿಳೆಯರನ್ನು ಮನೆಗೆ ಕರೆದು ಅರಿಶಿಣ, ಕುಂಕುಮ, ಬಳೆ, ಹೂವು ಹಾಗೂ ತಾಂಬೂಲ ಕೊಟ್ಟು ಸತ್ಕರಿಸಿದರು.

ಶ್ಯಾವಿಗೆ ಪಾಯಸ, ಅಕ್ಕಿ ಪಾಯಸ, ಒಬ್ಬಟ್ಟು, ಕೋಸಂಬರಿ, ಹಪ್ಪಳ, ತರಕಾರಿ ಪಲ್ಯ ಮತ್ತಿತರ ಖಾದ್ಯಗಳನ್ನು ತಯಾರಿಸಿ ದೇವಿಗೆ ನೈವೇದ್ಯ ಮಾಡಿದರು. ವಾಣಿಜ್ಯ ಮಳಿಗೆಗಳು, ಅಂಗಡಿಗಳಲ್ಲಿ ವರಮಹಾಲಕ್ಷ್ಮಿ ಪೂಜೆ ಜೋರಾಗಿತ್ತು. ಬ್ಯಾಂಕುಗಳಲ್ಲಿಯೂ ಹಬ್ಬದ ಸಂಭ್ರಮ ಮನೆ ಮಾಡಿತ್ತು.

ದರ್ಶನಪಡೆದಭಕ್ತರು: ಹಬ್ಬದಪ್ರಯುಕ್ತ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ಮಹಿಳೆಯರು ಹಾಗೂ ಮಕ್ಕಳು ಮುಂಜಾನೆಯಿಂದಲೇ ದೇವಸ್ಥಾನಗಳಿಗೆ ತೆರಳಿ, ದೇವರ ದರ್ಶನ ಪಡೆದರು. ಬನಶಂಕರಿ ದೇವಸ್ಥಾನದಲ್ಲಿ ಭಕ್ತರ ದಂಡು ಸೇರಿತ್ತು.

ಮಹಾಲಕ್ಷ್ಮೀ ಬಡಾವಣೆಯ ಪ್ರಸನ್ನ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಹಬ್ಬದ ಪ್ರಯುಕ್ತ ವಿಶೇಷ ಅಭಿಷೇಕ ಹಾಗೂ ಪೂಜೆ ನೆರವೇರಿಸಲಾಯಿತು. ಶೇಷಾದ್ರಿಪುರ ಹಾಗೂ ಗುಟ್ಟಹಳ್ಳಿಯ ಮಹಾಲಕ್ಷ್ಮೀ ದೇವಾಲಯ, ಮಲ್ಲೇಶ್ವರದ ಮಹಾಲಕ್ಷ್ಮೀ ದೇವಾಲಯ, ಕೋಟೆ ಶಿವ ದೇವಾಲಯ, ಶೃಂಗೇರಿ ಶಂಕರಮಠ ಶಾರದಾಂಬೆ ದೇವಸ್ಥಾನ ಹಾಗೂ ಕೋಟೆ ವೆಂಕಟರಮಣ ದೇವಸ್ಥಾನಗಳಲ್ಲಿ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಬಹುತೇಕ ದೇವಾಲಯಗಳ ಮುಂದೆ ಉದ್ದನೆಯ ಸರತಿ ಸಾಲು ಕಂಡುಬಂದಿತು.

ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಲಕ್ಷ್ಮಿ ದೇವಿಗೆ ಭಕ್ತಾದಿಗಳ ಸಮ್ಮುಖದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು –ಪ್ರಜಾವಾಣಿ ಚಿತ್ರ / ಎಂ.ಎಸ್.ಮಂಜುನಾಥ್

'ಅಮಾನತುಗೊಂಡ ಪೊಲೀಸ್‌ಗೆ ಸಿಎಂ ಪದಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳ್ಳರು, ಗಾಂಜಾ ಪೆಡ್ಲರ್‌ಗಳ ಜತೆ ಸಂಬಂಧ ಹೊಂದಿದ ಕಾರಣಕ್ಕೆ ಕಳೆದ ತಿಂಗಳು ಅಮಾನತುಗೊಂಡಿದ್ದ ಹೆಡ್ ಕಾನ್‌ಸ್ಟೆಬಲ್ ಸಲೀಂ ಪಾಷಾಗೆ ಮುಖ್ಯಮಂತ್ರಿ ಪದಕ ಘೋಷಣೆ ಮಾಡಲಾಗಿದೆ' ಎಂದು ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿದೆ.

ಸಲೀಂ ಪಾಷಾ ಅವರ ಅಮಾನತು ಆದೇಶ ಪ್ರತಿಯನ್ನು 'ಎಕ್ಸ್'ನಲ್ಲಿ ಟ್ಯಾಗ್ ಮಾಡಿರುವ ಬಿಜೆಪಿ, 'ಖದೀಮರು, ರೌಡಿಗಳು, ದುಷ್ಟ– ದುರುಳರು, ಕಾಮುಕರು, ಭಯೋತ್ಪಾದಕರಿಗೆ ಕಾಂಗ್ರೆಸ್ ಸರ್ಕಾರ ರತ್ನಗಂಬಳಿ ಹಾಕಿ ರಾಜ ಮರ್ಯಾದೆ ಕೊಡುತ್ತಿರುವುದು ಇದು ಮೊದಲೂ ಅಲ್ಲ ಕೊನೆಯೂ ಅಲ್ಲ' ಎಂದು ಹೇಳಿದೆ.

'ಪೊಲೀಸ್ ಇಲಾಖೆಯನ್ನೇ ಹಾಳು ಮಾಡಿರುವ ಗೃಹಮಂತ್ರಿ ಜಿ.ಪರಮೇಶ್ವರ ಅವರಿಗೆ ಇಲಾಖೆ ಹಿಡಿತದಲ್ಲೇ ಎಂಬುದು ಸ್ಪಷ್ಟವಾಗಿದೆ. ಕಪ್ಪುಚುಕ್ಕೆಗಳ ಸರದಾರ ಭ್ರಷ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ವಿದ್ರೋಹಿಗಳಿಗೆ ಪದಕ ವಿತರಿಸುತ್ತಿರುವುದು ನಾಡಿನ ಜನರಿಗೆ ಆಶ್ಚರ್ಯ ಉಂಟು ಮಾಡುತ್ತಿಲ್ಲ' ಎಂದು ಕಿಡಿಕಾರಿದೆ.

ಆ. 20ರಿಂದ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಆಗಸ್ಟ್ 20ರಿಂದ ಅಕ್ಟೋಬರ್ 18ರವರೆಗೆ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಯಲಿದೆ.

ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ 2025ರ ಜನವರಿ 6ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಿಸಬೇಕಿರುವುದರಿಂದ ಬೆಂಗಳೂರು ನಗರ ಜಿಲ್ಲಾ ಚುನಾವಣಾಧಿಕಾರಿ ಪರಿಷ್ಕರಣೆಗೆ ದಿನಾಂಕ ನಿಗದಿಪಡಿಸಿದ್ದಾರೆ. ಅರ್ಹರು ಈ ಸಮಯದಲ್ಲಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಲು ಅವಕಾಶ ನೀಡಲಾಗಿದೆ.

ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಮತಗಟ್ಟೆಗಳ ತರ್ಕಬದ್ಧಗೊಳಿಸುವುದು, ಮರು ಹೊಂದಾಣಿಕೆ, ಮತದಾರರ ಪಟ್ಟಿ ಅಥವಾ ಗುರುತಿನ ಚೀಟಿಗಳಲ್ಲಿರುವ ದೋಷ ಸರಿಪಡಿಸಿವುದು, ಗುಣಮಟ್ಟವಿಲ್ಲದ ಭಾವಚಿತ್ರಗಳನ್ನು ಬದಲಾಯಿಸುವುದು, ಮತಗಟ್ಟೆಗಳ ಪಟ್ಟಿಗಳಿಗೆ ಅನುಮೋದನೆ ಪಡೆದುಕೊಳ್ಳುವುದು, ನ್ಯೂನತೆಗಳನ್ನು ಗುರುತಿಸುವುದು ಮತ್ತು ಅವುಗಳನ್ನು ನಿವಾರಿಸಲು ಕ್ರಮ ಕೈಗೊಳ್ಳುವುದು, ನಿಯಂತ್ರಣ ಕೋಷ್ಟಕದ (ಕಂಟ್ರೋಲ್ ಟೇಬಲ್) ನವೀಕರಣ ಈ ಸಂದರ್ಭದಲ್ಲಿ ನಡೆಯಲಿದೆ.

ಅಕ್ಟೋಬರ್ 19ರಿಂದ 28ರವರೆಗೆ ನಮೂನೆ 1ರಿಂದ 8ರ ತಯಾರಿ, ಸಮಗ್ರ ಕರಡು ಮತದಾರರ ಪಟ್ಟಿ ಸಿದ್ಧಪಡಿಸಲಾಗುತ್ತದೆ. ಅಕ್ಟೋಬರ್ 29ರಂದು ಸಮಗ್ರ ಕರಡು ಮತದಾರರ ಪಟ್ಟಿಯನ್ನು ಪ್ರಕಟಣೆ ಮಾಡಲಾಗುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ನವೆಂಬರ್ 28ರ ಒಳಗೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಡಿಸೆಂಬರ್ 24ರ ಒಳಗೆ ಆಕ್ಷೇಪಣೆ ವಿಲೇವಾರಿ ಮಾಡಲಾಗುತ್ತದೆ.

2025ರ ಜನವರಿ 1ರ ಒಳಗೆ ಮತದಾರರ ಪಟ್ಟಿಯ ಗುಣಮಟ್ಟ ಪರಿಶೀಲನೆ ಮಾಡಲಾಗುತ್ತದೆ. ಅಂತಿಮ ಪ್ರಕಟಣೆಗಾಗಿ ಆಯೋಗದ ಅನುಮತಿಯನ್ನು ಪಡೆಯುವುದು ಮತ್ತು ದತ್ತಾಂಶವನ್ನು ನವೀಕರಿಸುವುದು ಮತ್ತು ಪೂರಕಗಳ ಮುದ್ರಣ ಮಾಡುವುದು ಈ ಸಮಯದಲ್ಲಿ ನಡೆಯಲಿದೆ. ಜ.6ರಂದು ಅಂತಿಮ ಪಟ್ಟಿ ಪ್ರಕಟಣೆ ಮಾಡಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಬಿಬಿಎಂಪಿ ಮುಖ್ಯ ಆಯುಕ್ತರು ತಿಳಿಸಿದ್ದಾರೆ.

ಎಸ್‌ಬಿಐ, ಪಿಎನ್‌ಬಿ ಮನವಿ: ಖಾತೆ ಸ್ಥಗಿತಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಬಿಐ ಮತ್ತು ಪಿಎನ್‌ಬಿ ಬ್ಯಾಂಕ್‌ಗಳಲ್ಲಿನ ಖಾತೆಗಳನ್ನು ಮುಚ್ಚಿ, ಠೇವಣಿ ವಾಪಸ್ ಪಡೆಯಿರಿ ಎಂದು ಎಲ್ಲಾ ಇಲಾಖೆಗಳಿಗೆ ನೀಡಿದ್ದ ಸೂಚನೆಯನ್ನು ರಾಜ್ಯ ಸರ್ಕಾರವು ತಾತ್ಕಾಲಿಕವಾಗಿ ತಡೆಹಿಡಿದಿದೆ.

ನಿಶ್ಚಿತ ಠೇವಣಿಗಳಿಗೆ ಸಂಬಂಧಿಸಿದಂತೆ ಎದುರಾಗಿರುವ ಸಮಸ್ಯೆಯನ್ನು ಇತ್ಯರ್ಥಪಡಿಸಲು 15 ದಿನಗಳ ಕಾಲಾವಕಾಶ ಕೊಡಿ ಎಂದು ಎರಡೂ ಬ್ಯಾಂಕ್‌ಗಳು ರಾಜ್ಯ ಸರ್ಕಾರವನ್ನು ಮನವಿ ಮಾಡಿರುವ ಕಾರಣ, ಆರ್ಥಿಕ ಇಲಾಖೆಯು ಸೂಚನೆಯನ್ನು 15 ದಿನಗಳವರೆಗೆ ತಡೆಹಿಡಿದಿದೆ.

'ಎಸ್‌ಬಿಐನ ಮುಖ್ಯ ಪ್ರಧಾನ ವ್ಯವಸ್ಥಾಪಕ ವಿನೋದ್ ಜೈಸ್ವಾಲ್ ಮತ್ತು ಪಿಎನ್‌ಬಿಯ ವಿಭಾಗೀಯ ವ್ಯವಸ್ಥಾಪಕ ದೀಪಕ್ ಕುಮಾರ್ ಅವರು ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಅವರನ್ನು ಶುಕ್ರವಾರ ಭೇಟಿ ಮಾಡಿದ್ದಾರೆ. ನಿಶ್ಚಿತ ಠೇವಣಿಗಳ ಮರುಪಾವತಿ ವಿಷಯವನ್ನು ಶೀಘ್ರವೇ ಇತ್ಯರ್ಥಪಡಿಸುವುದಾಗಿ ಹೇಳಿದ್ದಾರೆ' ಎಂದು ಇಲಾಖೆಯ ಪ್ರಕಟಣೆ ಹೇಳಿದೆ.

'ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು 2011ರಲ್ಲಿ ಮಾಡಿದ್ದ ನಿಶ್ಚಿತ ಠೇವಣಿಯನ್ನು ಪಿಎನ್‌ಬಿ ವಾಪಸ್ ಮಾಡಿಲ್ಲ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ 2013ರಲ್ಲಿ ಮಾಡಿದ್ದ ನಿಶ್ಚಿತ ಠೇವಣಿಯ ಪೂರ್ಣ ಮೊತ್ತವನ್ನು ಎಸ್‌ಬಿಐ ಹಿಂತಿರುಗಿಸಿಲ್ಲ. ವಂಚನೆಯ ನೆಪ ಒಡ್ಡಿ ಎರಡೂ ಬ್ಯಾಂಕ್‌ಗಳು ಠೇವಣಿ ನೀಡುತ್ತಿಲ್ಲ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಶಿಫಾರಸಿನಂತೆ ಈ ಬ್ಯಾಂಕ್‌ಗಳ ಜತೆಗೆ ವ್ಯವಹಾರ ನಿಲ್ಲಿಸಲು ಸೂಚಿಸಲಾಗುತ್ತಿದೆ' ಎಂದು ಆರ್ಥಿಕ ಇಲಾಖೆ ಇದೇ 12ರಂದು ಆದೇಶಿಸಿತ್ತು.

ಈ ಸಂಬಂಧ ಮಾಧ್ಯಮಗಳಲ್ಲಿ ಸುದ್ದಿ ಪ್ರಕಟವಾಗುತ್ತಿದ್ದಂತೆ ಎರಡೂ ಬ್ಯಾಂಕ್‌ಗಳು, 'ರಾಜ್ಯ ಸರ್ಕಾರದೊಂದಿಗೆ ಮಾತುಕತೆಗೆ ಸಿದ್ಧರಿದ್ದೇವೆ' ಎಂದು ಗುರುವಾರ ಹೇಳಿಕೆ ನೀಡಿದ್ದವು. ಈಗ ಅಧಿಕೃತವಾಗಿ ಮನವಿ ಸಲ್ಲಿಸಿವೆ.

ಪುಣೆ ರೇಸ್

ಫೀಲ್ಡ್ಸ್ ಆಫ್ ಡ್ರೀಮ್ಸ್ ಗೆಲ್ಲುವ ನಿರೀಕ್ಷೆ

ಎಫ್.ಡಿ.ವಾಡಿಯ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫೀಲ್ಡ್ ಆಫ್ ಡ್ರೀಮ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. 1ನೇ ರೇಸ್: ಗೋಲ್ಡಿವಾ 1, ನೊಬಿಲಿಟಿ 2, ನಾರ್ಥ್‌ಬೌಂಡ್ 3
2ನೇ ರೇಸ್: ಫ್ಲಾಶಿಂಗ್ ಫೇಮಸ್ 2, ಡಫಿ 4, ಎಟಾಯ್ಲ್ 8
3ನೇ ರೇಸ್: ಅಪೆರಾಲ್ 3, ಸ್ಟಾರ್ ಗ್ಯಾಲರಿ 1, ಕರೀನ 2
4ನೇ ರೇಸ್: ಟಚ್ ಆಫ್ ಗೋಲ್ಡ್ 10, ಟ್ರಿಗ್ಗರ್ 11, ಕ್ರಿಯೇಟಿವ್ ಗರ್ಲ್ 5
5ನೇ ರೇಸ್: ಫೀಲ್ಡ್ ಆಫ್ ಡ್ರೀಮ್ಸ್ 4, ರೀಡಿಫೈನ್ಡ್ 7, ಡ್ಯಾಶ್ 1
6ನೇ ರೇಸ್: ಸೆರಾನೊ 4, ಸುಪ್ರೀಮ್ ಸ್ಪಿರಿಟ್ 5, ಅಟ್ಟೈನ್ಡ್ 2
7ನೇ ರೇಸ್: ಇಲ್ ವೊಲೊ 5, ಡ್ರೀಮ್ ಸೆಲ್ಲರ್ 3, ಸೂಪ್ ಅಂಡ್ ಸ್ಯಾಂಡ್‌ವಿಚ್ 2

ಉತ್ತಮ ಬೆಟ್: ಫ್ಲಾಶಿಂಗ್ ಫೇಮಸ್

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6

ನೆಲಮಂಗಲ ನ್ಯೂ ಟೌನ್ ಮತ್ತು ಎಂ.ಜಿ. ರಸ್ತೆಗಳ ಸಮಸ್ಯೆ

ರಸ್ತೆಗಳು ಅಧ್ವಾನ; ನಿವಾಸಿಗಳು ಹೈರಾಣ

• ಮಹಾಂತೇಶ್ ನೆಗಳೂರ

ನೆಲಮಂಗಲ: ಪಟ್ಟಣದ ನೆಲಮಂಗಲ ನ್ಯೂ ಟೌನ್ ಮುಖ್ಯ ರಸ್ತೆ ಮತ್ತು ಎಂ.ಜಿ. ರಸ್ತೆಗಳು ಗುಂಡಿಗಳಿಂದ ಕೂಡಿದ್ದು, ವಾಹನ ಸವಾರರು ದಿನನಿತ್ಯ ಸಂಕಷ್ಟದಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ನ್ಯೂಟೌನ್‌ನ ದ್ವಾರದಿಂದ ಜನಪ್ರಿಯ ಅಪಾರ್ಟ್‌ಮೆಂಟ್, ಬಾಲಾಜಿ ಗ್ರೀನ್ಸ್ ಹಾಗೂ ಮಾರಪ್ಪನ ಪಾಳ್ಯಕ್ಕೆ ಹೋಗುವ ಈ ಮುಖ್ಯರಸ್ತೆಯಲ್ಲಿ ನಿತ್ಯ ಸಾವಿರಾರು ಜನ ಸಂಚರಿಸುತ್ತಾರೆ. ಬೆಳಿಗ್ಗೆ ಕಚೇರಿ, ಶಾಲೆಗಳ ಸಮಯದಲ್ಲಿ ದಟ್ಟಣೆ ಹೆಚ್ಚಿರುತ್ತದೆ. ರಸ್ತೆ ಹಾಳಾಗಿರುವುದರಿಂದ ಆಗಾಗ್ಗೆ ಲಘು ಅಪಘಾತಗಳು ಸಂಭವಿಸುತ್ತಿವೆ.

ಬೆತ್ತನಗೆರೆ, ವಾಜರಹಳ್ಳಿ, ಭಕ್ತನಪಾಳ್ಯಕ್ಕೆ ಸಂಪರ್ಕ ಕಲ್ಪಿಸುವ ಎಂ.ಜಿ.ರಸ್ತೆ ಕಿರಿದಾಗಿದ್ದು, ಗುಂಡಿಗಳಿಂದ ಕೂಡಿದೆ. ಈ ಬಡಾವಣೆಗಳಲ್ಲಿ ಹೊಸ ಕಟ್ಟಡಗಳ ನಿರ್ಮಾಣ ಹೆಚ್ಚುತ್ತಿರುವುದರಿಂದ, ಕಟ್ಟಡ ಸಾಮಗ್ರಿಗಳನ್ನು ಕೊಂಡೊಯ್ಯುವ ಬೃಹತ್ ಲಾರಿಗಳ ಓಡಾಟ ಅಧಿಕವಾಗಿದೆ. ಈಗಾಗಲೇ ರಸ್ತೆಯಲ್ಲಿರುವ ಗುಂಡಿಗಳು, ಲಾರಿಗಳ ಸಂಚಾರದಿಂದ ಸಣ್ಣ ಹೊಂಡಗಳಂತಾಗಿವೆ. ಮಳೆ ಬಂದರೆ ಮಂಡಿಯುದ್ದ ನೀರು ನಿಲ್ಲುತ್ತದೆ.

ನ್ಯೂಟೌನ್ ಮುಖ್ಯರಸ್ತೆ ಮತ್ತು ಎಂ.ಜಿ.ರಸ್ತೆಯ ಕೆಲವು ಭಾಗಗಳಲ್ಲಿ ಚರಂಡಿ ವ್ಯವಸ್ಥೆ ಇಲ್ಲ. ಹಾಗಾಗಿ, ಮಳೆ ನೀರು ರಸ್ತೆಯ ಮೇಲೆ ಹರಿಯುತ್ತದೆ.

ಎಂ.ಜಿ.ರಸ್ತೆಯಲ್ಲಿ ಜಲ್ಲಿ ಮತ್ತು ಮರಳಿನಿಂದ ತೇಪೆ ಹಾಕಿರುವುದು

ಮುಖ್ಯಾಂಶಗಳು

- ಮುಖ್ಯರಸ್ತೆಯಲ್ಲಿ ಗುಂಡಿ, ಹೊಂಡಗಳು
- ಮಳೆಗಾಲದಲ್ಲಿ ರಸ್ತೆಗಳು ಕೆಸರುಮಯ
- ಚರಂಡಿಗಳಿಲ್ಲದೇ ರಸ್ತೆಯಲ್ಲಿ ಹರಿಯುವ ಮಳೆ ನೀರು

ಮಳೆ ಬಂದಾಗ ರಸ್ತೆಗಳು ಕೆಸರಿನಿಂದ ತುಂಬಿರುತ್ತವೆ, ಬಿಸಿಲು ಇದ್ದಾಗ ದೂಳಿನಿಂದ ಕೂಡಿರುತ್ತವೆ. ದ್ವಿಚಕ್ರ ವಾಹನದಲ್ಲಿ ಓಡಾಡುವ ನಮ್ಮಂತಹ ಹಿರಿಯರಿಗೆ ತೀವ್ರ ತೊಂದರೆಯಾಗಿದೆ. ಶೀಘ್ರವೇ ರಸ್ತೆ ದುರಸ್ತಿ ಮಾಡಿಸಿ, ಚರಂಡಿ ವ್ಯವಸ್ಥೆ ಕಲ್ಪಿಸಿಕೊಡಬೇಕು' ಎಂದು ಗಜಾರಿಯ ಬಡಾವಣೆಯ 73ರ ಹರೆಯದ ವಿ.ಎಸ್.ರಾಮಣ್ಣ ಆಗ್ರಹಿಸಿದ್ದಾರೆ.

'ಚರಂಡಿಗಳಲ್ಲಿ ಹೂಳು ತುಂಬಿದ್ದು, ನೀರು ಮುಂದಕ್ಕೆ ಹರಿಯುವುದಿಲ್ಲ. ಮಳೆ ಬಂದಾಗ ಚರಂಡಿ ನೀರು ರಸ್ತೆಗೆ ಹರಿಯುತ್ತದೆ. ಕೊಳಚೆ ನೀರಿನಿಂದ ಡೆಂಗಿಯಂತಹ ರೋಗಗಳು ಹರಡುವ ಸಾಧ್ಯತೆ ಇರುತ್ತದೆ. ಎಂ.ಜಿ.ರಸ್ತೆಯಲ್ಲಿ ಗುಂಡಿಗಳಾದಾಗ, ಅವುಗಳಿಗೆ ತೇಪೆ ಹಚ್ಚಲಾಗುತ್ತದೆ. ಎರಡು ದಿನ ಮಳೆ ಬಂದರೆ ರಸ್ತೆ ಕಿತ್ತುಹೋಗಿ, ಮತ್ತೆ ಗುಂಡಿಗಳು ತೆರೆದುಕೊಳ್ಳುತ್ತವೆ. ಪೂರ್ಣ ಪ್ರಮಾಣದಲ್ಲಿ ಡಾಂಬರು ರಸ್ತೆ ಮಾಡಿದರೆ, ಸಮಸ್ಯೆಗೆ ಪರಿಹಾರ ಸಿಗುತ್ತದೆ' ಎಂದು ರಾಮಣ್ಣ ಹೇಳಿದರು.

ರಸ್ತೆಗಳ ಸಮಸ್ಯೆಯನ್ನು ಪರಿಹರಿಸವಂತೆ ಬಡಾವಣೆಯ ನಿವಾಸಿಗಳು ನಗರಸಭೆ ಆಯುಕ್ತರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ. ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ. ಈಗ ಸ್ಥಳೀಯರೆಲ್ಲ ಸೇರಿ ನಗರಸಭೆ ಕಚೇರಿಯ ಎದುರು ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ.

ಕೆಥೋಲಿಕ್ ಧರ್ಮಸಭೆಯಲ್ಲಿ ಭಾಷಾ ಸಮಸ್ಯೆ ಕೊನೆಗೊಳಿಸಿ: ರಫಾಯಲ್ ರಾಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಥೋಲಿಕ್ ಧರ್ಮಸಭೆಯಲ್ಲಿ ಭಾಷಾ ಸಮಸ್ಯೆಯನ್ನು ಕೊನೆಗೊಳಿಸಿ, ಎಲ್ಲ ಕ್ರೈಸ್ತರನ್ನು ಒಂದೇ ವೇದಿಕೆಯಲ್ಲಿ ತರಬೇಕು ಎಂದು ಕರ್ನಾಟಕ ಕಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್ ಆಗ್ರಹಿಸಿದರು.

ಬೆಂಗಳೂರು ಮಹಾಧರ್ಮಕ್ಷೇತ್ರದ ನೂತನ ಸಹಾಯಕ ಧರ್ಮಾಧ್ಯಕ್ಷರಿಗೆ ಅಖಿಲ ಕರ್ನಾಟಕ ಕೆಥೋಲಿಕ್ ಕ್ರೈಸ್ತರ ಕನ್ನಡ ಸಂಘ, ಕರ್ನಾಟಕ ಕ್ರೈಸ್ತರ ಕನ್ನಡ ಅಭಿಮಾನಿಗಳ ಸಂಘ, ಕನ್ನಡ ಮತ್ತು ಜಾಗೃತಿ ವೇದಿಕೆ ಶುಕ್ರವಾರ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈಗಲೂ ಜೀವಂತವಾಗಿರುವ ಭಾಷಾ ಸಮಸ್ಯೆಯನ್ನು ಇತ್ಯರ್ಥಗೊಳಿಸುವ ಮೂಲಕ ಜನಸಾಮಾನ್ಯರು ಕೂಡ ಕನ್ನಡ ಭಾಷೆ, ಸಂಸ್ಕೃತಿಯನ್ನು ಎತ್ತಿಹಿಡಿಯಬೇಕು ಎಂದು ಒತ್ತಾಯಿಸಿದರು.

ಸಂಘದ ಪದಾಧಿಕಾರಿ ಐಸಾಕ್ ಆರೋಗ್ಯಸ್ವಾಮಿ ಮಾತನಾಡಿ, 'ಕನ್ನಡದ ಮಕ್ಕಳಿಗಾಗಿ ಪ್ರಾದೇಶಿಕ ಗುರುಮಠ ಸ್ಥಾಪಿಸಬೇಕು' ಎಂದು ಸಲಹೆ ನೀಡಿದರು.

ನೂತನ ಸಹಾಯಕ ಧರ್ಮಾಧ್ಯಕ್ಷರಾದ ಧರ್ಮಗುರು ಆರೋಕ್ಯರಾಜ್ ಸತೀಶ್ ಕುಮಾರ್ ಮತ್ತು ಧರ್ಮಗುರು ಜೋಸೆಫ್ ಸೂಸೈನಾದನ್ ಅವರನ್ನು ಗೌರವಿಸಲಾಯಿತು.



ಬೆಂಗಳೂರು ಮಹಾಧರ್ಮಕ್ಷೇತ್ರದ ನೂತನ ಸಹಾಯಕ ಧರ್ಮಾಧ್ಯಕ್ಷರಾಗಿ ನಿಯೋಜನೆಗೊಂಡಿರುವ ಧರ್ಮಗುರು ಜೋಸೆಫ್ ಸೂಸೈನಾದನ್ ಮತ್ತು ಧರ್ಮಗುರು ಆರೋಕ್ಯರಾಜ್ ಸತೀಶ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಅಖಿಲ ಕರ್ನಾಟಕ ಕಥೋಲಿಕ ಕ್ರೈಸ್ತರ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿ ಎ. ದೇವಕುಮಾರ್, ಸದಸ್ಯ ಲೆಲಿನ್ ಸೆಲ್ವರಾಜ್, ಅಧ್ಯಕ್ಷ ರಫಾಯಲ್ ರಾಜ್, ಉಪಾಧ್ಯಕ್ಷ ಪಿ. ಬರ್ತಲೋಮಿಯೊ ಮತ್ತು ಐಸಾಕ್ ಆರೋಗ್ಯ ಸ್ವಾಮಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ

#ಫ್ರೇಮ್ಸ್ ಆಫ್ ಫ್ರೀಡಂ

presented by

ACTIVA

ಬಸವರಾಜ ಮಾಳಿ | ಅಖಿಲ ಎ. ದೇಶಪಾಂಡೆ | ಸಂಗೀತಾ ವೈ. ಡಿ | ಶಾನನ್ ಅಲ್ಮೇಡಾ | ರೇಖಾ ಮಮತಾ | ಉನ್ನತಿ | ಶಾಂತಪ್ರಸಾದ್ | ವಿಜಯ್, ರೀನಾ, ರಿತೀಕ್ಷಾ

ಚಾರ್ವಿ ಎಲ್ ಎನ್

ಅಂಜಲಿ



ಚೈತ್ರಾ ಸಿ ಎಂ

ಚನ್ನಪ್ಪ ಯಾದವ್

ದೀಕ್ಷಾ



ಡಾ ಎ ಪಿ ಜೆ ಅಬ್ದುಲ್ ಕಲಾಂ ಶಾಲೆ

ಆದರ್ಶ ಹೆಗಡೆ

ಸರ್ಕಾರಿ ಪ್ರೌಢಶಾಲೆ, ತೀರ್ಥಹಳ್ಳಿ | ಗೋವಿಂದರಾಜು

ಕೃಷ್ಣಮೂರ್ತಿ ಎಸ್ ನೈಲ್ | ಲಕ್ಷ್ಮೀ ನಾರಾಯಣ

ಮಂಜುನಾಥ್ | ನವೀನ್, ಕಾರ್ತಿಕ್, ಭಾಗ್ಯ

HONDA

Scooter ಅಂದ್ರೆ ACTIVA

HDFC BANK Credit Card
5% ಕ್ಯಾಶ್‌ಬ್ಯಾಕ್ ₹5000## ವರೆಗೆ

IDFC FIRST Bank
ಕಡಿಮೆ ಬಡ್ಡಿ ದರ @7.99%**
ಕಡಿಮೆ EMI ₹2351**

Smart KEY
Smart SAFE
Smart UNLOCK
Smart START
Smart FIND
With H-Smart Technology

ವೀಡಿಯೋ ಆನಂದಿಸಲು, QR ಕೋಡ್ ಸ್ಕ್ಯಾನ್ ಮಾಡಿ.

ACTIVA OVER 3.25 CRORE* HAPPY CUSTOMERS

ಹೆಚ್ಚಿನ ಮಾಹಿತಿಗಾಗಿ
7230032200 ಮಿಸ್ ಕಾಲ್ ನೀಡಿ

ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ

BOOK ONLINE NOW! www.honda2wheelersindia.com

CLICK BOOK RELAX

^ನಿಯಮ ಮತ್ತು ಷರತ್ತುಗಳು ಅನ್ವಯ. ##ಪೈನ್ ಲ್ಯಾಬ್ಸ್ ಮಶಿನ್‌ಗಳ ಮೂಲಕ HDFC ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಮಾಡಿದ EMI ವಹಿವಾಟುಗಳಿಗೆ ಮಾತ್ರ ಎಲ್ಲ ಹೋಂಡಾ ಟೂ-ವೀಲರ್ ಮಾಡೆಲ್‌ಗಳ ಮೇಲೆ ಕ್ಯಾಶ್‌ಬ್ಯಾಕ್ ಕೊಡುಗೆ ಲಭ್ಯವಿರುತ್ತದೆ. ##ಗ್ರಾಹಕರು ರೂ. 5000 ವರೆಗೆ 5% ಇನ್‌ಸ್ಟಂಟ್ ಕ್ಯಾಶ್ ಬ್ಯಾಕ್ ಅನ್ನು ಪಡೆಯಬಹುದಾಗಿದೆ. ##ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್‌ಗೆ ಮಾಡಿದ ಒಂದು ವಹಿವಾಟಿನ ಮೇಲೆ ಮಾನ್ಯವಾಗಿದೆ. ##2024 ಆಗಸ್ಟ್ 31ರ ವರೆಗೆ ಕ್ಯಾಶ್‌ಬ್ಯಾಕ್ ಕೊಡುಗೆ ಮಾನ್ಯವಾಗಿದೆ. ##ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಸ್ಕೀಮ್ ಲಭ್ಯವಿದೆ. **ಹಣಕಾಸು ಯೋಜನೆ ಮತ್ತು ಕ್ರೆಡಿಟ್ ಸೌಲಭ್ಯವು IDFC ಫಸ್ಟ್ ಬ್ಯಾಂಕ್‌ನ ("ಬ್ಯಾಂಕ್") ವಿವೇಚನೆಯ ಮೇರೆಗೆ ಸೀಮಿತ ಅವಧಿಗೆ ಮಾತ್ರ ಲಭ್ಯವಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ. *ಮೂಲ: *ಮೂಲ: HMSI ಆಂತರಿಕ ಡೇಟಾ ಆಧಾರದಲ್ಲಿ 2001 ಜೂನ್ ಇಂದ 2024 ಜೂನ್‌ವರೆಗಿನ ಬ್ರ್ಯಾಂಡ್ Activaದ ಸಂಚಿತ ಮಾರಾಟ ಅಂಕಿಅಂಶ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122050, India; Website: www.honda2wheelersindia.com
Customer Care: customercare@honda.hmsi.in

ತ್ರಿವರ್ಣ ಧ್ವಜದ ಜೊತೆಗಿನ ನಿಮ್ಮೆಲ್ಲರ ಭಾವ ಚಿತ್ರಗಳು ನಮ್ಮ ದೇಶದ ಏಕತೆ ಮತ್ತು ವೈವಿಧ್ಯತೆಯ ಪ್ರತೀಕವಾಗಿವೆ. ಸ್ವಾತಂತ್ರ್ಯ ದಿನದ ಸಂಭ್ರಮಾಚರಣೆಯ ಕ್ಷಣಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಕ್ಕೆ ಧನ್ಯವಾದಗಳು!

ಹರ್ಷಲಾ ರಘುರಾಮ್ | ಕೆ ಜಿ ನಾಗೇಶ್ ರಾವ್ ಮತ್ತು ಲಕ್ಷ್ಮೀದೇವಿ

ಮದನ್ ಹೆಚ್ ಎಂ | ಮಹಾಂತೇಶ ಕೋಳಿವಾಡ

ನಯನಾ ಬಾಲಕೃಷ್ಣ | ನಯನಾ

ಓಂ ಭಂಡಾರಿ | ಟಿ ಎಸ್ ಪ್ರತಿಭಾ

ಪಿ ನಮ್ರತಾ

ಪದ್ಮಶ್ರೀ ಮತ್ತು ಸ್ನೇಹಿತರು | ಸುಚರಿತ ಸಾಹು

ಪ್ರಜ್ವಲ್

ಪ್ರಮೀಳಾ ರಾಜ್

ಪ್ರತೀಕ್ಷಾ ಮತ್ತು ಪ್ರಾರ್ಥನಾ | ಸಂದೀಪ್ ತ್ರಿವೇದಿ

ಪ್ರೀತಂ ನಿಡಸೋಸಿ

ರತ್ನಾಕರ್ | ಸಿದ್ಧಲಿಂಗೇಶ್ವರ

ರೋಹಿತ್ ಭಾನುಶಾಲಿ

ಶರತ್ ಶೇಖರ್ ಎಂ ಎಸ್

ವಿನಾಯಕ ಜೋಗರಿಶೆಟ್ಟರು | ಎಸ್ ವಿ ಎಲ್ ಪಾಟೀಲ್

ಪಪ್ಪು ರಾಜ್ | ಎಸ್ ಎಂ ಕಲೂತಿ ಶಾಲೆ

ಸುಭಾಷಿತ

ಸಾವಿಗೆ ನಾ ಹೆದರೋದಿಲ್ಲ. ಯಾಕೆಂದರೆ, ನಾ ಇರೋತನಕ ಅದು ಬರೋದಿಲ್ಲ. ಅದು ಬಂದಾಗ ನಾ ಇರೋದಿಲ್ಲ.

–ದ.ರಾ.ಬೇಂದ್ರೆ

ವಕ್ಫ್ ತಿದ್ದುಪಡಿ ಮಸೂದೆ: ಶಂಕೆ ನಿವಾರಿಸಿ, ಮನವರಿಕೆ ಮಾಡಿಕೊಡಿ

ದೇಶದ ವಕ್ಫ್ ಮಂಡಳಿಗಳ ನಿರ್ವಹಣೆಯಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತರಲು ಉದ್ದೇಶಿಸಿರುವ ವಕ್ಫ್ (ತಿದ್ದುಪಡಿ) ಮಸೂದೆಯು ಮುಸ್ಲಿಂ ಸಮುದಾಯದಿಂದ ಹಾಗೂ ವಿರೋಧ ಪಕ್ಷಗಳಿಂದ ತೀವ್ರ ಟೀಕೆಗಳಿಗೆ ಗುರಿಯಾಗಿದೆ. ವಕ್ಫ್ ಎಂಬುದು ಇಸ್ಲಾಂ ಧರ್ಮದ ವಿಶಿಷ್ಟವಾದ ದತ್ತಿ ವ್ಯವಸ್ಥೆಗಳಲ್ಲಿ ಒಂದು. ಈ ಮಸೂದೆಯನ್ನು ಈಚೆಗೆ ಮುಕ್ತಾಯಗೊಂಡ ಸಂಸತ್ ಅಧಿವೇಶನದಲ್ಲಿ ಮಂಡಿಸಲಾಗಿದೆ. ಈಗ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಒಪ್ಪಿಸಲಾಗಿದೆ. ಈ ಮಸೂದೆಯು ಅಸಾಂವಿಧಾನಿಕ, ಅಲ್ಪಸಂಖ್ಯಾತ ಸಮುದಾಯದ ವಿರೋಧಿ ಹಾಗೂ ವಿಭಜನಕಾರಿ ಎಂದು ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ. ಮುಸ್ಲಿಂ ಸಮುದಾಯದ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ವಕ್ಫ್‌ಗೆ ಬಹಳ ಮುಖ್ಯವಾದ ಪಾತ್ರ ಇದೆ. ವಕ್ಫ್ ಅಂದರೆ ಮುಸ್ಲಿಮರು ಧಾರ್ಮಿಕ ಹಾಗೂ ದತ್ತಿ ಉದ್ದೇಶಕ್ಕಾಗಿ ನೀಡಿರುವ ಆಸ್ತಿಗಳು. ಇಂತಹ ಆಸ್ತಿಗಳ ಒಟ್ಟು ವಿಸ್ತೀರ್ಣವು 9.4 ಲಕ್ಷ ಎಕರೆ ಎಂದು ಅಂದಾಜಿಸಲಾಗಿದೆ. ಇವುಗಳ ಮೌಲ್ಯ ಅಂದಾಜು ₹1.2 ಲಕ್ಷ ಕೋಟಿ ಆಗಬಹುದು. ಈ ಆಸ್ತಿಗಳು ವಕ್ಫ್ ಮಂಡಳಿಗಳ ನಿಯಂತ್ರಣದಲ್ಲಿ ಇವೆ. ವಕ್ಫ್ ಮಂಡಳಿಗಳು ಆಸ್ತಿ ನಿರ್ವಹಣೆಯನ್ನು ಸರಿಯಾಗಿ ಮಾಡುತ್ತಿಲ್ಲ, ಅಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ, ಮಂಡಳಿಗಳ ಕಾರ್ಯನಿರ್ವಹಣೆ ದಕ್ಷವಾಗಿಲ್ಲ ಎಂಬ ಟೀಕೆಗಳು ಇವೆ. ಮಂಡಳಿಗಳು ದಕ್ಷವಾಗಿ ಕೆಲಸ ನಿರ್ವಹಿಸುವಂತೆ ಮಾಡುವುದು ಈ ಮಸೂದೆಯ ಘೋಷಿತ ಉದ್ದೇಶ. ಆದರೆ, ಈ ಉದ್ದೇಶವನ್ನು ಸೂಕ್ಷ್ಮವಲ್ಲದ ರೀತಿಯಲ್ಲಿ ಈಡೇರಿಸಿಕೊಳ್ಳಲು ಸರ್ಕಾರವು ಮುಂದಾಗಿದೆ.

ಮಂಡಳಿಗಳು ದಕ್ಷವಾಗಿ ಕೆಲಸ ನಿರ್ವಹಿಸುವಂತೆ ಮಾಡುವುದು ಈ ಮಸೂದೆಯ ಘೋಷಿತ ಉದ್ದೇಶ. ಆದರೆ, ಈ ಉದ್ದೇಶವನ್ನು ಸೂಕ್ಷ್ಮವಲ್ಲದ ರೀತಿಯಲ್ಲಿ ಈಡೇರಿಸಿಕೊಳ್ಳಲು ಸರ್ಕಾರವು ಮುಂದಾಗಿರುವುದು ಸರಿಯಲ್ಲ

ಮಸೂದೆಯಲ್ಲಿ ಇರುವ ತಿದ್ದುಪಡಿಗಳು ಕಾನೂನಿನ ರೂಪ ಪಡೆದು ಜಾರಿಗೆ ಬಂದಲ್ಲಿ, ರಾಜ್ಯ ಮಟ್ಟದ ವಕ್ಫ್ ಮಂಡಳಿಗಳ ಬಹುತೇಕ ಅಧಿಕಾರ ಇನ್ನಿಲ್ಲವಾಗುತ್ತದೆ. ಮಂಡಳಿಗೆ ಚುನಾವಣೆ ನಡೆಸುವ ಬದಲು, ಅಲ್ಲಿಗೆ ವ್ಯಕ್ತಿಗಳನ್ನು ನಾಮನಿರ್ದೇಶನದ ಮೂಲಕ ನೇಮಿಸಲು ಅವಕಾಶ ಆಗುತ್ತದೆ. ವಕ್ಫ್ ಜಮೀನುಗಳ ಸರ್ವೆ ಅಧಿಕಾರಿಯಾಗಿ ಜಿಲ್ಲಾಧಿಕಾರಿಯನ್ನು ನೇಮಿಸಲು ಅವಕಾಶ ಇರುತ್ತದೆ. ವಿವಾದ ಉಂಟಾದಲ್ಲಿ ಜಮೀನಿನ ಕುರಿತು ತೀರ್ಮಾನ ಕೈಗೊಳ್ಳುವ ಅಧಿಕಾರವು ಜಿಲ್ಲಾಧಿಕಾರಿಯ ಕೈಯಲ್ಲಿರುತ್ತದೆ. ವಕ್ಫ್ ಆಸ್ತಿಗಳು ಮುಸ್ಲಿಮರಿಗೆ ಸೇರಿದವು. ಆದರೆ, ವಕ್ಫ್ ಮಂಡಳಿಗಳಿಗೆ ಮುಸ್ಲಿಮೇತರರನ್ನು ಕೂಡ ನೇಮಕ ಮಾಡಲು ಮಸೂದೆಯು ಅವಕಾಶ ನೀಡುತ್ತದೆ. ಯಾವುದೇ ವಕ್ಫ್‌ನ ಲೆಕ್ಕಪರಿಶೋಧನೆ ನಡೆಸುವಂತೆ ಮಹಾಲೇಖಪಾಲರಿಗೆ (ಸಿಎಜಿ) ಸೂಚಿಸುವ ಅಧಿಕಾರವು ಸರ್ಕಾರಕ್ಕೆ ದೊರೆಯುತ್ತದೆ. ಈ ಎಲ್ಲ ತಿದ್ದುಪಡಿಗಳ ಪರಿಣಾಮವಾಗಿ ವಕ್ಫ್ ಆಸ್ತಿಗಳ ಆಡಳಿತವು ಮುಸ್ಲಿಂ ಸಮುದಾಯದ ನಿಯಂತ್ರಣವಿರುವ ಮಂಡಳಿಗಳು ಹಾಗೂ ನ್ಯಾಯಮಂಡಳಿಗಳಿಂದ ಸರ್ಕಾರದ ಕೈಗೆ ಸಿಗುತ್ತದೆ. ಬಹಳ ದೊಡ್ಡ ಮಟ್ಟದಲ್ಲಿ ಇರುವ ವಕ್ಫ್ ಆಸ್ತಿಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಈ ತಿದ್ದುಪಡಿಗಳ ಉದ್ದೇಶ ಎಂಬ ಟೀಕೆಯೂ ಇದೆ.

ಮುಸ್ಲಿಂ ಸಮುದಾಯಕ್ಕೆ ಸೇರಿದ ಬಹಳ ಮುಖ್ಯವಾದ ಸಂಸ್ಥೆಯೊಂದರ ಸ್ವರೂಪದಲ್ಲಿ ಮಹತ್ವದ ಬದಲಾವಣೆಗಳನ್ನು ತರುವ ಉದ್ದೇಶವಿರುವ ಮಸೂದೆಯನ್ನು ಆ ಸಮುದಾಯದ ಜೊತೆ ವ್ಯಾಪಕ ಸಮಾಲೋಚನೆ ನಡೆಸದೆಯೇ ರೂಪಿಸಿರುವುದು ಆಶ್ಚರ್ಯ ಮೂಡಿಸುವಂಥದ್ದು. ಮಸೂದೆಯಲ್ಲಿನ ಅಂಶಗಳ ಬಗ್ಗೆ ಸಂಬಂಧಪಟ್ಟ ಎಲ್ಲರ ಜೊತೆಯೂ ಮಾತುಕತೆ ನಡೆಸುವ ಕೆಲಸವು ಸರ್ಕಾರದ ಕಡೆಯಿಂದ ಆಗಬೇಕಿತ್ತು. ಮಸೂದೆಯಲ್ಲಿನ ಕೆಲವು ಅಂಶಗಳ ಬಗ್ಗೆ ಬಿಜೆಪಿಯ ಮಿತ್ರಪಕ್ಷಗಳಿಗೆ ತಮ್ಮದೇ ಆದ ಅನುಮಾನಗಳು, ಪ್ರಶ್ನೆಗಳು ಇವೆ. ಸಂವಿಧಾನದ 25 ಹಾಗೂ 26ನೇ ವಿಧಿಗಳು ಧಾರ್ಮಿಕ ಅಲ್ಪಸಂಖ್ಯಾತರಿಗೆ ನೀಡಿರುವ ಮೂಲಭೂತ ಹಕ್ಕುಗಳನ್ನು ಈ ಮಸೂದೆಯು ಉಲ್ಲಂಘಿಸುತ್ತದೆ ಎಂಬ ಕಳವಳಗಳು ವ್ಯಕ್ತವಾಗಿವೆ. ಆದರೆ, ಈ ಮಸೂದೆಯು ಮುಸ್ಲಿಂ ಸಮುದಾಯದ ಹಿತವನ್ನು ಕಾಯುವ ಕೆಲಸವನ್ನು ಮಾಡುತ್ತದೆ ಎಂದು ಕೇಂದ್ರ ಸರ್ಕಾರ ಹಾಗೂ ಆಡಳಿತಾರೂಢ ಬಿಜೆಪಿ ಹೇಳಿವೆ. ಅದು ನಿಜವೇ ಆಗಿದ್ದರೆ, ಆ ವಿಚಾರವನ್ನು ಮುಸ್ಲಿಂ ಸಮುದಾಯದವರಿಗೆ ಮನವರಿಕೆ ಮಾಡಿಕೊಡುವ ಕೆಲಸ ಆಗಬೇಕು.

ದಿನದ ಟ್ವೀಟ್

ಇದು ಖಂಡಿತ ಸ್ವೀಕಾರಾರ್ಹವಲ್ಲ

ಸ್ವಾತಂತ್ರ್ಯ ದಿನಾಚರಣೆಯ ಈ ವಾರದಲ್ಲಿ ಮಣಿಪುರದ ಜನಸಮೂಹದ ಬಗ್ಗೆ ಒಮ್ಮೆ ಯೋಚಿಸಿ. ಜನಾಂಗೀಯ ಹಿಂಸಾಚಾರದ ನಂತರ ಒಂದು ವರ್ಷಕ್ಕೂ ಹೆಚ್ಚು ಅವಧಿಯಿಂದ 60,000 ಭಾರತೀಯರು ಪರಿಹಾರ ಶಿಬಿರಗಳಲ್ಲಿ ಕೊರಗುತ್ತಿದ್ದಾರೆ. ಇವರಿಗೆ ತಮ್ಮ ಮನೆಗಳಿಗೆ ಮರಳಲು ಇವತ್ತಿಗೂ ಸಾಧ್ಯವಾಗಿಲ್ಲ. ಇದು ಖಂಡಿತವಾಗಿಯೂ ಸ್ವೀಕಾರಾರ್ಹವಲ್ಲ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಮಗಳನ್ನು ಕಳೆದುಕೊಂಡ ಪೋಷಕರ ಪರವಾಗಿ ನಾನು ಪ್ರತಿಭಟನೆ ನಡೆಸುತ್ತಿದ್ದೇನೆ. ಈ ಸಮಾಜದಲ್ಲಿ ಭರವಸೆ ಕಳೆದುಕೊಂಡ ಮಹಿಳೆಯರ ಸಲುವಾಗಿ ಪ್ರತಿಭಟನೆ ನಡೆಸುತ್ತಿದ್ದೇನೆ. ಮುಂದೆ ಈ ಜಗತ್ತಿಗೆ ನನ್ನ ಹೆಣ್ಣುಮಗುವನ್ನು ಸ್ವಾಗತಿಸುವ ಪೋಷಕನಾಗಿ ನಾನು ಪ್ರತಿಭಟಿಸುತ್ತಿದ್ದೇನೆ. ಸಂತ್ರಸ್ತೆಗೆ ನ್ಯಾಯ ಸಿಗಬೇಕು. #BengalHorror #KolkataDoctorDeath #RGKarCollege

(ಕೋಲ್ಕತ್ತದಲ್ಲಿ 32 ವರ್ಷದ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆಸಿ, ಹತ್ಯೆ ಮಾಡಿರುವುದನ್ನು ಖಂಡಿಸಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಭಾಗಿಯಾಗಿರುವ ವಿದ್ಯಾರ್ಥಿಯ ಪ್ರತಿಕ್ರಿಯೆ)

ರೋಷನ್, ವೈದ್ಯ ವಿದ್ಯಾರ್ಥಿ

25 ವರ್ಷಗಳ ಹಿಂದೆ

ಮಂಗಳವಾರ, 17-8-1999

● **ಮಾತುಕತೆ ವಿಫಲ: ದಳ (ಯು) ಪ್ರತ್ಯೇಕ ಸ್ಪರ್ಧೆ ಅನಿವಾರ್ಯ**

ಬೆಂಗಳೂರು, ಆ. 16– ಭಾರತೀಯ ಜನತಾಪಕ್ಷ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟವನ್ನು (ಎನ್‌ಡಿಎ) ಸೇರುವ ಜನತಾದಳದ (ಯುನೈಟೆಡ್) ಮುಖಂಡರ ಪ್ರಯತ್ನ ವಿಫಲವಾಗಿದೆ.

ಜನತಾದಳವನ್ನು ಎನ್‌ಡಿಎ ಜತೆ ಸೇರಿಸಿಕೊಳ್ಳುವ ಮತ್ತು ಬಿಜೆಪಿ ಜತೆ ಸ್ಥಾನ ಹೊಂದಾಣಿಕೆ ವಿಚಾರವಾಗಿ ಲೋಕಶಕ್ತಿ ನಾಯಕ ರಾಮಕೃಷ್ಣ ಹೆಗಡೆ ಹಾಗೂ ಸಮತಾ ಪಕ್ಷದ ನಾಯಕ ಜಾರ್ಜ್ ಫರ್ನಾಂಡಿಸ್ ಅವರು ಇಂದು ದೆಹಲಿಯಲ್ಲಿ ಬಿಜೆಪಿ ಮುಖಂಡರ ಜತೆ ನಡೆಸಿದ ಮಾತುಕತೆಗಳು ಯಾವುದೇ ಫಲ ನೀಡಿಲ್ಲ. ಇದರಿಂದಾಗಿ ಜನತಾದಳ (ಯು) ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುವುದು ಅನಿವಾರ್ಯವಾಗಿದೆ.

● **ಬಿಕ್ಕಟ್ಟು: ಪ್ರಧಾನಿ ಮಧ್ಯಸ್ಥಿಕೆ?**

ಬೆಂಗಳೂರು, ಆ. 16– ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟಕ್ಕೆ ಜನತಾದಳ (ಯು) ಸೇರುವ ಸಂಬಂಧ ಉದ್ಭವಿಸಿರುವ ಬಿಕ್ಕಟ್ಟನ್ನು ಪರಿಹರಿಸಲು ಅಂತಿಮ ಪ್ರಯತ್ನವಾಗಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಮಧ್ಯೆ ಪ್ರವೇಶಿಸಿದ್ದಾರೆ ಎಂದು ಗೊತ್ತಾಗಿದೆ.

ಸ್ಥಾನ ಹೊಂದಾಣಿಕೆ ಸಂಬಂಧ ದೆಹಲಿಯಲ್ಲಿ ಇಂದು ಮಧ್ಯಾಹ್ನ ಬಿಜೆಪಿ ಮುಖಂಡರು ಹಾಗೂ ಲೋಕಶಕ್ತಿಯ ಅಧ್ಯಕ್ಷ ರಾಮಕೃಷ್ಣ ಹೆಗಡೆ ಮತ್ತು ಸಮತಾ ಪಕ್ಷದ ಅಧ್ಯಕ್ಷ ಜಾರ್ಜ್ ಫರ್ನಾಂಡಿಸ್ ಅವರ ನಡುವೆ ನಡೆದ ಮಾತುಕತೆ ವಿಫಲವಾದ ಹಿನ್ನೆಲೆಯಲ್ಲಿ ಆತಂಕಗೊಂಡ ವಾಜಪೇಯಿ ಅವರು ಮಧ್ಯೆ ಪ್ರವೇಶಿಸಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 17-8-1974

● **ನಗರ ಕಾಲೇಜುಗಳಲ್ಲಿ ಭಯಾನಕ ವಾತಾವರಣ: ಶಾಸಕರ ಆರೋಪ**

ಬೆಂಗಳೂರು, ಆ. 16– ಬೆಂಗಳೂರು ಕಾಲೇಜು ವಿದ್ಯಾರ್ಥಿ ವೃಂದದಲ್ಲಿ ಭಯಾನಕ ವಾತಾವರಣ ಉಂಟಾಗಿ ವಿದ್ಯಾರ್ಥಿ ಮಂಡಲಿಯ ಚುನಾವಣೆ ಸಂಬಂಧದಲ್ಲಿ ಕೆಲವು ವಿದ್ಯಾರ್ಥಿಗಳನ್ನು ಜಜ್ಜಿ, ಪ್ರಜ್ಞಾಹೀನ ಮಾಡಲಾಗಿದ್ದರೂ ಸರ್ಕಾರ ನಿಷ್ಕ್ರಿಯವಾಗಿದೆ ಎಂದು ಪಕ್ಷೇತರ ಸದಸ್ಯ ಶ್ರೀ ಎಂ.ಸತ್ಯನಾರಾಯಣರಾವ್ ಅವರು ಇಂದು ವಿಧಾನ ಪರಿಷತ್ತಿನಲ್ಲಿ ಆಪಾದಿಸಿದರು.

‘ಮಹದೇವ ಎಂಬ ನಿಮ್ನವರ್ಗದ ವಿದ್ಯಾರ್ಥಿ ಪ್ರಜ್ಞೆ ಕಳೆದುಕೊಂಡ ಪರಿಸ್ಥಿತಿಯಲ್ಲಿ ಸಿಕ್ಕಿದ. ಕಳೆದ ಶುಕ್ರವಾರ ವೀರಭದ್ರ ಎನ್ನುವ ವಿದ್ಯಾರ್ಥಿಯೂ ಅದೇ ಅವಸ್ಥೆಯಲ್ಲಿ ಬಿದ್ದಿದ್ದ. ದೂರು ಕೊಡುವುದಕ್ಕೂ ವಿದ್ಯಾರ್ಥಿಗಳು ಹೆದರಬೇಕಾದ ಪರಿಸ್ಥಿತಿ ಇದೆ. ಗೂಂಡಾಗಳು ಭಯಾನಕ ವಾತಾವರಣ ಮೂಡಿಸಿದ್ದಾರೆ. ಯಾವ ವಿದ್ಯಾರ್ಥಿ ಚುನಾವಣೆಗೆ ನಿಲ್ಲುತ್ತಾನೆ ಅವನಿಗೆ ಕಷ್ಟ. ಸರ್ಕಾರ ಏನು ಮಾಡುತ್ತಿದೆ?’ ಎಂದು ಪ್ರಶ್ನಿಸಿದರು.

● **ಕದನ ವಿರಾಮಕ್ಕೆ ಟರ್ಕಿ ಆಜ್ಞೆ**

ಅಂಕಾರಾ, ಆ. 16– ಸೈಪ್ರಸ್‌ನಲ್ಲಿ ಕದನ ವಿರಾಮಕ್ಕೆ ಟರ್ಕಿ ಸರ್ಕಾರ ಆಜ್ಞೆ ಮಾಡಿದೆ ಎಂದು ಪ್ರಧಾನಿ ಬುಲೆಂಟ್ ಇಸಿವಿಟ್ ಅವರು ಇಂದು ಇಲ್ಲಿ ಪ್ರಕಟಿಸಿದರು.

ಕದನ ವಿರಾಮವು ಗ್ರೀನ್‌ವಿಚ್ ವೇಳೆ 4.00 ಗಂಟೆಗೆ (ಭಾರತೀಯ ಕಾಲಮಾನ 9.30 ಗಂಟೆ) ಜಾರಿಗೆ ಬರುವುದು.

ಸೈಪ್ರಸ್‌ನಲ್ಲಿ ಟರ್ಕಿ ಪಡೆಗಳು ಮತ್ತಷ್ಟು ಜಯ ಗಳಿಸಿವೆ ಎಂಬ ಸುದ್ದಿ ಹೊರ ಬೀಳುತ್ತಿದ್ದಂತೆಯೇ ಕದನ ವಿರಾಮದ ನಿರ್ಧಾರ ಕೈಗೊಳ್ಳಲಾಯಿತೆಂದು ಟರ್ಕಿ ಪ್ರಧಾನಿ ತಿಳಿಸಿದರು.

ಜನಸಮೂಹದ ಆರೋಗ್ಯ ಸುಧಾರಣೆಯ ಸಂಶೋಧನೆಗಳು ಹೆಚ್ಚಬೇಕು

ಸಂಶೋಧನೆಗಳ ಚಿತ್ತ ಯಾವುದರತ್ತ?

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಯಾವುದೇ ದೇಶದ ವಿಜ್ಞಾನ ಮತ್ತು ತಂತ್ರಜ್ಞಾನ ಸಾಧನೆಗಳನ್ನು ಅರಿಯಲು ಅಲ್ಲಿನ ಸಂಶೋಧನಾ ವಲಯಗಳಲ್ಲಿ ಯಾವ ಯಾವ ವಿಷಯಗಳಲ್ಲಿ ಹೆಚ್ಚಿನ ಸಂಶೋಧನೆ ನಡೆಯುತ್ತಿದೆ ಎಂಬುದನ್ನು ಗಮನಿಸಲಾಗುತ್ತದೆ. ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರತಿ ದೇಶವೂ ನಿರ್ದಿಷ್ಟ ಕಾಲಮಿತಿಯಲ್ಲಿ ಏನೇನು ಪ್ರಗತಿ ಸಾಧಿಸಿದೆ ಎಂಬುದರ ಬಗ್ಗೆ ಅಂತರರಾಷ್ಟ್ರೀಯ ಸಂಶೋಧನಾ ನಿಯತಕಾಲಿಕೆಗಳು ಆಗಾಗ ವರದಿ ಮಾಡುತ್ತಲೇ ಇರುತ್ತವೆ. ಕಾಲೇಜು, ವಿಶ್ವವಿದ್ಯಾಲಯ, ಸಂಶೋಧನಾ ಕ್ಷೇತ್ರಗಳಲ್ಲಿ ದುಡಿಯುವ, ಸ್ವತಂತ್ರವಾಗಿ ಸಂಶೋಧನೆ ನಡೆಸುವ ಸಂಶೋಧಕರು ಪ್ರಕಟಿಸುವ ಪಿಎಚ್.ಡಿ. ಪ್ರಬಂಧಗಳ ಸಂಖ್ಯೆಗೆ ಅನುಗುಣವಾಗಿಯೂ ಆಯಾ ದೇಶದ ಸಂಶೋಧನಾ ಸಾಮರ್ಥ್ಯವನ್ನು ಅಳೆಯಲಾಗುತ್ತದೆ.

ಆರ್ಥಿಕವಾಗಿ ಸದೃಢವಾಗಿರುವ ದೇಶಗಳಲ್ಲಿ ಹಲವು ವಿಷಯಗಳ ಕುರಿತು ಸಂಶೋಧನೆಗಳು ನಿರಂತರ ನಡೆಯುತ್ತವೆ. ದುರ್ಬಲವಾಗಿರುವ ದೇಶಗಳು ಆ ಸಂಶೋಧನೆಗಳ ಫಲಗಳನ್ನು ಬಳಸುವತ್ತ ಗಮನಹರಿಸುತ್ತವೆ.

ಹಾಗಿದ್ದ ಮೇಲೆ ಜಗತ್ತಿನ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳು ಯಾವ ವಿಷಯಗಳ ಬಗ್ಗೆ ತೀವ್ರತರವಾದ ಸಂಶೋಧನೆ ನಡೆಸುತ್ತಿವೆ ಎಂಬುದರ ವಿವರಗಳನ್ನು ಸಂಶೋಧನಾ ಚಟುವಟಿಕೆಗಳ ದತ್ತಾಂಶ ಸಂಗ್ರಹಿಸುವ ‘ವೆಬ್ ಆಫ್ ಸೈನ್ಸ್’ ಸುದೀರ್ಘವಾಗಿ ವರದಿ ಮಾಡಿದೆ. ಈ 20 ವರ್ಷಗಳಲ್ಲಿ ನಡೆದ ಮತ್ತು ಇತ್ತೀಚಿನ ಐದು ವರ್ಷಗಳಲ್ಲಿ ನಡೆದ ಸಂಶೋಧನೆಗಳ ಅಂಕಿ ಅಂಶಗಳನ್ನು ಪ್ರತ್ಯೇಕವಾಗಿ ಪ್ರಕಟಿಸಿದೆ. ಸಂಶೋಧನೆಗಳಿಗೆ ಹೆಚ್ಚಿನ ಪ್ರಾಮುಖ್ಯ ನೀಡುವ ಮಂಚೂಣಿ ದೇಶಗಳ ಪೈಕಿ ನಾಲ್ಕನೇ ಸ್ಥಾನದಲ್ಲಿರುವ ನಾವು ನ್ಯಾನೊ ತಂತ್ರಜ್ಞಾನ, ಕೊರೊನಾ ವೈರಸ್, ಗ್ರೀನ್ ಎನರ್ಜಿ ಮತ್ತು ಕಂಪ್ಯೂಟರ್ ಕ್ಷೇತ್ರದ ಡೀಪ್ ಲರ್ನಿಂಗ್ ವಿಷಯಗಳ ಮೇಲೆ ಸಂಶೋಧನೆ ನಡೆಸುತ್ತಿರುವುದು ವರದಿಯಲ್ಲಿದೆ.

ಜಗತ್ತಿನಾದ್ಯಂತ ಕಳೆದ ಎರಡು ದಶಕಗಳಲ್ಲಿ ಅತಿ ಹೆಚ್ಚು ಸಂಶೋಧನೆಗಳು ಮತ್ತು ಪ್ರಬಂಧಗಳ ಮಂಡನೆ ಕೊರೊನಾ ವೈರಸ್ ಕುರಿತೇ ಆಗಿವೆ. 2019ರಿಂದ 2023ರವರೆಗೆ ಐದು ವರ್ಷಗಳಲ್ಲಿ ಪ್ರಕಟಗೊಂಡಿರುವ ಸಂಶೋಧನೆಗಳ ಪೈಕಿ ಶೇಕಡ 80ರಷ್ಟು ಕೊರೊನಾ ವೈರಸ್ ಕುರಿತು ಆಗಿವೆ. ಸಂಶೋಧನೆಯಲ್ಲಿ ಮಂಚೂಣಿಯಲ್ಲಿರುವ ಅಮೆರಿಕ ದೇಶದ ಸಂಶೋಧನೆಗಳು ಕೊರೊನಾ ಸುತ್ತಲೇ ಇವೆ. ಆದರೆ ಯಾವಾಗಲೂ ಅಮೆರಿಕದೊಂದಿಗೆ ಪೈಪೋಟಿಗೆ ಬೀಳುವ ಚೀನಾದಲ್ಲಿ ಮಾತ್ರ ಕೊರೊನಾ ವೈರಸ್ ಕುರಿತ ಸಂಶೋಧನೆಯ ಬಗ್ಗೆ ಮಾಹಿತಿಯೇ ಇಲ್ಲ!

ಲಭ್ಯವಿರುವ ದತ್ತಾಂಶದಂತೆ ಭಾರತದಲ್ಲಿ ಐದು ವರ್ಷಗಳಲ್ಲಿ ಕೊರೊನಾ ವೈರಸ್, ನ್ಯಾನೊ ತಂತ್ರಜ್ಞಾನ, ಗ್ರೀನ್ ಎನರ್ಜಿ ಮತ್ತು ಕಂಪ್ಯೂಟರ್ ಕ್ಷೇತ್ರದ ಡೀಪ್ ಲರ್ನಿಂಗ್ ಕುರಿತು ಹೆಚ್ಚಿನ ಸಂಶೋಧನೆಗಳು ನಡೆದಿವೆ. ಕೊರೊನಾ ಕುರಿತು ಅತಿ ಹೆಚ್ಚಿನ ಅಂದರೆ 12,629, ನ್ಯಾನೊದ್ರವ (8,496), ಬೆಳ್ಳಿಯ ನ್ಯಾನೊಕಣ (7,050), ಬೆಳಕಿನ ಸಹಾಯದಿಂದ ಶುದ್ಧ ಶಕ್ತಿಯ ಉತ್ಪಾದನೆಗೆ ನೆರವಾಗುವ ಫೋಟೊ ಕೆಟಲಿಸಿಸ್ (6,096), ಯಾಂತ್ರಿಕ ಬುದ್ಧಿಮತ್ತೆಗೆ (ಯಾಂಬು) ನೆರವಾಗುವ ಡೀಪ್ ಲರ್ನಿಂಗ್ ಕುರಿತು 6,056 ಸಂಶೋಧನೆಗಳು ನಡೆದಿವೆ. ಅಮೆರಿಕದಲ್ಲಿ ಕೊರೊನಾ ವೈರಸ್ ಕುರಿತು ವಿಶ್ವದಲ್ಲೇ ಅತಿ ಹೆಚ್ಚು (42,237) ಪ್ರಬಂಧಗಳು ಮಂಡನೆಯಾಗಿವೆ. ಡೀಪ್ ಲರ್ನಿಂಗ್‌ನ 20,857 ಸಂಶೋಧನೆಗಳು ಎರಡನೇ ಸ್ಥಾನದಲ್ಲಿವೆ. ಕ್ಯಾನ್ಸರ್‌ಕಾರಕ ಜೀವಕೋಶಗಳನ್ನು ನಾಶಪಡಿಸುವ ಪ್ರೋಗ್ರಾಮ್ಡ್ ಸೆಲ್ ಡೆತ್- ಪಿಡಿ1 (ನಿರ್ದೇಶಿತ ಜೀವಕೋಶ ಕ್ಷಯ) ಬಗ್ಗೆ 19,176, ಎಚ್‌ಐವಿ ಕುರಿತು 12,826 ಮತ್ತು ಕರುಳಿನ ಸೂಕ್ಷ್ಮ ಜೀವಿಗಳ ಕುರಿತು 12,435 ಸಂಶೋಧನೆಗಳು ಜರುಗಿವೆ.

ಚೀನಾದ ಆದ್ಯತೆ ಡೀಪ್ ಲರ್ನಿಂಗ್ ಕಡೆ ಇದ್ದು, ವಿಶ್ವದಲ್ಲೇ ಅತಿ ಹೆಚ್ಚು ಅಂದರೆ 48,935 ಸಂಶೋಧನೆಗಳು ವರದಿಯಾಗಿವೆ. ನಂತರದ ಸ್ಥಾನದಲ್ಲಿ ಶಕ್ತಿಯನ್ನು ಹಿಡಿದಿಡುವ ಸೂಪರ್ ಕೆಪ್ಯಾಸಿಟರ್, ಫೋಟೊ ಕೆಟಲಿಸಿಸ್, ಆಮ್ಲಜನಕ ಕಡಿತ ಕ್ರಿಯೆ ಕುರಿತು ಸಾವಿರಗಟ್ಟಲೆ ಸಂಶೋಧನೆಗಳು ಜರುಗಿವೆ. ದೇಶದಲ್ಲಿ ನಡೆಯುತ್ತಿರುವ ಪ್ರಮುಖ ಐದು ಸಂಶೋಧನೆಗಳ ಪೈಕಿ ಕೊರೊನಾ ವೈರಸ್‌ಗೆ ಸ್ಥಾನವೇ ಇಲ್ಲ.

ವಾಯುಗುಣ ಬದಲಾವಣೆಯ ಅಡ್ಡ ಪರಿಣಾಮಗಳ ನಿಯಂತ್ರಣಕ್ಕೆ ಬೇಕಾಗುವ ಶುದ್ಧ ಇಂಧನ, ಹಸಿರು ಶಕ್ತಿಗೆ ಸಂಬಂಧಿಸಿದ ಫೋಟೊ ಕೆಟಲಿಸಿಸ್, ಸೂಪರ್ ಕೆಪ್ಯಾಸಿಟರ್ ಮತ್ತು ಆಮ್ಲಜನಕ ಕಡಿತ ಕ್ರಿಯೆಗಳ ಸಂಶೋಧನೆಗಳ ಬಗ್ಗೆ ಭಾರತ ಮತ್ತು ಚೀನಾದಲ್ಲಿ ಹೆಚ್ಚಿನ ಪ್ರಾಮುಖ್ಯ ಇದೆ. ಅಮೆರಿಕ ಮತ್ತು ಯುರೋಪಿನ ದೇಶಗಳು ಈ ವಿಷಯದಲ್ಲಿ ಅಷ್ಟಾಗಿ ತಲೆ ಕೆಡಿಸಿಕೊಂಡಿಲ್ಲ. ಯಾಂತ್ರಿಕ ಬುದ್ಧಿಮತ್ತೆಗೆ ಕಸುವು ತುಂಬಲು ಡೀಪ್ ಮತ್ತು ಮಷೀನ್ ಲರ್ನಿಂಗ್ ಕುರಿತಾದ ಸಂಶೋಧನೆಗಳು ಹೆಚ್ಚಾಗಿ ನಡೆಯುತ್ತಿವೆ. ಹಲವು ಪದರಗಳ ದತ್ತಾಂಶದ ಮೇಲೆ ನಿರ್ಮಿತಗೊಂಡಿರುವ ಯಾಂಬು ತಂತ್ರಜ್ಞಾನವು ಈಗಾಗಲೇ ಮುಖ ಚಹರೆ ಪತ್ತೆ, ಡಿಜಿಟಲ್ ಸೇವಕರ ಮೂಲಕ ಧ್ವನಿ ಪತ್ತೆ ಮಾಡಿ ಉತ್ತರ ನೀಡುವ ಕೆಲಸ ಮಾಡುತ್ತಿದೆ. ಮನರಂಜನೆ ಹಾಗೂ ಶಾಪಿಂಗ್ ವಲಯದಲ್ಲಿ ಗ್ರಾಹಕರಿಗೆ ಇಂಥಿಂಥ ವಸ್ತುಗಳು ಬೇಕಾಗಬಹುದು ಎಂದು ಯಾಂಬು ತಂತ್ರಜ್ಞಾನವು ಮುಂಚಿತವಾಗಿಯೇ ಅಂದಾಜಿಸಿ ಅವರ ಆಯ್ಕೆಗಳನ್ನು ಸುಗಮಗೊಳಿಸಿದೆ. ಅದನ್ನು ಮತ್ತಷ್ಟು ಕರಾರುವಾಕ್ಕುಗೊಳಿಸಲು ವಿಶ್ವದೆಲ್ಲೆಡೆ ಸಂಶೋಧನೆಗಳು ಭರದಿಂದ ಜರುಗುತ್ತಿವೆ. ಯಾಂಬು ಕುರಿತಾದ ಸಂಶೋಧನೆಯಲ್ಲಿ ಚೀನಾ ದೇಶದ ಸಂಶೋಧನೆಗಳು ಅಮೆರಿಕದ ಸಂಶೋಧನೆಗಳಿಗಿಂತ ಎರಡು ಪಟ್ಟು ಹೆಚ್ಚಿವೆ. ಅಲ್ಲದೆ ಈ ಐದು ವರ್ಷಗಳಲ್ಲಿ ವಿಶ್ವದಾದ್ಯಂತ ನಡೆದಿರುವ ಒಟ್ಟು ಸಂಶೋಧನೆಯಲ್ಲಿ ಶೇಕಡ 45ರಷ್ಟು ಪಾಲು ಯಾಂತ್ರಿಕ ಬುದ್ಧಿಮತ್ತೆಯದೇ ಆಗಿದೆ. ಯಾಂಬು ಕುರಿತಾದ ಸಂಶೋಧನೆಗಳ ಪ್ರಮಾಣ ನಮ್ಮಲ್ಲಿ ಹೇಳಿಕೊಳ್ಳುವ ಮಟ್ಟದಲ್ಲಿ ಇಲ್ಲ.



ಬೆಳಕನ್ನು ಬಳಸಿಕೊಂಡು ರಾಸಾಯನಿಕ ಕ್ರಿಯೆಗಳ ವೇಗ ಹೆಚ್ಚಿಸುವುದನ್ನು ಫೋಟೊ ಕೆಟಲಿಸಿಸ್ ಎನ್ನುತ್ತೇವೆ. ಶುದ್ಧ ಶಕ್ತಿಯನ್ನು ಉತ್ಪಾದಿಸಲು ಇದು ಬಹುದೊಡ್ಡ ರೀತಿಯಲ್ಲಿ ನೆರವಾಗುತ್ತದೆ ಮತ್ತು ಈ ಕ್ರಿಯೆಯಿಂದ ಹೊಸ ಬಗೆಯ ಪದಾರ್ಥಗಳನ್ನು ಸೃಷ್ಟಿಸುವುದು ಸುಲಭವಾಗುತ್ತದೆ. ವಿಶ್ವದೆಲ್ಲೆಡೆ ಹಸಿರು ಜಲಜನಕದ ಉತ್ಪಾದನೆ ಮತ್ತು ಬಳಕೆಯು ಮುನ್ನೆಲೆಗೆ ಬರುತ್ತಿದೆ. ಸೂರ್ಯನ ಶಾಖ, ಬೆಳಕು ಮತ್ತು ಗಾಳಿ ಬಳಸಿಕೊಂಡು ಉತ್ಪಾದಿಸುವ ಶುದ್ಧ ಶಕ್ತಿಯನ್ನು ಸ್ಟ್ಯಾಟಿಕ್ (ಸ್ಥಿರ) ವಿದ್ಯುತ್ ಶಕ್ತಿಯನ್ನಾಗಿ ಸಂಗ್ರಹಿಸಿಡಲು ಸೂಪರ್ ಕೆಪ್ಯಾಸಿಟರ್‌ಗಳು ನೆರವಾಗುತ್ತವೆ. ಸಾಮಾನ್ಯ ಬ್ಯಾಟರಿಗಳಲ್ಲಿ ರಾಸಾಯನಿಕ ಶಕ್ತಿಯನ್ನು ಸಂಗ್ರಹಿಸಿಡಲಾಗುತ್ತದೆ. ಇವುಗಳಿಗೆ ಹೋಲಿಸಿದರೆ ಸೂಪರ್ ಕೆಪ್ಯಾಸಿಟರ್‌ಗಳಲ್ಲಿ ಹೆಚ್ಚಿನ ಶಕ್ತಿಯನ್ನು ಹಿಡಿದಿಡಬಹುದು ಮತ್ತು ಬೇಕೆಂದಾಗ ಬೇಗನೆ ಬಳಸಬಹುದು. ಮಾರುಕಟ್ಟೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಿಸುತ್ತಿರುವ ವಿದ್ಯುತ್‌ಚಾಲಿತ ವಾಹನಗಳಿಗೆ ಸೂಪರ್ ಕೆಪ್ಯಾಸಿಟರ್‌ಗಳನ್ನು ಅಳವಡಿಸಿದಲ್ಲಿ ವಾಹನದ ಕ್ಷಮತೆ ಹೆಚ್ಚುತ್ತದೆ ಮತ್ತು ಅತಿ ಕಡಿಮೆ ಸಮಯದಲ್ಲಿ ರಿಚಾರ್ಜ್ ಮಾಡುವ ಅನುಕೂಲವಿದೆ.

ವಿದ್ಯುತ್ ರಸಾಯನ ವಿಜ್ಞಾನದಲ್ಲಿ ಆಮ್ಲಜನಕ ಕಡಿತ ಕ್ರಿಯೆಯು ಅತ್ಯಂತ ಪ್ರಮುಖ ಪ್ರಕ್ರಿಯೆ ಎನಿಸಿದ್ದು, ಮುಂದಿನ ದಿನಗಳಲ್ಲಿ ಬಳಕೆಗೆ ಬರುವ ಇಂಧನಚಾಲಿತ ಬ್ಯಾಟರಿ ಮತ್ತು ಲೋಹ- ಗಾಳಿ ಬ್ಯಾಟರಿಗಳಿಗೆ ಜೀವಾಧಾರದಂತೆ ಇದು ಕೆಲಸ ಮಾಡುತ್ತದೆ. ಇದರ ಕುರಿತು ಹೆಚ್ಚಿನ ಸಂಶೋಧನೆ ನಡೆಸುತ್ತಿರುವ ಚೀನಾ ಆ ಕ್ಷೇತ್ರದ ಏಕಸ್ವಾಮ್ಯ ಗಳಿಸಿಕೊಳ್ಳುವ ಇರಾದೆಯಲ್ಲಿದೆ.

ಅಮೆರಿಕದವರು ಜನರ ಆರೋಗ್ಯದ ಕಡೆ ಹೆಚ್ಚಿನ ಗಮನಹರಿಸಿದ್ದಾರೆ. ಚೀನಾದವರು ಹೊಸ ಬಗೆಯ ಪದಾರ್ಥಗಳ ಸಂಶೋಧನೆಗೆ ಆದ್ಯತೆ ನೀಡುತ್ತಿದ್ದಾರೆ. ಪ್ರೋಗ್ರಾಮ್ಡ್ ಸೆಲ್ ಡೆತ್ ಸಂಶೋಧನೆಯು ನಿರೀಕ್ಷಿತ ಫಲ ನೀಡಿದರೆ ಕ್ಯಾನ್ಸರ್ ಗುಣಪಡಿಸಲು ಆಗದು ಎಂಬ ಮಾತಿಗೆ ಪೂರ್ಣ ವಿರಾಮ ಬೀಳುತ್ತದೆ. ಅಮೆರಿಕ, ಪಿಡಿ ಒನ್ ಸಂಶೋಧನೆಯು ಸೇರಿ ಜನರ ಆರೋಗ್ಯ ಸುಧಾರಿಸುವ ಸಂಶೋಧನೆಗಳಿಗೆ ಹೆಚ್ಚಿನ ಹಣ ನೀಡುತ್ತಿದೆ.

ನಮ್ಮ ದೇಶದ ಸಂಶೋಧನೆಗಳು ನ್ಯಾನೊ ತಂತ್ರಜ್ಞಾನದತ್ತ ಮುಖ ಮಾಡಿ ಬಹಳ ವರ್ಷಗಳೇ ಆಗಿವೆ. ಕಳೆದ 20 ವರ್ಷಗಳಲ್ಲಿ ನ್ಯಾನೊ ತಂತ್ರಜ್ಞಾನದ ಕುರಿತು 15,070 ಸಂಶೋಧನೆಗಳನ್ನು ಕೈಗೊಂಡಿದ್ದೇವೆ. ಉಷ್ಣಾಂಶ ಸಾಗಣೆಗೆ ನೆರವಾಗುವ ದ್ರವ ನ್ಯಾನೊ ಪದಾರ್ಥಗಳು, ಸೂಕ್ಷ್ಮಜೀವಿಗಳ ವಿರುದ್ಧ ಹೋರಾಡಿ ಕ್ಯಾನ್ಸರ್ ಮತ್ತು ಮೈಕ್ರೋಬಿಯಲ್ ಕಾಯಿಲೆ ಗುಣಪಡಿಸಲು ನೆರವಾಗುವ ಬೆಳ್ಳಿಯ ನ್ಯಾನೊ ಕಣಗಳು, ಸೆಮಿಕಂಡಕ್ಟರ್, ಪ್ರಸಾದನ, ಸೆರಾಮಿಕ್ಸ್ ಕ್ಷೇತ್ರದಲ್ಲಿ ಬಳಕೆಯಾಗುವ ಸತುವಿನ ಆಕ್ಸೈಡ್ ನ್ಯಾನೊ ಕಣಗಳ ಬಗೆಗೆ ಹೆಚ್ಚಿನ ಸಂಶೋಧನೆ ಮಾಡುತ್ತಿದ್ದೇವೆ.

ಚುರುಮುರಿ

ಕಾಪಾಡು ದೇವ!

● ಗುರು ಪಿ.ಎಸ್.

‘ಕಾಪಾಡು ಶ್ರೀಸತ್ಯನಾರಾಯಣ... ಪನ್ನಗ ಶಯನ, ಪಾವನ ಚರಣ, ನಂಬಿಹೆ ನಿನ್ನ...’ ಎಂದು ಭಕ್ತಿಪೂರ್ವಕವಾಗಿ ಹಾಡುತ್ತಿದ್ದರು ಕನ್ನಡ ಚಿತ್ರರಂಗದ ಸೀನಿಯರ್ ಪ್ರೊಡ್ಯೂಸರ್ ವಿಜಿ.

‘ಏನ್ ಪ್ರಾಬ್ಲಂ ಸರ್’ ಕೇಳಿದ ವಿತರಕ ಮುದ್ದಣ್ಣ.

‘ನಮ್ ಚಂದನವನದ ಮೇಲೆ ಯಾರದೋ ವಕ್ರದೃಷ್ಟಿ ಬಿದ್ದಿದೆ ಅನಿಸುತ್ತೆ ಮುದ್ದಣ್ಣ. ಒಂದಾದ ಮೇಲೊಂದರಂತೆ ಅಹಿತಕರ ಘಟನೆಗಳು ನಡೀತಾನೇ ಇವೆ. ಅದಕ್ಕೆ, ಹೋಮವನ್ನೋ ಯಾಗವನ್ನೋ ಮಾಡಿಸಬೇಕಂತಿದೀನಿ’ ಕಣ್ತುಂಬಿಕೊಂಡು ಹೇಳಿದರು ವಿಜಿ.

ಸ್ವರ್ಗದಿಂದಲೇ ಇದನ್ನೆಲ್ಲ ಗಮನಿಸುತ್ತಿದ್ದ ಶ್ರೀಮನ್ ನಾರಾಯಣ ತಕ್ಷಣವೇ ನಾರದ ಮುನಿಗಳನ್ನು ಕರೆದು, ‘ಭೂಲೋಕಕ್ಕೆ ಹೋಗಿ, ಕನ್ನಡ ಚಿತ್ರರಂಗದ ಬಗ್ಗೆ ಯಾರು ಏನು ಹೇಳುತ್ತಾರೆ ಕೇಳಿಕೊಂಡು ಬರುವಂತವರಾಗಿ’ ಎಂದರು.

‘ಆಗಲಿ ದೇವ’ ಎಂದವರೇ ಧರೆಗಿಳಿದು ಮನೆಯೊಂದರ ಎದುರು ನಿಂತರು ನಾರದ ಮುನಿ.

‘ಯಾವಾಗಲೂ ಸಿನಿಮಾ ಅಂತೀಯಲ್ಲ ನೀನು. ಈಗ ಮನೆ ಬಳಿಯ ಥಿಯೇಟರ್ ಮುಚ್ಚಿದೆ. ದೂರದ ಮಾಲ್‌ಗೆ ಹೋಗಬೇಕು. ನಾವು ನಾಲ್ಕು ಜನ ಇರೋದ್ರಿಂದ ಆಟೊ ಬದಲು ಕ್ಯಾಬ್ ಮಾಡಲೇಬೇಕು. ಆನ್‌ಲೈನ್‌ನಲ್ಲಿ ಟಿಕೆಟ್ ಬುಕ್ ಮಾಡಿದ್ರೆ ಸರ್ವಿಸ್ ಚಾರ್ಜ್ ಅಂತ ಎಕ್ಸ್‌ಟ್ರಾ ದುಡ್ಡು ತಗೊಳ್ತಾರೆ. ಇನ್ನು, ಸ್ನ್ಯಾಕ್ಸ್‌ಗೆಲ್ಲ ಸೇರಿ ಸಾವಿರಾರು ರೂಪಾಯಿ ಬೇಕು, ಈ ತಿಂಗಳು ಫಿಲಂ ಕ್ಯಾನ್ಸಲ್’ ಹೆಂಡತಿಗೆ ಹೇಳುತ್ತಿದ್ದ ಗೃಹಸ್ಥ.

ನಿರ್ಮಾಪಕರ ಮನೆ ಮುಂದೆ ಬಂದ ಮುನಿಗಳಿಗೆ, ‘ಮೊದಲೆಲ್ಲ ನಿರ್ಮಾಪಕರಿಗೆ ಅನ್ನದಾತ ಅಂತಿದ್ರು, ಈಗಿನ ಹೀರೊಗಳು ತಗಡು ಅಂತಾರೆ. ಚಿತ್ರರಂಗವನ್ನ ದೇವರೇ ಕಾಪಾಡಬೇಕು’ ಎಂದು ಮಾತಾಡಿದ್ದು ಕೇಳಿಸಿತು.

‘ಕರ್ನಾಟಕ, ಕನ್ನಡ, ಕಾವೇರಿ ಅಂದ ಕೂಡಲೆ ಚಿತ್ರರಂಗವೇ ಎದ್ದು ನಿಲ್ಲೋದು. ಈಗ ಅವರವರ ಸಿನಿಮಾ ಬಿಡುಗಡೆ ವೇಳೆ ಮಾತ್ರ ಕಾಣಿಸಿಕೊಳ್ತಾರೆ’ ಅಸಮಾಧಾನದಿಂದ ಹೇಳುತ್ತಿದ್ದರು ಕನ್ನಡಪರ ಹೋರಾಟಗಾರರೊಬ್ಬರು. ಇದೆಲ್ಲವನ್ನೂ ಶ್ರೀಹರಿಗೆ ತಲುಪಿಸಿದರು ನಾರದಮುನಿ.

‘ನಾನು ಚಿತ್ರರಂಗದ ಸಮಸ್ಯೆ ಪರಿಹರಿಸುವುದಿರಲಿ. ಇವರು ನನ್ನ ತಂಟೆಗೆ ಬಾರದಿರಲು ನಾನೇ ಯಾವುದಾದರೂ ಯಾಗ ಮಾಡಿಸಬೇಕಷ್ಟೇ’ ಎಂದು ನಕ್ಕರು ಶ್ರೀಮನ್ ನಾರಾಯಣ.

ಸಂಗತ

ಇಲ್ಲಿದೆ ಜ್ಞಾನಧಾರೆ, ಸವಿಯಬನ್ನಿ!

ಸಾರ್ವಜನಿಕ ಗ್ರಂಥಾಲಯಗಳು ಹಲವಾರು ಕೊರತೆಗಳು, ಸಮಸ್ಯೆಗಳಿಂದ ನಲುಗುತ್ತಿವೆ. ಅವುಗಳ ಪುನಶ್ಚೇತನದ ಅಗತ್ಯವನ್ನು ಪ್ರತಿಪಾದಿಸುತ್ತದೆ ಈ ‘ಗ್ರಂಥಾಲಯದ ಅಂತರಂಗ’

● ರಾಜಕುಮಾರ ಕುಲಕರ್ಣಿ

ಪ್ರಿಯ ಓದುಗ, ನಮಸ್ಕಾರ

ಪ್ರತಿವರ್ಷ ಆಗಸ್ಟ್ 12ರಂದು ನನ್ನ ಕುರಿತು ವಿಚಾರಸಂಕಿರಣ, ಉಪನ್ಯಾಸ, ನನ್ನಲ್ಲಿರುವ ಪುಸ್ತಕಗಳ ಪ್ರದರ್ಶನದಂತಹ ಕಾರ್ಯಕ್ರಮಗಳನ್ನು ದೇಶದಾದ್ಯಂತ ಆಯೋಜಿಸುತ್ತಾರೆ. ‘ಗ್ರಂಥಪಾಲಕರ ದಿನಾಚರಣೆ’ ಎಂಬ ಹೆಸರಿನಲ್ಲಿ ಇವೆಲ್ಲ ನಡೆಯುತ್ತವೆ. ಭಾರತದಲ್ಲಿ ಗ್ರಂಥಾಲಯಗಳ ಬೆಳವಣಿಗೆಯ ಜನಕ ಎಂದೇ ಖ್ಯಾತರಾದ ಎಸ್.ಆರ್.ರಂಗನಾಥನ್ ಅವರ ಜನ್ಮದಿನದ ನಿಮಿತ್ತ ಈ ಎಲ್ಲ ಸಂಭ್ರಮ ಮತ್ತು ಸಡಗರ.

ಗ್ರಂಥಾಲಯಗಳ ಮೂಲಕ ಜ್ಞಾನ ಪ್ರಸಾರದ ಕಾರ್ಯ ಅತ್ಯಂತ ಸುಲಲಿತವಾಗಿ ನಡೆಯಲಿ ಎನ್ನುವ ಮಹತ್ವಾಕಾಂಕ್ಷೆಯಿಂದ ರಂಗನಾಥನ್ ನನ್ನ (ಸಾರ್ವಜನಿಕ ಗ್ರಂಥಾಲಯಗಳ) ಕಾರ್ಯನಿರ್ವಹಣೆಗೆ ಒಂದು ವೈಜ್ಞಾನಿಕ ತಳಹದಿಯನ್ನು ನಿರ್ಮಿಸಿದರೇನೋ ಸರಿ. ಆದರೆ ಕಾಲಾನಂತರದಲ್ಲಿ ನಾನು ಸಮಸ್ಯೆಗಳ ಆಗರವಾದೆ. ಗುಣಮಟ್ಟದ ಪುಸ್ತಕಗಳ ಕೊರತೆ, ಪೀಠೋಪಕರಣಗಳ ಕೊರತೆ, ಸುಸಜ್ಜಿತ ಕಟ್ಟಡ ಇಲ್ಲದಿರುವುದು, ಸಿಬ್ಬಂದಿಯ ಕೊರತೆ ಹಾಗೂ ಅವರ ಅಸಮರ್ಪಕ ಕಾರ್ಯನಿರ್ವಹಣೆ, ತಂತ್ರಜ್ಞಾನವನ್ನು ಬಳಸಿಕೊಳ್ಳದೇ ಇರುವುದು... ಹೀಗೆ ಸಮಸ್ಯೆಗಳ ಸರಮಾಲೆಯನ್ನೇ ಪೋಣಿಸಲಾಗುತ್ತಿದೆ.

ಪ್ರಿಯ ಓದುಗ, ಈ ಮೇಲಿನ ಸಮಸ್ಯೆಗಳೆಲ್ಲ ನಿರಾಧಾರ ಎಂದು ನಾನು ವಾದಿಸುತ್ತಿಲ್ಲ. ಸಮಸ್ಯೆಗಳ ಹುತ್ತದಲ್ಲಿ ನಾನು ಮುಳುಗಿ ಹೋಗಿದ್ದೇನೆ. ಪುಸ್ತಕಗಳ ವಿಷಯವಾಗಿ ಹೇಳುವುದಾದರೆ, ಓದಲು ಗುಣಾತ್ಮಕ ಪುಸ್ತಕಗಳು ನನ್ನಲ್ಲಿರುವುದು ಶೇ 30ರಿಂದ 40 ಮಾತ್ರ. ಉಳಿದ ಪುಸ್ತಕಗಳು ಸಂಖ್ಯಾತ್ಮಕ ದೃಷ್ಟಿಯಿಂದ ಖರೀದಿಸಿದವುಗಳೇ ವಿನಾ ಓದಲು ಯೋಗ್ಯವಾಗಿಲ್ಲ. ನನ್ನಲ್ಲಿರುವ ಪುಸ್ತಕಗಳ ರಾಶಿಯನ್ನು ನೋಡಿ, ಸಾರ್ವಜನಿಕ ಗ್ರಂಥಾಲಯಗಳಲ್ಲಿ ಪುಸ್ತಕಗಳನ್ನು ತಕ್ಕಡಿಯಲ್ಲಿ ತೂಗಿ ಖರೀದಿಸುವರೆಂಬ ವಿಡಂಬನಾತ್ಮಕ ಹೇಳಿಕೆ ಚಾಲ್ತಿಯಲ್ಲಿದೆ. ಈ ಮಾತು ಕೇಳಿದಾಗಲೆಲ್ಲ ನಾನು ಅದೆಷ್ಟು ವೇದನೆಯಿಂದ ನರಳಿದ್ದೇನೆಂದು ಗೊತ್ತೇ ನಿನಗೆ?

ಓದಲು ಯೋಗ್ಯವಲ್ಲದ ಪುಸ್ತಕಗಳ ರಾಶಿಯನ್ನು ನನ್ನ ಒಡಲಲ್ಲಿ ತುಂಬುತ್ತಿರುವವರು ಯಾರು ಎಂದು ದೂಷಿಸಲು ನನ್ನಲ್ಲಿ ದೀರ್ಘ ಪಟ್ಟಿಯೇ ಇದೆ. ಪುಸ್ತಕಗಳ ಪ್ರಕಟಣೆ ಮತ್ತು ಮಾರಾಟಕ್ಕಾಗಿ ರಾಜ್ಯದ ರಾಜಧಾನಿ, ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಮಾತ್ರವಲ್ಲದೆ ಹೋಬಳಿ ಮತ್ತು ಹಳ್ಳಿಗಳಲ್ಲೂ ಪ್ರಕಾಶನ ಸಂಸ್ಥೆಗಳು ಹುಟ್ಟಿಕೊಂಡಿವೆ. ಜೊತೆಗೆ ಲೇಖಕರೇ ಪ್ರಕಾಶಕರಾಗಿ ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ಪರಿಣಾಮವಾಗಿ, ಕನ್ನಡ ಭಾಷೆಯಲ್ಲಿ ಪ್ರತಿವರ್ಷ ಅಸಂಖ್ಯಾತ ಪುಸ್ತಕಗಳು ಪ್ರಕಟಗೊಳ್ಳುತ್ತಿವೆ. ಕೆಲವು ಪ್ರಕಾಶಕರಂತೂ ಎರಡು– ಮೂರು ಪ್ರಕಾಶನ ಸಂಸ್ಥೆಗಳ ಹೆಸರಿನಡಿ ಪುಸ್ತಕಗಳನ್ನು ಪ್ರಕಟಿಸಿ ಲಾಭ ಮಾಡಿಕೊಳ್ಳುತ್ತಿದ್ದಾರೆಂಬ ಆರೋಪ ಬಹಳ ವರ್ಷಗಳಿಂದ ಕೇಳಿಬರುತ್ತಿದೆ. ಆದರೆ ಸಂಬಂಧಿಸಿದ ಇಲಾಖೆ ಕಣ್ಣಿದ್ದೂ ಕುರುಡಾಗಿದೆ. ಹಾಗೆಂದು ನಾನು ಎಲ್ಲ ಪ್ರಕಾಶಕರನ್ನೂ ಕಾಮಾಲೆ ಕಣ್ಣಿನಿಂದ ನೋಡುತ್ತಿಲ್ಲ. ಗುಣಾತ್ಮಕ ಪುಸ್ತಕಗಳನ್ನು ಪ್ರಕಟಿಸುತ್ತಿರುವ ಪ್ರಕಾಶಕರು ನನ್ನಿಂದ ದೂರವೇ ಉಳಿದಿದ್ದಾರೆ.

ಪ್ರಕಾಶಕರ ಹುನ್ನಾರದ ಹಿಂದೆ ನನ್ನ ಇಲಾಖೆಯ ಅಧಿಕಾರಿಗಳ ಪಾತ್ರವಿದೆ ಎನ್ನುವ ಆರೋಪದಲ್ಲಿ ಹುರುಳಿಲ್ಲದೇ ಇಲ್ಲ. ಪ್ರಕಾಶನ ಸಂಸ್ಥೆಗಳೊಂದಿಗೆ ಒಳ ಒಪ್ಪಂದಕ್ಕಿಳಿದು ಕಸದ ರಾಶಿಯನ್ನೆಲ್ಲ ನನ್ನ ಒಡಲಲ್ಲಿ ತುಂಬುತ್ತಿದ್ದಾರೆ. ಪುಸ್ತಕ ಆಯ್ಕೆ ಸಮಿತಿಯವರು ತಮಗೆ ನಿಗದಿಪಡಿಸಿದ ಅಲ್ಪ ಸಮಯದಲ್ಲೇ ರಾಶಿ ರಾಶಿ ಪುಸ್ತಕಗಳನ್ನು ನನಗಾಗಿ ಆಯ್ಕೆ ಮಾಡುತ್ತಾರೆ. ಒಂದೆರಡು ದಿನಗಳಲ್ಲಿ ಸಾವಿರಾರು ಪುಸ್ತಕಗಳನ್ನು ಓದುವುದಾದರೂ ಹೇಗೆ ಸಾಧ್ಯ? ಇನ್ನು ಇರುವ ಅಲ್ಪಸಂಖ್ಯೆಯ ಗುಣಾತ್ಮಕ ಪುಸ್ತಕಗಳಾದರೂ ಓದಲು ಓದುಗರಿಗೆ ದೊರೆಯುತ್ತಿವೆಯೇ ಎನ್ನುವ ಪ್ರಶ್ನೆಗೆ ಮತ್ತದೇ ನಿರಾಶಾದಾಯಕ ಉತ್ತರ. ಪುಸ್ತಕಗಳ ಉಪಯೋಗ ಹೆಚ್ಚಿಸಲು ಗ್ರಂಥಾಲಯ ಸಿಬ್ಬಂದಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿಲ್ಲವೆಂಬ ಕೂಗು ಕೇಳಿಬರುತ್ತಿದೆ. ಗ್ರಂಥಾಲಯದಲ್ಲಿ ಕೆಲಸದ ವೇಳೆ ಸಿಬ್ಬಂದಿಯ ಅನುಪಸ್ಥಿತಿ ಸಾಮಾನ್ಯವಾಗಿದೆ. ಅದೆಷ್ಟೋ ಸಿಬ್ಬಂದಿಗೆ ನನ್ನಲ್ಲಿರುವ ಪುಸ್ತಕಗಳ ಹೆಸರೇ ಗೊತ್ತಿರುವುದಿಲ್ಲ.



ಹಳ್ಳಿಗರಿಗೂ ಪುಸ್ತಕ ಓದುವ ಭಾಗ್ಯ ದೊರೆಯಲೆಂದು ನನ್ನನ್ನು ಗ್ರಾಮೀಣ ಪ್ರದೇಶಗಳಿಗೂ ಒಯ್ದು ಪ್ರತಿಷ್ಠಾಪಿಸಿದ್ದಾರೆ. ಪುಸ್ತಕಗಳ ಸಂಗ್ರಹದ ವಿಷಯವಾಗಿ ಆಯಾ ಗ್ರಾಮೀಣ ಪ್ರದೇಶಗಳಲ್ಲಿ ಅಗತ್ಯವಾದ ಓದಿನ ಬೇಕು-ಬೇಡಗಳ ಸಮೀಕ್ಷೆ ಮಾಡಬೇಕು. ಗ್ರಾಮೀಣ ಗ್ರಂಥಾಲಯಗಳ ಮೇಲ್ವಿಚಾರಕರಿಂದ ಬೇಡಿಕೆಯ ಪಟ್ಟಿಯನ್ನು ಪಡೆಯಬೇಕು. ಆದರೆ ಇಲ್ಲಿಯೂ ಇಲಾಖೆಯದು ಸರ್ವಾಧಿಕಾರಿ ಧೋರಣೆ. ದೂರದ ನಗರದಲ್ಲಿ ಕುಳಿತು ತಾವು ಆಯ್ಕೆ ಮಾಡಿ ಕಳುಹಿಸಿದ ಪುಸ್ತಕಗಳನ್ನೇ ನನ್ನಲ್ಲಿನ ಅಲ್ಮೆರಾಗಳಲ್ಲಿ ತುಂಬುತ್ತಿದ್ದಾರೆ. ಅರೆಕಾಲಿಕ ನೌಕರಿ ಮತ್ತು ಸೀಮಿತ ಸಂಬಳದಿಂದ ಮೇಲ್ವಿಚಾರಕರು ನನ್ನನ್ನು ಸರಿಯಾಗಿ ಪೋಷಿಸುತ್ತಿಲ್ಲ. ಸ್ಥಳೀಯರು ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿರುವ ಪರಿಣಾಮ ಅದೆಷ್ಟೋ ಗ್ರಾಮೀಣ ಪ್ರದೇಶಗಳಲ್ಲಿ ನನ್ನ ಬಾಗಿಲುಗಳು ಸದಾಕಾಲ ಮುಚ್ಚಿರುತ್ತವೆ.

ಇಷ್ಟೆಲ್ಲ ಅಸಂಗತಗಳ ನಡುವೆ ನಾನಿನ್ನೂ ಉಸಿರಾಡುತ್ತಿರುವೆ. ಈಗ ನನಗಿರುವ ಏಕೈಕ ಆಸರೆ ಎಂದರೆ ಓದುಗ ದೊರೆ ನೀನು ಮಾತ್ರ. ಮೊಬೈಲ್ ವ್ಯಸನಿಯಾದ ನೀನು ಈಗ ನನ್ನನ್ನು ನಿರ್ಲಕ್ಷಿಸುತ್ತಿರುವುದು ಸತ್ಯಕ್ಕೆ ಹತ್ತಿರವಾದ ಮಾತು. ತಂತ್ರಜ್ಞಾನದ ಹೊಡೆತಕ್ಕೆ ನಾನು ನಲುಗಿಹೋಗಿದ್ದೇನೆ. ನಾನು ನಶಿಸಿಹೋಗುವ ಮೊದಲು ನನ್ನ ಒಡಲಲ್ಲಿರುವ ಜ್ಞಾನಾಮೃತದ ಧಾರೆ ಸವಿಯಲು ಬಾ. ನಿನ್ನ ಆಗಮನಕ್ಕಾಗಿ ಕಾದಿರುವೆ.

–ಇಂತಿ ನಿನ್ನ ಗ್ರಂಥಾಲಯ

ವಾಚಕರ ವಾಣಿ

ಹಿತ–ಮಿತ ಮಾತು ಮಾಣಿಕ್ಯ

ಸ್ವಾತಂತ್ರ್ಯ ದಿನದಂದು ಕೆಂಪುಕೋಟೆಯಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸುದೀರ್ಘ 98 ನಿಮಿಷಗಳ ಭಾಷಣ ಮಾಡಿದ್ದಾರೆ. ತಮ್ಮ ಭಾಷಣದಲ್ಲಿ ಅವರು ಅನೇಕ ವಿಷಯಗಳು ಕುರಿತು ಪ್ರಸ್ತಾಪಿಸಿದ್ದಾರೆ. ಈ ಹಿಂದಿನ ಪ್ರಧಾನಮಂತ್ರಿಗಳು ಮಾಡಿದ ಭಾಷಣಗಳ ಅವಧಿ ಕುರಿತು ಕೂಡ ವರದಿಯಾಗಿದೆ. ಸ್ವಾತಂತ್ರ್ಯ ದಿನದಂದು ಇಷ್ಟು ಸುದೀರ್ಘ ಅವಧಿಯ ಭಾಷಣಗಳು ಬೇಕೆ ಎಂಬುದೇ ಮುಖ್ಯ ಪ್ರಶ್ನೆ. ಸ್ವಾತಂತ್ರ್ಯದ ದಿನ ಅನೇಕ ಗಣ್ಯಮಾನ್ಯರು, ಹಿರಿಯ ನಾಗರಿಕರು, ವಿದ್ಯಾರ್ಥಿಗಳು ಧ್ವಜಾರೋಹಣಕ್ಕೆ ಪ್ರೇಕ್ಷಕರಾಗಿರುತ್ತಾರೆ. ಇಂಥ ಸಂದರ್ಭದಲ್ಲಿ ಅವರ ತಾಳ್ಮೆ ಪರೀಕ್ಷಿಸುವಷ್ಟು ದೀರ್ಘ ಭಾಷಣ ಅಗತ್ಯವೇ? ಪ್ರಸ್ತಾಪಿಸಲಿರುವ ವಿಷಯಗಳನ್ನು ಇನ್ನೂ ಕ್ಲುಪ್ತವಾಗಿ ಕಡಿಮೆ ಅವಧಿಯಲ್ಲಿ ಹೇಳಬಹುದಲ್ಲವೇ?

ಸರ್ಕಾರದ ನೀತಿ–ನಿರೂಪಣೆ, ಧ್ಯೇಯ– ಧೋರಣೆಗಳ ಕುರಿತು ಹೇಳಲು ಪ್ರಧಾನಿಯವರಿಗೆ ಅನೇಕ ವೇದಿಕೆಗಳಿರುತ್ತವೆ. ಸಂಸತ್ತು ಅದಕ್ಕೆ ಅತಿ ಪ್ರಶಸ್ತವಾದ ವೇದಿಕೆ. ಪ್ರಧಾನಿಯವರ ಮನ್ ಕಿ ಬಾತ್, ಚಾಯ್ ಪೆ ಚರ್ಚಾ ಅಥವಾ ಪಕ್ಷದ ಪದಾಧಿಕಾರಿಗಳು, ಪ್ರತಿನಿಧಿಗಳೊಂದಿಗೆ ಅಥವಾ ಸಮಾಜದ ವಿವಿಧ ಸ್ತರದ ಜನರೊಂದಿಗೆ ನಡೆಸುವ ಆನ್‌ಲೈನ್ ಸಭೆ–ಸಮಾರಂಭ, ಚುನಾವಣಾ ರ್‍ಯಾಲಿಗಳ ಭಾಷಣಗಳು ಕೂಡ ದೀರ್ಘ ಒಮ್ಮುಖ ಮಾತುಗಳಾಗಿರುವುದನ್ನು ನೋಡಬಹುದು. ಅದರ ಬದಲು ದೇಶದ ಮಾಧ್ಯಮ ಪ್ರತಿನಿಧಿಗಳೊಂದಿಗೆ ಅವರು ಆಗಾಗ ಸಂವಾದ ನಡೆಸಿ, ಅವರ ಪ್ರಶ್ನೋತ್ತರಗಳಿಗೆ ಉತ್ತರ ನೀಡಬಹುದು, ದೇಶದ ಜನರೊಂದಿಗೆ ಸಂವಹನ ನಡೆಸಬಹುದು, ವಿಚಾರ ವಿನಿಮಯ ಮಾಡಬಹುದು... ಇವೆಲ್ಲ ಉತ್ತಮ ಮಾರ್ಗ. ಅದರಿಂದ ಜನರ ನಾಡಿಮಿಡಿತವನ್ನು ಕೂಡ ಅರಿಯಲು ಸಹಾಯವಾಗಬಲ್ಲದು. ಮಾಧ್ಯಮಗಳೊಂದಿಗೆ ಪ್ರಧಾನಿಯವರ ಸಂಪರ್ಕವಂತೂ ಈಗ ಮಾಯವಾಗಿಬಿಟ್ಟಿದೆ. ಇಷ್ಟಾಗಿಯೂ ಮಾತನಾಡಲೇಬೇಕಾದ ವಿಷಯಗಳ ಕುರಿತು ಮಾತನಾಡದೇ ಇರುವುದು ಕೂಡ ಅಪಾರ್ಥಕ್ಕೆ ಎಡೆ ಮಾಡಿಕೊಡುತ್ತದೆ. ಈ ಹಿಂದಿನ ಪ್ರಧಾನಮಂತ್ರಿಯವರ ಮೌನ ಅನೇಕ ಟೀಕೆಗಳಿಗೆ ಎಡೆ ಮಾಡಿಕೊಟ್ಟರೆ, ಈಗಿನ ಪ್ರಧಾನಿಯ ಮಾತುಗಳು ಅತಿ ಭಾರದಿಂದ ಬಸವಳಿಯುತ್ತಿವೆ. ಹಿತಮಿತವಾದ ಮಾತುಗಳೇ ಮಾಣಿಕ್ಯವಿದ್ದಂತೆ.

ವೆಂಕಟೇಶ ಮಾಚಕನೂರ, ಧಾರವಾಡ

ಸವಾಲು ಮತ್ತು ನಗು

ರಾಜ್ಯ ವಿಧಾನಸಭೆಗೆ ಹೋದ ವರ್ಷ ಅಷ್ಟೇ ಚುನಾವಣೆ ನಡೆದಿದೆ. ‘ತಾಕತ್ತಿದ್ದರೆ ವಿಧಾನಸಭೆ ವಿಸರ್ಜಿಸಿ ಚುನಾವಣೆ ಎದುರಿಸಿ’ ಎಂದು ಬಿಜೆಪಿಯ ಕೆಲವು ಮುಖಂಡರು ಸವಾಲು ಹಾಕಿದ್ದಾರೆ. ಈ ಸವಾಲು ಸುದ್ದಿ ಓದಿ ನಕ್ಕೂ ನಕ್ಕೂ ಸಾಕಾಯಿತು.

ಎಸ್.ಎನ್. ಕೃಷ್ಣಮೂರ್ತಿ, ಕಡೂರು

ಹೆಸರುಳಿಸುವ ಅಭಿಯಾನ: ಮೂಲ ಅರಿಯಲು ವರದಾನ

ನಾಡಿನ ಊರೂರ ಹೆಸರುಳಿಸುವ ಉದ್ದೇಶದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಭಿಯಾನ ಸ್ವಾಗತಾರ್ಹ. ಇದರ ಅಗತ್ಯ ಇತ್ತು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಜಿ. ನಾರಾಯಣ ಅವರಿಗಿದ್ದ ಇಂತಹ ‘ಮಣ್ಣಿನ’ ಕಳಕಳಿ ಬಹಳಷ್ಟು ವರ್ಷಗಳ ಬಳಿಕ ಈಗ ಮರುಕಳಿಸಿರುವುದಕ್ಕೆ ಸಂತೋಷಪಡಬೇಕಾಗಿದೆ! ಯಾವುದೇ ಊರಿಗೆ ಸುಖಾಸುಮ್ಮನೆ ಆ ಹೆಸರು ಬಂದಿರುವುದಿಲ್ಲ. ಆ ಹೆಸರು ಬಂದ ಕಾಲದಲ್ಲಿ ಈಗಿನಂತೆ ಬರೀ ರಾಜಕೀಯ ದಬ್ಬಾಳಿಕೆ ಇದ್ದಿರುವ ಸಾಧ್ಯತೆಯಿಲ್ಲ. ಕಲ್ಗುಣಿ, ಚೀಣ್ಯ, ಕಾಸರವಾಡಿ, ಕೊತ್ತತ್ತಿ, ಮುಡುಕುತೊರೆ, ಮದ್ದೂರು, ಮಳವಳ್ಳಿ, ಮಳೂರು, ಎಡಕ್ಕುಮರಿ, ಹೆಜ್ಜಾಲ, ಚೆಲ್ಲಘಟ್ಟ, ಹೊಗೆಯ್ಯನಕಲ್ಲು ಎಂಬಂತಹ ಹೆಸರುಗಳಿಗೆ ಗಾಢವಾದ ಹಿನ್ನೆಲೆಯೇ ಇರಬಹುದು. ನಾನು ಈಗಿರುವ ಎಳೇನ್ಹಳ್ಳಿ (ಎಳೆಯನ ಅಥವಾ ಎಳ್ಳಯ್ಯನ ಹಳ್ಳಿ) ಬಗ್ಗೆ ನನಗೆ ಇನ್ನಿಲ್ಲದ ಕುತೂಹಲವಿದೆ. ಆದರೆ ತಿಳಿಸಬಲ್ಲ ಹಿರಿತಲೆಗಳಿಲ್ಲ! ಇಂಥವುಗಳ ಮೂಲವನ್ನು ಅರ್ಥಮಾಡಿಕೊಂಡರೆ, ಆ ಇಡೀ ಪ್ರದೇಶದ ಸ್ವರೂಪ, ಸಂಸ್ಕೃತಿ, ಇತಿಹಾಸ ಅದರಲ್ಲಿ ಅಡಕವಾಗಿರುವ ಸಾಧ್ಯತೆ ಕಂಡುಬರಬಹುದು.

ಆರ್.ಕೆ.ದಿವಾಕರ, ಬೆಂಗಳೂರು

ಆಮೂಲಾಗ್ರ ವಿಶ್ಲೇಷಣೆ ಅಗತ್ಯ

ಇಷ್ಟೊಂದು ಜನಸಂಖ್ಯೆ, ಆದರೆ ಒಂದೂ ಚಿನ್ನ ಇಲ್ಲ– ಹಲವು ವರ್ಷಗಳ ಹಿಂದಿನ ಸುದ್ದಿಯ ಶೀರ್ಷಿಕೆ. ಇತ್ತೀಚಿನ ಒಲಿಂಪಿಕ್ಸ್‌ನಲ್ಲಿ ಅದು ಮರುಕಳಿಸಿದೆ. ಕ್ರೀಡಾಪಟುಗಳಿಗೆ ಸರ್ಕಾರಗಳ ಆರ್ಥಿಕ ಬೆಂಬಲ ಹೆಚ್ಚಿದೆ. ಆದರೆ ಅಶ್ವಿನಿ ಪೊನ್ನಪ್ಪ ಅವರು ಈ ಬಗೆಗೆ ನೀಡಿರುವ ಸ್ಪಷ್ಟೀಕರಣ (ಪ್ರ.ವಾ., ಆ. 14) ಈ ಬೆಂಬಲ ಅಪೇಕ್ಷಿತ ರೂಪದಲ್ಲಿ ಇದೆಯೇ ಎಂಬ ಸಂದೇಹ ಉಂಟುಮಾಡುವಂತಿದೆ.

ಸ್ಪರ್ಧೆಯಲ್ಲಿನ ಸಾಧನೆ ಹಲವು ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಕೆಲವರು ಸ್ವಂತ ಹಣವನ್ನೂ ವಿನಿಯೋಗಿಸುವ ಸ್ಥಿತಿಯಲ್ಲಿ ಇರುತ್ತಾರೆ; ಇನ್ನು ಕೆಲವರಿಗೆ ಸರ್ಕಾರ, ಸಂಘ–ಸಂಸ್ಥೆಗಳ ಆರ್ಥಿಕ ನೆರವು ಅನಿವಾರ್ಯ. ‘ಇಷ್ಟು ಕೋಟಿ ವಿನಿಯೋಗಿಸಿದ್ದೇವೆ. ಆದರೂ ಫಲಿತಾಂಶ ನಿರೀಕ್ಷಿತ ಮಟ್ಟದಲ್ಲಿ ಇಲ್ಲ’ ಎಂಬ ಹೇಳಿಕೆ ಸರಳೀಕರಣ ಆಗುತ್ತದೆ. ಕೆಲವು ಸ್ಪರ್ಧೆಗಳಲ್ಲಿ ಹೊಸಬರು ಸಾಧನೆ ತೋರಿಸಿ ಭರವಸೆ ಮೂಡಿಸಿದ್ದಾರೆ. ಆದರೆ ಹಳಬರು ತಮ್ಮ ಅನುಭವ, ಖ್ಯಾತಿಗೆ ತಕ್ಕ ಪ್ರದರ್ಶನ ನೀಡಿಲ್ಲ. ಒಟ್ಟಿನಲ್ಲಿ ಈ ಬಗೆಗೆ ಸಮಗ್ರ, ಆಮೂಲಾಗ್ರ ವಿಶ್ಲೇಷಣೆ ಅಗತ್ಯ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಮಕ್ಕಳ ಜ್ಞಾನ ವಿಕಸನಕ್ಕೆ ಆದ್ಯತೆ

‘ಬೇಡದ್ದನ್ನು ಕೊಟ್ಟರೆ ದಾನವೆನಿಸದು’ ಶೀರ್ಷಿಕೆಯಡಿ ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ ಬರೆದಿರುವ ಪತ್ರಕ್ಕೆ (ವಾ.ವಾ., ಆ. 16) ಪ್ರತಿಕ್ರಿಯೆ. ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಆಶ್ರಯದಲ್ಲಿ ಈಗಾಗಲೇ 8 ಜಿಲ್ಲೆಗಳ 800 ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಮಕ್ಕಳ ಜ್ಞಾನವಿಕಸನಕ್ಕೆ ಉಪಯುಕ್ತವಾಗುವ ಆಯ್ದ ನೀತಿ ಕಥೆಗಳು, ವಿಜ್ಞಾನ, ಸಚಿತ್ರ ಕಥೆಗಳು, ವ್ಯಾಕರಣ, ಶಬ್ದಕೋಶ, ಮನೋವಿಕಸನ ಹೀಗೆ ಹಲವು ಪ್ರಕಾರಗಳ 80 ಸಾವಿರ ಪುಸ್ತಕಗಳನ್ನು ನೀಡಿದ್ದೇವೆ. ಹಳೆಯದಾದ, ದೂಳಿಡಿದ, ಅನುಪಯುಕ್ತ ಹಾಗೂ ಮಾರಾಟವಾಗದ, ಮಕ್ಕಳೇತರ ಪುಸ್ತಕಗಳನ್ನು ಸ್ವೀಕರಿಸುವುದಿಲ್ಲ. 100 ಪುಸ್ತಕಗಳನ್ನು ಆಯ್ಕೆ ಮಾಡಿ ಬಾಕ್ಸ್‌ಗೆ ತುಂಬಿಸುವಾಗಲೂ ಕೆಲವನ್ನು ತಿರಸ್ಕರಿಸಿದ್ದಿದೆ. ನಾವು ವಿತರಿಸುತ್ತಿರುವ ಪುಸ್ತಕಗಳನ್ನು ಯಾರು ಬೇಕಾದರೂ ಬಂದು ವೀಕ್ಷಿಸಬಹುದು.

ನಿಡಸಾಲೆ ಪುಟ್ಟಸ್ವಾಮಯ್ಯ, ಅಧ್ಯಕ್ಷ, ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಮ್ಮು–ಕಾಶ್ಮೀರ 'ವಿಶೇಷ' ಸಮರ

ಪ್ರಜಾವಾಣಿ ವಾರ್ತೆ

ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಾನಸಭೆ ಚುನಾವಣೆ ಯಾವಾಗ ನಡೆಯಲಿದೆ ಎನ್ನುವ ಕುತೂಹಲಕ್ಕೆ ತೆರೆ ಬಿದ್ದಿದೆ. ಈ ಕೇಂದ್ರಾಡಳಿತ ಪ್ರದೇಶದಲ್ಲಿ ಮೂರು ಹಂತಗಳಲ್ಲಿ ಚುನಾವಣೆ ನಡೆಯಲಿದೆ ಎಂದು ಚುನಾವಣಾ ಆಯೋಗ ಘೋಷಿಸಿದೆ. ಚುನಾವಣೆ ನಡೆಸಬೇಕು ಎಂದು ವಿವಿಧ ವಲಯಗಳಿಂದ ಬಂದ ಒತ್ತಡ, ಚುನಾಯಿತ ಜನಪ್ರತಿನಿಧಿಗಳ ಅಧಿಕಾರಕ್ಕೆ ಕತ್ತರಿ ಹಾಕಲಾಗಿದೆ ಎನ್ನುವ ಆರೋಪಗಳ ನಡುವೆ ಅಲ್ಲಿ ಚುನಾವಣೆ ನಡೆಯಲಿದೆ. ಭಾರತದ ನೆತ್ತಿಯ ಮೇಲಿರುವ ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಯಲಿರುವ ಚುನಾವಣೆಯತ್ತ ಇಡೀ ರಾಷ್ಟ್ರವೇ ದೃಷ್ಟಿ ನೆಟ್ಟಿದೆ

ಭಯೋತ್ಪಾದನೆ, ಹಿಂಸಾಚಾರದ ಕಾರಣಕ್ಕೆ ಸದಾ ಬಂದೂಕಿನ ಭದ್ರತೆಯಲ್ಲಿರುವ ಭಾರತದ ಭೂಶಿರ ಜಮ್ಮು ಮತ್ತು ಕಾಶ್ಮೀರ ಚುನಾವಣೆಗೆ ಸಜ್ಜಾಗುತ್ತಿದೆ. ಸಂವಿಧಾನದ 370ನೇ ವಿಧಿ ಅನ್ವಯ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನ ಮಾನವನ್ನು ಕೇಂದ್ರ ಸರ್ಕಾರ 2019ರಲ್ಲಿ ರದ್ದುಪಡಿಸಿದ ನಂತರ ನಡೆಯುತ್ತಿರುವ ಮೊದಲ ಚುನಾವಣೆ ಇದು.

ಕೇಂದ್ರ ಸರ್ಕಾರ, ಜಮ್ಮು ಮತ್ತು ಕಾಶ್ಮೀರಕ್ಕಿದ್ದ ರಾಜ್ಯದ ವಿಶೇಷ ಸ್ಥಾನಮಾನ ತೆಗೆದುಹಾಕಿ ಅದನ್ನು ವಿಧಾನಸಭೆ-ಯುಳ್ಳ ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿತ್ತು. ಅದರ ಭಾಗವಾಗಿದ್ದ ಲಡಾಖ್ ಅನ್ನೂ (ವಿಧಾನಸಭೆ ಇಲ್ಲದ) ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಲಾಗಿತ್ತು. ಆಗಿನಿಂದಲೂ ಜಮ್ಮು ಮತ್ತು ಕಾಶ್ಮೀರದಲ್ಲಿ ತ್ವರಿತವಾಗಿ ಚುನಾವಣೆ ನಡೆಸಬೇಕು ಎನ್ನುವ ಬೇಡಿಕೆ ವಿವಿಧ ವಲಯಗಳಿಂದ ಕೇಳಿಬರುತ್ತಲೇ ಇತ್ತು.

ಜಮ್ಮು ಮತ್ತು ಕಾಶ್ಮೀರದಲ್ಲಿ ಕೊನೆಯ ಬಾರಿಗೆ ವಿಧಾನಸಭೆ ಚುನಾವಣೆ ನಡೆದಿದ್ದು 2014ರಲ್ಲಿ. ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿಯು (ಪಿಡಿಪಿ) ಬಿಜೆಪಿ ಜತೆಗೆ ಮೈತ್ರಿ ಏರ್ಪಡಿಸಿಕೊಂಡು ಸರ್ಕಾರ ರಚನೆ ಮಾಡಿತ್ತು. ಪಿಡಿಪಿ ನಾಯಕ ಮುಫ್ತಿ ಮಹಮ್ಮದ್ ಸಯೀದ್ ಮುಖ್ಯಮಂತ್ರಿ ಆಗಿದ್ದರು. ಅವರು 2015ರಲ್ಲಿ ನಿಧನರಾದ ನಂತರ ಅವರ ಮಗಳು ಮೆಹಬೂಬ ಮುಫ್ತಿ ಮುಖ್ಯಮಂತ್ರಿ ಗಾದಿಗೇರಿದ್ದರು. 2018ರಲ್ಲಿ ಬಿಜೆಪಿಯು ಪಿಡಿಪಿಗೆ ನೀಡಿದ್ದ ಬೆಂಬಲ ವಾಪಸ್ ಪಡೆಯುವುದರೊಂದಿಗೆ ಸರ್ಕಾರ ಪತನಗೊಂಡಿತ್ತು. ಅಂದಿನಿಂದಲೂ ಚುನಾಯಿತ ಸರ್ಕಾರ ಅಲ್ಲಿಲ್ಲ. ಸುಪ್ರೀಂ ಕೋರ್ಟ್, 2024ರ ಸೆಪ್ಟೆಂಬರ್ 30ರೊಳಗೆ ಚುನಾವಣೆ ನಡೆಸುವಂತೆ ಆದೇಶಿಸಿತ್ತು.

ವಿಧಾನಸಭಾ ಚುನಾವಣೆ ನಡೆದರೂ, ಆಯ್ಕೆಯಾಗುವ ಜನಪ್ರತಿನಿಧಿಗಳಿಗೆ ಸಿಗುವುದು ಅತ್ಯಲ್ಪ ಅಧಿಕಾರ ಎನ್ನುವ ಟೀಕೆ ವ್ಯಕ್ತವಾಗಿದೆ. ಏಕೆಂದರೆ, ಕೇಂದ್ರವು ಜುಲೈ 12ರಂದು ಜಮ್ಮು–ಕಾಶ್ಮೀರ ಪುನರ್‌ವಿಂಗಡಣೆ ಕಾಯ್ದೆಗೆ ತಿದ್ದುಪಡಿ ತಂದು, ಲೆಫ್ಟಿನೆಂಟ್ ಗವರ್ನರ್ ಅವರಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಕಲೆ, ಸಂಸ್ಕೃತಿ, ಶಿಕ್ಷಣ ಸೇರಿದಂತೆ ಕೆಲವೇ ವಲಯಗಳ ಅಧಿಕಾರ ಮಾತ್ರ ಸರ್ಕಾರದ ಕೈಯಲ್ಲಿರುತ್ತದೆ. ಉಳಿದ ಅಧಿಕಾರವನ್ನು ಕೇಂದ್ರದಿಂದ ನೇಮಕವಾಗುವ ಎಲ್‌ಜಿ ಹೊಂದಿರುತ್ತಾರೆ.

ಹಿಂದೆ ರಾಜ್ಯದಲ್ಲಿ ಚುನಾವಣೆಗಳು ನಡೆದಾಗಲೆಲ್ಲ ಉಗ್ರರು ಅವನ್ನು ಗುರಿಯಾಗಿಸಿಕೊಳ್ಳುತ್ತಿದ್ದರು. ಸಹಜವಾಗಿಯೇ ಮತದಾನ ಪ್ರಮಾಣ ಕಡಿಮೆ ಇರುತ್ತಿತ್ತು. ಆದರೆ, ಈ ವರ್ಷ ಏಪ್ರಿಲ್–ಮೇನಲ್ಲಿ ಐದು ಲೋಕಸಭಾ ಕ್ಷೇತ್ರಗಳಿಗೆ ನಡೆದ ಲೋಕಸಭಾ ಚುನಾವಣೆಯು ಬಹುತೇಕ ಶಾಂತಿಯುತವಾಗಿತ್ತು. ಜತೆಗೆ 35 ವರ್ಷಗಳಲ್ಲಿಯೇ ಅತಿಹೆಚ್ಚು ಮತದಾನ ಪ್ರಮಾಣ ದಾಖಲಾಗಿತ್ತು (ಶೇ 58.6). 2019ರ ಲೋಕಸಭಾ ಚುನಾವಣೆಗಿಂತಲೂ ಶೇ 30ರಷ್ಟು ಹೆಚ್ಚು ಮತದಾನವಾಗಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜ್ಯದ ಜನ ವಿಶ್ವಾಸ ಇಟ್ಟಿದ್ದಾರೆ ಎಂದು ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗ ಶ್ಲಾಘಿಸಿತ್ತು. ಶೀಘ್ರದಲ್ಲೇ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಸುವುದಾಗಿ ಭರವಸೆಯನ್ನೂ ನೀಡಲಾಗಿತ್ತು.

ಹಿಂದಿನ ಚುನಾವಣೆಗಳ ವೇಳೆ, ಮತದಾನ ಬಹಿಷ್ಕಾರಕ್ಕೆ ಕರೆ ಕೊಟ್ಟಿದ್ದ ಪ್ರಮುಖ ಪ್ರತ್ಯೇಕತಾವಾದಿ ನಾಯಕರು ಈಗ ಜೈಲಿನಲ್ಲಿದ್ದಾರೆ. ಲೋಕಸಭಾ ಚುನಾವಣೆಯ ನಂತರ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಜನರೂ ಮತದಾನದ ಬಗ್ಗೆ ಉತ್ಸಾಹ ಹೊಂದಿದ್ದಾರೆ. ಇಂಥ ಸ್ಥಿತಿಯಲ್ಲಿ, ಒಂದು ದಶಕದನಂತರ,ಅಲ್ಲಿವಿಧಾನಸಭಾಚುನಾವಣೆನಡೆಯಲಿದೆ.



ಜಮ್ಮು ಮತ್ತು ಕಾಶ್ಮೀರ ಏನು, ಎತ್ತ?

1.22	12.27	9.24	87
ಕೋಟಿ 2011ರ ಜನಗಣತಿಯಂತೆ ಜಮ್ಮು ಮತ್ತು ಕಾಶ್ಮೀರದ ಜನಸಂಖ್ಯೆ	ಲಕ್ಷ ಪರಿಶಿಷ್ಟ ವರ್ಗಗಳಿಗೆ ಸೇರಿದ ಜನರು	ಲಕ್ಷ ಪರಿಶಿಷ್ಟ ಜಾತಿ ಸಮುದಾಯದ ಜನರು	ಲಕ್ಷ ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹತೆ ಪಡೆದಿರುವವರು

114	90	24 *	9	7	5
ಜಮ್ಮು ಮತ್ತು ಕಾಶ್ಮೀರದಲ್ಲಿರುವ ವಿಧಾನಸಭಾ ಕ್ಷೇತ್ರಗಳ ಒಟ್ಟು ಸಂಖ್ಯೆ	ಭಾರತ ನಿಯಂತ್ರಣದ ಜಮ್ಮು – ಕಾಶ್ಮೀರದಲ್ಲಿ ಇರುವ ಕ್ಷೇತ್ರಗಳು	ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ವಿಧಾನಸಭಾ ಕ್ಷೇತ್ರಗಳು	ಪರಿಶಿಷ್ಟ ವರ್ಗಕ್ಕೆ ಮೀಸಲಿರುವ ಕ್ಷೇತ್ರಗಳು	ಪರಿಶಿಷ್ಟ ಜಾತಿಗೆ ಮೀಸಲಿಟ್ಟಿರುವ ಕ್ಷೇತ್ರಗಳು	ನಾಮನಿರ್ದೇಶಿತ ಸದಸ್ಯರ ಸಂಖ್ಯೆ

* ಇಲ್ಲಿ ಚುನಾವಣೆ ನಡೆಯುವುದಿಲ್ಲ. ಆ ಕ್ಷೇತ್ರಗಳು ಖಾಲಿ ಎಂದು ಪರಿಗಣಿಸಲಾಗುತ್ತದೆ

ಜಿಲ್ಲಾವಾರು ಕ್ಷೇತ್ರಗಳ ಸಂಖ್ಯೆ



ಕಾಶ್ಮೀರ ವಿಭಾಗ

46 ಕ್ಷೇತ್ರ ಮರುವಿಂಗಡಣೆಗಿಂತಲೂ ಮೊದಲಿದ್ದ ಕ್ಷೇತ್ರಗಳು

47 ಕ್ಷೇತ್ರ ಮರುವಿಂಗಡಣೆಯ ನಂತರದ ಕ್ಷೇತ್ರಗಳು

ಜಮ್ಮು ವಿಭಾಗ

37 ಕ್ಷೇತ್ರ ಮರುವಿಂಗಡಣೆಗಿಂತಲೂ ಮೊದಲಿದ್ದ ಕ್ಷೇತ್ರಗಳು

43 ಕ್ಷೇತ್ರ ಮರುವಿಂಗಡಣೆಯ ನಂತರದ ಕ್ಷೇತ್ರಗಳು

ಗಡುವು ನೀಡಿದ್ದ 'ಸುಪ್ರೀಂ'

30ರ ಒಳಗೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಡಿಸೆಂಬರ್‌ನಲ್ಲಿ ಆದೇಶ ನೀಡಿತ್ತು. ರಾಜ್ಯಕ್ಕೆ ಸಂವಿಧಾನದ 370ನೇ ವಿಧಿ ಅನ್ವಯ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿದ್ದ ಕೇಂದ್ರ ಸರ್ಕಾರದ ಕ್ರಮವನ್ನು ಎತ್ತಿ-ಹಿಡಿದಿದ್ದ ಸುಪ್ರೀಂ ಕೋರ್ಟ್, ಆದಷ್ಟು ಬೇಗ ರಾಜ್ಯದ ಸ್ಥಾನಮಾನ ಮರಳಿಸುವಂತೆ ಕೇಂದ್ರ ಸರ್ಕಾರಕ್ಕೆ ತಾಕೀತು ಮಾಡಿತ್ತು. ದೇಶದ ಸಂವಿಧಾನವು ಜಮ್ಮು ಮತ್ತು ಕಾಶ್ಮೀರಕ್ಕೆ ಪರಿಪೂರ್ಣವಾಗಿ ಅನ್ವ-ಯವಾಗುತ್ತದೆ ಎಂದು ಹೇಳಿದ್ದ ಸುಪ್ರೀಂ ಕೋರ್ಟ್, 370ನೇ ವಿಧಿಯು ತಾತ್ಕಾಲಿಕ ಉದ್ದೇಶಕ್ಕೆ ಜಾರಿಯಾಗಿತ್ತು ಎಂದು ಹೇಳಿತ್ತು.

ಲೋಕಸಭೆ ಫಲಿತಾಂಶ ದಿಕ್ಸೂಚಿಯೇ?

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಐದು ಕ್ಷೇತ್ರಗಳ ಪೈಕಿ ಬಿಜೆಪಿ ಮತ್ತು ನ್ಯಾಷನಲ್ ಕಾನ್ಫರೆನ್ಸ್ ತಲಾ ಎರಡು ಸ್ಥಾನಗಳನ್ನು ಗೆದ್ದಿದ್ದರೆ, ಒಂದು ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ.

ಜಮ್ಮು ಭಾಗದಲ್ಲಿರುವ ಉಧಂಪುರ ಮತ್ತು ಜಮ್ಮು ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದರೆ, ಕಾಶ್ಮೀರ ವಿಭಾಗದಲ್ಲಿ ಬರುವ ಶ್ರೀನಗರ, ಅನಂತನಾಗ್ ರಾಜೌರಿ ಕ್ಷೇತ್ರಗ-ಳನ್ನು ನ್ಯಾಷನಲ್ ಕಾನ್ಫರೆನ್ಸ್ ತನ್ನದಾಗಿಸಿಕೊಂಡಿತ್ತು. ಬಾರಾಮುಲ್ಲಾ ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿದ್ದ ಅಬ್ದುಲ್ ರಶೀದ್ ಶೇಖ್ ಅವರು ಜಯಭೇರಿ ಬಾರಿಸಿದ್ದರು.

ಪ್ರತಿಷ್ಠಿತ ಕುಟುಂಬಗಳಿಗೆ ಸೋಲು

ಜಮ್ಮು ಮತ್ತು ಕಾಶ್ಮೀರದ ಪ್ರತಿಷ್ಠಿತ ರಾಜಕೀಯ ಕುಟುಂಬಗಳ ಅಭ್ಯರ್ಥಿಗಳನ್ನು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಮತದಾರರು ತಿರಸ್ಕರಿಸಿದ್ದರು.

ನ್ಯಾಷನಲ್ ಕಾನ್ಫರೆನ್ಸ್ ಎರಡು ಕ್ಷೇತ್ರಗಳಲ್ಲಿ ಗೆದ್ದಿದ್ದರೂ, ಅಬ್ದುಲ್ಲಾ ಕುಟುಂಬದ ಕುಡಿ, ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಬಾರಾಮುಲ್ಲಾ ಕ್ಷೇತ್ರದಲ್ಲಿ ಸೋತಿದ್ದರು.

ಪಿಡಿಪಿಗೆ ಈ ಚುನಾವಣೆಯಲ್ಲಿ ಒಂದು ಕ್ಷೇತ್ರದಲ್ಲೂ ಗೆಲ್ಲಲು ಸಾಧ್ಯವಾಗಿಲ್ಲ. ಅದರ ಮುಖ್ಯಸ್ಥೆ, ಮಾಜಿ ಮುಖ್ಯಮಂತ್ರಿ ಮೆಹಬೂಬ ಮುಫ್ತಿಯವರೇ ಅನಂತನಾಗ್–ರಾಜೌರಿ ಕ್ಷೇತ್ರದಿಂದ ಸೋಲನುಭವಿಸಿದ್ದರು.

ವಿಶೇಷ ಸ್ಥಾನಮಾನ ತೆರವುಗೊಳಿಸಿದ ನಂತರ ಜಮ್ಮು ಮತ್ತು ಕಾಶ್ಮೀರದಲ್ಲಿ ಹಲವು ಬದಲಾವಣೆಗಳಾಗಿವೆ. ಲೋಕಸಭಾ ಚುನಾವಣೆ ಫಲಿತಾಂಶವನ್ನು ನೋಡಿದರೆ ಮತದಾರರು ಕುಟುಂಬ ರಾಜಕಾರಣವನ್ನು ದೂರ ಇಟ್ಟಂತೆ ಕಾಣುತ್ತದೆ. ಈ ಫಲಿತಾಂಶವು ವಿಧಾನಸಭಾ ಚುನಾವಣೆಯ ಮೇಲೆ ಪರಿಣಾಮ ಬೀರಲಿದೆಯೇ ಎಂಬುದರ ಬಗ್ಗೆ ರಾಜಕೀಯ ವಲಯದಲ್ಲಿ ಚರ್ಚೆಗಳು ನಡೆಯುತ್ತಿವೆ.

ನಿರ್ಣಾಯಕವಾಗಬಹುದಾದ ಅಂಶಗಳು...

- ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನದ ರದ್ದತಿ
- ಎಲ್‌ಜಿಗೆ ಹೆಚ್ಚಿನ ಅಧಿಕಾರ ನೀಡುವ ಜಮ್ಮು–ಕಾಶ್ಮೀರ ಪುನರ್‌ವಿಂಗಡಣೆ ಕಾಯ್ದೆಯ ತಿದ್ದುಪಡಿ
- ವಿಶೇಷ ಸ್ಥಾನಮಾನ ರದ್ದತಿಯ ನಂತರದ ಎಲ್‌ಜಿ ಆಡಳಿತ ವೈಖರಿ
- ಜಮ್ಮು ಮತ್ತು ಕಾಶ್ಮೀರದಲ್ಲಿನ ಭದ್ರತಾ ವ್ಯವಸ್ಥೆ, ಹೆಚ್ಚಿದ ಸೇನಾ ಸಿಬ್ಬಂದಿ – ಪೊಲೀಸರ ಹತ್ಯೆ
- ಹೊರ ರಾಜ್ಯದ ಕಾರ್ಮಿಕರು, ಪ್ರವಾಸಿಗರ ಮೇಲೆ ನಡೆಯುತ್ತಿರುವ ದಾಳಿಗಳು
- ಒಳನುಸುಳುವಿಕೆ, ಜಮ್ಮು ಪ್ರಾಂತ್ಯದಲ್ಲಿ ಹೆಚ್ಚಾದ ಹಿಂಸಾಚಾರ
- ರಾಜ್ಯದಾದ್ಯಂತ ತೀವ್ರವಾಗಿರುವ ವಿದ್ಯುತ್ ಸಮಸ್ಯೆ
- 2019ರ ನಂತರ ರಾಜ್ಯದಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳು

ಚುನಾವಣೆ ಮೇಲೆ ಉಗ್ರರ ಕರಿ ನೆರಳು

ಜಮ್ಮು–ಕಾಶ್ಮೀರ ವಿಶೇಷ ಸ್ಥಾನಮಾನ ಹೊಂದಿದ್ದ ರಾಜ್ಯವಾಗಿದ್ದಾಗ ಹೆಚ್ಚು ಭಯೋತ್ಪಾದನಾ ಕೃತ್ಯಗಳು ನಡೆಯುತ್ತಿದ್ದದ್ದು ಕಾಶ್ಮೀರ ಕಣಿವೆಯಲ್ಲಿ. ವಿಶೇಷ ಸ್ಥಾನಮಾನದ ರದ್ದತಿಯ ನಂತರ ಒಂದಷ್ಟು ಕಾಲ ಉಗ್ರ ದಾಳಿಗಳು ಕಡಿಮೆಯಾದಂತೆ ಕಂಡಿತು. ಆದರೆ, ಇತ್ತೀಚೆಗೆ ಉಗ್ರರು ತಮ್ಮ ತಂತ್ರಗಾರಿಕೆ ಬದಲಿಸಿದ್ದು, ಜಮ್ಮುವಿನತ್ತ ಗಮನ ಕೇಂದ್ರೀಕರಿಸಿದ್ದಾರೆ. ಅದರಲ್ಲೂ ಪೂಂಛ್, ರಾಜೌರಿ, ಕಠುವಾ, ರಿಯಾಸಿ, ಉಧಂಪುರ ಜಿಲ್ಲೆಗಳಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗಿವೆ.

ಚುನಾವಣೆಯ ಕಾಲದಲ್ಲಿ ಉಗ್ರರು ಹಾಗೂ ಭಾರತ ವಿರೋಧಿ ಶಕ್ತಿಗಳು ಪಿತೂರಿ ನಡೆಸಲು ಪ್ರಯತ್ನಿಸುವುದು ಸಹಜ. ಈ ದಿಸೆಯಲ್ಲಿ ಹೆಚ್ಚು ಭದ್ರತಾ ಪಡೆಗಳನ್ನು ನಿಯೋಜಿಸಿ, ಚುನಾವಣಾ ಪ್ರಕ್ರಿಯೆಯನ್ನು ನಿರ್ವಿಘ್ನವಾಗಿ ನಡೆಸಲು ಚುನಾವಣಾ ಆಯೋಗವು ಸಜ್ಜಾಗಿದೆ.

ಆಧಾರ: ಪಿಟಿಐ, ಕ್ಷೇತ್ರಮರುವಿಂಗಡಣೆ ಆಯೋಗದ ಅಂತಿಮ ವರದಿ, ಸಂಸತ್ತಿನಲ್ಲಿ ಗೃಹಸಚಿವ ಅಮಿತ್ ಶಾ ಹೇಳಿಕೆ

ಕ್ಷೇತ್ರ ಮರುವಿಂಗಡಣೆ: ಬದಲಾಗುವುದೇ ರಾಜಕೀಯ ಸಮೀಕರಣ?

ವಿಶೇಷ ಸ್ಥಾನಮಾನ ರದ್ದಾದ ಬಳಿಕ ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದಲ್ಲಿನ ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಸರ್ಕಾರ ಆಯೋಗ ರಚಿಸಿತ್ತು. ರಂಜನಾ ಪ್ರಕಾಶ್ ದೇಸಾಯಿ ಅಧ್ಯಕ್ಷತೆಯ ಆಯೋಗವು 2020ರ ಮಾರ್ಚ್‌ನಲ್ಲಿ ತನ್ನ ಕೆಲಸ ಆರಂಭಿಸಿತ್ತು. ಜನಸಂಖ್ಯೆಯ ಆಧಾರದಲ್ಲಿ (2011ರ ಜನಗಣತಿ) ಕ್ಷೇತ್ರಗಳನ್ನು ಮರುವಿಂಗಡಿಸಿ 2022ರ ಮೇ 5ರಂದು ಅಂತಿಮ ವರದಿಯನ್ನು ಸಲ್ಲಿಸಿತ್ತು.

ಅಲ್ಲಿಯವರೆಗೂ 107 ಇದ್ದ (ಪಾಕ್ ಆಕ್ರಮಿತ ಕಾಶ್ಮೀರಕ್ಕೆ ಮೀಸಲಿಟ್ಟಿರುವ 24 ಕ್ಷೇತ್ರಗಳೂ ಸೇರಿ) ವಿಧಾನಸಭಾ ಕ್ಷೇತ್ರಗಳ ಸಂಖ್ಯೆ ಕ್ಷೇತ್ರಮರುವಿಂಗಡಣೆಯ ನಂತರ 114ಕ್ಕೆ ಏರಿವೆ. ಹಿಂದೆ ಪರಿಶಿಷ್ಟ ಪಂಗಡಕ್ಕೆ ಮೀಸಲು ಕ್ಷೇತ್ರಗಳಿರಲಿಲ್ಲ. ಈಗ ಒಂಬತ್ತು ಕ್ಷೇತ್ರಗಳು ಮೀಸಲಾಗಿವೆ. ಪರಿಶಿಷ್ಟ ಜಾತಿಯವರಿಗೆ ಏಳು ಕ್ಷೇತ್ರಗಳನ್ನು ಮೀಸಲಿಡಲಾಗಿದೆ. ಹಿಂದೆ ಆರು ಮೀಸಲು ಕ್ಷೇತ್ರಗಳಿದ್ದವು.

ಕ್ಷೇತ್ರಮರುವಿಂಗಣೆ ಪ್ರಕ್ರಿಯೆಯು ಪಿಡಿಪಿ, ನ್ಯಾಷನಲ್ ಕಾನ್ಫರೆನ್ಸ್, ಕಾಂಗ್ರೆಸ್ ಸೇರಿದಂತೆ ಜಮ್ಮು ಮತ್ತು ಕಾಶ್ಮೀರದಲ್ಲಿನ ರಾಜಕೀಯ ಪಕ್ಷಗಳಿಗೆ ಸಮಾಧಾನ ತಂದಿಲ್ಲ. ಈಗ ನಡೆದಿರುವ ಮರುವಿಂಗಡಣೆಯಿಂದ ಬಿಜೆಪಿಗೆ ಅನುಕೂಲವಾಗಲಿದೆ ಎಂಬುದು ಅವುಗಳ ಆರೋಪ. ಕ್ಷೇತ್ರಮರುವಿಂಗಡ-ಣಾ ಆಯೋಗದ ಕರಡು ವರದಿಯನ್ನು ಈ ಪಕ್ಷಗಳು ತಿರಸ್ಕರಿಸಿದ್ದವು. ಅಂತಿಮ ವರದಿ ಸಲ್ಲಿಸುವುದಕ್ಕೂ ಮೊದಲು ಆಯೋಗ ಜಮ್ಮು ಮತ್ತು ಕಾಶ್ಮೀರದಲ್ಲಿ ಅಭಿಪ್ರಾಯ ಸಂಗ್ರಹಿಸಲು ಆಯೋಜಿಸಿದ್ದ ಕಾರ್ಯಕ್ರ-ಮಗಳನ್ನು ಪಿಡಿಪಿ, ನ್ಯಾಷನಲ್ ಕಾನ್ಫರೆನ್ಸ್, ಕಾಂಗ್ರೆಸ್ ಬಹಿಷ್ಕರಿಸಿದ್ದವು. ಈ ಕಾರ್ಯಕ್ರಮ-ಗಳಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸದ್ದರು ಎಂಬ ಆರೋಪವೂ ಕೇಳಿಬಂದಿತ್ತು.

ಅಲ್ಲಿನ ರಾಜಕೀಯ ಪಕ್ಷಗಳ ಆರೋಪಕ್ಕೆ ಪೂರಕ ಎಂಬಂತೆ, ಬಿಜೆಪಿ ಪ್ರಾಬಲ್ಯ ಇರುವ ಜಮ್ಮು ಭಾಗದಲ್ಲೇ ಆರು ಕ್ಷೇತ್ರಗಳು ಹೆಚ್ಚಾಗಿವೆ. ಬಿಜೆಪಿಗೆ ಹೆಚ್ಚು ಬೆಂಬಲ ಇಲ್ಲದ ಕಾಶ್ಮೀರ ಭಾಗದಲ್ಲಿ ಕ್ಷೇತ್ರ ಮರುವಿಂಗಡಣೆಯ ನಂತರ ಒಂದು ಕ್ಷೇತ್ರ ಮಾತ್ರ ಜಾಸ್ತಿಯಾಗಿದೆ. ಬಿಜೆಪಿ ಗೆದ್ದಿದ್ದ ಕ್ಷೇತ್ರಗಳನ್ನೇ ವಿಭಜಿಸಿ ಹೊಸ ಕ್ಷೇತ್ರಗಳನ್ನು ರಚಿಸಲಾಗಿದೆ. ವಿರೋಧ ಪಕ್ಷಗಳ ಪ್ರಾಬಲ್ಯವಿರುವ ಕಡೆಗಳಲ್ಲಿ ಕೆಲವು ಕ್ಷೇತ್ರಗಳನ್ನು ರದ್ದು ಮಾಡಲಾಗಿದೆ ಇಲ್ಲವೇ ಆ ಕ್ಷೇತ್ರಗಳನ್ನು ಬೇರೆ ಕ್ಷೇತ್ರಗಳ ಜತೆಗೆ ವಿಲೀನ ಮಾಡಲಾಗಿದೆ. ಇದಲ್ಲದೇ ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟಿರುವ ಒಂಬತ್ತು ಕ್ಷೇತ್ರಗಳ ಪೈಕಿ ಆರು ಕ್ಷೇತ್ರಗಳು ಬಿಜೆಪಿ ಪ್ರಾಬಲ್ಯವಿರುವ ಜಿಲ್ಲೆಗಳಿಗೆ ಸೇರಿವೆ.

ಗಟ್ಟಿ ಕಥೆಯಿಲ್ಲದೆ ಗೌಣವಾದ 'ಗೌರಿ'

ಮಕ್ಕಳು ಯಾವುದೇ ಕ್ಷೇತ್ರದಲ್ಲಿ ಸಾಧನೆಗೆ ಹೆಜ್ಜೆ ಇಡುತ್ತಾರೆ ಎಂದರೆ ಹೆತ್ತವರಿಗೆ ಹೆಮ್ಮೆ, ಖುಷಿ, ಉತ್ಸಾಹ ಸಹಜ. ಆದರೆ ಕೆಲವೊಮ್ಮೆ ಪಾಲಕರ ಅತ್ಯುತ್ಸಾಹ ಮಕ್ಕಳ ಪ್ರತಿಭೆ ಮೇಲೆ ಪರಿಣಾಮ ಬೀರುವ ಅಪಾಯವೂ ಇದೆ ಎಂಬುದಕ್ಕೆ ನಿದರ್ಶನದಂತಿದೆ 'ಗೌರಿ' ಸಿನಿಮಾ. ಚಿತ್ರದ ನಿರ್ದೇಶಕ ಇಂದ್ರಜಿತ್ ಲಂಕೇಶ್ ತಮ್ಮ ಪುತ್ರ ಹಾಗೂ ಚಿತ್ರದ ನಾಯಕ ಸಮರ್ಜಿತ್‌ರ ಎಲ್ಲ ಬಗೆಯ ಪ್ರತಿಭೆಯನ್ನೂ ಒಂದೇ ಚಿತ್ರದಲ್ಲಿ ತೋರಿಸಬೇಕೆಂಬ ಧಾವಂತಕ್ಕೆ ಬಿದ್ದಂತೆ ಕಾಣುತ್ತದೆ. ಹೀಗಾಗಿ ಚಿತ್ರದಲ್ಲಿ ಪಾತ್ರಕ್ಕೆ ತಕ್ಕ ಕಥೆ ಕಾಣುತ್ತದೆ ಹೊರತು, ಕಥೆಗೆ ತಕ್ಕದಾದ ಪಾತ್ರವಲ್ಲ!

ಖಾಸಗಿ ವಾಹಿನಿಯಲ್ಲಿ ನಡೆಯುವ ರಿಯಾಲಿಟಿ ಶೋ, ಅದರಲ್ಲಿ ಬರುವ ಪಾತ್ರವೇ ಚಿತ್ರದ ಕಥೆ. ಹಾಗಂತ ಅದೇ ಪೂರ್ತಿ ಕಥೆಯಲ್ಲ. ದೊಡ್ಡ ವೇದಿಕೆಯಲ್ಲಿ ಹಾಡುಗಾರನಾಗಿ ಮಿಂಚಬೇಕೆಂಬ ಹಳ್ಳಿ ಹುಡುಗನ ಕನಸೇ 'ಗೌರಿ'ಯ ಕಥೆ. ಈ ಗೌರಿ ಯಾರು ಎಂದರೆ ಕನ್ನಡದ ರಿಯಾಲಿಟಿ ಶೋಗಳಲ್ಲಿ ಪ್ರತಿ ಸೀಸನ್‌ನಲ್ಲಿಯೂ ಕಾಣಿಸಿಕೊಳ್ಳುವ ದೃಷ್ಟಿದೋಷ, ಶ್ರವಣ ದೋಷ ಇತ್ಯಾ-ದಿಗಳನ್ನು ಹೊಂದಿರುವ ಪ್ರತಿಭಾವಂತ ಹಾಡುಗಾರರ ಪ್ರತಿನಿಧಿ! ತನ್ನ ತಾಯಿಯಿಂದ ನಾಯಕ ಗೌರಿಯೂ ಹುಟ್ಟಿನಿಂದಲೇ ಶ್ರವಣ ದೋಷ ಹೊಂದಿರುತ್ತಾನೆ. ಆತನಿಗೆ ತಾನೊಬ್ಬ ಹಾಡುಗಾರನಾಗಬೇಕೆಂಬ ಕನಸು. ಅದು ಸಾಧ್ಯವಾಗುತ್ತದೆಯೋ ಇಲ್ಲವೋ ಎಂಬುದೇ ಚಿತ್ರಕಥೆ.

ನಾಯಕ ಮಠಕ್ಕೆ ಹೋಗಿ ಸಂಗೀತಾಭ್ಯಾಸ ಮಾಡುವ ದೃಶ್ಯಗಳು ಗವಾಯಿಯವರ ಆಶ್ರಮದ ಚಿತ್ರಣವನ್ನು ಕಣ್ಣುಮುಂದೆ ತರುತ್ತದೆ.

ಗೌರಿ ತಂದೆಯಾಗಿ ಸಂಪತ್ ಮೈತ್ರೇಯ, ತಾಯಿಯಾಗಿ ಮಾನಸಿ ಸುಧೀರ್ ನಟಿಸಿದ್ದಾರೆ. ಮಂಡ್ಯ ಭಾಗದ ಜೋಗಪ್ಪನಾಗಿ ಸಂಪತ್ ಮೈತ್ರೇಯ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಅವರನ್ನು ಪೂರ್ತಿಯಾಗಿ ಬಳಸಿಕೊ-ಳ್ಳುವಲ್ಲಿ ನಿರ್ದೇಶಕರು ಎಡವಿದ್ದಾರೆ. ಶ್ರವಣ ದೋಷ ಹೊಂದಿರುವ ತಾಯಿಯಾಗಿ ಮಾನಸಿ ಸುಧೀರ್ ಕೆಲವೆಡೆ ಭಾವುಕವಾಗಿಸುತ್ತಾರೆ. ಮುಖ್ಯಪಾತ್ರಗಳ ಶ್ರವಣ ದೋಷ ಹಲವು ದೃಶ್ಯಗಳಲ್ಲಿ ಸಹಜ ಎನ್ನಿಸುವುದಿಲ್ಲ. ನಾಯಕಿ ಸಾನ್ಯಾ ಅಯ್ಯರ್ ರೊಮ್ಯಾಂಟಿಕ್ ದೃಶ್ಯಗಳಲ್ಲಿ ನಾಯಕನಿಗೆ ಸರಿಯಾದ ಜೋಡಿ ಎನ್ನಿಸುತ್ತಾರೆ. ಆಕೆಯ ತಂದೆಯಾಗಿ ಸಿಹಿಕಹಿ ಚಂದ್ರುಗೆ ಹೆಚ್ಚು ಕೆಲಸವಿಲ್ಲ.

ನಾಯಕ ಸಮರ್ಜಿತ್ ನಟನೆಯಿಂದ ಬಹಳ ಭರವಸೆ ಮೂಡಿಸುತ್ತಾರೆ. ನೋಟದಿಂದಲೂ, ನಟನೆಯಿಂದಲೂ ಪ್ರೇಮಕಥಾ ಹಂದರದ ಚಿತ್ರಗಳಿಗೆ ಬಹಳ ಸೂಕ್ತ ಎನಿಸುತ್ತಾರೆ. ಆದರೆ ಇಲ್ಲಿ ಈಗಷ್ಟೇ ಮೀಸೆ ಮೂಡುತ್ತಿರುವ ನಾಯಕನ ಮಾಸ್ ಫೈಟ್‌ಗಳನ್ನು ಜೀರ್ಣಿಸಿಕೊಳ್ಳುವುದು ಸ್ವಲ್ಪ ಕಷ್ಟವಾಗುತ್ತದೆ. ಹಾಸ್ಯದ ದೃಶ್ಯಗಳು ಕಥೆಯ ಭಾಗವಾಗದೆ ನಗಿಸಲಿಕ್ಕಾಗಿಯೇ ಇರುವಂತೆ ಭಾಸವಾಗುತ್ತದೆ. ಹಾಸ್ಯ, ಭಾವುಕ ಸನ್ನಿವೇ-ಶಗಳಲ್ಲಿ ನಾಯಕನ ನಟನೆ ಇನ್ನಷ್ಟು ಹದಗೊಳ್ಳಬೇಕಿತ್ತು ಎನಿಸುತ್ತದೆ. ದ್ವಿಪಾತ್ರವಂತೂ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯಂತಿದೆ. ಚಿತ್ರದ ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಫ್ರೇಮ್‌ಗೆ ಬೇಕೆಂದು ಒಂದಷ್ಟನ್ನು ತುಂಬಿಸಿರುವ ಛಾಯಾಚಿತ್ರಗ್ರಹಣವೂ ಗಮನ ಸೆಳೆಯುವುದಿಲ್ಲ. ❖

ನಾವು ನೋಡಿದ ಸಿನಿಮಾ

ಗೌರಿ

- ನಿರ್ದೇಶನ: ಇಂದ್ರಜಿತ್ ಲಂಕೇಶ್
- ನಿರ್ಮಾಣ: ಇಂದ್ರಜಿತ್ ಲಂಕೇಶ್.
- ತಾರಾಗಣ: ಸಮರ್ಜಿತ್ ಲಂಕೇಶ್, ಸಾನ್ಯಾ ಅಯ್ಯರ್, ಸಂಪತ್ ಮೈತ್ರೇಯಾ, ಮಾನಸಿ ಸುಧೀರ್ ಮುಂತಾದವರು

ಪದಬಂಧ 5775

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಈತ ಚಿಕ್ಕ ಹುಡುಗ (3)
3.ವಾರದ ಕೊನೆಗೆ ಕಾಣಿಸಿದ ಚಿನ್ನದ ವ್ಯಾಪಾರಿ (4)
5.ಸಮಯವಿಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (2)
7.ಕಚಕ್ಕನೆ ಕತ್ತರಿಸಿದ ತಲೆಕೂದಲು! (2)
9.ಹತ್ತನೆಯ ಭಾಗ (3)
11.ಯುದ್ಧಕ್ಕೆ ಹೆದರುವವನು (4)
13.ಅಂಗದಲ್ಲಿ ಸುಗಂಧ ಲೇಪನ! (4)
14.ಅತಿಯಾದ ಆತುರ (3)
15.ನೇರವಲ್ಲದುದು ಇದು (2)
16.ತಟಕ್ಕನೆ ಮರೆಯಾದ ಕಳ್ಳ! (2)
18.ಸೈನಿಕರು ಮೊದಲಾದವರು ಮಾಡುವ ಕಸರತ್ತು (4)
19.ಪಥ್ಯ ಮಾಡದಿರುವುದು (3)

ಮೇಲಿಂದ ಕೆಳಕ್ಕೆ

2.ಮುಖ್ಯ ಬೆಳೆಯ ನಡುವೆ ಬೆಳೆಯುವ ಹುಲ್ಲು (2)
4.ರತ್ನಖಚಿತವಾದ ಒಡವೆ ಮುಂತಾದವು (4)
6.ವೇದವನ್ನು ಚನ್ನಾಗಿ ತಿಳಿದವನು (6)
8.ಚತುರನಾಡುವ ಒಳಾಂಗಣದ ಆಟ (4)
10.ಸಾಯುವ ಕಾಲದಲ್ಲಿ ಉಂಟಾಗುವ ತಳಮಳ (6)
12.ಕುದುರೆಯ ಕೆನೆತ (4)
13.ಮಂಗಳಗ್ರಹ ಇಲ್ಲಿದೆ (4)
17.ಹಿರಿಯ ಸಹೋದರಿ ತಿರುಗಿದ್ದಾಳೆ (2)

5774ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸುರಚಾಪ
5.ಥರನೋಮ
8.ಹರಾಮಿ 9.ತವರೂರು
11.ಪ್ರಾಸ 12.ಹಾಡು
13.ಅಪ್ರತಿಮ
15.ರುಜಿನ 16.ಕಡವರ
19.ಮಿಥ್ಯಾಜ್ಞಾನ

ಮೇಲಿಂದ ಕೆಳಕ್ಕೆ:
1.ಪರಿಮಿತ 3.ಪಂಥ
4.ಟನೋ 6.ರಧಿರು
7.ಮಲೆನಾಡು 8.ಹಮೂಸ
10.ವಸತಿ
11.ಪ್ರಾಮಾಣಿಕ
12.ಹಾಸನ 13.ಅಭಾವ
14.ಮರುಭೂಮಿ
17.ಡಬ್ಬಿ 18.ರಶ್ಮಿ

ಸುಡೊಕು 6160

	7			3		1		6
4		9						
	1		7		2		5	4
		3	5		6	4		
	4						6	7
		5	1		7	3		
	8		6		5	2		3
2		6						
	3			7		6	1	

6159 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆ ಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಆಗಸ್ಟ್ 17, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ದ್ವಾದಶಿ ಗಂ. 8-06 ನಕ್ಷತ್ರ: ಪೂರ್ವಾಷಾಢ ಗಂ. 11-49 ಯೋಗ: ಪ್ರೀತಿ ಗಂ. 10-47 ಕರಣ: ಬಾಲವ ಗಂ. 8-06, ಸಿಂಹ ಮಾಸದ 01 ನೇ ದಿನ, ಮಳೆನಕ್ಷತ್ರ: ಮಘಾ 1.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-22 ಸೂರ್ಯಾಸ್ತ : 06-47
ಮುಸ್ಲಿಂ ದಿನಾಂಕ : 12 ಸಫರ್
ದಿನ ವಿಶೇಷ : ಕೊಲ್ಲಂ ಯುಗ ಪ್ರಾರಂಭ, ಅದೃಷ್ಟ ಸಂಖ್ಯೆ : 10, 5

ಮೇಷ: ವಾಹನಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಮತ್ತು ಕಥೆ, ಕವನದ ಬರಹಗಾರರಿಗೆ ಅವಕಾಶಗಳ ಸುರಿಮಳೆ ಎದುರಾಗುವುದು. ಗುತ್ತಿಗೆ ಕೆಲಸದ ವಿಪುಲ ಅವಕಾಶಗಳು ಒದಗಿ ಬರುವ ಸೂಚನೆ ಕಾಣುವಿರಿ.

ವೃಷಭ: ಕೃಷಿ ಕಾರ್ಯ ಚುರುಕುಗೊಂಡು ರೈತಾಪಿ ವರ್ಗದವರಲ್ಲಿ ಸಂತಸ. ಕೆಲಸ ಮಾಡುವ ಮೊದಲು ಅದರ ಬಗ್ಗೆ ಸಾಕಷ್ಟು ಯೋಚಿಸಿ ನಂತರ ತೀರ್ಮಾನಿಸಿ. ಮನೆಯಲ್ಲಿ ಮಂಗಳ ಕಾರ್ಯದ ತಯಾರಿ ನಡೆಯುವುದು.

ಮಿಥುನ: ಆರನೆಯ ಇಂದ್ರಿಯದ ಸೂಚನೆಯ ಸಹಾಯ ಉಪಯುಕ್ತವಾ-ಗಲಿದೆ. ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು. ತೆಗೆದುಕೊಳ್ಳುವ ನಿರ್ಧಾರ ಸರಿಯಾಗಿಯೇ ಇರುತ್ತದೆ.

ಕರ್ಕಾಟಕ: ದೇವತಾನುಗ್ರಹದಿಂದ ಆರ್ಥಿಕ ಖರ್ಚು-ವೆಚ್ಚಗಳ ಸಮತೋಲನ, ಕುಟುಂಬದಲ್ಲೂ ತೃಪ್ತಿ ಇರುವುದು. ಅನಿರೀಕ್ಷಿತ ಪ್ರಯಾಣವು ಬದುಕಿನ ಹೊಸ ದಾರಿಗೆ ಕಾರಣವಾಗಲಿದೆ. ಉದ್ಯಮಗಳಲ್ಲಿ ಸ್ವಂತ ಶ್ರಮ ಅಗತ್ಯವಾಗುವುದು.

ಸಿಂಹ: ಪತಿ ಪತ್ನಿಯರ ಮುಸುಕಿನ ಗುದ್ದಾಟವು ಮೂರನೆ ವ್ಯಕ್ತಿಯ ಸಹಾಯ ದಿಂದಾಗಿ ನಿವಾರಣೆಯಾಗುತ್ತದೆ. ಗ್ರಹಗಳ ಚಲನೆ ಸುಖಮಯವಾಗಿ ಜೀವನ ನಡೆಸಲು ಅನುಕೂಲವಾಗಿದೆ. ಪ್ರತಿಷ್ಠಿತ ಅಧಿಕಾರಕ್ಕಾಗಿ ಹೋರಾಟ ನಡೆಸುವಿರಿ.

ಕನ್ಯಾ: ನಡವಳಿಕೆಯು ಮನೆಯವರಲ್ಲಿ ಸಂತಸವನ್ನು ಮೂಡಿಸುತ್ತದೆ. ಟ್ರಾವೆಲ್ ಏಜೆನ್ಸಿಯವರಿಗೆ ಆರ್ಥಿಕ ಮುನ್ನಡೆ ಇದ್ದು, ಹೆಚ್ಚಿನ ಅವಕಾಶಗಳನ್ನು ಕಾಣುವಿರಿ. ನಿಮ್ಮ ಮುಂದಿನ ನಡೆಯ ಬಗ್ಗೆ ಗಮನಹರಿಸಿ.

ತುಲಾ: ಪಿತ್ತಕೋಶಕ್ಕೆ ಸಂಬಂಧಿಸಿದಂತೆ ಅನಾರೋಗ್ಯಗಳು ಎದುರಾಗಬಹುದು. ಹೊಸ ಉದ್ಯೋಗ ದೊರೆತು ಮನೆಯವರಿಗೆ ಸಮಾಧಾನ-ವಾಗುವುದು. ಖಾಸಗಿ ಸಂಸ್ಥೆಗಳ ಉದ್ಯೋಗಸ್ಥರಿಗೆ ಉನ್ನತ ಸ್ಥಾನಮಾನ ಪ್ರಾಪ್ತಿ.

ವೃಶ್ಚಿಕ: ಮಕ್ಕಳ ಮದುವೆಯಂಥ ವಿಚಾರವನ್ನು ತಿಳಿ ಮನಸ್ಸಿನಿಂದ ಆಲೋಚಿಸಿ, ಸಮಸ್ಯೆಗಳಿಗೆ ಉತ್ತರ ಸಿಗುವುದು. ಮನೆಯ ಪಿತ್ರಾರ್ಜಿತ ಆಸ್ತಿಯ ವ್ಯವಹಾರಗಳು ಒಂದು ಹಂತ ತಲುಪಿದ್ದಕ್ಕೆ ಸಮಾಧಾನವಾಗುವುದು.

ಧನು: ಮಗನ ನೂತನ ಕೆಲಸದ ವಿಚಾರವಾಗಿ ಆಪ್ತರೊಬ್ಬರಲ್ಲಿ ಸಲಹೆ ಕೇಳಿಕೊಳ್ಳುವಿರಿ. ಶುಭ ಸಮಾರಂಭದ ಸಡಗರದಲ್ಲಿ ವಸ್ತ್ರಾಭರಣ ಖರೀದಿಗೆ ಹೆಚ್ಚಿನ ಹಣ ವಿನಿಯೋಗ ಮಾಡುವಿರಿ. ಕಪ್ಪು ಬಣ್ಣ ಶುಭ ತರುವುದು.

ಮಕರ: ಚಾಣಾಕ್ಷತನದ ನಿರ್ಧಾರಗಳು ಊರಿನ ತೂಕದ ವ್ಯಕ್ತಿಯನ್ನಾಗಿ ಮಾಡಲಿದೆ. ಪರಿಸರದ ಸನ್ನಿವೇಶವೂ ಇದಕ್ಕೆ ಪೂರಕವಾಗಿರುವುದು. ನೆಮ್ಮದಿಯ ವಿಷಯವೇನೆಂದರೆ ಧನಾಗಮದಲ್ಲಿ ಚಿಂತೆ ಇರದು.

ಕುಂಭ: ಕಾರ್ಮಿಕರ ಬೇಜವಾಬ್ದಾರಿತನದಿಂದಾಗಿ ನಿಮ್ಮ ಲಾಭಕ್ಕೆ ತೊಂದರೆ ಉಂಟಾಗಬಹುದು. ಕಾರ್ಯವನ್ನು ಜನರ ಎದುರು ಸಮರ್ಥಿಸಿಕೊಳ್ಳಲು ಸಾಕಷ್ಟು ಕಾರಣ ಸಿಗಲಿವೆ. ಆಸ್ತಿ ವಿಷಯ ನಿರಾತಂಕವಾಗಿ ಬಗೆಹರಿಯುವುದು.

ಮೀನ: ಆತಂಕ ತುಂಬಿದ ಕೆಲಸಕಾರ್ಯದಲ್ಲಿರುವವರ ಮನೆಯಲ್ಲಿ ನೆಮ್ಮದಿ ತುಂಬುವುದು. ಭೋಜನದ ಸಮಯವನ್ನು ಸ್ನೇಹಿತರೊಂದಿಗೆ ಕಳೆಯುವಿರಿ. ಸಿನೆಮಾ ವ್ಯವಹಾರಗಳಿಂದ ಭರ್ಜರಿ ಲಾಭ ಪಡೆಯುವಿರಿ.

ರೇಣುಕಸ್ವಾಮಿ ಕೊಲೆ: ಅಂತಿಮ ಘಟ್ಟಕ್ಕೆ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣ ತನಿಖೆ ಅಂತಿಮ ಘಟ್ಟ ತಲುಪಿದ್ದು, ಶೀಘ್ರದಲ್ಲಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಹೇಳಿದರು.

‘ಪ್ರಕರಣಕ್ಕೆ ಸಂಬಂಧಿಸಿದ ಮೌಖಿಕ, ಸಾಂದರ್ಭಿಕ ಮತ್ತು ತಾಂತ್ರಿಕ ಸಾಕ್ಷ್ಯಗಳನ್ನು ಸಂಗ್ರಹಿಸಿ ಅವುಗಳನ್ನು ಬೆಂಗಳೂರು ಮತ್ತು ಹೈದರಾಬಾದ್ ವಿಧಿ ವಿಜ್ಞಾನ ಪ್ರಯೋಗಾಲಯ (ಎಸ್‌ಎಫ್‌ಎಲ್)ಕ್ಕೆ ಕಳುಹಿಸಲಾಗಿತ್ತು. ಅದರಲ್ಲಿ ಶೇಕಡ 70ರಷ್ಟು ಪರೀಕ್ಷಾ ವರದಿಗಳು ಕೈಸೇರಿವೆ. ಉಳಿದ ವರದಿಗಳು ಕೆಲವೇ ದಿನಗಳಲ್ಲಿ ಬರುವ ಸಾಧ್ಯತೆಯಿದೆ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಎಲೆಕ್ಟ್ರಾನಿಕ್ ಉಪಕರಣಗಳ ಸಾಕ್ಷ್ಯಗಳನ್ನು ಹೈದರಾಬಾದ್ ಎಫ್ ಎಸ್ ಎಲ್‌ಗೆ ಕಳುಹಿಸಲಾಗಿದ್ದು, ಅಲ್ಲಿಂದ ವರದಿಗಳು ಬರಬೇಕಿವೆ. ಎಲ್ಲ ವರದಿಗಳು ಬಂದ ಬಳಿಕ ಮತ್ತೊಮ್ಮೆ ಸಾಕ್ಷಿಗಳಿಂದ ಸ್ಪಷ್ಟೀಕರಣ ಪಡೆಯಲಾಗುವುದು. ಬಳಿಕ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಾಗುವುದು ಎಂದರು.

ರೇಣುಕಸ್ವಾಮಿ ಅವರ ಕೊಲೆ ನಡೆದ ಸ್ಥಳ, ಮೃತದೇಹ ಎಸೆದ ಕಾಲುವೆ ಬಳಿ ಹಾಗೂ ಆರೋಪಿಗಳ ಮನೆಗಳಲ್ಲಿ ಎಫ್‌ಎಸ್‌ಎಲ್ ತಜ್ಞರು ಹಲವು ಮಾದರಿ ಸಂಗ್ರಹಿಸಿದ್ದರು. ಆರೋಪಿಗಳ ಮೊಬೈಲ್ ಹಾಗೂ ಸಿ.ಸಿ.ಟಿ.ವಿ ಡಿವಿಆರ್‌ನಿಂದ ಅಳಿಸಿ ಹಾಕಿದ್ದ ದತ್ತಾಂಶವನ್ನು ಮರು ಸಂಗ್ರಹಿಸಲಾಗಿದೆ. ಎಲ್ಲವನ್ನೂ ಪರೀಕ್ಷಿಸಿ, ವರದಿ ಪಡೆಯಲಾಗಿದೆ ಎಂದು ಹೇಳಿದರು.

ತುಂಗಭದ್ರಾ ಅಣೆಕಟ್ಟೆ: ಇನ್ನೂ ನಾಲ್ಕು ಫಲಕ ಜೋಡಣೆ ಬಾಕಿ ● ಹೊರ ಹರಿವಿಗೆ ಬಹುತೇಕ ತಡೆ

ಗೇಟ್‌ನ ಮೊದಲ ಫಲಕ ಅಳವಡಿಕೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ/ಕೊಪ್ಪಳ: ತುಂಗಭದ್ರಾ ಅಣೆಕಟ್ಟೆಯ 19ನೇ ಕ್ರಸ್ಟ್‌ಗೇಟ್ ಇದ್ದ ಸ್ಥಳದಲ್ಲಿ ಧುಮ್ಮಿಕ್ಕುತ್ತಿರುವ ನೀರಿನಲ್ಲೇ ತಾತ್ಕಾಲಿಕ ಗೇಟ್ ಎಲಿಮೆಂಟ್ (ಫಲಕ) ಅನ್ನು ಇಳಿಸಿ, ಜೋಡಿಸುವ ಯತ್ನ ಶುಕ್ರವಾರ ರಾತ್ರಿ ನಡೆಯಿತು. ಇದರಿಂದ 25 ಟಿಎಂಸಿ ಅಡಿ ನೀರು, ನದಿ ಪಾಲಾಗುವುದು ಬಹುತೇಕ ತಪ್ಪಿದೆ.

ಸಂಜೆ 7.30ರ ಸುಮಾರಿಗೆ ಎರಡು ಬೃಹತ್ ಕ್ರೇನ್‌ಗಳ ನೆರವಿನಿಂದ ಒಟ್ಟು 4 ಅಡಿ ಎತ್ತರದ, ಸುಮಾರು 13 ಟನ್ ತೂಕದ ಗೇಟ್ ಎಲಿಮೆಂಟ್ ಅನ್ನು ನೀರಿಗೆ ಇಳಿಸುವ ಕಾರ್ಯ ಆರಂಭವಾಯಿತು. ರಾತ್ರಿ 8ರ ವೇಳೆಗೆ ನೀರಿನ ಮಟ್ಟಕ್ಕೆ ಇಳಿದ ಗೇಟನ್ನು ಸುಮಾರು ಅರ್ಧ ಗಂಟೆ ಅದೇ ಸ್ಥಿತಿಯಲ್ಲಿ ಇಟ್ಟು ಮತ್ತೊಮ್ಮೆ ಪರಿಶೀಲಿಸಲಾಯಿತು. ರಭಸವಾಗಿ ನೀರು ಹರಿದರೂ ಗೇಟ್ ಹೊಯ್ದಾಡುತ್ತಿಲ್ಲ ಎಂಬುದು ಖಚಿತವಾಯಿತು. ರಾತ್ರಿ 8.35ಕ್ಕೆ ನೀರಿನಲ್ಲಿ ಗೇಟ್ ಇಳಿಸಲಾಯಿತು.

ಆಗ ಅಲ್ಲಿ ಸಚಿವರು, ಶಾಸಕರು ಸೇರಿ ಇನ್ನಿತರರಿಂದ ಒತ್ತಡದ ಸ್ಥಿತಿ ನಿರ್ಮಾಣವಾಯಿತು. ‘ನೀವೆಲ್ಲ ಆಚೆ ಹೋಗದಿದ್ದರೆ, ಕೆಲಸ ಆಗದು’ ಎಂದು ಹೇಳಿ ತಜ್ಞರು ಮತ್ತೆ ಗೇಟ್‌ನ್ನು ನೀರಿನಿಂದ ಸ್ವಲ್ಪ ಮೇಲೆ ತಂದರು. ಜನರೆಲ್ಲ ಚದುರಿದ ಬಳಿಕ ಮತ್ತೆ ನೀರಿನೊಳಗೆ ಗೇಟ್ ಇಟ್ಟು ಜೋಡಿಸುವ ಪ್ರಕ್ರಿಯೆ ಆರಂಭವಾಯಿತು. ಶನಿವಾರ ಬೆಳಿಗ್ಗೆ ವೇಳೆಗೆ ಈ ಪ್ರಕ್ರಿಯೆ ಮುಗಿದು, ರಬ್ಬರ್ ಬುಷ್ ಅಳವಡಿಸಿ ಇನ್ನೊಂದು ಗೇಟ್ ಕೂರಿಸುವ ಪ್ರಕ್ರಿಯೆ ಆರಂಭವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಕಾರ್ಯಾಚರಣೆ ಬಹುತೇಕ ಯಶಸ್ವಿ ಆಗುತ್ತಿದಂತೆಯೇ ಗೇಟ್ ತಜ್ಞ ಮತ್ತು ಮುಖ್ಯ ಸಲಹೆಗಾರ ಕನ್ನಯ್ಯ ನಾಯ್ಡು, ಸಚಿವರಾದ ಶಿವರಾಜ್ ತಂಗಡಗಿ, ಜಮೀರ್ ಅಹ್ಮದ್ ಖಾನ್, ಸಂಸದ ರಾಜಶೇಖರ ಹಿಟ್ನಾಳ್ ಇತರರು ನಿರಾಳರಾದರು. ಇದರ ಬಗ್ಗೆ ಮುಖ್ಯಮಂತ್ರಿಯವರಿಗೆ ತಕ್ಷಣವೇ ಸಂದೇಶ ರವಾನಿಸಲಾಯಿತು.

ಶುಕ್ರವಾರ ಬೆಳಿಗ್ಗೆ 10 ಗಂಟೆ ವೇಳೆಗೆ ಕಾರ್ಯಾಚರಣೆ ಆರಂಭವಾಗಿತ್ತು. 11.30ರ ಸುಮಾರಿಗೆ ಬ್ಯಾಲೆನ್ಸಿಂಗ್ ಬೀಮ್ ಕೆಳಗಿಳಿಸುವ ಕೆಲಸ ನಡೆಯಿತು. ಆದರೆ ಸ್ಕೈವಾಕ್ ತೆರವುಗೊಳಿಸಲು ಮತ್ತೆ ಹಲವು ಗಂಟೆ ಹಿಡಿಯಿತು. ಸಂಜೆ 5ರ ವೇಳೆಗೆ 28 ಟನ್ ತೂಕದ ಸ್ಕೈವಾಕ್‌ನ್ನು ಎರಡು ಬೃಹತ್ ಕ್ರೇನ್‌ಗಳ ನೆರವಿನಿಂದ ಕೆಳಗೆ ಇಳಿಸಲಾಯಿತು.

‘ಬ್ಯಾಲೆನ್ಸಿಂಗ್ ಬೀಮ್ ಸುಲಭವಾಗಿ ತೆರವುಗೊಳಿಸಲಾಯಿತು. ಬಳಿಕ ಸ್ಕೈವಾಕ್ ತೆರವು ಯತ್ನ ವಿಳಂಬ ವಾಯಿತು. ಉದ್ದೇಶಪೂರ್ವಕವಾಗಿ ವಿಳಂಬ ಮಾಡಿಲ್ಲ. ಮಾಧ್ಯಮದವರನ್ನು ದೂರ ಇಡಲು ಪ್ರಯತ್ನಿಸಿದ್ದಂತೂ ನಿಜ. ಸಂಜೆ ವೇಳೆಗಷ್ಟೇ ಸ್ಕೈವಾಕ್ ತೆರವುಗೊಳಿಸುವುದು ಸಾಧ್ಯವಾಯಿತು’ ಎಂದು ಅಣೆಕಟ್ಟೆಯಲ್ಲಿ ಕಾರ್ಯಾಚರಣೆ ತಂಡದಲ್ಲಿದ್ದ ತಜ್ಞರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಸದ್ಯ ಜಲಾಶಯದಲ್ಲಿ ಸುಮಾರು 68 ಟಿಎಂಸಿ ಅಡಿ ನೀರು ಉಳಿದಿದ್ದು, ಆರು ದಿನಗಳಲ್ಲಿ 37 ಟಿಎಂಸಿ ಅಡಿ ನೀರು ನದಿಗೆ ಹರಿದು ಹೋಗಿದೆ. ಮೊದಲ ಎಲಿಮೆಂಟ್ ಯಶಸ್ವಿಯಾಗಿ ಅಳವಡಿಕೆ ಸಾಧ್ಯವಾಗಿರುವುದರಿಂದ ಶನಿವಾರ ಮತ್ತೆ ನಾಲ್ಕು ಎಲಿಮೆಂಟ್(ಫಲಕ)ಗಳನ್ನು ಹಂತ ಹಂತವಾಗಿ ಒಂದರ ಮೇಲೆ ಒಂದರಂತೆ ಜೋಡಿಸಿ ಇಡುವ ಕಾರ್ಯ ನಡೆಯಲಿದೆ. ಈಗಾಗಲೇ ನಾಲ್ಕೂ ಗೇಟ್ ಎಲಿಮೆಂಟ್‌ಗಳು ಅಣೆಕಟ್ಟೆ ತಲುಪಿವೆ.

ಜಲಾಶಯದಲ್ಲಿ 68 ಟಿಎಂಸಿ ನೀರು

ತುಂಗಭದ್ರಾ ಅಣೆಕಟ್ಟೆಯ 19ನೇ ತೂಬಿಗೆ ಶುಕ್ರವಾರ ರಾತ್ರಿ ತಾತ್ಕಾಲಿಕ ಗೇಟ್ ಎಲಿಮೆಂಟ್ ಕೂರಿಸುವ ಕಾರ್ಯಾಚರಣೆ ನಡೆಯಿತು —ಪ್ರಜಾವಾಣಿ ಚಿತ್ರ

> ಗೇಟ್‌ಗಳ ಸುರಕ್ಷತೆ ಪರಿಶೀಲಿಸಿ ವರದಿ ನೀಡಲಿರುವ ತಜ್ಞರ ಸಮಿತಿ ನೀಡುವ ಶಿಫಾರಸಿನಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ
>
> **ಎಚ್.ಕೆ.ಪಾಟೀಲ,** ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ

> ಶುಕ್ರವಾರ ಬೆಳಿಗ್ಗೆಯಿಂದ ಕಾರ್ಯಾಚರಣೆ ನಿಧಾನವಾಗಿತ್ತು. ರಾತ್ರಿ ವೇಗ ಪಡೆದು, ಗೇಟ್ ಅಳವಡಿಕೆಗೆ ಚಾಲನೆ ನೀಡಲಾಯಿತು
>
> **ಗೇಟ್ ಅಳವಡಿಕೆ ತಜ್ಞರು**

ಮಾಧ್ಯಮದವರತ್ತ ಕೆಂಗಣ್ಣು

ದೂರದ ನಡುಗಡ್ಡೆಯಲ್ಲಿ ಉಳಿದು ವರದಿ ಮಾಡುತ್ತಿದ್ದ ಮಾಧ್ಯಮದವರನ್ನು ದೂರ ಕಳುಹಿಸುವ ಪ್ರಯತ್ನ ಪೊಲೀಸರಿಂದ ದಿನವಿಡೀ ನಡೆಯಿತು. ‘ಮಾಧ್ಯಮದವರು ನಡುಗಡ್ಡೆಯಲ್ಲೂ ಇರಬಾರದು. ಇದ್ದರೆ, ನಾವು ಕೆಲಸ ಮುಂದುವರಿಸಲ್ಲ ಎಂದು ಕ್ರಸ್ಟ್‌ಗೇಟ್ ತಜ್ಞ ಕನ್ನಯ್ಯ ನಾಯ್ಡು ಹೇಳಿದ್ದಾರೆ. ಹೀಗಾಗಿ ನೀವು ಹೋಗಬೇಕು’ ಎಂದು ಪೊಲೀಸರು ಹೇಳಿದರು.

ಮಾಧ್ಯಮದವರು ಕದಲದಿದ್ದಾಗ ಮತ್ತೆ ಹಲವು ಪೊಲೀಸರು ಬಂದು, ಬಲವಂತವಾಗಿ ಹೊರಗೆ ಕಳುಹಿಸಲು ಪ್ರಯತ್ನಿಸಿದರು.

‘ಆಂಧ್ರಪ್ರದೇಶದ ಟಿವಿಯವರಿಗೆ ಅಣೆಕಟ್ಟೆಯ ಮೇಲಿನಿಂದ ವಿಡಿಯೊ ರವಾನೆ ಮಾಡಿ ಎಕ್ಸ್‌ಕ್ಲೂಸಿವ್ ಸುದ್ದಿ ಪ್ರಸಾರ ಮಾಡಿಸುತ್ತೀರಿ. ಕರ್ನಾಟಕದ ಮಾಧ್ಯಮದವರನ್ನು ಹೊರಗೆ ಕಳುಹಿಸುತ್ತೀರಿ. ಇದು ಮಲತಾಯಿ ಧೋರಣೆ. ಬೇಕಿದ್ದರೆ ನಮ್ಮನ್ನು ಬಂಧಿಸಿ ಕರೆದೊಯ್ಯಿರಿ, ನಾವಂತೂ ಕದಲುವುದಿಲ್ಲ’ ಎಂದು ಪಟ್ಟುಹಿಡಿದು, ಪ್ರತಿಭಟನೆ ನಡೆಸಿದ್ದರಿಂದ ಪೊಲೀಸರು ಸುಮ್ಮನಾದರು.

ಸುದ್ದಿ 2 ನಿಮಿಷ

‘2ಎ’ ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ಶಾಸಕರ ಮೌನ ಏಕೆ?

ಬೆಳಗಾವಿ: ‘ಪಂಚಮಸಾಲಿ ಸಮುದಾಯದ ಶಾಸಕರು ಈಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಸಮುದಾಯಕ್ಕೆ ಪ್ರವರ್ಗ ‘2ಎ’ ಮೀಸಲಾತಿ ದೊರಕಿಸುವ ಬಗ್ಗೆ ಧ್ವನಿ ಎತ್ತದಿರುವುದು ನನಗೆ ಬೇಸರ ಮೂಡಿಸಿದೆ’ ಎಂದು ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬಿ.ಎಸ್.ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವಿದ್ದಾಗ, ಸದನದ ಬಾವಿಗೆ ಇಳಿದು ಹೋರಾಟ ಮಾಡಿದ್ದೀರಿ. ಆದರೆ, ಈಗ ಮಾತನಾಡುತ್ತಿಲ್ಲ. ನಿಮಗೆ ಮಾತನಾಡುವ ಹಕ್ಕಿದೆ. ಏಕೆ ಸುಮ್ಮನಿದ್ದೀರಿ’ ಎಂದು ಪ್ರಶ್ನಿಸಿದರು.

‘ಗುರುವಾಗಿದ್ದರೂ ನಾನು ಮಠ ಬಿಟ್ಟು ನಿಮ್ಮ ಮನೆಬಾಗಿಲಿಗೆ ಬಂದೆ. ಪತ್ರ ಚಳವಳಿ ಮೂಲಕ ಮನೆಗೆ ಹೋಗಿ ಎಲ್ಲ ಶಾಸಕರನ್ನು ಕೋರಿದೆ. ಮೀಸಲಾತಿ ವಿಷಯದ ಬಗ್ಗೆ ಚರ್ಚೆ ಆಗಬೇಕೆಂದು ಶಾಸಕರು ಸ್ಪೀಕರ್‌ಗೆ ಪತ್ರ ಬರೆದರು. ಆದರೆ, ಸ್ಪೀಕರ್ ಬಳಿ ಹೋಗಿ ಅಜೆಂಡಾದಲ್ಲಿ ಈ ವಿಷಯ ಸೇರಿಸಲು ಏಕೆ ಪ್ರಯತ್ನಿಸಲಿಲ್ಲ? ಅವಕಾಶ ಕೊಡದಿದ್ದರೆ ನೀವು ಪ್ರತಿಭಟಿಸಬೇಕಿತ್ತು. ಸಭಾತ್ಯಾಗ ಮಾಡಬೇಕಾಗಿತ್ತು. ಸಿ.ಎಂ ಮನೆಗೆ ಹೋಗಿ ಒತ್ತಡ ತರಬೇಕಿತ್ತು’ ಎಂದರು.

‘ಮೀಸಲಾತಿ ವಿಷಯದಲ್ಲಿ ಸರ್ಕಾರದ ವಿಳಂಬ ಧೋರಣೆ ಖಂಡಿಸಿ, ಬೆಳಗಾವಿಯಲ್ಲಿ ಸೆ.15ರಂದು ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ ಪಂಚಮಸಾಲಿ ವಕೀಲರ ಮಹಾ ಪರಿಷತ್ ಸಭೆ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ನೌಕರರಿಗೆ ಕೆಂಪು–ಹಳದಿ ಟ್ಯಾಗ್

ಬೆಂಗಳೂರು: ರಾಜ್ಯ ಸರ್ಕಾರವು ತನ್ನ ನೌಕರರ ಗುರುತಿನ ಚೀಟಿಯ ಕೊರಳುದಾರದ (ಟ್ಯಾಗ್) ವಿನ್ಯಾಸವನ್ನು ಬದಲಿಸಿದ್ದು, ಕೆಂಪು–ಹಳದಿ ಬಣ್ಣಗಳನ್ನು ಒಳಗೊಂಡಿರುವ ನೂತನ ಕೊರಳುದಾರವನ್ನು ಧರಿಸಬೇಕು ಎಂದು ಸೂಚಿಸಿದೆ.

‘ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿ 50 ವರ್ಷಗಳಾಗಿವೆ. ಇದಕ್ಕಾಗಿ ನಡೆಸುತ್ತಿರುವ ‘ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ’ ಅಭಿಯಾನದಡಿ ನಾಡ ಧ್ವಜದ ಬಣ್ಣಗಳನ್ನು ಒಳಗೊಂಡ ಟ್ಯಾಗ್ ಅನ್ನು ವಿನ್ಯಾಸ ಮಾಡಲಾಗಿದೆ. ಸರ್ಕಾರದ ಎಲ್ಲಾ ನೌಕರರು ಕಡ್ಡಾಯವಾಗಿ ಇದನ್ನು ಧರಿಸಬೇಕು’ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸುತ್ತೋಲೆ ಹೊರಡಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್ ಎಸ್ *	124.80	123.80	18,897	18,676
ಹಾರಂಗಿ	2,859	2,857.15	3,465	1.415
ಕಬಿನಿ	2,284.00	2,282.54	6,177	6,350
ಹೇಮಾವತಿ	2,922	2,921.53	9,785	10,525
ಲಿಂಗನಮಕ್ಕಿ	1,819	1,816.85	7,643	7,504
ಸೂಪಾ (ಮೀ)	564	558.51	2,239	1,783.56
ಮಾಣಿ	595	588.98	2,721	-
ತುಂಗಭದ್ರಾ	1,633	1,623.79	33,419	86,310
ಮಲಪ್ರಭಾ	2,079.5	2,077.10	3,345	1,794
ಘಟಪ್ರಭಾ	2175	2,175	4,932	4,932
ಭದ್ರಾ	186	180.02	8,419	7,841
ಆಲಮಟ್ಟಿ (ಮೀ)	519.6	519.58	22,655	16,556
ನಾರಾಯಣಪುರ (ಮೀ)	492.25	492.16	13,000	6,000

*ನೆಲಮಟ್ಟದಿಂದ

ಮಡಿಕೇರಿ ಸೇರಿ ಕೆಲವೆಡೆ ಮಳೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬಾಗಲಕೋಟೆ: ಮಗ್ಗದ ಮನೆಗಳಿಗೆ ನುಗ್ಗಿದ ನೀರು
- ಕಲ್ಯಾಣ ಕರ್ನಾಟಕದ ವಿವಿಧೆಡೆ ಭಾರಿ ಮಳೆ

ಕಲಬುರಗಿ/ಮಡಿಕೇರಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಶುಕ್ರವಾರ ಬಿರುಸಿನ ಮಳೆಯಾಗಿದೆ. ಮಡಿಕೇರಿ, ಚಿಕ್ಕಮಗಳೂರು ಸೇರಿದಂತೆ ರಾಜ್ಯದ ಕೆಲವು ಕಡೆಯೂ ಮಳೆ ಸುರಿದಿದೆ.

ಕಲಬುರಗಿಯಲ್ಲಿ ಸಂಜೆ ಅರ್ಧಗಂಟೆ ಉತ್ತಮವಾಗಿ ಮಳೆ ಸುರಿಯಿತು. ಧಗೆಯಿಂದ ಕಂಗೆಟ್ಟ ಜನರಿಗೆ ನೆಮ್ಮದಿ ನೀಡಿತು. ಜಿಲ್ಲೆಯ ಶಹಾಬಾದ್, ಅಫಜಲಪುರ, ಕಾಳಗಿ, ಚಿಂಚೋಳಿಯಲ್ಲಿ ಮಳೆಯಾಯಿತು.

ಬೀದರ್‌ನಲ್ಲಿ ಸತತ ಎರಡನೇ ದಿನವೂ ಉತ್ತಮವಾಗಿ ಮಳೆಯಾಗಿದೆ. ಬಿರುಸಿನ ಮಳೆಗೆ ಇಲ್ಲಿನ ವಿದ್ಯಾನಗರ, ನಯಾ ಕಮಾನ, ಸಿದ್ದಿ ತಾಲೀಂ ಸುತ್ತಮುತ್ತ ರಸ್ತೆಗಳಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡು ಸಂಚಾರ ಅಸ್ತವ್ಯಸ್ತಗೊಂಡಿತು. ಔರಾದ್, ಭಾಲ್ಕಿ ಹಾಗೂ ಬಸವಕಲ್ಯಾಣದಲ್ಲಿ ಸಾಧಾರಣ ಮಳೆಯಾಗಿದೆ. ರಾಯಚೂರು, ಲಿಂಗಸುಗೂರು, ಮಸ್ಕಿ ಹಾಗೂ ಜಾಲಹಳ್ಳಿಯಲ್ಲಿ ಸಾಧಾರಣ ಮಳೆಯಾಯಿತು.

ಮಡಿಕೇರಿ ನಗರದಲ್ಲಿ ಶುಕ್ರವಾರ ಮಧ್ಯಾಹ್ನ ಸುಮಾರು 1 ಗಂಟೆಗಳ ಕಾಲ ಬಿರುಸಿನಿಂದ ಮಳೆ ಸುರಿಯಿತು. ಸಂಜೆ ಹೊತ್ತಿಗೆ ಮತ್ತೆ ಸಾಧಾರಣ ಮಳೆಯಾಯಿತು. ಕೊಡಗು ಜಿಲ್ಲೆಯ ಇನ್ನುಳಿದ ಕಡೆ ಬಿರುಸಿನ ಮಳೆಯಾಗಿಲ್ಲ.

ಚಿಕ್ಕಮಗಳೂರು ವರದಿ: ಜಿಲ್ಲೆಯ ಹಲವೆಡೆ ಶುಕ್ರವಾರ ಮಳೆಯಾಗಿದ್ದು, ಚಿಕ್ಕಮಗಳೂರು ಮತ್ತು ಆಲ್ದೂರಿನಲ್ಲಿ ಸಂಜೆ ಅಬ್ಬರದಿಂದ ಮಳೆ ಸುರಿಯಿತು. ನಗರದ ಸುತ್ತಮುತ್ತ ಒಂದು ಗಂಟೆಗೂ ಹೆಚ್ಚು ಕಾಲ ಮಳೆ ಸುರಿಯಿತು.

ಬಾಗಲಕೋಟೆ: ಜಿಲ್ಲೆಯ ಬನಹಟ್ಟಿ ಹಾಗೂ ಹುನಗುಂದದಲ್ಲಿ ಶುಕ್ರವಾರ ಭಾರಿ ಮಳೆಯಾಯಿತು. ಬನಹಟ್ಟಿಯ ಮಂಗಳವಾರ ಪೇಟೆ, ಸೋಮವಾರ ಪೇಟೆ ಮತ್ತು ಜಮಖಂಡಿ–ಕುಡಚಿ ರಾಜ್ಯ ಹೆದ್ದಾರಿ ಸಂಪೂರ್ಣ ಜಲಾವೃತವಾಗಿದ್ದವು.

ಗುಡ್ಡ ಪ್ರದೇಶದಿಂದ ರಭಸದ ಮಳೆ ನೀರು ಮಗ್ಗದ ಮನೆಗಳಿಗೆ ನುಗ್ಗಿ ಬಹಳಷ್ಟು ಬೀಮ್‌ಗಳಿಗೆ ತೊಂದರೆಯಾಗಿದೆ. ಸ್ಥಳೀಯ ಎಸ್‌ಆರ್‌ಎ ಮೈದಾನ ನೀರಿನಿಂದ ತುಂಬಿತ್ತು. ನೀರಿನ ರಭಸಕ್ಕೆ ಕಾಲೇಜು ತಡೆಗೋಡೆ ಕೊಚ್ಚಿಹೋಗಿದೆ.

ಚಂಡಮಾರುತ: ಮಳೆ ಮುಂದುವರಿಕೆ

ಬೆಂಗಳೂರು: ಅರಬ್ಬಿ ಸಮುದ್ರದ ಆಗ್ನೇಯ ಭಾಗ ಮತ್ತು ಕೇರಳ ಭಾಗದಲ್ಲಿ ಚಂಡಮಾರುತ ಎದ್ದಿರುವುದರಿಂದ ಕರಾವಳಿ ಹಾಗೂ ಒಳನಾಡಿನಲ್ಲಿ ಒಂದು ವಾರ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಶನಿವಾರ ಮತ್ತು ಭಾನುವಾರ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ. ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗಲಿದೆ. ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಮತ್ತು ಬೆಂಗಳೂರು ಸುತ್ತ–ಮುತ್ತ ಗುಡುಗು ಸಹಿತ ಸಾಧಾರಣ ಮಳೆಯಾಗಲಿದೆ. ಆಗಸ್ಟ್ 22ರವರೆಗೂ ಮಳೆಯಾಗುವ ಸಾಧ್ಯತೆ ಇದೆ.

‘ಒತ್ತುವರಿ ತೆರವು: ನಾನು ರೈತರ ಪರ’

ಚಿಕ್ಕಮಗಳೂರು: ಅರಣ್ಯ ಒತ್ತುವರಿ ತೆರವು ವಿರೋಧಿಸಿ ಶನಿವಾರ (ಆ.17) ಶೃಂಗೇರಿ ಸೇರಿ ಕೆಲವೆಡೆ ಬಂದ್‌ಗೆ ಕರೆ ನೀಡಲಾಗಿದೆ. ಜಿಲ್ಲೆಗೆ ಭೇಟಿ ನೀಡಿದ್ದ ಕೇಂದ್ರ ಸಚಿವ ವಿ.ಸೋಮಣ್ಣ, ‘ನಾನು ರೈತರ ಪರ ನಿಲ್ಲುತ್ತೇನೆ’ ಎಂದಿದ್ದಾರೆ.

ಹೊರನಾಡಿನ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದ್ದರು.

ಮಲೆನಾಡು ನಾಗರಿಕ ರೈತ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಬಂದ್‌ಗೆ ಕರೆ ನೀಡಲಾಗಿದ್ದು, ಶೃಂಗೇರಿ, ಎನ್‌.ಆರ್‌.ಪುರ, ಕೊಪ್ಪ, ಬಾಳೆಹೊನ್ನೂರು, ಖಾಂಡ್ಯದಲ್ಲಿ ಅಂಗಡಿ, ಮುಂಗಟ್ಟುಗಳನ್ನು ಮುಚ್ಚಬೇಕು ಎಂದು ವರ್ತಕರಲ್ಲಿ ಸಮಿತಿ ಮನವಿ ಮಾಡಿದೆ. ಎಲ್ಲೆಡೆ ಮೆರವಣಿಗೆ ನಡೆಯಲಿದ್ದು, ಕೊಪ್ಪದಲ್ಲಿ ಸಮಾವೇಶ ನಡೆಯಲಿದೆ.

ನೋಟುಗಳ ಅಲಂಕಾರ

ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಶ್ರೀರಂಗಪಟ್ಟಣದ ಚಾಮುಂಡೇಶ್ವರಿ ದೇವಾಲಯದ ಗರ್ಭಗುಡಿಯನ್ನು ಶುಕ್ರವಾರ ₹10 ಲಕ್ಷ ಮೌಲ್ಯದ ನೋಟುಗಳಿಂದ ಅಲಂಕರಿಸಲಾಗಿತ್ತು

ಬೆಂಗಳೂರು–ಮಂಗಳೂರು ಮಾರ್ಗದ ಆಚಂಗಿ ಬಳಿ ಘಟನೆ

ಮತ್ತೆ ಭೂಕುಸಿತ: ರೈಲು ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

ಹಾಸನ: ಸಕಲೇಶಪುರ–ಆಲೂರು ನಡುವಿನ ಆಚಂಗಿ ದೊಡ್ಡಸಾಗರ ಬಳಿ ಶುಕ್ರವಾರ ಮತ್ತೆ ಭೂಕುಸಿತವಾಗಿದ್ದು, ಬೆಂಗಳೂರು–ಮಂಗಳೂರು ರೈಲು ಸಂಚಾರ ಸ್ಥಗಿತವಾಗಿದೆ.

ಶುಕ್ರವಾರ ಮಧ್ಯಾಹ್ನ ಯಶವಂತಪುರ–ಕಾರವಾರ ರೈಲನ್ನು ಬಾಳ್ಳುಪೇಟೆ ನಿಲ್ದಾಣದಲ್ಲಿ ನಿಲುಗಡೆ ಮಾಡಿದ್ದು, ವರಮಹಾಲಕ್ಷ್ಮಿ ಹಬ್ಬಕ್ಕೆ ತೆರಳುತ್ತಿದ್ದ ಪ್ರಯಾಣಿಕರು ಪರದಾಡಿದರು. ನಂತರ ಖಾಸಗಿ ವಾಹನಗಳ ಮೂಲಕ ಊರಿಗೆ ಕಳುಹಿಸಲಾಯಿತು.

ಸ್ಥಳಕ್ಕೆ ರೈಲ್ವೆ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಬಂದಿದ್ದು, ಮಣ್ಣು ತೆರವು ಕಾರ್ಯಾಚರಣೆ ಆರಂಭಿಸಿದ್ದಾರೆ. ಎರಡು ದಿನ ರೈಲುಗಳ ಓಡಾಟ ಸ್ಥಗಿತವಾಗಲಿದೆ.

‘ಆಗಸ್ಟ್ 9ರಂದು ರಾತ್ರಿ ಇದೇ ಸ್ಥಳದಲ್ಲಿ ಭೂಕುಸಿತವಾಗಿತ್ತು. ಮಣ್ಣು ತೆರವುಗೊಳಿಸಿ, ಎರಡು ದಿನಗಳ ಹಿಂದಷ್ಟೇ ಪ್ರಯಾಣಿಕ ರೈಲುಗಳ ಸಂಚಾರಕ್ಕೆ ಅನುಮತಿ ನೀಡಲಾಗಿತ್ತು. ಆದರೆ, ಎರಡೂ ಬದಿಯಲ್ಲಿ ತಡೆಗೋಡೆ ನಿರ್ಮಿಸದೇ ಸಂಚಾರ ಆರಂಭಿಸಿದ್ದು, ಮಣ್ಣು ಕುಸಿಯಲು ಕಾರಣ’ ಎಂದು ಸ್ಥಳೀಯರು ಹೇಳಿದ್ದಾರೆ.

ಸಕಲೇಶಪುರ–ಆಲೂರು ನಡುವಿನ ಆಚಂಗಿ ಬಳಿ ಶುಕ್ರವಾರ ರೈಲು ಹಳಿಗಳ ಮೇಲೆ ಮತ್ತೆ ಮಣ್ಣು ಕುಸಿದಿದೆ

ಇದು ಬೆಂಗಳೂರು -ಮಂಗಳೂರು ಮಾರ್ಗದ ಏಕೈಕ ರೈಲು ಮಾರ್ಗ. ತಿಂಗಳ ಹಿಂದೆ ಯಡಕುಮೇರಿ ಬಳಿ ಬಳಿ ಭೂಕುಸಿತವಾಗಿ 10 ದಿನ ಸಂಚಾರ ಸ್ಥಗಿತಗೊಂಡಿತ್ತು. ‘ಮುಂದಿನ ದಿನಗಳಲ್ಲಾದರೂ ರೈಲ್ವೆ ಇಲಾಖೆ, ಈ ಮಾರ್ಗದ ಗುಡ್ಡ ಕುಸಿತದ ಸ್ಥಳಗಳನ್ನು ಗುರುತಿಸಿ ಕ್ರಮ ಕೈಗೊಳ್ಳಬೇಕು. ಪದೇ ಪದೇ ಕುಸಿತವನ್ನು ತಡೆಯಬೇಕು’ ಎಂದು ಪ್ರಯಾಣಿಕರು ಒತ್ತಾಯಿಸಿದರು.

ರೈಲು ಸಂಚಾರ ರದ್ದು: ಈ ಮಾರ್ಗದಲ್ಲಿ ಶುಕ್ರವಾರ ಸಂಚರಿಸಬೇಕಿದ್ದ ಎಸ್‌ಎಂವಿಟಿ ಬೆಂಗಳೂರು–ಮುರ್ಡೇಶ್ವರ, ಮುರ್ಡೇಶ್ವರ–ಎಸ್‌ಎಂವಿಟಿ ಬೆಂಗಳೂರು, ಶನಿವಾರ ಸಂಚರಿಸಬೇಕಿದ್ದ ಕಾರವಾರ–ಯಶವಂತಪುರ ರೈಲು ಸಂಚಾರ ರದ್ದುಪಡಿಸಲಾಗಿದೆ.

ಶುಕ್ರವಾರ ಪ್ರಯಾಣ ಆರಂಭಿಸಿದ ಕೆಲ ರೈಲುಗಳ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ. ಮಂಗಳೂರು ಸೆಂಟ್ರಲ್–ವಿಜಯಪುರ ರೈಲು ಮಂಗಳೂರು ಜಂಕ್ಷನ್, ಕಾರವಾರ, ಲೋಂಡಾ ಮೂಲಕ ಹುಬ್ಬಳ್ಳಿ ತಲುಪಿದೆ.

ಕೆಎಸ್‌ಆರ್ ಬೆಂಗಳೂರು–ಕಾರವಾರ ರೈಲು ಅರಸೀಕೆರೆ, ಹುಬ್ಬಳ್ಳಿ, ಲೋಂಡಾ, ಮಡಗಾಂವ ಮೂಲಕ ಕಾರವಾರಕ್ಕೆ ತೆರಳಿದೆ. ಕಾರವಾರ–ಕೆಎಸ್‌ಆರ್ ಬೆಂಗಳೂರು ರೈಲು ಮಡಗಾಂವ, ಲೋಂಡಾ, ಹುಬ್ಬಳ್ಳಿ, ಅರಸೀಕೆರೆ ಮೂಲಕ ಬೆಂಗಳೂರಿಗೆ ತೆರಳಿದೆ. ಕೆಎಸ್‌ಆರ್ ಬೆಂಗಳೂರು–ಕಣ್ಣೂರು ರೈಲು ಜೋಲಾರಪೆಟ್ಟೈ, ಸೇಲಂ, ಶೋರನೂರು ಮೂಲಕ ಕಣ್ಣೂರಿಗೆ ತೆರಳಿದೆ. ಕಣ್ಣೂರು–ಕೆಎಸ್‌ಆರ್ ಬೆಂಗಳೂರು ರೈಲು, ಶೋರನೂರು, ಸೇಲಂ, ಜೋಲಾರಪೆಟ್ಟೈ ಮೂಲಕ ಬೆಂಗಳೂರಿಗೆ ತೆರಳಿದೆ.

ಭಾನುವಾರವೂ ಕಾನೂನು ಪದವಿ ಪರೀಕ್ಷೆ: ಆಕ್ಷೇಪ

ಬೆಂಗಳೂರು: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಮೂರು ಹಾಗೂ ಐದು ವರ್ಷಗಳ ಕಾನೂನು ಪದವಿ ಪರೀಕ್ಷೆಗಳನ್ನು ಆ.21ರಿಂದ ಸೆ.15ರವರೆಗೆ ನಿಗದಿ ಮಾಡಿದ್ದು, ಭಾನುವಾರವೂ ಪರೀಕ್ಷೆ ನಡೆಸುವುದಕ್ಕೆ ವಿದ್ಯಾರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕಾಲೇಜು ಮಟ್ಟದ ಎಲ್ಲ ಪರೀಕ್ಷೆಗಳೂ ರಜಾ ದಿನಗಳನ್ನು ಹೊರತುಪಡಿಸಿ ನಡೆಯುತ್ತವೆ. ಆದರೆ, ಕಾನೂನು ವಿಶ್ವವಿದ್ಯಾಲಯ ಇದೇ ಮೊದಲ ಬಾರಿ ಭಾನುವಾರವೂ ಪರೀಕ್ಷೆ ನಿಗದಿ ಮಾಡಿದೆ. ಆ.21ರಿಂದ ಸೆ.15ರವರೆಗೆ ಇರುವ ನಾಲ್ಕು ಭಾನುವಾರವೂ ಪರೀಕ್ಷೆ ಇದೆ. ಇದು ಸರಿಯಾದ ವಿಧಾನವಲ್ಲ ಎಂದು ದೂರಿದ್ದಾರೆ. ಆ.25 ಹಾಗೂ ಸೆ.1ರಂದು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ), ಎನ್‌ಡಿಎ (ನ್ಯಾಶನಲ್ ಡಿಫೆನ್ಸ್ ಅಕಾಡೆಮಿ ಮತ್ತು ನೇವಲ್ ಅಕಾಡೆಮಿ) ಪರೀಕ್ಷೆಗಳು ನಿಗದಿಯಾಗಿವೆ. ಸೆ. 8ರಂದು ಸಂತ ಮೇರಿ ಉತ್ಸವ, 15ರಂದು ತಿರು ಓಣಂ ಇರುತ್ತದೆ. ಹಾಗಾಗಿ, ನಾಲ್ಕು ಭಾನುವಾರವೂ ಪರೀಕ್ಷೆ ಮುಂದೂಡಬೇಕು ಎಂದು ಒತ್ತಾಯಿಸಿದ್ದಾರೆ.

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ (ಪ್ರೋಕ್ಯೂರಮೆಂಟ ಸೆಲ್) ರವರ ಕಛೇರಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಕೇಂದ್ರ ಕಚೇರಿ ಆವರಣ, ಹುಬ್ಬಳ್ಳಿ–580020 ಇ–ಮೇಲ್: swmprocurementcell@gmail.com ಮೊ: 0836–2213888

ಅಲ್ಪಾವದಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಎಸ್.ಎಫ್.ಸಿ/ಎಸ್.ಸಿ.ಟಿ.ಎಫ್.ಸಿ ಯೋಜನೆಯಡಿ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಸಿಬ್ಬಂದಿಗಳ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆಗೆ ಸಂಬಂಧಿಸಿದಂತೆ ಸೇವೆಯನ್ನು ಪಡೆಯಲು ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ಹಾಗೂ ನಿಯಮಗಳು 2000 ಪ್ರಕಾರ ಆಹ್ವಾನಿಸಿದೆ.

: ಟೆಂಡರ್ ವೇಳಾಪಟ್ಟಿ :

ಕ್ರ ಸಂ	ಟೆಂಡರ್ ಇಂಡೆಂಟ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1.	DMA/2024-25/IND2758	10,00,000.00	20,000.00	27–08–2024 ಸಮಯ ಸಂಜೆ 4.30 ಘಂಟೆ	29–08–2024 ಸಮಯ ಬೆಳಿಗ್ಗೆ 10.30 ಘಂಟೆ
2.	DMA/2024-25/IND2759	16,00,000.00	32,000.00		
3.	DMA/2024-25/IND2760	5,00,000.00	10,000.00		
4.	DMA/2024-25/IND2761	7,40,000.00	14,800.00		

ಟೆಂಡರ್ ಪ್ರಕಿಯೆಯಲ್ಲಿ ಭಾಗವಹಿಸುವ ಕುರಿತು ಹೆಚ್ಚಿನ ಮಾಹಿತಿಯನ್ನು ದಿನಾಂಕ: 19/08/2024 ರಿಂದ www.kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು, ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ: 16/08/2024

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಇ–ಪ್ರೋ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ

ವಾ.ಸಾ.ಇ/ಧಾರವಾಡ/284/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ಸರ್ಕಾರ

ಕಾರ್ಯದರ್ಶಿಗಳ ಕಾರ್ಯಾಲಯ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ

ದೂರವಾಣಿ ಸಂಖ್ಯೆ : 08225–272128 Email : sec.mmtemple@gmail.com

ಸಂಖ್ಯೆ ಶ್ರೀ ಮ.ಮ.ಕ್ಷೇ.ಅ.ಪ್ರಾ/3/ಪಿಆರ್/30/2023–24 ದಿನಾಂಕ : 12–08–2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)
ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕ್ರ. ಸಂ.	ಟೆಂಡರ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
	ಪ್ರತಿನಿತ್ಯ ಬಂಗಾರದ ರಥೋತ್ಸವ ಮಾಡಿಸುವ ಸೇವಾರ್ಥದಾರರಿಗೆ ವಿತರಿಸಲು ಬೇಕಾಗಿರುವ 200 ಗ್ರಾಂ ತೂಕ 3.50 ಇಂಚು ವ್ಯಾಸವಿರುವ ತಾಮ್ರದ ಚೆಂಬು ಹಾಗೂ 300 ಗ್ರಾಂ ತೂಕವುಳ್ಳ 9.50 ಇಂಚು ವ್ಯಾಸವುಳ್ಳ cu-93% ಇರುವ ತಾಮ್ರದ ತಟ್ಟೆ ಸೇರಿ ಒಂದು ಸೆಟ್ಟು ಹಾಗೂ ಸದರಿ ತಟ್ಟೆಯ ಮೇಲ್ಭಾಗದಲ್ಲಿ ಶ್ರೀಸ್ವಾಮಿಯ ಬಂಗಾರದ ರಥೋತ್ಸವವಿರುವ ಭಾವ ಚಿತ್ರದೊಡನೆ ಹಾಗೂ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ ಎಂದು ಮುದ್ರಿಸಿ 14000 ಸಾವಿರ ಸೆಟ್ಟ್‌ಗಳನ್ನು ಒದಗಿಸುವುದಕ್ಕೆ ಒಳಪಟ್ಟು ಎಲ್ಲಾ ತೆರಿಗೆಗಳು ಸೇರಿ.	98.00	98,000.00

ವಿವರಗಳನ್ನು www.kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ಅವಧಿಯಲ್ಲಿ ದಿನಾಂಕ : 26–08–2024 ಸಂಜೆ 4.00 ಗಂಟೆ ಒಳಗಾಗಿ ಪ್ರಾಧಿಕಾರದ ವಿಷಯ ನಿರ್ವಾಹಕರ ಮೊಬೈಲ್ ಸಂಖ್ಯೆ 9886306737 ನ್ನು ಸಂಪರ್ಕಿಸಬಹುದು.

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತ್ತಿವೆ.

1.	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	ದಿನಾಂಕ : 12–08–2024	ರ ನಂತರ
2.	ಗುಣಮಟ್ಟ ಮಾದರಿ ಟೆಂಡರ್ ಪೂರ್ವಭಾವಿ ಸಭೆ (Sample Tender pre bid meeting)	ದಿನಾಂಕ : 20–08–2024	ಮಧ್ಯಾಹ್ನ 12.00 ಗಂಟೆಗೆ
3.	ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಕಾಲ	ದಿನಾಂಕ : 27–08–2024	ಸಂಜೆ 4.00 ಗಂಟೆವರೆಗೆ
4.	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ದಿನಾಂಕ : 28–08–2024	ಬೆಳಗ್ಗೆ 11.00 ಗಂಟೆ ನಂತರ
5.	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ತಾಂತ್ರಿಕ ಬಿಡ್ ಪರಿಶೀಲನೆಯ ನಂತರ	

ಸಹಿ/– ಕಾರ್ಯದರ್ಶಿ, ಶ್ರೀಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ದಿ ಪ್ರಾಧಿಕಾರ, ಮಹದೇಶ್ವರಬೆಟ್ಟ

ಸಂ : ವಾಸಾಸಂಇ:ಚಾನಗರ :174:2024–25

ಕರ್ನಾಟಕ ಸರ್ಕಾರ

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

NRLM - ಜಿಲ್ಲಾ ಅಭಿಯಾನ ನಿರ್ವಹಣಾ ಘಟಕ – ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು

pddrdackm@gmail.com

ZP-CKM-17011(11)/3/2024-PD(DRDA) - (E-36873) Date: 08-08-2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ ಕಛೇರಿಯ ಡಿ.ಆರ್.ಡಿ.ಎ. ಶಾಖೆಯ NRLM- ವಿಭಾಗದ ಜಿಲ್ಲಾ ಮತ್ತು ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕ, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು (DPM), ಜಿಲ್ಲಾ ವ್ಯವಸ್ಥಾಪಕರು (S&E), ಜಿಲ್ಲಾ ವ್ಯವಸ್ಥಾಪಕರು (ಜೀವನೋಪಾಯ -Live-stock), ಜಿಲ್ಲಾ MIS ಸಂಯೋಜಕರು, ಕಛೇರಿ ಸಹಾಯಕರು, ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು, ತಾಲ್ಲೂಕು ವ್ಯವಸ್ಥಾಪಕರು (ಕೃಷಿ ಜೀವನೋಪಾಯ), ತಾಲ್ಲೂಕು ವ್ಯವಸ್ಥಾಪಕರು (ಕೃಷಿಯೇತರ ಜೀವನೋಪಾಯ), ವಲಯ ಮೇಲ್ವಿಚಾರಕರು, ವಲಯ ಮೇಲ್ವಿಚಾರಕರು (Skill), ದತ್ತಾಂಶ ನಮೂದಕರ (DEO) ಸೇವೆಯನ್ನು ತಾತ್ಕಾಲಿಕವಾಗಿ ಹೊರ ಸಂಪನ್ಮೂಲದಿಂದ ಪಡೆಯುವ ಬಗ್ಗೆ.

ಅಂದಾಜು ವೇಳಾಪಟ್ಟಿ (Calender of Events)

1	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ZP-CKM-17011(11)/3/2024-PD(DRDA)-(E-36873) ದಿನಾಂಕ : 08–08–2024
2	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ	ಅಂದಾಜು ಮೊತ್ತ Rs. 1,71,40,860/- (ಅಂದಾಜು ಒಂದು ಕೋಟಿ ಎಪ್ಪತ್ತೊಂದು ಲಕ್ಷದ ನಲ್ವತ್ತು ಸಾವಿರದ ಎಂಟು ನೂರ ಅರವತ್ತು ಮಾತ್ರ)
3	ಇ.ಎಂ.ಡಿ. ನಿಗದಿಪಡಿಸಿರುವ ಮೊತ್ತ	Rs. 2,57,000/- (ಎರಡು ಲಕ್ಷದ ಐವತ್ತೇಳು ಸಾವಿರ ಮಾತ್ರ)
4	E-Procurement ಪೋರ್ಟಲ್‌ನಲ್ಲಿ ದಸ್ತಾವೇಜುಗಳನ್ನು ಪರಿಶೀಲಿಸಬಹುದಾದ ದಿನಾಂಕ	ದಿನಾಂಕ: 08–08–2024 ರಿಂದ 28–08–2024
5	E-Procurement ಪೋರ್ಟಲ್‌ನಲ್ಲಿ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ	ದಿನಾಂಕ: 28–08–2024 ರಂದು ಸಂಜೆ 5.30 ಗಂಟೆಯೊಳಗೆ
6	E-Procurement ಪೋರ್ಟಲ್‌ನ ಟೆಂಡರ್ ದಾಖಲಾತಿಗಳನ್ನು ಮತ್ತು ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ಸಮಯ	ದಿನಾಂಕ: 29–08–2024ರ ಬೆಳಿಗ್ಗೆ 11.30 ಗಂಟೆ (ಸ್ಥಳ ಮತ್ತು ದಿನಾಂಕ, ಸಮಯ ಬದಲಾವಣೆಗೆ ಒಳಪಟ್ಟಿರುತ್ತದೆ)
7	E-Procurement ಪೋರ್ಟಲ್‌ನ ಟೆಂಡರ್ ಆರ್ಥಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ಸಮಯ	ದಿನಾಂಕ: 30–08–2024ರ ಬೆಳಿಗ್ಗೆ 11.30 ಗಂಟೆಗೆ ಅಥವಾ ಸಾಧ್ಯವಾದಲ್ಲಿ ತಾಂತ್ರಿಕ ದಾಖಲಾತಿಗಳ ಪರಿಶೀಲನೆ ನಂತರದಲ್ಲಿ ದಿನಾಂಕವನ್ನು ತಿಳಿಸಲಾಗುವುದು.
8	ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಶಾಖೆ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು. ದೂರವಾಣಿ ಸಂಖ್ಯೆ: 9480860006
		Website : www.kppp.karnataka.gov.in

ಸಹಿ/– ಮುಖ್ಯ ಕಾರ್ಯನಿರ್ವಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು

70ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ● ಅತ್ಯುತ್ತಮ ನಟ ಹಿರಿಮೆಗೆ ಪಾತ್ರರಾದ ರಿಷಬ್ ಶೆಟ್ಟಿ ಹೇಳಿಕೆ

‘ದೈವ, ಕನ್ನಡ ಜನತೆಗೆ ಪ್ರಶಸ್ತಿ ಅರ್ಪಣೆ’

ಪ್ರಜಾವಾಣಿ ವಾರ್ತೆ

ರಿಷಬ್ ಶೆಟ್ಟಿ

ಬೆಂಗಳೂರು: ನಾನು ‘ಕಾಂತಾರ’ ಸಿನಿಮಾದ ನಟ, ನಿರ್ದೇಶಕನಾಗಿರಬಹುದು. ಈ ಯಶಸ್ಸು ಇಡೀ ಚಿತ್ರತಂಡಕ್ಕೆ ಸಲ್ಲುತ್ತದೆ. ಅಪ್ಪು (ಪುನೀತ್ ರಾಜ್‌ಕುಮಾರ್) ಅವರಿಗೆ, ದೈವ ಹಾಗೂ ದೈವ ನರ್ತಕರು, ಕನ್ನಡ ಜನತೆಗೆ ಈ ಪ್ರಶಸ್ತಿ ಅರ್ಪಿಸುತ್ತೇನೆ’.

‘ಅತ್ಯುತ್ತಮ ನಟ’ ಪ್ರಶಸ್ತಿಗೆ ಪಾತ್ರರಾಗಿರುವ ನಟ ರಿಷಬ್ ಶೆಟ್ಟಿ ಅವರ ಪ್ರತಿಕ್ರಿಯೆ ಇದು. ಇವರು, ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗೆ ಪಾತ್ರವಾದ ಕನ್ನಡ ಚಿತ್ರರಂಗದ ನಾಲ್ಕನೇ ಕಲಾವಿದ. ನಾಯಕರಾಗಿ ನಟಿಸಿದ ನಾಲ್ಕನೇ ಸಿನಿಮಾದಲ್ಲೇ ರಿಷಬ್ ಈ ಸಾಧನೆ ಮಾಡಿರುವುದು ವಿಶೇಷ.

‘ಪ್ರಜಾವಾಣಿ’ ಜೊತೆಗೆ ಸಂತಸ ಹಂಚಿಕೊಂಡ ರಿಷಬ್ ಶೆಟ್ಟಿ, ‘ಹೊಂಬಾಳೆ ಸಂಸ್ಥೆಗೆ 4 ರಾಷ್ಟ್ರೀಯ ಪ್ರಶಸ್ತಿಗಳು ಬಂದಿವೆ. ಈ ಸಂಸ್ಥೆಯ ಜೊತೆ ನನ್ನ ಸಿನಿಮಾಗೆ ಬೆನ್ನೆಲುಬಾಗಿ ನಿಂತಿರುವುದು ಪುಣ್ಯ, ಖುಷಿಯ ವಿಚಾರ. ಕಾಂತಾರ ಚಿತ್ರೀಕರಣದ ವೇಳೆ ಯಾವುದೇ ಪ್ರಶಸ್ತಿ ನಿರೀಕ್ಷೆ ಇರಲಿಲ್ಲ. ರಾಷ್ಟ್ರೀಯ ಪ್ರಶಸ್ತಿ ಪಡೆದ ನಾನು ಪುಣ್ಯವಂತ. ನಾವು ಮಾಡಿದ ಕೆಲಸಗಳು ಅಲ್ಲಿಯವರೆಗೂ ತಲುಪುತ್ತಿವೆ. ಪ್ರಶಸ್ತಿ ಜವಾಬ್ದಾರಿ ಹೆಚ್ಚಿಸಿದೆ. ಜನರು ಸಿನಿಮಾ ನೋಡಿ ಯಶಸ್ಸು ನೀಡಿದಾಗಲೇ ಅದು ದೊಡ್ಡ ಜವಾಬ್ದಾರಿಯಾಗುತ್ತದೆ’ ಎಂದು ಅಭಿಪ್ರಾಯಪಟ್ಟರು.

‘ಸರ್ಕಾರಿ... ಸಿನಿಮಾಗೆಪ್ರಶಸ್ತಿಬಂದಾಗಲೂ ಮುಂದೆ ಒಳ್ಳೆಯ ಸಿನಿಮಾ ಮಾಡಬೇಕು ಎಂಬ ಹಂಬಲ ಇತ್ತು. ಒಂದು ಶುಕ್ರವಾರ ಏನು ಬೇಕಾದರೂ ಆಗಬಹುದು, ಒಂದು ಸಿನಿಮಾ ಏನು ಬೇಕಾದರೂ ಮಾಡಬಹುದು ಎನ್ನುವುದಕ್ಕೆ ಇದು ಸಾಕ್ಷಿ. ಈ ಸಿನಿಮಾಗೆ ಬೆನ್ನೆಲುಬಾಗಿದ್ದ ಅರವಿಂದ ಕಶ್ಯಪ್, ಗರ್ಭಿಣಿಯಾಗಿದ್ದರೂ ವಸ್ತ್ರವಿನ್ಯಾಸಕಿಯಾಗಿ ಕೆಲಸ ಮಾಡಿ ಜೊತೆಗೆ ನಿಂತ ಪತ್ನಿ ಪ್ರಗತಿ, ಸಂಗೀತದ ಮೂಲಕ ಸಿನಿಮಾದ ಯಶಸ್ಸಿಗೆ ದೊಡ್ಡ ಕೊಡುಗೆ ನೀಡಿದ ಅಜನೀಶ್, ಸಹಕಲಾವಿದರು, ಬರಹಗಾರರಿಗೆ ಧನ್ಯವಾದ. ಇಷ್ಟೆಲ್ಲಾ ಶ್ರೇಯಸ್ಸಿಗೆ ಕಾಂತಾರ ಕಾರಣ’ ಎಂದರು ರಿಷಬ್.

‘ಒಳ್ಳೆಯ ಸಿನಿಮಾ ನೀಡಲು ಪ್ರೋತ್ಸಾಹ’: ಕೆ.ಜಿ.ಎಫ್ ಹಾಗೂ ಕಾಂತಾರಕ್ಕೆ ಸಿಕ್ಕಿರುವ ನಾಲ್ಕು ರಾಷ್ಟ್ರೀಯ ಪ್ರಶಸ್ತಿಗಳು ಕನ್ನಡ ಜನತೆ, ಚಿತ್ರರಂಗಕ್ಕೆ ಸೇರಬೇಕು. ಈ ಸಿನಿಮಾಗಳು ತಂಡದ ಸದಸ್ಯರ ಶ್ರಮ. ಇದು, ಮುಂದೆ ಸಂಸ್ಥೆಯಿಂದ ಒಳ್ಳೆಯ ಸಿನಿಮಾ ನೀಡಲು ಪ್ರೋತ್ಸಾಹವಾಗಿದೆ’ ಎಂದವರು ಹೊಂಬಾಳೆ ಫಿಲ್ಮ್ಸ್ ಸಂಸ್ಥಾಪಕ ವಿಜಯ್ ಕಿರಗಂದೂರು.

ವಿಜಯ್ ಕಿರಗಂದೂರು

‘ಕೆ.ಜಿ.ಎಫ್’ಗೆ ದೊರೆತಿರುವ ಪ್ರಶಸ್ತಿ ಯಶ್ ಹಾಗೂ ಪ್ರಶಾಂತ್ ನೀಲ್‌ಗೆ ಸಲ್ಲಬೇಕು. ಯಶ್ ಆ್ಯಕ್ಷನ್ ಸೀಕ್ವೆನ್ಸ್ ಹಿಂದೆ ಅನ್ಬುಮಣಿ ಹಾಗೂ ಅರಿವು ಮಣಿ ಕೈಚಳಕವಿದೆ. ‘ಕಾಂತಾರ’ ಸಿನಿಮಾದ ಕ್ಲೈಮ್ಯಾಕ್ಸ್‌ನಲ್ಲಿ ರಿಷಬ್ ಅವರ ನಟನೆಯನ್ನು ನೋಡಿ ಎಲ್ಲರೂ ಮೆಚ್ಚಿದ್ದರು. ಅದಕ್ಕಾಗಿ ಅವರಿಗೆ ಈ ಗೌರವ ದೊರಕಿದೆ. ಚಿತ್ರದ ರಫ್ ಪ್ರಿಂಟ್ ನೋಡಿದಾಗ ಸಿನಿಮಾ ಚೆನ್ನಾಗಿ ಮೂಡಿಬಂದಿದೆ ಎನ್ನಿಸಿತ್ತು. ಆದರೆ ಸಿನಿಮಾ ಇಷ್ಟು ದೊಡ್ಡ ಮಟ್ಟಕ್ಕೆ ಹೋಗಲಿದೆ ಎನ್ನುವ ಊಹೆಯೂ ಇರಲಿಲ್ಲ’ ಎಂದು ಸಂತಸ ಹಂಚಿಕೊಂಡರು.

‘ಚಿತ್ರ ಬಿಡುಗಡೆಯಾದ ಮೊದಲ ದಿನವೇ ‘ಇದು ಎಲ್ಲೆಡೆ ವ್ಯಾಪಿಸಲಿದೆ’ ಎಂದು ಅರ್ಥವಾಯಿತು. ಹೀಗಾಗಿ ಎರಡು ವಾರದ ಬಳಿಕ ಎಲ್ಲಾ ಭಾಷೆಗಳಲ್ಲೂ ಬಿಡುಗಡೆ ಮಾಡಿದೆವು. ಹೊಂಬಾಳೆ ಫಿಲ್ಮ್ಸ್ ಅನ್ನು ರಾಷ್ಟ್ರವ್ಯಾಪಿ ವಿಸ್ತರಿಸುವ ಯೋಜನೆ ಇನ್ನೊಂದು ಎರಡು ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ. ‘ಕಾಂತಾರ’ ಪ್ರೀಕ್ವೆಲ್ ಶೂಟಿಂಗ್ ಶೇ 30ರಷ್ಟು ಪೂರ್ಣಗೊಂಡಿದೆ. ಸೆಪ್ಟೆಂಬರ್‌ನಿಂದ ಚಿತ್ರೀಕರಣ ಪುನರಾರಂಭವಾಗಲಿದೆ. 2025ರ ಮಧ್ಯದಲ್ಲಿ ಚಿತ್ರ ಬಿಡುಗಡೆಯಾಗಲಿದೆ. ಕೆ.ಜಿ.ಎಫ್.-3 ಮುಂದಿನ ದಿನಗಳಲ್ಲಿ ಖಂಡಿತವಾಗಿಯೂ ಆಗುತ್ತದೆ’ ಎಂದು ಕಿರಗಂದೂರು ಹೇಳಿದರು.

ಈ ಹಿಂದೆ ವಾಸುದೇವ ರಾವ್, ಚಾರು ಹಾಸನ್, ಸಂಚಾರಿ ವಿಜಯ್ ರಾಷ್ಟ್ರೀಯ ಪ್ರಶಸ್ತಿ ಪಡೆದಿದ್ದರು.

‘ಕಾಂತಾರ’ ಮತ್ತು ‘ಕೆಜಿಎಫ್-2’ ಚಿತ್ರಗಳು ‘ಪ್ರಜಾವಾಣಿ’ ಸಿನಿ ಸಮ್ಮಾನ ಪ್ರಶಸ್ತಿ ಗೌರವಕ್ಕೂ ಪಾತ್ರವಾಗಿದ್ದವು.

‘ನಾನೀಗ ಸಂಭ್ರಮದಲ್ಲಿದ್ದೇನೆ’

ದಿನೇಶ್ ಶೆಣೈ

ನಾನೀಗ ನೆಲದ ಮೇಲಿಲ್ಲ. ‘ಮಧ್ಯಂತರ’ ಒಂದು ಪೂರ್ಣ ಸಿನಿಮಾ. 1976ರಿಂದ 1985ರ ಅವಧಿಯಲ್ಲಿ ಇಬ್ಬರು ಸಿನಿಮಾ ಮೋಹಿಗಳು ಚಲನಚಿತ್ರವನ್ನು ನೋಡುವ ಹುಚ್ಚಿನಿಂದ ಸಿನಿಮಾ ಮಾಡುವ ಹುಚ್ಚಿನೆಡೆಗೆ ಬದಲಾಗುವ ಚಿತ್ರಕಥೆ ಇದರಲ್ಲಿದೆ. ಆರಂಭದಲ್ಲಿ ಇದರ ಒಂದು ಭಾಗವನ್ನು ಕಿರುಚಿತ್ರ ಮಾಡಿದೆ. 36 ನಿಮಿಷದ ಈ ಚಿತ್ರದ ಮುಂದಿನ ಪೂರ್ಣಭಾಗದ ಸ್ಕ್ರಿಪ್ಟ್ ತಯಾರಿದೆ. ಇದನ್ನು ಸಿನಿಮಾ ಮಾಡಲು ಈಗ ನನಗೆ ನಿರ್ಮಾಪಕರು ಸಿಗುವುದು ಸುಲಭವಾಗಬಹುದು ಎಂಬ ವಿಶ್ವಾಸ ನನ್ನದು.

ದಿನೇಶ್ ಶೆಣೈ, ‘ಮಧ್ಯಂತರ’ ನಿರ್ದೇಶಕ (ಅತ್ಯುತ್ತಮ ಚೊಚ್ಚಲ ನಿರ್ದೇಶನ ಪ್ರಶಸ್ತಿ–ನಾನ್ ಫೀಚರ್ ವಿಭಾಗ)

‘ನಿರೀಕ್ಷೆ ಮಾಡಿರಲಿಲ್ಲ’


ಸುರೇಶ್ ಅರಸ್

‘ಮಧ್ಯಂತರ’ ಕಿರುಚಿತ್ರದ ಸಂಕಲನಕ್ಕಾಗಿ ಪ್ರಶಸ್ತಿ ನಿರೀಕ್ಷೆ ಮಾಡಿರಲಿಲ್ಲ. ಖುಷಿಯಾಗಿದೆ. ಈ ಪ್ರಶಸ್ತಿಗೆ ಕಾರಣ ಶಶಿಧರ್ ಅಡಪ. ಅವರು ಕಿರುಚಿತ್ರದ ನಿರ್ದೇಶಕ ದಿನೇಶ್ ಶೆಣೈ ಅವರಿಗೆ ಪರಿಚಯಿಸಿದ್ದರು. ಚಿತ್ರದಲ್ಲಿ ಸರಳವಾದ ಸಂಕಲನವಿದೆ. ಬಹುಶಃ ಕಥೆ ಹೇಳಿಕೊಂಡು ಹೋದ ವಿಧಾನ ತೀರ್ಪುಗಾರರಿಗೆ ಇಷ್ಟವಾಗಿರಬೇಕು.

ಸುರೇಶ್ ಅರಸ್, ಸಂಕಲನಕಾರ

ರಿಷಬ್ ಅತ್ಯುತ್ತಮ ನಟ

ಒಂದನೇ ಪುಟದಿಂದ...

‘ಮಧ್ಯಂತರ’ ಕಿರುಚಿತ್ರದ ನಿರ್ದೇಶನಕ್ಕಾಗಿ ದಿನೇಶ್ ಶೆಣೈ ಅವರಿಗೆ ‘ಅತ್ಯುತ್ತಮ ಚೊಚ್ಚಲ ನಿರ್ದೇಶನದ ಚಿತ್ರ’ ಹಾಗೂ ಇದೇ ಚಿತ್ರದ ಸಂಕಲನಕ್ಕಾಗಿ ಸುರೇಶ್ ಅರಸ್ ಅವರಿಗೆ ‘ಅತ್ಯುತ್ತಮ ಸಂಕಲನ’ ಪ್ರಶಸ್ತಿ ದೊರಕಿದೆ. ಅತ್ಯುತ್ತಮ ಕಲೆ ಹಾಗೂ ಸಾಂಸ್ಕೃತಿಕ ಚಲನಚಿತ್ರ ಪ್ರಶಸ್ತಿ ಕನ್ನಡದ ‘ರಂಗ ವೈಭೋಗ’ದ ಪಾಲಾಗಿದೆ. ಈ ಚಿತ್ರವನ್ನು ಸುನೀಲ್ ಪುರಾಣಿಕ್ ನಿರ್ಮಿಸಿ, ನಿರ್ದೇಶಿಸಿದ್ದಾರೆ. ಈ ಬಾರಿ ಕನ್ನಡಕ್ಕೆ ಏಳು ಪ್ರಶಸ್ತಿಗಳು ಲಭಿಸಿವೆ.

ಮಲಯಾಳದ ‘ಆಟ್ಟಂ’ ಸಿನಿಮಾಗೆ ಅತ್ಯುತ್ತಮ ಚಿತ್ರ ಪ್ರಶಸ್ತಿ ಲಭಿಸಿದೆ. ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಇಬ್ಬರು ಹಂಚಿಕೊಂಡಿದ್ದಾರೆ. ತಮಿಳಿನ ‘ತಿರುಚಿತ್ರಂಬಲಂ’ನ ನಟನೆಗಾಗಿ ನಿತ್ಯಾ ಮೆನನ್ ಹಾಗೂ ಗುಜರಾತಿನ ‘ಕಚ್ ಎಕ್ಸ್‌ಪ್ರೆಸ್’ ಚಿತ್ರದಲ್ಲಿನ ನಟನೆಗಾಗಿ ಮಾನಸಿ ಪರೇಖ್ ಪ್ರಶಸ್ತಿ ಗಳಿಸಿದ್ದಾರೆ. ಸೂರಜ್ ಆರ್. ಬರ್ಜಾತ್ಯಾ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಪಡೆದಿದ್ದಾರೆ.

‘ಎತ್ತರಕ್ಕೆ ಬೆಳೆಯಲು ಮುನ್ನುಡಿಯಾಗಲಿ’



ರಾಷ್ಟ್ರೀಯ ಪ್ರಶಸ್ತಿ ಪಡೆದ ಎಲ್ಲರಿಗೂ ಅಭಿನಂದನೆಗಳು. ವಿಶೇಷವಾಗಿ ನಮ್ಮವರಾದ ರಿಷಬ್ ಶೆಟ್ಟಿ, ವಿಜಯ್ ಕಿರಗಂದೂರು, ಪ್ರಶಾಂತ್ ನೀಲ್, ಇಡೀ ಹೊಂಬಾಳೆ ಫಿಲ್ಮ್ಸ್‌ಗೆ ಅಭಿನಂದನೆ. ಇನ್ನಷ್ಟು ಎತ್ತರಕ್ಕೆ ಬೆಳೆಯಲು ಇದು ಮುನ್ನುಡಿಯಾಗಲಿ. ಇದು ರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಸಿನಿಮಾಗಳು ಮಿಂಚಿದ ಗಳಿಗೆ.

ಯಶ್, ನಟ

ಪ್ರಶಸ್ತಿ ಪುರಸ್ಕೃತ ಚಿತ್ರಗಳು/ಸಾಧಕರ ವಿವರ

ಅತ್ಯುತ್ತಮ ಚಲನಚಿತ್ರ	ಆಟ್ಟಂ (ಮಲಯಾಳ)
ಅತ್ಯುತ್ತಮ ನಿರ್ದೇಶನ	ಸೂರಜ್ ಆರ್. ಬರ್ಜಾತ್ಯಾ (ಊಂಚಾಯ್)
ಅತ್ಯುತ್ತಮ ಮನರಂಜನಾ ಸಿನಿಮಾ	ಕಾಂತಾರ (ಕನ್ನಡ)
ನಿರ್ದೇಶಕರ ಅತ್ಯುತ್ತಮ ಚೊಚ್ಚಲ ಚಿತ್ರ	ಪ್ರಮೋದ್ ಕುಮಾರ್ (ಫೌಜಾ)
ಅತ್ಯುತ್ತಮ ನಟ	ರಿಷಬ್ ಶೆಟ್ಟಿ (ಕಾಂತಾರ)
ಅತ್ಯುತ್ತಮ ನಟ	ನಿತ್ಯಾ ಮೆನನ್ (ತಿರುಚಿತ್ರಂಬಲಂ), ಮಾನಸಿ ಪರೇಖ್ (ಕಚ್ ಎಕ್ಸ್‌ಪ್ರೆಸ್)
ಅತ್ಯುತ್ತಮ ಪೋಷಕ ನಟ	ಪವನ್ ರಾಜ್ ಮಲ್ಹೋತ್ರಾ (ಫೌಜಾ)
ಅತ್ಯುತ್ತಮ ಪೋಷಕ ನಟ	ನೀನಾ ಗುಪ್ತಾ (ಊಂಚಾಯ್)
ಅತ್ಯುತ್ತಮ ಬಾಲ ಕಲಾವಿದ	ಶ್ರೀಪತ್ (ಮಾಲಿಕಪ್ಪುರಂ)
ಅತ್ಯುತ್ತಮ ಛಾಯಾಚಿತ್ರಗ್ರಹಣ	ರವಿವರ್ಮನ್ (ಪೊನ್ನಿಯಿನ್ ಸೆಲ್ವನ್–1)
ಅತ್ಯುತ್ತಮ ಚಿತ್ರಕಥೆ	ಆನಂದ್ ಏಕರ್ಷಿ (ಆಟ್ಟಂ), ಅರ್ಪಿತಾ ಮುಖರ್ಜಿ, ರಾಹುಲ್ ವಿ. ಚಿಟ್ಟೆಲಾ (ಗುಲ್‌ಮೋಹರ್)
ಅತ್ಯುತ್ತಮ ನಿರ್ಮಾಣ ವಿನ್ಯಾಸ	ಆನಂದ್ ಆಧ್ಯ (ಅಪರಾಜಿತೊ)
ಅತ್ಯುತ್ತಮ ಸಾಹಸ ನಿರ್ದೇಶಕ	ಅನ್ಬರಿವ್ (ಕೆಜಿಎಫ್–2)
ಅತ್ಯುತ್ತಮ ಮೇಕಪ್ ಕಲಾವಿದ	ಸೋಮನಾಥ್ ಕುಂಡು (ಅಪರಾಜಿತೊ)
ಅತ್ಯುತ್ತಮ ವಸ್ತ್ರ ವಿನ್ಯಾಸ	ನಿಕಿ ಜೋಶಿ (ಕಚ್ ಎಕ್ಸ್‌ಪ್ರೆಸ್)
ಹಾಡುಗಳಿಗೆ ಅತ್ಯುತ್ತಮ ಸಂಗೀತ ನಿರ್ದೇಶನ	ಪ್ರೀತಮ್ (ಬ್ರಹ್ಮಾಸ್ತ್ರ ಭಾಗ 1)
ಹಿನ್ನೆಲೆ ಸಂಗೀತಕ್ಕಾಗಿ ಅತ್ಯುತ್ತಮ ಸಂಗೀತ ನಿರ್ದೇಶನ	ಎ.ಆರ್. ರೆಹಮಾನ್ (ಪೊನ್ನಿಯಿನ್ ಸೆಲ್ವನ್–ಭಾಗ 1)
ಅತ್ಯುತ್ತಮ ಸಾಹಿತ್ಯ	ನೌಶಾದ್ ಸದರ್ ಖಾನ್ (ಫೌಜಾ)
ಅತ್ಯುತ್ತಮ ಹಿನ್ನೆಲೆ ಗಾಯಕ	ಅರಿಜಿತ್ ಸಿಂಗ್ (ಹಾಡು–ಕೇಸರಿಯಾ, ಚಿತ್ರ–ಬ್ರಹ್ಮಾಸ್ತ್ರ–ಭಾಗ 1)
ಅತ್ಯುತ್ತಮ ಹಿನ್ನೆಲೆ ಗಾಯಕಿ	ಬಾಂಬೆ ಜಯಶ್ರೀ (ಹಾಡು–ಚಾಯುಮ್ ವೆಯಿಲ್, ಚಿತ್ರ–ಸೌದಿ ವೆಳ್ಳಕ್ಕ CC.225/2009)
ಅತ್ಯುತ್ತಮ ನೃತ್ಯ ಸಂಯೋಜನೆ	ಜಾನಿ ಮಾಸ್ಟರ್ ಮತ್ತು ಸತೀಶ್ ಕೃಷ್ಣನ್ (ತಿರುಚಿತ್ರಂಬಲಂ)
ಅತ್ಯುತ್ತಮ ಧ್ವನಿ ವಿನ್ಯಾಸ	ಆನಂದ್ ಕೃಷ್ಣಮೂರ್ತಿ (ಪೊನ್ನಿಯಿನ್ ಸೆಲ್ವನ್–ಭಾಗ 1)
ಅತ್ಯುತ್ತಮ ಸಂಕಲನ	ಮಹೇಶ್ ಭುವನಂದ್ (ಆಟ್ಟಂ)
ತೀರ್ಪುಗಾರರ ವಿಶೇಷ ಪ್ರಶಸ್ತಿ	ಮನೋಜ್ ಬಾಜಪೇಯಿ (ಗುಲ್‌ಮೋಹರ್), ಸಂಜೋಯ್ ಚೌಧರಿ (ಕಾಧಿಕನ್)
ಅತ್ಯುತ್ತಮ ಪ್ರಾದೇಶಿಕ ಸಿನಿಮಾ ವಿಭಾಗ	
ಅತ್ಯುತ್ತಮ ತೆಲುಗು ಚಿತ್ರ	ಕಾರ್ತಿಕೇಯ 2
ಅತ್ಯುತ್ತಮ ತಮಿಳು ಚಿತ್ರ	ಪೊನ್ನಿಯಿನ್ ಸೆಲ್ವನ್ ಭಾಗ 1
ಅತ್ಯುತ್ತಮ ಪಂಜಾಬಿ ಚಿತ್ರ	ಬಾಘಿ ದಿ ಧೀ
ಅತ್ಯುತ್ತಮ ಒಡಿಯಾ ಚಿತ್ರ	ದಮನ್
ಅತ್ಯುತ್ತಮ ಮಲಯಾಳ ಚಿತ್ರ	ಸೌದಿ ವೆಲಕ್ಕ CC.225/2009
ಅತ್ಯುತ್ತಮ ಮರಾಠಿ ಚಿತ್ರ	ವಾಳ್ವಿ
ಅತ್ಯುತ್ತಮ ಹಿಂದಿ ಚಿತ್ರ	ಗುಲ್‌ಮೋಹರ್
ಅತ್ಯುತ್ತಮ ಬೆಂಗಾಲಿ ಚಿತ್ರ	ಕಬೇರಿ ಅಂತರಧನ
ಅತ್ಯುತ್ತಮ ಅಸ್ಸಾಮಿ ಚಿತ್ರ	ಎಮುತಿ ಪುತಿ

ಗುಂಪು ಘರ್ಷಣೆ: ಆರು ಪೊಲೀಸರಿಗೆ ಗಾಯ

ಮುಂಬೈ/ನಾಸಿಕ್ (ಪಿಟಿಐ): ಬಾಂಗ್ಲಾದಲ್ಲಿ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ಖಂಡಿಸಿ ಹಿಂದೂ ಸಂಘಟನೆಯೊಂದು ಆಯೋಜಿಸಿದ್ದ ಪ್ರತಿಭಟನೆಯಿಂದ ಶುಕ್ರವಾರ ಉತ್ತರ ಮಹಾರಾಷ್ಟ್ರದ ಜಲಗಾಂವ್ ಮತ್ತು ನಾಸಿಕ್ ನಗರಗಳಲ್ಲಿ ಉದ್ವಿಗ್ನತೆ ಉಂಟಾಗಿದ್ದು, ಪರಿಸ್ಥಿತಿ ನಿಯಂತ್ರಿಸುವ ವೇಳೆ 6 ಜನ ಪೊಲೀಸರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಸಕಲ್ ಹಿಂದೂ ಸಮಾಜ’ವು ಕರೆ ನೀಡಿದ್ದ ಬಂದ್‌ನಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ಉಂಟಾಗಿ, ಭದ್ರಕಾಳಿ ಪ್ರದೇಶದಲ್ಲಿ ಉದ್ವಿಗ್ನತೆ ಉಂಟಾಯಿತು. ಜನರನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಪರಿಸ್ಥಿತಿ ನಿಯಂತ್ರಣದಲ್ಲಿದೆ. ಗುಂಪು ಚದುರಿಸಲು 6 ಅಶ್ರುವಾಯು ಶೆಲ್‌ಗಳು, ಒಂದು ರಬ್ಬರ್ ಬುಲೆಟ್ ಅನ್ನು ಹಾರಿಸಲಾಯಿತು. ಆರು ಪೊಲೀಸರು ಗಾಯಗೊಂಡಿದ್ದಾರೆ. ರಾಜ್ಯ ಮೀಸಲು ಪೊಲೀಸ್ ಪಡೆ ಸಿಬ್ಬಂದಿಯನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ’ ಎಂದು ನಾಸಿಕ್ ಪೊಲೀಸ್ ಆಯುಕ್ತ ಸಂದೀಪ್ ಕಾರ್ಣಿಕ್ ಹೇಳಿದ್ದಾರೆ.

ಸಕಲ್ ಹಿಂದೂ ಸಮಾಜದ ಸದಸ್ಯರು ಬೈಕ್ ರ‍್ಯಾಲಿಯೊಂದಿಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಆಗ ಭದ್ರಕಾಳಿ ಪ್ರದೇಶದಲ್ಲಿ ಕೆಲವು ಅಂಗಡಿಗಳು ತೆರೆದಿರುವುದು ಕಂಡಿತು. ಅವನ್ನು ಮುಚ್ಚುವಂತೆ ಪ್ರತಿಭಟನಕಾರರು ಒತ್ತಾಯಿದಾಗ ವಾಗ್ವಾದ ನಡೆದು ಗುಂಪು ಘರ್ಷಣೆಗೆ ತಿರುಗಿತು.

‘ಶಿಥಿಲ ಮನೆ ಗುರುತಿಸಿ, ಅಪಾಯ ತಪ್ಪಿಸಿ’

ಅತಿವೃಷ್ಟಿ, ಪ್ರವಾಹ ಪರಿಸ್ಥಿತಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮಾಂತರ ಪ್ರದೇಶದಲ್ಲಿ ಶಿಥಿಲವಾದ ಮನೆಗಳನ್ನು ಗ್ರಾಮ ಮಟ್ಟದಲ್ಲೇ ಗುರುತಿಸಬೇಕು. ಅಂಗನವಾಡಿ, ಶಾಲಾ ಕಟ್ಟಡಗಳು, ಸೇತುವೆಗಳು ಮತ್ತು ಕೆರೆಗಳು ಸುಸ್ಥಿತಿಯಲ್ಲಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಶುಕ್ರವಾರ ನಡೆದ ಅತಿವೃಷ್ಟಿ ಮತ್ತು ಪ್ರವಾಹ ಪರಿಸ್ಥಿತಿ ಕುರಿತ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಮನೆ ಕುಸಿತ, ನೀರಿನಲ್ಲಿ ಕೊಚ್ಚಿ ಹೋಗುವ ಪ್ರಕರಣಗಳಲ್ಲಿ ಸಾವು–ನೋವು ತಪ್ಪಿಸಲು ಸಾಧ್ಯವಿದೆ. ಆ ಬಗ್ಗೆ ಮುತುವರ್ಜಿ ವಹಿಸಬೇಕು ಎಂದು ಹೇಳಿದರು.

‘ಮಲೆನಾಡು, ಕರಾವಳಿ ಭಾಗಗಳಲ್ಲಿ ಇರುವ ಹಳೇ ಶಾಲಾ ಕಟ್ಟಡಗಳನ್ನು ಗುರುತಿಸಿ, ಕ್ರಿಯಾ ಯೋಜನೆಯಲ್ಲಿ ಆದ್ಯತೆ ಮೇರೆಗೆ ದುರಸ್ತಿಪಡಿಸಬೇಕು. ಪಂಚಾಯತ್ ಮಟ್ಟದಲ್ಲಿ ಕಾರ್ಯಪಡೆ ರಚಿಸಲಾಗಿದೆ. ₹20 ಸಾವಿರ ಅನುದಾನ ಒದಗಿಸಲಾಗಿದೆ. ಸಾವು– ನೋವು ತಪ್ಪಿಸುವುದು ನಮ್ಮ ಆದ್ಯತೆ. ಗ್ರಾಮ ಪಂಚಾಯತ್ ಕಾರ್ಯಪಡೆ ಬಲಪಡಿಸಲು ಕ್ರಮ ಕೈಗೊಳ್ಳಬೇಕು’ ಎಂದರು.

‘ರಾಜ್ಯದಲ್ಲಿ ಮನೆಗಳ ಕುಸಿತದಿಂದ 29 ಸಾವು ಸಂಭವಿಸಿದ್ದು, ನಗರ ಮತ್ತು ಗ್ರಾಮ ಪ್ರದೇಶಗಳಲ್ಲಿ ಶಿಥಿಲಗೊಂಡ ಮನೆಗಳಲ್ಲಿರುವವರನ್ನು ಖಾಲಿ ಮಾಡಿ, ಅವರಿಗೆ ಪುನರ್‌ವಸತಿ ಕಲ್ಪಿಸಬೇಕು’ ಎಂದೂ ಸಿದ್ದರಾಮಯ್ಯ ಸೂಚಿಸಿದರು.

‘ಸೇತುವೆಗಳ ಸುಸ್ಥಿತಿ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ವರದಿಯನ್ನು ಪಡೆಯಬೇಕು. ಸಂಪರ್ಕ ರಸ್ತೆಗಳು ಕುಸಿದಿದ್ದರೆ ಅವುಗಳನ್ನು ಸರಿಪಡಿಸಿ, ವಾಹನಗಳ ಸಂಚಾರಕ್ಕೆ ಸುಗಮಗೊಳಿಸಬೇಕು. ಎಲ್ಲಾ ಸೇತುವೆ, ರಸ್ತೆಗಳನ್ನು ನಿರಂತರವಾಗಿ ಪರಿಶೀಲನೆ ನಡೆಸಿ ಯಾವುದೇ ಅನಾಹುತ ಆಗದಂತೆ ಎಚ್ಚರಿಕೆ ವಹಿಸಬೇಕು. ಮುಳುಗು ಸೇತುವೆಗಳಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಬೇಕು. ಯಾವುದೇ ಕಾರಣಕ್ಕೂ ವಾಹನ ಸಂಚರಿಸದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಹೇಳಿದರು.

‘ಪ್ರವಾಹ, ಭಾರಿ ಮಳೆ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡರೆ, ಕೂಡಲೇ ಸರಿಪಡಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಅಗತ್ಯವಿರುವ ಟ್ರಾನ್ಸ್‌ಫಾರ್ಮರ್‌ಗಳು, ಕಂಬಗಳು ಸುಲಭವಾಗಿ ಸಿಗುವಂತೆ ವ್ಯವಸ್ಥೆ ಮಾಡಿಕೊಳ್ಳಬೇಕು’ ಎಂದೂ ಸೂಚನೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅತಿವೃಷ್ಟಿ ಮತ್ತು ಪ್ರವಾಹ ಪರಿಸ್ಥಿತಿ ಪರಿಶೀಲನಾ ಸಭೆ ನಡೆಸಿದರು. ಕಂದಾಯ ಸಚಿವ ಕೃಷ್ಣಬೈರೇಗೌಡ ಮತ್ತು ಹಿರಿಯ ಅಧಿಕಾರಿಗಳು ಇದ್ದರು – ಪ್ರಜಾವಾಣಿ ಚಿತ್ರ

‘ರಾಜಕಾಲುವೆ ಒತ್ತುವರಿ ತೆರವು ಮಾಡಿ’

‘ಬೆಂಗಳೂರು ನಗರದಲ್ಲಿ ಪ್ರವಾಹನಿಯಂತ್ರಣ ಕೊಠಡಿ ಆರಂಭಿಸಲಾಗಿದೆ. ದೊಡ್ಡ ಚರಂಡಿಗಳು ತೆರೆದಿರುವ ಸ್ಥಳಗಳನ್ನು ಗುರುತಿಸಿ ಮೊದಲೇ ಬಂದೋಬಸ್ತ್ ಮಾಡಲಾಗಿದೆ. ಇದರಿಂದ ಈ ಬಾರಿ ಯಾವುದೇ ಸಾವು ನೋವು ಸಂಭವಿಸಿಲ್ಲ’ ಎಂದು ಸಭೆಯಲ್ಲಿ ಅಧಿಕಾರಿಗಳು ತಿಳಿಸಿದರು.

‘ರಾಜಕಾಲುವೆಗಳ ಒತ್ತುವರಿ ತೆರವು ಮಾಡಬೇಕು. ಕೆರೆಗಳ ಕೋಡಿಗಳಿಗೆ ಗೇಟ್ ಅಳವಡಿಸುವ ಮೂಲಕ, ಮಳೆಗಾಲದಲ್ಲಿ ಕೆರೆಗಳಲ್ಲಿ ನೀರಿನ ಪ್ರಮಾಣ ನಿಯಂತ್ರಿಸಿ ಪ್ರವಾಹ ತಡೆಗಟ್ಟಬೇಕು. ಪ್ರತಿ ದಿನ ನಗರದ ಪರಿಸ್ಥಿತಿ ಕುರಿತು ಸಭೆ ನಡೆಸಿ ಪರಿಶೀಲನೆ ನಡೆಸಬೇಕು’ ಎಂದು ಸಿದ್ದರಾಮಯ್ಯ ಅವರು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚನೆ ನೀಡಿದರು.

‘ಮಳೆಯ ಸಂದರ್ಭದಲ್ಲಿ ಬಿಡಿಎ, ಜಲಮಂಡಳಿ, ಬಿಎಂಆರ್‌ಸಿಎಲ್, ಬಿಬಿಎಂಪಿ ಎಲ್ಲವೂ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು’ ಎಂದು ಹೇಳಿದರು.

ಅಂಕಿ ಅಂಶಗಳು

1283 ಶೇ 75 ಕ್ಕೂ ಹೆಚ್ಚು ಹಾನಿಗೊಂಡ ಮನೆಗಳು

879 ಪ್ರತಿ ಮನೆಗೆ ತಲಾ ₹1.20 ಲಕ್ಷ ಪರಿಹಾರ. ಒಟ್ಟು ₹10.54 ಕೋಟಿ ಪರಿಹಾರ

500 ಹೊಸ ಮನೆಗಳ ಮಂಜೂರು

67 ಅತಿವೃಷ್ಟಿಯಿಂದಾದ ದುರ್ಮರಣ

₹3.29 ಕೋಟಿ 66 ಪ್ರಕರಣಗಳಲ್ಲಿ ಪರಿಹಾರ ವಿತರಣೆ

ಕೆರೆಗಳನ್ನು ತುಂಬಿಸಿ: ಸಿಎಂ

ರಾಜ್ಯ ಜಲಾಶಯಗಳು ಶೇ 89 ರಷ್ಟು ಭರ್ತಿ ಆಗಿದ್ದು, ಕೆರೆಗಳನ್ನು ತುಂಬಿಸಲು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಇನ್ನು ಮುಂದೆಯೂ ಉತ್ತಮ ಮಳೆ ಆಗುವ ಸಾಧ್ಯತೆ ಇರುವುದರಿಂದ ವಿವಿಧ ಏತ ನೀರಾವರಿ ಯೋಜನೆಗಳಡಿ ಎಲ್ಲೆಲ್ಲಿ ಅವಕಾಶವಿದೆಯೋ ಅಲ್ಲೆಲ್ಲ ಕೆರೆಗಳಿಗೆ ನೀರು ತುಂಬಿಸಬೇಕು. ಆ ಮೂಲಕ ಅಂತರ್ಜಲ ಮಟ್ಟ ಹೆಚ್ಚಿ, ಕುಡಿಯುವ ನೀರಿನ ಸಮಸ್ಯೆ ಕಡಿಮೆ ಆಗಲಿ ಎಂದು ಹೇಳಿದರು.

ಮಳೆ ಮುನ್ಸೂಚನೆ ಆಧರಿಸಿ, ಮುಂಚಿತವಾಗಿಯೇ ಸೂಕ್ತ ಪ್ರಮಾಣದ ನೀರನ್ನು ಜಲಾಶಯಗಳಿಂದ ಹೊರಗೆ ಬಿಡುವ ಮೂಲಕ ಮಳೆಯಾದಾಗ ಜಲಾಶಯಗಳಲ್ಲಿ ಏಕಾಏಕಿ ನೀರಿನ ಸಂಗ್ರಹ ಹೆಚ್ಚಾಗಿ ಪ್ರವಾಹ ಉಂಟಾಗುವುದನ್ನು ತಡೆಗಟ್ಟಲು ನಿರ್ದೇಶನ ನೀಡಿದರು.

ಕೆಪಿಎಸ್‌ಸಿ: ಪೂರ್ವಭಾವಿ ಪರೀಕ್ಷೆ– ಮಾರ್ಗಸೂಚಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳಿಗೆ ಇದೇ 27ರಂದು ನಡೆಯಲಿರುವ ಪೂರ್ವಭಾವಿ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಕಡ್ಡಾಯವಾಗಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ) ಶುಕ್ರವಾರ ಬಿಡುಗಡೆ ಮಾಡಿದೆ.

ಅಭ್ಯರ್ಥಿಗಳು ಬೆಳಿಗ್ಗೆ 10ರ ಪರೀಕ್ಷೆಗೆ 8 ಗಂಟೆಗೂ ಮುನ್ನ ಮತ್ತು ಮಧ್ಯಾಹ್ನ 2 ಗಂಟೆಯ ಪರೀಕ್ಷೆಗೆ 12ಕ್ಕೂ ಮೊದಲು ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು ಎಂದು ಸೂಚಿಸಿದೆ.

ಪರೀಕ್ಷೆಗೆ ಹಾಜರಾಗುವ ಪ್ರತಿಯೊಬ್ಬರೂ ಪರೀಕ್ಷಾ ಕೇಂದ್ರದಲ್ಲಿ ತಪಾಸಣೆಗೆ ಒಳಗಾಗುವುದು ಕಡ್ಡಾಯ. ಪರೀಕ್ಷೆ ಮಧ್ಯೆ ಶೌಚಾಲಯಕ್ಕೆ ಹೋಗುವವರು ಮತ್ತೆ ತಪಾಸಣೆಗೆ ಒಳಗಾಗಲೇಬೇಕು. ಧಾರ್ಮಿಕ ಆಚರಣೆಗೆ ಸಂಬಂಧಿಸಿದ ವಿಶೇಷ ವಸ್ತು/ವಸ್ತ್ರಗಳನ್ನು ಧರಿಸಿರುವವರು ವಿಶೇಷ ತಪಾಸಣೆಗೆ ಒಳಗಾಗಬೇಕು ಎಂದು ಸೂಚಿಸಿದೆ.

ವಸ್ತ್ರ ಸಂಹಿತೆ: ತುಂಬು ತೋಳಿನ ಶರ್ಟ್/ಟಿ-ಶರ್ಟ್, ಹಲವು ಮಡಿಕೆಗಳು ಅಥವಾ ಪದರುಗಳು ಇರುವ, ವಿವಿಧ ವಿನ್ಯಾಸದ ವಸ್ತ್ರಗಳನ್ನು ಧರಿಸುವಂತಿಲ್ಲ. ಸರಳ ಉಡುಪು ಹಾಗೂ ಚಪ್ಪಲಿ ಧರಿಸಿ ಪರೀಕ್ಷೆಗೆ ಹಾಜರಾಗಬೇಕು. ಮಂಗಳ ಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ ಬೇರೆ ಯಾವುದೇ ರೀತಿಯ ಆಭರಣ ಹಾಕಿಕೊಳ್ಳುವಂತಿಲ್ಲ. ಶೂ ಮತ್ತು ಸಾಕ್ಸ್‌ಗೆ ನಿಷೇಧ ಎಂದು ಸೂಚಿಸಿದೆ.

ಈ ನಿಯಮಗಳು ಎಲ್ಲ ಅಭ್ಯರ್ಥಿಗಳು ಮತ್ತು ಅಂಧ ಅಭ್ಯರ್ಥಿಗಳ ಪರವಾಗಿ ಪರೀಕ್ಷೆ ಬರೆಯಲು ಬಂದಿರುವ ಲಿಪಿಕಾರರಿಗೂ ಅನ್ವಯವಾಗಲಿದೆ. ಪರೀಕ್ಷಾ ಕೇಂದ್ರಗಳಲ್ಲಿ ಬ್ಯಾಗ್/ಫೋನ್ ಇನ್ನಿತರ ವೈಯಕ್ತಿಕ ವಸ್ತು ಇಡಲು ವ್ಯವಸ್ಥೆ ಇಲ್ಲ ಎಂದು ಕೆಪಿಎಸ್‌ಸಿ ಹೇಳಿದೆ.

ನಿಷೇಧ

- ಪರೀಕ್ಷಾ ಕೊಠಡಿಯೊಳಗೆ ಲೋಹದ ಮತ್ತು ಅಪಾರದರ್ಶಕ ನೀರಿನ ಬಾಟಲ್‌ಗಳು
- ಕಿವಿ–ಬಾಯಿಯನ್ನು ಮುಚ್ಚುವಂತಹ ಯಾವುದೇ ರೀತಿಯ ಮಾಸ್ಕ್‌ಗಳು
- ಮೊಬೈಲ್, ಸ್ಮಾರ್ಟ್‌ಫೋನ್, ಟ್ಯಾಬ್ಲೆಟ್, ಪೆನ್‌ಡ್ರೈವ್, ಬ್ಲೂಟೂತ್ ಸಾಧನ, ಸ್ಮಾರ್ಟ್‌ವಾಚ್, ರೆಕಾರ್ಡರ್, ಕ್ಯಾಲ್ಕ್ಯುಲೇಟರ್ ಸೇರಿ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳು
- ಬಿಡಿ ಹಾಳೆಗಳು, ನೋಟ್ಸ್‌ಗಳು, ಗ್ರಾಫ್‌ಹಾಳೆಗಳು, ಕೈಚೀಲ, ಪರ್ಸ್‌ಗಳು

ಕೊಪ್ಪಳ ಜಿಲ್ಲೆಯ ಅಳವಂಡಿಯ ನಜುರುದ್ದೀನ್ ಬಿಸರಳ್ಳಿ ಅವರ ಮನೆಯಲ್ಲಿ ವರಮಹಾಲಕ್ಷ್ಮಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು. ಅಳವಂಡಿಯ ಮರುಳಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹಾಜರಿದ್ದರು

ಗ್ರಾಮ ಆಡಳಿತಾಧಿಕಾರಿ; ಸಾವಿರ ಸರ್ಕಾರಿ ಹುದ್ದೆಗೆ 5.70 ಲಕ್ಷ ಅರ್ಜಿ!

● ಕೆ.ಓಂಕಾರ ಮೂರ್ತಿ

ಕೋಲಾರ: ರಾಜ್ಯದಲ್ಲಿ ಸರ್ಕಾರಿ ಹುದ್ದೆಗಳಿಗೆ ಬೇಡಿಕೆ ಹೆಚ್ಚುತ್ತಲೇ ಇದ್ದು ಒಂದು ಸಾವಿರ ಗ್ರಾಮ ಆಡಳಿತಾಧಿಕಾರಿ ಹುದ್ದೆಗಳಿಗೆ 5,70,982 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ.

ಕಂದಾಯ ಇಲಾಖೆಯಲ್ಲಿ ವಿವಿಧ ಜಿಲ್ಲೆಗಳಲ್ಲಿ ಖಾಲಿ ಇರುವ ಉಳಿಕೆ ಮೂಲ ವೃಂದ ಹಾಗೂ ಕಲ್ಯಾಣ ಕರ್ನಾಟಕ (ಸ್ಥಳೀಯ) ವೃಂದ ಸೇರಿ ಒಟ್ಟು ಸಾವಿರ ಗ್ರಾಮ ಆಡಳಿತಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ ಸಂಬಂಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅರ್ಜಿ ಆಹ್ವಾನಿಸಿತ್ತು.

ಅರ್ಜಿ ಸಲ್ಲಿಕೆ ಅವಧಿ ಮುಗಿದಿದ್ದು ಮಾಸಿಕ ₹21,400 – ₹42,000 ವೇತನ ಇರುವ ಈ ಹುದ್ದೆಗೆ ದ್ವಿತೀಯ ಪಿಯು ಅಥವಾ ತತ್ಸಮಾನ ವಿದ್ಯಾಭ್ಯಾಸ ನಿಗದಿಪಡಿಸಲಾಗಿದೆ.

ಗ್ರಾಮ ಆಡಳಿತಾಧಿಕಾರಿ ಹುದ್ದೆಗೆ ಅರ್ಜಿ ಆಹ್ವಾನಿಸಿ ಜಾಹೀರಾತು ನೀಡಿದ್ದೆವು. ಸಾಮಾಜಿಕ ಜಾಲತಾಣಗಳಲ್ಲೂ ಪ್ರಚಾರ ಮಾಡಿದ್ದೆವು. ಹೀಗಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬಂದಿವೆ

ಅಕ್ರಂ ಪಾಷಾ, ಜಿಲ್ಲಾಧಿಕಾರಿ, ಕೋಲಾರ

ಎರಡು ಹಂತಗಳಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ. ಮೊದಲ ಹಂತದ ಪರೀಕ್ಷೆ ಸೆಪ್ಟೆಂಬರ್ 29 ಹಾಗೂ ಎರಡನೇ ಹಂತದ ಪರೀಕ್ಷೆ ಅಕ್ಟೋಬರ್ 27ರಂದು ಎಲ್ಲಾ ಜಿಲ್ಲೆಗಳಲ್ಲಿ ನಡೆಯಲಿದೆ.

ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳು ಪರೀಕ್ಷೆಗೆ ನೋಂದಾಯಿಸಿರುವುದರಿಂದ ಜಿಲ್ಲೆಯ ಎಲ್ಲ ಪಿಯು ಕಾಲೇಜುಗಳ ಜೊತೆಗೆ ಪದವಿ ಕಾಲೇಜು, ವಿಶ್ವವಿದ್ಯಾಲಯ ಕಾಲೇಜು, ಡಿಪ್ಲೊಮಾ, ನರ್ಸಿಂಗ್, ಫಾರ್ಮಸಿ ಕಾಲೇಜು ಹಾಗೂ ಪ್ರೌಢಶಾಲೆಗಳಲ್ಲೂ ಪರೀಕ್ಷೆ ನಡೆಸಲು ಪ್ರಾಧಿಕಾರ ಸಲಹೆ ನೀಡಿದೆ.

ಡಿಕೆಶಿ ಸೂಚನೆಯಂತೆ ಆದೇಶ ಹೊರಡಿಸಿದ್ದ ಜಿ.ಪಂ ಸಿಇಒ

ಪಿಡಿಒ, ಕಾರ್ಯದರ್ಶಿ ನಿಯೋಜನೆಗೆ ತಡೆ

ಪ್ರಜಾವಾಣಿ ವಾರ್ತೆ

ರಾಮನಗರ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ ಮೇರೆಗೆ ರಾಮನಗರ ಜಿಲ್ಲೆಯ 20 ಅಧಿಕಾರಿಗಳನ್ನು ಬೇರೆ ಪಂಚಾಯಿತಿಗಳಿಗೆ ನಿಯೋಜನೆ ಮಾಡಿ ಹೊರಡಿಸಿದ್ದ ಆದೇಶಕ್ಕೆ ಪಂಚಾಯತ್ ರಾಜ್ ಇಲಾಖೆ ಆಯುಕ್ತರು ತಡೆ ಒಡ್ಡಿದ್ದಾರೆ.

ರಾಮನಗರ ಜಿಲ್ಲೆಯ 18 ಗ್ರಾಮ ಪಂಚಾಯಿತಿಗಳ 13 ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ) ಹಾಗೂ 7 ಗ್ರೇಡ್–1 ಕಾರ್ಯದರ್ಶಿಗಳು ಸೇರಿದಂತೆ ಒಟ್ಟು 20 ಅಧಿಕಾರಿಗಳನ್ನು ಬೇರೆ ಪಂಚಾಯಿತಿಗಳಿಗೆ ನಿಯೋಜನೆ ಮಾಡಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಿಗ್ವಿಜಯ್ ಬೋಡ್ಕೆ ಇದೇ ಆಗಸ್ಟ್ 7ರಂದು ಆದೇಶ ಹೊರಡಿಸಿದ್ದರು.

ರಾಜ್ಯ ವೃಂದದ ಅಧಿಕಾರಿಗಳಾಗಿರುವ ಪಿಡಿಒ ಮತ್ತು ಕಾರ್ಯದರ್ಶಿಗಳ ನಿಯೋಜನೆ ಆದೇಶಕ್ಕೂ ಮುಂಚೆ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವೂ ಆಗಿರುವ ಪಂಚಾಯತ್ ರಾಜ್ ಇಲಾಖೆಯ ಆಯುಕ್ತಾಲಯದ ಗಮನಕ್ಕೆ ತರಬೇಕಿತ್ತು.

ಆದರೆ, ರಾಮನಗರ ಜಿ.ಪಂ ಸಿಇಒ ಬೋಡ್ಕೆ ಅವರು ಈ ವಿಷಯವನ್ನು ಪಂಚಾಯತ್ ರಾಜ್ ಇಲಾಖೆಯ ಆಯುಕ್ತಾಲಯದ ಗಮನಕ್ಕೆ ತಾರದೆ ಆದೇಶ ಹೊರಡಿಸಿದ್ದರು. ಈ ವಿಷಯ ಗಮನಕ್ಕೆ ಬರುತ್ತಿದ್ದಂತೆಯೇ ಪಂಚಾಯತ್ ರಾಜ್ ಇಲಾಖೆ ಆಯುಕ್ತೆ ಅರುಂಧತಿ ಚಂದ್ರಶೇಖರ್ ಆಗಸ್ಟ್ 14 ರಂದು ನಿಯೋಜನೆ ಆದೇಶಕ್ಕೆ ತಡೆ ಹಿಡಿದಿದ್ದಾರೆ.

ಉಪಚುನಾವಣೆಎದುರುನೋಡುತ್ತಿರುವ ಚನ್ನಪಟ್ಟಣ ತಾಲ್ಲೂಕಿನಲ್ಲೇ 9 ಪಿಡಿಒಹಾಗೂಇಬ್ಬರುಗ್ರೇಡ್–1ಕಾರ್ಯದರ್ಶಿಗಳು, ಕನಕಪುರ ತಾಲ್ಲೂಕಿನಲ್ಲಿ ನಾಲ್ವರು ಪಿಡಿಒ ಮತ್ತು ನಾಲ್ವರು ಕಾರ್ಯದರ್ಶಿಗಳು ಹಾಗೂ ರಾಮನಗರ ತಾಲ್ಲೂಕಿನ ಒಬ್ಬ ಪಿಡಿಒ ಅನ್ನು ಬೇರೆಡೆಗೆ ನಿಯೋಜಿಸಲಾಗಿತ್ತು.

ಇದರಲ್ಲಿ ಏಳು ಕಾರ್ಯದರ್ಶಿಗಳಿಗೆ ಪ್ರಭಾರ ಪಿಡಿಒ ಜವಾಬ್ದಾರಿ ನೀಡಲಾಗಿತ್ತು. ಸಂಬಂಧಿಸಿದ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು ನಿಯೋಜನೆ ಪಟ್ಟಿಯಲ್ಲಿರುವವರನ್ನು ತಕ್ಷಣ ಕರ್ತವ್ಯದಿಂದ ಬಿಡುಗಡೆಗೊಳಿಸಲು ಸೂಚಿಸಲಾಗಿತ್ತು.

ಆಯೋಗಕ್ಕೆ ಮಾಹಿತಿ, ತಪ್ಪಿತಸ್ಥರ ವಿರುದ್ಧ ಕ್ರಮದ ಭರವಸೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಮುಡಾದಲ್ಲಿ ನಿವೇಶನ ಹಂಚಿಕೆ ಮಾಡುವ ಮಂಜೂರಾತಿ ಪತ್ರದ ಸೆಕ್ಯುರಿಟಿ ಬಾಂಡ್ ಪ್ರತಿಗಳನ್ನು ಗೊತ್ತು ಗುರಿ ಇಲ್ಲದೇ ಕಂಡ ಕಂಡವರಿಗೆ ನೀಡಿರುವ ಅಧಿಕಾರಿ ಅಥವಾ ನೌಕರರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು’ ಎಂದು ಅಧ್ಯಕ್ಷ ಕೆ.ಮರೀಗೌಡ ತಿಳಿಸಿದ್ದಾರೆ.

‘ಪ್ರಜಾವಾಣಿ’ಯಲ್ಲಿ ಬುಧವಾರ ಪ್ರಕಟವಾಗಿದ್ದ ‘3,500 ನಿವೇಶನಗಳ ಲೆಕ್ಕವೇ ಇಲ್ಲ’ ವರದಿಗೆ ಸ್ಪಂದಿಸಿದ್ದಾರೆ.

ವರದಿ ಪರಿಣಾಮ

‘ಪ್ರಾಧಿಕಾರದಿಂದ ನಿವೇಶನಗಳ ಹಂಚಿಕೆ ವಿಷಯದಲ್ಲಿ ಕೇಳಿಬಂದಿರುವ ಆರೋಪಗಳ ಕುರಿತು ವಿಚಾರಣೆ ನಡೆಸಿ ವರದಿ ನೀಡಲು ಸರ್ಕಾರವು ನಿವೃತ್ತ ನ್ಯಾಯಾಧೀಶ ಪಿ.ಎನ್. ದೇಸಾಯಿ ನೇತೃತ್ವದ ಏಕಸದಸ್ಯ ವಿಚಾರಣಾ ಆಯೋಗವನ್ನು ರಚಿಸಿದೆ. ಈ ಹಿಂದೆ ಮಂಜೂರಾತಿ ಪತ್ರದ ಸೆಕ್ಯುರಿಟಿ ಬಾಂಡ್ ಪಡೆದುಕೊಳ್ಳಲಾಗಿರುವ ಸಂಪೂರ್ಣ ಮಾಹಿತಿಯನ್ನು ಪ್ರಾಧಿಕಾರದಿಂದ ಆಯೋಗಕ್ಕೆ ಸಲ್ಲಿಸಲಾಗುವುದು. ಬಳಿಕ ಆಯೋಗವು ನೀಡುವ ವರದಿಯ ಅನುಸಾರ ಸರ್ಕಾರದ ನಿರ್ದೇಶನದಂತೆ ತಪ್ಪಿತಸ್ಥ ಅಧಿಕಾರಿಗಳು, ನೌಕರರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು’ ಎಂದು ಮಾಹಿತಿ ನೀಡಿದ್ದಾರೆ.

3,500 ನಿವೇಶನಗಳ ಲೆಕ್ಕವೇ ಇಲ್ಲ

ಪ್ರಜಾವಾಣಿಯಲ್ಲಿ ಪ್ರಕಟವಾಗಿದ್ದ ವರದಿ

ಸೊರಬ ತಾಲ್ಲೂಕಿನಲ್ಲಿ‘ನನ್ನ ಶಾಲೆ ನನ್ನ ಜವಾಬ್ದಾರಿ’ ಕಾರ್ಯಕ್ರಮಕ್ಕೆ ಸಚಿವರಿಂದ ಚಾಲನೆ

ಮಾಂಟೆಸ್ಸರಿ: 3ಂಗಳಲ್ಲಿ 38,000 ದಾಖಲಾತಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳ 1,700 ಸರ್ಕಾರಿ ಶಾಲೆಗಳಲ್ಲಿ ಈ ವರ್ಷ ಪ್ರಾಯೋಗಿಕವಾಗಿ ಅರಂಭಿಸಿರುವ ಎಲ್‌ಕೆಜಿ, ಯುಕೆಜಿ ಒಳಗೊಂಡ ಮಾಂಟೆಸ್ಸರಿ ಶಿಕ್ಷಣ ವಿಭಾಗಕ್ಕೆ ಸಾರ್ವಜನಿಕರಿಂದ ಭಾರಿ ಬೆಂಬಲ ವ್ಯಕ್ತವಾಗಿದೆ. 1 ತಿಂಗಳಲ್ಲಿ 38,000ಕ್ಕೂ ಹೆಚ್ಚು ಮಕ್ಕಳ ದಾಖಲಾತಿ ಆಗಿದೆ’ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು.

ಸೊರಬ ತಾಲ್ಲೂಕಿನ ಕುಬಟೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ರಾಜ್ಯಮಟ್ಟದಲ್ಲಿ ಆರಂಭಿಸಿರುವ ‘ನನ್ನ ಶಾಲೆ ನನ್ನ ಜವಾಬ್ದಾರಿ’ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ಎಲ್‌ಕೆಜಿ, ಯುಕೆಜಿ ನಂತರ ಮಕ್ಕಳು ಅಲ್ಲಿಯೇ ಶಿಕ್ಷಣ ಮುಂದುವರಿಸುವುದರಿಂದ ಸರ್ಕಾರಿ ಶಾಲೆಗಳ ಬಲವರ್ಧನೆಗೂ ನೆರವಾಗಲಿದೆ. ಮಾಂಟೆಸ್ಸರಿ ತರಗತಿಯನ್ನು ಹಂತಹಂತವಾಗಿ ರಾಜ್ಯದಾದ್ಯಂತ ವಿಸ್ತರಿಸಲಾಗುವುದು’ ಎಂದರು.

ಸರ್ಕಾರಿ ಶಾಲೆಗಳ ಹಳೆಯ ವಿದ್ಯಾರ್ಥಿಗಳು ಓದಿದ ಶಾಲೆಗಳ ಅಭಿವೃದ್ಧಿಗೆ ನೆರವಾಗಲು ಶಾಲಾ ಆಡಳಿತ ಸಂಪರ್ಕಿಸಬಹುದು. ಇದಕ್ಕೆ ತೆರಿಗೆ ವಿನಾಯ್ತಿ ಇದೆ

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ

₹ 1,000 ಕೋಟಿ ನೆರವು ನಿರೀಕ್ಷೆ: ರಾಜ್ಯದಲ್ಲಿ 46,000 ಸರ್ಕಾರಿ ಶಾಲೆಗಳ ನಿರ್ವಹಣೆಗೆ ವಾರ್ಷಿಕ ₹ 44,000 ಕೋಟಿ ವ್ಯಯಿಸಲಾಗುತ್ತಿದೆ. ಸರ್ಕಾರದ ಅನುದಾನದಿಂದಲೇ ಎಲ್ಲ ಶಾಲೆಗಳ ಅಭಿವೃದ್ಧಿ ಸಾಧ್ಯವಾಗದು. ವಿದ್ಯಾರ್ಥಿಗಳ ಬಗ್ಗೆ ಜನಸಾಮಾನ್ಯರಲ್ಲಿ ಕಾಳಜಿ ಹೆಚ್ಚಿಸಲು ‘ನನ್ನ ಶಾಲೆ, ನನ್ನ ಜವಾಬ್ದಾರಿ’ ಕಾರ್ಯಕ್ರಮ ಆರಂಭಿಸಲಾಗಿದೆ. ಇದರಡಿ ಈ ವರ್ಷ ಸಮುದಾಯದಿಂದ ₹ 1,000 ಕೋಟಿ ಆರ್ಥಿಕ ನೆರವು ದೊರೆಯುವ ನಿರೀಕ್ಷೆ ಇದೆ ಎಂದರು.

‘ಮಂಡ್ಯ ಜಿಲ್ಲೆ ಮಳವಳ್ಳಿ ಹಾಗೂ ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನಲ್ಲಿ ಹಳೆಯ ವಿದ್ಯಾರ್ಥಿಗಳು ₹ 6 ಕೋಟಿಗೂ ಅಧಿಕ ಮೊತ್ತದ ನೆರವು ನೀಡಿ ಶಾಲಾ ಕಟ್ಟಡ ಕಟ್ಟಿಸಿಕೊಟ್ಟಿದ್ದಾರೆ. ಈ ಮಾದರಿ ಕಾರ್ಯ ಎಲ್ಲರಿಗೂ ಸ್ಫೂರ್ತಿ ಆಗಲಿ’ ಎಂದು ಆಶಿಸಿದರು.

ಬಂಗಾರಪ್ಪ ಓದಿದ್ದ ಶಾಲೆಗೆ ₹10 ಲಕ್ಷ ಮೊತ್ತದ ಪರಿಕರಗಳ ನೆರವು

ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರು ಓದಿದ್ದ, ಸೊರಬ ತಾಲ್ಲೂಕಿನ ಕುಬಟೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸಚಿವ ಮಧು ಬಂಗಾರಪ್ಪ ₹ 10 ಲಕ್ಷ ಮೌಲ್ಯದ ಪರಿಕರಗಳನ್ನು ವೈಯಕ್ತಿಕವಾಗಿ ಕೊಡುಗೆ ನೀಡಿ 'ನನ್ನ ಶಾಲೆ ನನ್ನ ಜವಾಬ್ದಾರಿ' ಕಾರ್ಯಕ್ರಮಕ್ಕೆ ವಿಶಿಷ್ಟವಾಗಿ ಚಾಲನೆ ನೀಡಿದರು.

ಸಚಿವರು ನೀಡಿದ ಕೊಡುಗೆಯಲ್ಲಿ ಕಂಪ್ಯೂಟರ್, ಯುಪಿಎಸ್, ಸ್ಮಾರ್ಟ್ ಕ್ಲಾಸ್, ಗ್ರಂಥಾಲಯಕ್ಕೆ ಪುಸ್ತಕಗಳು ಸೇರಿದಂತೆ ಪಠ್ಯ ಹಾಗೂ ಕ್ರೀಡೆಗೆ ಪೂರಕವಾದ ಪರಿಕರಗಳು ಒಳಗೊಂಡಿವೆ. ಈ ವೇಳೆ ಮಧು ಬಂಗಾರಪ್ಪ ಪತ್ನಿ ಅನಿತಾ, ಸೊರಬ ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಾ, ಕಾಂಗ್ರೆಸ್ ಮುಖಂಡ ನಾಗರಾಜಗೌಡ, ಬಗರ್‌ಹುಕುಂ ಸಮಿತಿ ಅಧ್ಯಕ್ಷ ಶೇಖರ್ ಗೌಡ ಇದ್ದರು.

ಬಿರುಕು ವಿಡಿಯೊ ವೈರಲ್: ಸೇತುವೆ ಸುಭದ್ರ ಎಂದ ಡಿ.ಸಿ

ಪ್ರಜಾವಾಣಿ ವಾರ್ತೆ

ಕಾರವಾರ: ಇಲ್ಲಿನ ಕಾಳಿ ನದಿಯ ಹಳೆಯ ಸೇತುವೆ ಕುಸಿದಿದ್ದರಿಂದ ಸಂಚಾರಕ್ಕೆ ಆಸರೆ ಆಗಿರುವ ಹೊಸ ಸೇತುವೆಯಲ್ಲೂ ಬಿರುಕು ಕಾಣಿಸಿಕೊಂಡ ದೃಶ್ಯವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಜನರಲ್ಲಿ ಆತಂಕ ಮೂಡಿಸಿದೆ.

ಕಾರವಾರ–ಗೋವಾ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ–66ರಲ್ಲಿನ ಸೇತುವೆಯಲ್ಲಿ ದ್ವಿಮುಖ ವಾಹನ ಸಂಚಾರವಿದೆ.

‘ವದಂತಿ ಹಿನ್ನೆಲೆಯಲ್ಲಿ ಪರಿಶೀಲಿಸಿ ವರದಿ ನೀಡಲು ಸೇತುವೆ ನಿರ್ಮಿಸಿದ ಐಆರ್‌ಬಿ ವೆಸ್ಟ್ ಕೋಸ್ಟ್ ಟೋಲ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಸೂಚಿಸಲಾಗಿತ್ತು. ಸೇತುವೆ ಸುಭದ್ರವಿದೆ. ವಾಹನ ಸಂಚಾರಕ್ಕೆ ಸಮಸ್ಯೆ ಇಲ್ಲ ಎಂದು ಮೌಖಿಕವಾಗಿ ತಿಳಿಸಿದ್ದಾರೆ. ಲಿಖಿತ ವರದಿ ಸಲ್ಲಿಸಲು ಸೂಚಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು ▲1330

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,143
ಇಂದಿನ ಅಂತ್ಯ	24,541
▲	397
ದಿನದ ಗರಿಷ್ಠ	24,563

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹9500-10000
ದಾವಣಗೆರೆ	₹6800-7000
ಕೆ.ಆರ್.ಪೇಟೆ	₹9483-9483
ಪುತ್ತೂರು	₹4000-10500
ತಿಪಟೂರು	₹10400-10950

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹490
12 ಕ್ಕೆ	₹68
ಮೈಸೂರು	
100ಕ್ಕೆ	₹495

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹206-460
ದ್ವಿತಳಿ (ಬಿ.ವಿ)	₹255-588

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹232
ಆರ್‌ಎಸ್‌ಎಸ್-5	₹225
ಗುಡ್ ಲಾಟ್	₹214

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹16400
ಎಸಿ	₹10080
ಆರ್‌ಪಿ	₹18500
ಆರ್‌ಸಿ	₹10140

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1560 (1540)
ಸೋಯಾ (ರಿಫೈನ್ಡ್)	₹940 (945)
ಸೂರ್ಯಕಾಂತಿ (ರಿಫೈನ್ಡ್)	₹952 (955)
ಪಾಮೋಲಿನ್	₹918 (916)

40 ಸಾವಿರ ಉದ್ಯೋಗ ಸೃಷ್ಟಿ • ಯಂಗ್ ಲಿಯು ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚೆ

ಫಾಕ್ಸ್‌ಕಾನ್: ₹25 ಸಾವಿರ ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೊಡ್ಡಬಳ್ಳಾಪುರದ ಬಳಿ ₹25 ಸಾವಿರ ಕೋಟಿ ಹೂಡಿಕೆ ಮೂಲಕ ಬೃಹತ್ ಐಫೋನ್ ತಯಾರಿಕಾ ಘಟಕ ಸ್ಥಾಪಿಸುತ್ತಿರುವ ತೈವಾನ್ ಮೂಲದ ಫಾಕ್ಸ್‌ಕಾನ್ ಕಂಪನಿಗೆ ಅಗತ್ಯ ಮೂಲಸೌಲಭ್ಯ ಕಲ್ಪಿಸುವ ಜೊತೆಗೆ ಎಲ್ಲ ನೆರವನ್ನೂ ನೀಡಲಾಗುವುದು' ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯದಲ್ಲಿ ಇನ್ನೂ ಹೆಚ್ಚು ಹೂಡಿಕೆ ಮಾಡುವಂತೆ ಕಂಪನಿಗೆ ಮನವಿ ಮಾಡಿದರು.

ಬೆಂಗಳೂರಿಗೆ ಬಂದಿದ್ದ ಫಾಕ್ಸ್‌ಕಾನ್ ಕಂಪನಿಯ ಸಿಇಒ ಮತ್ತು ಅಧ್ಯಕ್ಷ ಯಂಗ್ ಲಿಯು ನೇತೃತ್ವದ ಉನ್ನತ ಮಟ್ಟದ ನಿಯೋಗಕ್ಕೆ ಶುಕ್ರವಾರ ರಾತ್ರಿ ಆಯೋಜಿಸಿದ್ದ ಭೋಜನ ಕೂಟದಲ್ಲಿ ಅವರು ಮಾತನಾಡಿದರು.

'ಫಾಕ್ಸ್‌ಕಾನ್ ಕಂಪನಿಗೆ ನೀರು, ವಿದ್ಯುತ್, ರಸ್ತೆ ಮತ್ತಿತರ ಸೌಲಭ್ಯಗಳನ್ನು ಒದಗಿಸಲಿದ್ದೇವೆ. ಕಂಪನಿಯು ಫ್ಯಾಬ್ ಉದ್ಯಮ ವಲಯ ಸೇರಿದಂತೆ ಮಿಕ್ಕ ವಲಯಗಳಲ್ಲೂ ಹೆಚ್ಚು ಹೂಡಿಕೆ ಮಾಡಲು ಒಲವು ತೋರಿಸಬೇಕು. ರಾಜ್ಯವು ಅತ್ಯುತ್ತಮ ಮೌಲ್ಯಗಳಿಂದ ಕೂಡಿರುವ ಕೈಗಾರಿಕಾ ಸಂಸ್ಕೃತಿಯನ್ನು ಹೊಂದಿದೆ ಮತ್ತು ಸಮಗ್ರ ಕೈಗಾರಿಕಾ ಅಭಿವೃದ್ಧಿಗೆ ಒತ್ತು ಕೊಟ್ಟಿದೆ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಯಂಗ್ ಲಿಯು, ರಾಜ್ಯದಲ್ಲಿ ಸದ್ಯದಲ್ಲೇ ಕಾರ್ಯಾಚರಣೆ ಆರಂಭಿಸಲಿರುವ ಘಟಕವು ಚೀನಾದ ನಂತರದ ಎರಡನೇ ಅತ್ಯಂತ ಬೃಹತ್ ಘಟಕವಾಗಿದೆ. ಇಲ್ಲಿ 40 ಸಾವಿರ ಮಧ್ಯಮ ಸ್ತರದ ವಿದ್ಯಾವಂತರಿಗೆ ಉದ್ಯೋಗಾವಕಾಶ ಸಿಗಲಿದೆ. ನಮ್ಮ ಹೂಡಿಕೆ ಇಷ್ಟಕ್ಕೆ ನಿಲ್ಲುವುದಿಲ್ಲ. ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಾಗಲಿದೆ. ಪರಸ್ಪರ ವಿಶ್ವಾಸವಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂದು ಹೇಳಿದರು.

ಫಾಕ್ಸ್‌ಕಾನ್ ಕಂಪನಿಯ ಸಿಇಒ ಮತ್ತು ಅಧ್ಯಕ್ಷ ಯಂಗ್ ಲಿಯು ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದ್ದರು

ಉದ್ಯೋಗಿಗಳಿಗೆ ಮನೆಗಿಂತಲೂ ಹೆಚ್ಚಿನ ನೆಮ್ಮದಿಯ ವಾತಾವರಣ ಇರಲಿದೆ. ಇವರಿಗೆ ಗುಣಮಟ್ಟದ ಮನರಂಜನೆ, ಜಿಮ್, ವಸತಿ ಸೌಲಭ್ಯ, ಆಹಾರ ಎಲ್ಲವನ್ನೂ ಫಾಕ್ಸ್‌ಕಾನ್ ಕಂಪನಿ ಒದಗಿಸಲಿದೆ. ಈ ಮೂಲಕ ಜಾಗತಿಕ ಗುಣಮಟ್ಟದ ಕೈಗಾರಿಕಾ ಪರಿಸರವನ್ನು ನಿರ್ಮಿಸಲಾಗುವುದು ಎಂದು ಹೇಳಿದರು.

ಮುಖ್ಯಾಂಶಗಳು

- ಫಾಕ್ಸ್‌ಕಾನ್‌ಗೆ 300 ಎಕರೆ ಜಮೀನು ಹಸ್ತಾಂತರ
- ದೊಡ್ಡಬಳ್ಳಾಪುರ ಬಳಿ ಐಫೋನ್ ಘಟಕ ನಿರ್ಮಾಣ
- ಹೆಚ್ಚಿನ ಬಂಡವಾಳ ಹೂಡಿಕೆಗೆ ಸರ್ಕಾರ ಮನವಿ

ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಾತನಾಡಿ, ರಾಜ್ಯವು ಹೆಚ್ಚಿನ ಹೂಡಿಕೆಯನ್ನು ಮುಕ್ತವಾಗಿ ಸ್ವಾಗತಿಸಲಿದೆ. ಕೆಐಎಡಿಬಿ, ಕೆಪಿಟಿಸಿಎಲ್, ಅಗ್ನಿಶಾಮಕ ದಳ, ಮಾಲಿನ್ಯ ನಿಯಂತ್ರಣ ಮಂಡಳಿಗಳು ಫಾಕ್ಸ್‌ಕಾನ್ ಕಂಪನಿಯ ಯೋಜನೆಯು ಸುಗಮವಾಗಿ ಅನುಷ್ಠಾನಕ್ಕೆ ಬರುವ ನಿಟ್ಟಿನಲ್ಲಿ ಬದ್ಧತೆಯಿಂದ ಶ್ರಮಿಸುತ್ತಿವೆ. ಕಂಪನಿಗೆ ಈಗಾಗಲೇ 300 ಎಕರೆ ಭೂಮಿಯನ್ನು ನೀಡಲಾಗಿದೆ ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ರಾಜ್ಯವು ದೇಶದಲ್ಲೇ ಅತ್ಯುತ್ತಮ ಉದ್ಯಮ ಸ್ನೇಹಿ ನೀತಿಯನ್ನು ಹೊಂದಿದ್ದು, ಫಾಕ್ಸ್‌ಕಾನ್ ಕಂಪನಿಯು ಇಲ್ಲಿಗೆ ಬರುತ್ತಿರುವುದು ಸ್ವಾಗತಾರ್ಹ ಎಂದರು.

ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಕೀಟ ಹಾವಳಿ ತಡೆಗೆ ಆ್ಯಪ್ ಬಿಡುಗಡೆ

ನವದೆಹಲಿ: ಫಸಲಿನ ಮೇಲೆ ದಾಳಿ ನಡೆಸುವ ಕೀಟಗಳ ಬಗ್ಗೆ ಮಾಹಿತಿ ಸಂಗ್ರಹದ ಜೊತೆಗೆ, ಅವುಗಳ ಹಾವಳಿ ನಿಯಂತ್ರಣಕ್ಕೆ ರೈತರಿಗೆ ನೆರವಾಗಲು ಕೇಂದ್ರ ಸರ್ಕಾರವು, ರಾಷ್ಟ್ರೀಯ ಕೀಟ ಕಣ್ಗಾವಲು ವ್ಯವಸ್ಥೆಯಡಿ ಹೊಸ ಆ್ಯಪ್ ಅನ್ನು ಬಿಡುಗಡೆ ಮಾಡಿದೆ.

ರೈತರು ಈ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ತಮ್ಮ ಜಮೀನಿನ ಬೆಳೆಗಳಿಗೆ ಕಾಡುವ ಕೀಟಗಳ ಫೋಟೊ ತೆಗೆದು ಇದರಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ಇದರಿಂದ ಕೀಟಗಳ ದಾಳಿ ಬಗ್ಗೆ ತ್ವರಿತವಾಗಿ ಮಾಹಿತಿ ಸಂಗ್ರಹಿಸಲು ಸರ್ಕಾರಕ್ಕೆ ಅನುಕೂಲ ಆಗಲಿದೆ. ಜೊತೆಗೆ, ಅವುಗಳ ನಿಯಂತ್ರಣಕ್ಕೆ ಅಗತ್ಯವಿರುವ ತುರ್ತು ಕ್ರಮಗೊಳ್ಳಲು ಸಹಕಾರಿಯಾಗಲಿದೆ. ಸ್ಥಳೀಯವಾಗಿ ಅಥವಾ ಜಿಲ್ಲಾ, ರಾಜ್ಯಮಟ್ಟದಲ್ಲಿ ಅವುಗಳ ಹಾವಳಿ ವ್ಯಾಪಿಸುವ ಬಗ್ಗೆ ಅರಿಯಲು ಕೃಷಿ ಅಧಿಕಾರಿಗಳಿಗೆ ನೆರವಾಗಲಿದೆ ಎಂದು ತಿಳಿಸಿದ್ದಾರೆ.

ಸಕಾಲದಲ್ಲಿ ಇವುಗಳ ಹಾವಳಿ ನಿಯಂತ್ರಿಸುವ ಮೂಲಕ ಬೆಳೆ ರಕ್ಷಿಸಲು ನೆರವಾಗಲಿದೆ. ಅಲ್ಲದೆ, ಅವುಗಳ ನಿಯಂತ್ರಣದ ಬಗ್ಗೆ ರೈತರಿಗೆ ಅಗತ್ಯ ಕೀಟನಾಶಕಗಳ ಬಳಕೆ ಬಗ್ಗೆಯೂ ಆ್ಯಪ್ ಮೂಲಕ ಮಾಹಿತಿ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಕೃಷಿ–ಡಿಎಸ್‌ಎಸ್‌ಗೆ ಚಾಲನೆ: ಬೆಳೆ ನಿರ್ವಹಣೆ ಮತ್ತು ಉತ್ಪಾದಕತೆ ಹೆಚ್ಚಿಸುವ ಸಂಬಂಧ ರೈತರಿಗೆ ನೆರವಾಗಲು ಕೇಂದ್ರ ಸರ್ಕಾರವು ಉಪಗ್ರಹ ಆಧಾರಿತ ಕೃಷಿ– ನಿರ್ಣಯ ಪ್ರೋತ್ಸಾಹ ವ್ಯವಸ್ಥೆಯನ್ನು (ಕೃಷಿ–ಡಿಎಸ್‌ಎಸ್) ಪರಿಚಯಿಸಿದೆ.

ಈ ವೇದಿಕೆಯಡಿ ರೈತರಿಗೆ ಕಾಲಕಾಲಕ್ಕೆ ಫಸಲಿನ ಸ್ಥಿತಿಗತಿ, ಮಣ್ಣಿನ ಆರೋಗ್ಯ, ಕೀಟಗಳ ದಾಳಿ, ವಿಪತ್ತು ಮುನ್ಸೂಚನೆ ಮತ್ತು ಪ್ರತಿಕೂಲ ಹವಾಮಾನದ ಬಗ್ಗೆ ಮಾಹಿತಿ ದೊರೆಯಲಿದೆ.

ಸಾಲದ ಬಡ್ಡಿದರ ಹೆಚ್ಚಿಸಿದ ಎಸ್‌ಬಿಐ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧಾರಿತ ಸಾಲದ (ಎಂಸಿಎಲ್‌ಆರ್) ಮೇಲಿನ ಬಡ್ಡಿದರವನ್ನು ಶೇ 0.10ರಷ್ಟು ಹೆಚ್ಚಿಸಿದೆ. ಇದರಿಂದ ವಾಹನ ಹಾಗೂ ವೈಯಕ್ತಿಕ ಸಾಲದ ಮೇಲಿನ ಇಎಂಐ ಏರಿಕೆಯಾಗಲಿದೆ.

ಒಂದು ವರ್ಷದ ಎಂಸಿಎಲ್‌ಆರ್ ಬಡ್ಡಿದರವನ್ನು ಶೇ 8.85ರಿಂದ ಶೇ 8.95ಕ್ಕೆ ಹೆಚ್ಚಿಸಲಾಗಿದೆ ಎಂದು ಬ್ಯಾಂಕ್ ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ. ಎರಡು ಮತ್ತು ಮೂರು ವರ್ಷದ ಎಂಸಿಎಲ್‌ಆರ್ ಕ್ರಮವಾಗಿ ಶೇ 9.05 ಮತ್ತು ಶೇ 9.10ರಷ್ಟು ಹೆಚ್ಚಳವಾಗಿದೆ. ಒಂದು, ಮೂರು ಮತ್ತು ಆರು ತಿಂಗಳ ಎಂಸಿಎಲ್‌ಆರ್ ಶೇ 8.45ರಿಂದ ಶೇ 8.85ಕ್ಕೆ ಏರಿಕೆಯಾಗಿದೆ. ಈ ಹೊಸ ಬಡ್ಡಿದರವು ಆಗಸ್ಟ್ 15ರಿಂದಲೇ ಜಾರಿಗೆ ಬಂದಿದೆ ಎಂದು ಬ್ಯಾಂಕ್ ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಮಾರುಕಟ್ಟೆಗೆ ಆವಕ ಕಡಿಮೆ: ಕೆ.ಜಿಗೆ ₹400 ಧಾರಣೆ

ಹೊಸ ಅಡಿಕೆ ದರ ಏರಿಕೆ

• ಸಂಧ್ಯಾ ಹೆಗಡೆ

ಮಂಗಳೂರು: ಹೊಸ ಅಡಿಕೆ (ಚಾಲಿ) ದರದಲ್ಲಿ ಏರಿಕೆಯಾಗಿದ್ದು, ಇಲ್ಲಿನ ಮುಕ್ತ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ ₹400 ಧಾರಣೆ ದೊರೆತಿದೆ.

ಜೂನ್–ಜುಲೈ ತಿಂಗಳಿನಲ್ಲಿ ಕೆ.ಜಿಗೆ ₹375ರಿಂದ ₹385ರ ಆಸುಪಾಸಿನಲ್ಲಿದ್ದ ದರವು ಆಗಸ್ಟ್ ಮೊದಲ ವಾರದಲ್ಲಿ ತುಸು ಏರಿಕೆಯಾಗಿತ್ತು. ಅಡಿಕೆ ವಹಿವಾಟು ನಡೆಸುವ ಕ್ಯಾಂಪ್ಕೊದಲ್ಲಿ ಶುಕ್ರವಾರ ಗರಿಷ್ಠ ದರ ₹390 ಇದ್ದರೆ, ಸುಳ್ಯ ತಾಲ್ಲೂಕು ಬೆಳ್ಳಾರೆಯ ಮುಕ್ತ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹400 ದರ ದಾಖಲಾಯಿತು.

ಮಾರ್ಚ್ ಎರಡನೇ ವಾರದಲ್ಲಿ ಹೊಸ ಅಡಿಕೆ ಧಾರಣೆ ಕೆ.ಜಿ.ಗೆ ₹352 ಇದ್ದರೆ, ಏಪ್ರಿಲ್ 4ರಂದು ₹365 ಇತ್ತು. ಮೇ ತಿಂಗಳ ಕೊನೆಯಲ್ಲಿ ₹380ಕ್ಕೆ ತಲುಪಿದ್ದ ದರವು, ಜೂನ್‌ನಲ್ಲಿ ಒಮ್ಮೆ ಕುಸಿದಿತ್ತು. ನಂತರ ಆಗಸ್ಟ್ ಮೊದಲ ವಾರದವರೆಗೆ ಬಹುತೇಕ ಸ್ಥಿರವಾಗಿತ್ತು.



'ಬಾಂಗ್ಲಾದೇಶದ ಗಡಿಯಲ್ಲಿ ಅಡಿಕೆ ಅಕ್ರಮ ಒಳನುಸುಳುವಿಕೆ ನಿಯಂತ್ರಣಕ್ಕೆ ಬಂದಿದೆ ಎನ್ನಲಾಗುತ್ತಿದೆ. ಈ ಕಾರಣಕ್ಕೆ ಹೊಸ ಅಡಿಕೆ ದರ ಏರುಗತಿಯಲ್ಲಿ ಸಾಗಿರುವ ಸಾಧ್ಯತೆ ಇದೆ. ಬಾಂಗ್ಲಾದಲ್ಲಿ ಅಕ್ರಮ ಅಡಿಕೆ ನುಸುಳುವಿಕೆಗೆ ಕೈಗೊಂಡಿರುವ ಬಿಗಿಯಾದ ಕ್ರಮ ಮತ್ತು ಬೆಳೆ ಕುಸಿತದಿಂದಾಗಿ ಅಡಿಕೆಗೆ ಇದೇ ದರ ಮುಂದುವರಿಯಬಹುದು ಅಥವಾ ಇನ್ನೂ ಏರಿಕೆಯಾಗಬಹುದು' ಎಂದು ಕ್ಯಾಂಪ್ಕೊ ಅಧ್ಯಕ್ಷ ಕಿಶೋರ್‌ಕುಮಾರ್ ಕೊಡ್ಗಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಸಣ್ಣ ಹಾಗೂ ಅತಿಸಣ್ಣ ರೈತರ ಬಳಿ ಅಡಿಕೆ ಸಂಗ್ರಹವಿಲ್ಲ. ಸಾಮಾನ್ಯವಾಗಿ ಬೆಳೆ ಬಂದ ಕೂಡಲೇ ಅವರು ಮಾರಾಟ ಮಾಡುವುದರಿಂದ ಶೇ 40ರಷ್ಟು ಉತ್ಪನ್ನ ಉಳಿದಿರಬಹುದು. ದೊಡ್ಡ ಹಿಡುವಳಿದಾರರು, ಇನ್ನಷ್ಟು ದರ ಏರಿಕೆಯ ನಿರೀಕ್ಷೆಯಲ್ಲಿ ದಾಸ್ತಾನು ಇಟ್ಟುಕೊಳ್ಳಬಹುದು. ಹೀಗಾಗಿ, ಮಾರುಕಟ್ಟೆಯಲ್ಲಿ ಆವಕ ಹೆಚ್ಚು ಆಗುತ್ತಿಲ್ಲ' ಎನ್ನುತ್ತಾರೆ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಕಾರ್ಯದರ್ಶಿ ಮಹೇಶ್ ಪುಚ್ಚಪ್ಪಾಡಿ.

9ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಲಕ್ಷ್ಮಮ್ಮ
(ದಿ॥ ಶ್ರೀ ಸಿದ್ಧಗಂಗಯ್ಯನವರ ಧರ್ಮಪತ್ನಿ)
ಜನನ: 20.04.1953 • ನಿಧನ: 17.08.2016
ದಿವಂಗತರ ಆತ್ಮಕ್ಕೆ ಶಾಂತಿ ಕೋರುವ ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು.

8ನೇ ವರ್ಷದ ಚಿರಸ್ಮರಣೆ

ಶ್ರೀ. ಎ. ಕೃಷ್ಣಪ್ಪನವರು
ನಿಧನ: 17-08-2016
ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷವಾಯಿತು. ನಿಮ್ಮ ನೆನಪು ನಮ್ಮ ಹೃದಯಗಳಲ್ಲಿ ಸದಾಹಚ್ಚಹಸಿರಾಗುಳಿದಿದೆ. ಅನುದಿನವೂ, ಅನುಕ್ಷಣವೂ ನಿಮ್ಮ ಸ್ಮರಣೆಯೇ ನಮಗೆ ದಿವ್ಯಚೇತನವಾಗಿದೆ.
ಸದಾ ನಿಮ್ಮನ್ನು ಸ್ಮರಿಸುವ ಧರ್ಮಪತ್ನಿ ಶ್ರೀಮತಿ. ಶಾಂತಮ್ಮ, ಮಕ್ಕಳು, ಮೊಮ್ಮಕ್ಕಳು, ಕುಟುಂಬವರ್ಗದವರು ಮತ್ತು ಬಂಧುಮಿತ್ರರು.

LOOKING FOR JOB OPPORTUNITY
Refer Classifieds on Wednesday

ಶ್ರದ್ಧಾಂಜಲಿ

ಶ್ರೀಮಾನ್ ಎಸ್.ಕೆ.ಪುಟ್ಟಸ್ವಾಮಿ (ಗೌಡ್ರು)
ನಿಧನ : 09.08.2024
ಸಂಸ್ಥಾಪಕರು
ಕನಕ ಗೃಹ ನಿರ್ಮಾಣ ಸಹಕಾರ ಸಂಘ
ಶ್ರೀ ಶಾಕಾಂಬರಿ ಮಹಿಳಾ ಪತ್ತಿನ ಸಹಕಾರ ಸಂಘ
ಶ್ರೀ ಶಾಕಾಂಬರಿ ಗೃಹ ನಿರ್ಮಾಣ ಸಹಕಾರ ಸಂಘ
ಇವರ ವೈಕುಂಠ ಸಮಾರಾಧನೆಯನ್ನು ದಿನಾಂಕ 19.08.2024, ಸೋಮವಾರ ಬೆಳಗ್ಗೆ 11:30ಕ್ಕೆ ನಮ್ಮ ಸ್ವಗೃಹದಲ್ಲಿ ನೆರವೇರಿಸಲಾಗುವುದು.
ಸ್ಥಳ : ನಂ – 24, ಕನಕ ಲೇಔಟ್, ಬನಶಂಕರಿ ಎರಡನೇ ಹಂತ, ಬೆಂಗಳೂರು – 560070
ದುಃಖತಪ್ತರು
ಮೃತರ ಪತ್ನಿ ಶ್ರೀಮತಿ ಜಯಮ್ಮ ಮತ್ತು ಮಗ ಎಸ್.ಪಿ. ಶ್ರೀನಿವಾಸ್, ಸೊಸೆ ಹೆಚ್.ಪಿ. ಶೀಲಾರಾಣಿ, ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬ ವರ್ಗದವರು ಹಾಗೂ ಬಂಧುಮಿತ್ರರು.

ಪ್ರಜಾವಾಣಿ — ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ . ಟಯೋಟಾ,TVS, ಬ್ರಿಟಾನಿಯಾ,ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿ ವರ್ಕ್ ಫ್ರಮ್ ಹೋಮ್ ಕೆಲಸಮಾಡಿ 4000–20,000/– ಪಡೆಯಿರಿ. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- . ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 9008835841, 9900859248

ಪ್ರವಾಸ

Travel

ಸುಸಜ್ಜಿತ ಪ್ರವಾಸಗಳು: 14.10.2024 29.10.2024 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. ನವೆಂಬರ್ ಡಿಸೆಂಬರ್ ತಿಂಗಳಲ್ಲಿ 6 ದಿನಗಳ ದುಬೈ,ಅಬುದಾಬಿ ಶಾರ್ಜಾ ಮತ್ತು 10 ದಿನಗಳ ವಿಯಟ್ನಾಂ ಕಾಂಬೋಡಿಯ. 18.09.2024 26.09.2024 ರಿಂದ 5/8 ದಿನಗಳ ಕಾಶಿ,ಗಯಾ,ಅಯೋಧ್ಯಾ. 05.10.2024 ರಿಂದ 11 ದಿನಗಳ ನೇಪಾಳ ಮುಕ್ತಿನಾಥ ಅಯೋಧ್ಯಾ. 13.09.2024 14.10.2024 ರಿಂದ 15 ದಿನಗಳ ಚಾರ್‌ಧಾಮ್. ನವೆಂಬರ್ ಡಿಸೆಂಬರ್ ತಿಂಗಳಲ್ಲಿ ಮಧ್ಯಪ್ರದೇಶ ರಾಜಸ್ಥಾನ್ ಗುಜರಾತ್ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

7 ದಿನಗಳ ಕಾಶಿ,ಗಯಾ ಪ್ರಯಾಗ್ ರಾಜ್ ಅಯೋಧ್ಯಾ. 12 ದಿನಗಳ ನೇಪಾಳ,ಮುಕ್ತಿನಾಥ,ಕಾಶಿ. 10 ದಿನಗಳ ಗುಜರಾತ್ ಪ್ರವಾಸ. 13 ದಿನಗಳ ಚಾರ್‌ಧಾಮ್‌ಯಾತ್ರೆ 11 ದಿನಗಳ ರಾಜಸ್ಥಾನ್. 12 ದಿನಗಳ ಮಧ್ಯಪ್ರದೇಶ. ಸಂಪರ್ಕಿಸಿ: ನಂದಿ ಹಾಲಿಡೇಸ್ ಡಿವಿಜಿ.ರಸ್ತೆ ಬಸವನಗುಡಿ ಬೆಂಗಳೂರು04. 9980270467 9035513332

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಸೆನ್ಸೆಕ್ಸ್ 1,330 ಅಂಶ ಜಿಗಿತ

ಮುಂಬೈ (ಪಿಟಿಐ): ಐ.ಟಿ ಮತ್ತು ರಿಲಯನ್ಸ್ ಇಂಡಸ್ಟ್ರಿಸ್ ಷೇರುಗಳ ಖರೀದಿ ಹೆಚ್ಚಳದಿಂದಾಗಿ ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ ಸಕಾರಾತ್ಮಕ ವಹಿವಾಟು ನಡೆಯಿತು.

ಸೋಲ್, ಟೋಕಿಯೊ, ಶಾಂಘೈ ಹಾಗೂ ಹಾಂಗ್‌ಕಾಂಗ್ ಮಾರುಕಟ್ಟೆಯು ಗಳಿಕೆ ಕಂಡಿದ್ದು ಇದಕ್ಕೆ ವರದಾನವಾಯಿತು. ಷೇರು ಸೂಚ್ಯಂಕಗಳ ಏರಿಕೆಯಿಂದಾಗಿ ಹೂಡಿಕೆದಾರರ ಸಂಪತ್ತು ₹7.30 ಲಕ್ಷ ಕೋಟಿ ಹೆಚ್ಚಳವಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,330 ಅಂಶ ಏರಿಕೆ (ಶೇ 1.68ರಷ್ಟು) ಕಂಡು 80,436 ಅಂಶಗಳಲ್ಲಿ ಸ್ಥಿರಗೊಂಡಿತು. ಕಳೆದ ಎರಡು ತಿಂಗಳ ಅವಧಿಯಲ್ಲಿ ಅತಿಹೆಚ್ಚು ಏರಿಕೆ ಕಂಡ ದಿನ ಇದಾಗಿದೆ. ದಿನದ ವಹಿವಾಟಿನಲ್ಲಿ 1,412 ಅಂಶ ಏರಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 397 ಅಂಶ ಏರಿಕೆ (ಶೇ 1.65ರಷ್ಟು) ಕಂಡು, 24,541 ಅಂಶಗಳಲ್ಲಿ ವಹಿವಾಟನ್ನು ಅಂತ್ಯಗೊಳಿಸಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟೆಕ್ ಮಹೀಂದ್ರ, ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಮೋಟರ್ಸ್, ಅಲ್ಟ್ರಾಟೆಕ್ ಸಿಮೆಂಟ್, ಟಿಸಿಎಸ್, ಎಚ್‌ಸಿಎಲ್ ಟೆಕ್ನಾಲಜೀಸ್, ಐಸಿಐಸಿಐ ಬ್ಯಾಂಕ್ ಮತ್ತು ಟಾಟಾ ಸ್ಟೀಲ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಸನ್ ಫಾರ್ಮಾ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಬಿಎಸ್‌ಇ ಮಿಡ್‌ಕ್ಯಾಪ್ ಶೇ 1.8ರಷ್ಟು ಹಾಗೂ ಸ್ಮಾಲ್‌ಕ್ಯಾಪ್ ಶೇ 1.7ರಷ್ಟು ಏರಿಕೆ ಕಂಡಿದೆ.

ಜಪಾನ್ ಕರೆನ್ಸಿ ಯೆನ್ ಮೌಲ್ಯವು ಸ್ಥಿರತೆ ಕಾಯ್ದುಕೊಂಡಿದೆ. ಹಾಗಾಗಿ, ಜಾಗತಿಕ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ. ಅಮೆರಿಕದಲ್ಲಿ ಚಿಲ್ಲರೆ ಮಾರಾಟವು ಸದೃಢಗೊಂಡಿದೆ. ಇದರಿಂದ ಗ್ರಾಹಕರ ವೆಚ್ಚದಲ್ಲಿ ಹೆಚ್ಚಳವಾಗಿದೆ. ವಾರಾಂತ್ಯದಲ್ಲಿ ಉದ್ಯೋಗಗಳ ಸೃಷ್ಟಿಯಲ್ಲಿ ಏರಿಕೆಯಾಗಿದೆ. ಇದು ಆರ್ಥಿಕ ಹಿಂಜರಿತದ ಭೀತಿಯ ಶಮನಕ್ಕೆ ನೆರವಾಗಿದೆ. ಈ ಅಂಶಗಳು ದೇಶೀಯ ಷೇರುಪೇಟೆಗಳ ಏರಿಕೆಗೆ ನೆರವಾಗಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಬುಧವಾರ ನಡೆದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹2,595 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹2,236 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ ಎಂದು ಷೇರುಪೇಟೆ ಅಂಕಿ–ಅಂಶ ತಿಳಿಸಿವೆ.

ಜಾಗತಿಕಮಟ್ಟದಲ್ಲಿ ಕಚ್ಚಾತೈಲದ ಬೆಲೆಯು ಶೇ 1.22ರಷ್ಟು ಇಳಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 80.05 ಡಾಲರ್ ಆಗಿದೆ.

'ಕಮಲಾ ವಿರುದ್ಧ ಟೀಕೆ ನಿಲ್ಲದು'

ವಾಷಿಂಗ್ಟನ್ (ಪಿಟಿಐ): 'ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ತಮ್ಮ ಪ್ರತಿಸ್ಪರ್ಧಿಯಾಗಿರುವ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ವಿರುದ್ಧ ವೈಯಕ್ತಿಕ ಟೀಕೆ ಮಾಡುವುದನ್ನು ನಿಲ್ಲಿಸುವುದಿಲ್ಲ. ಆಕೆಯನ್ನು ಟೀಕಿಸುವ ಅರ್ಹತೆ ನನಗಿದೆ' ಎಂದು ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಗುರುವಾರ ಗುಡುಗಿದ್ದಾರೆ.



ಡೊನಾಲ್ಡ್ ಟ್ರಂಪ್

'ಹಣದುಬ್ಬರದಿಂದ ಹಿಡಿದು ವಲಸೆಯವರೆಗಿನ ಸಮಸ್ಯೆಗಳನ್ನು ಬೈಡನ್ ಆಡಳಿತವು ನಿಭಾಯಿಸಿರುವುದರ ಬಗ್ಗೆ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ವಿರುದ್ಧ ಕೋಪಗೊಂಡಿದ್ದೇನೆ. ಆಕೆ ದೇಶಕ್ಕಾಗಿ ಏನು ಮಾಡಿದ್ದಾಳೆ' ಎಂದು ಪ್ರಶ್ನಿಸಿದ್ದಾರೆ.

ಪಾಕ್: ಎಂಪಾಕ್ಸ್ ಪ್ರಕರಣ ದೃಢ

ಪೇಶಾವರ (ಎಪಿ/ ಎಎಫ್‌ಪಿ): ಜಾಗತಿಕವಾಗಿ ಆತಂಕ ಮೂಡಿಸಿರುವ ಎಂಪಾಕ್ಸ್ (ಮಂಕಿಪಾಕ್ಸ್) ಸೋಂಕಿನ ಹೊಸ ರೂಪಾಂತರ ತಳಿಯ ಮೊದಲ ಪ್ರಕರಣ ದೃಢಪಟ್ಟಿದೆ ಎಂದು ಪಾಕಿಸ್ತಾನದ ಆರೋಗ್ಯ ಸಚಿವಾಲಯ ಶುಕ್ರವಾರ ಹೇಳಿದೆ.

ವೇಗವಾಗಿ ಹರಡುವ ಈ ರೂಪಾಂತರ ತಳಿ ಏಷ್ಯಾದಲ್ಲಿ ಪತ್ತೆಯಾಗಿರುವುದು ಇದೇ ಮೊದಲು. ಬುರುಂಡಿ, ಕೆನ್ಯಾ, ಉಗಾಂಡ ಮತ್ತು ರುವಾಂಡ ಸೇರಿ ಆಫ್ರಿಕಾದ ದೇಶಗಳಲ್ಲಿ ಈ ಸೋಂಕು ವೇಗವಾಗಿ ಹಬ್ಬಿದೆ. ಆದ್ದರಿಂದ ಸೋಂಕಿನ ಹರಡುವಿಕೆಯನ್ನು ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) 'ಜಾಗತಿಕ ಆರೋಗ್ಯ ತುರ್ತುಸ್ಥಿತಿ' ಎಂದು ಈಚೆಗೆ ಘೋಷಿಸಿದೆ.

'ಅಫ್ಗಾನಿಸ್ತಾನದ ಗಡಿಗೆ ಹೊಂದಿಕೊಂಡಿರುವ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಮರ್ದಾನ್ ಎಂಬಲ್ಲಿನ ವ್ಯಕ್ತಿಯಲ್ಲಿ ಈ ಸೋಂಕು ದೃಢಪಟ್ಟಿದೆ' ಎಂದು ಪಾಕ್ ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ವಿದೇಶದಿಂದ ಬರುವ ಪ್ರಯಾಣಿಕರಲ್ಲಿ ರೋಗದ ಲಕ್ಷಣಗಳು ಕಂಡುಬಂದರೆ ಅವರನ್ನು ಪರೀಕ್ಷೆಗೆ ಒಳಪಡಿಸುವಂತೆ ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಸಚಿವಾಲಯ ನಿರ್ದೇಶಿಸಿದೆ. ಅಫ್ಗನ್ ಜತೆಗಿನ ಗಡಿಯಲ್ಲಿರುವ ಚೆಕ್‌ಪೋಸ್ಟ್‌ಗಳಲ್ಲೂ ನಿಗಾವಹಿಸುವಂತೆ ಸೂಚಿಸಿದೆ.

ಬಾಂಗ್ಲಾ ಗೃಹ ಸಚಿವಾಲಯದ ಸಲಹೆಗಾರ ಸಖಾವತ್ ಭರವಸೆ

'ಅಲ್ಪಸಂಖ್ಯಾತರ ರಕ್ಷಣೆಗೆ ಬದ್ಧ'

ಢಾಕಾ (ಪಿಟಿಐ): ದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಎಸಗುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಬಾಂಗ್ಲಾದೇಶ ಗೃಹ ವ್ಯವಹಾರಗಳ ಸಚಿವಾಲಯದ ನೂತನ ಸಲಹೆಗಾರ ಎಂ. ಸಖಾವತ್ ಹುಸೇನ್ ಎಚ್ಚರಿಕೆ ನೀಡಿದ್ದಾರೆ.

ಬಾಂಗ್ಲಾದೇಶದ 'ಇಸ್ಕಾನ್' ನಿಯೋಗದೊಂದಿಗೆ ತಮ್ಮ ಕಚೇರಿಯಲ್ಲಿ ಸಖಾವತ್ ಸಭೆ ನಡೆಸಿದ್ದಾರೆ. ಈ ವೇಳೆ 'ದೇಶದಲ್ಲಿ ಹಿಂಸೆ, ಸಂಘರ್ಷ ಮತ್ತು ದ್ವೇಷಕ್ಕೆ ಜಾಗವಿಲ್ಲ' ಎಂದು ಒತ್ತಿ ಹೇಳಿದ್ದಾರೆ ಎಂದು 'ಢಾಕಾ ಟ್ರಿಬ್ಯೂನ್' ಪತ್ರಿಕೆ ವರದಿ ಮಾಡಿದೆ.

ಸಭೆಯಲ್ಲಿ ಸಖಾವತ್, 'ಬಾಂಗ್ಲಾದೇಶವು ಕೋಮುಸೌಹಾರ್ದವುಳ್ಳ ದೇಶವಾಗಿದ್ದು ಎಲ್ಲಾ ಧರ್ಮಗಳ ಜನರು ಒಟ್ಟಿಗೆ ಜೀವನ ನಡೆಸಿಕೊಂಡು ಬಂದಿದ್ದಾರೆ. ದೇಶವು ಶಾಂತಿಯ ಮೇಲೆ ನಂಬಿಕೆ ಇರಿಸಿದೆ. ಅಲ್ಪಸಂಖ್ಯಾತರ ಮೇಲೆ ಹಲ್ಲೆ, ದೌರ್ಜನ್ಯ ನಡೆಸುವ ಯಾರನ್ನೂ ಬಿಡುವುದಿಲ್ಲ, ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ.

ಹಸೀನಾ ವಿರುದ್ಧ ಮತ್ತೊಂದು ಕೊಲೆ ಪ್ರಕರಣ

ಶಿಕ್ಷಕರೊಬ್ಬರ ಸಾವಿಗೆ ಸಂಬಂಧಿಸಿದಂತೆ ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿದೆ.

ಮೀಸಲಾತಿ ವಿರುದ್ಧದ ಪ್ರತಿಭಟನೆ ತೀವ್ರವಾಗುತ್ತಿದ್ದಂತೆ ರಾಜೀನಾಮೆ ನೀಡಿ ಭಾರತಕ್ಕೆ ಪಲಾಯನಗೈದಿರುವ ಹಸೀನಾ ಹಾಗೂ ಅವಾಮಿ ಲೀಗ್ ಪಕ್ಷದ ಪ್ರಧಾನ ಕಾರ್ಯದರ್ಶಿ ಒಬೈದುಲ್ ಖಾದರ್ ವಿರುದ್ಧ ಬಾಂಗ್ಲಾದ ಬೊಗುರಾದಲ್ಲಿ ಪ್ರಕರಣ ದಾಖಲಿಸಲಾಗಿದೆ.

ಈ ವೇಳೆ ಇಸ್ಕಾನ್ ಅಧ್ಯಕ್ಷ ಸತ್ಯರಂಜನ್ ಬರೋಯಿ ಅವರು, ಅಲ್ಪಸಂಖ್ಯಾತರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು. ಅಲ್ಪಸಂಖ್ಯಾತರ ಸುರಕ್ಷತೆ ಖಾತರಿಪಡಿಸಿಕೊಳ್ಳಲು ಕಾನೂನುಗಳ ಜಾರಿ, ಮೇಲ್ವಿಚಾರಣಾ ಸೆಲ್‌ಗಳ ಸ್ಥಾಪನೆ, ಅಲ್ಪಸಂಖ್ಯಾತರ ಆಯೋಗ ರಚನೆ ಮತ್ತು ದೇವಸ್ಥಾನಗಳಿಗೆ ನಿರಂತರ ಭದ್ರತೆ ಒದಗಿಸುವುದು ಸೇರಿ ಒಟ್ಟು 8 ಪ್ರಸ್ತಾಪಗಳನ್ನು ಇದೇ ವೇಳೆ ಮುಂದಿಟ್ಟರು.

ಸಖಾವತ್ ಅವರು ಇದಕ್ಕೆ ತಮ್ಮ ಸಂಪೂರ್ಣ ಬೆಂಬಲ ಮತ್ತು ಭರವಸೆಯನ್ನು ನೀಡಿದರು. ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ಆಕ್ರಮಣ ನಡೆಯುತ್ತಿದೆ ಎಂದು ರಾಷ್ಟ್ರೀಯ ಹಿಂದೂ ಒಕ್ಕೂಟವು ಕಳವಳ ವ್ಯಕ್ತಪಡಿಸಿತು.

ರಕ್ಷಣೆ ಭರವಸೆ (ನವದೆಹಲಿ ವರದಿ): ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಅವರು ಶುಕ್ರವಾರ, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕರೆ ಮಾಡಿ ಮಾತನಾಡಿದ್ದಾರೆ. ತಮ್ಮ ದೇಶದಲ್ಲಿ ಹಿಂದೂಗಳು ಮತ್ತು ಇತರೆ ಎಲ್ಲ ಅಲ್ಪಸಂಖ್ಯಾತರಿಗೆ ಸೂಕ್ತ ರಕ್ಷಣೆ ಒದಗಿಸುವ ಭರವಸೆಯನ್ನು ಅವರು ಈ ವೇಳೆ ನೀಡಿದ್ದಾರೆ.

ಪಶ್ಚಿಮ ಬಂಗಾಳ ಸರ್ಕಾರಕ್ಕೆ ಕಲ್ಕತ್ತ ಹೈಕೋರ್ಟ್ ತರಾಟೆ; ಗುಪ್ತಚರ ವೈಫಲ್ಯಕ್ಕೆ ಬೇಸರ ವ್ಯಕ್ತಪಡಿಸಿದ ವಿಭಾಗೀಯ ಪೀಠ

‘ಆಸ್ಪತ್ರೆ ಮೇಲಿನ ದಾಳಿ: ಆಡಳಿತ ಯಂತ್ರದ ವೈಫಲ್ಯ’

ಕೋಲ್ಕತ್ತ (ಪಿಟಿಐ): ಇಲ್ಲಿನ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಮೇಲೆ ನಡೆದ ಗುಂಪು ದಾಳಿ ಮತ್ತು ಹಿಂಸಾಚಾರವನ್ನು ತಡೆಯುವಲ್ಲಿ ಪಶ್ಚಿಮ ಬಂಗಾಳದ ಆಡಳಿತ ಯಂತ್ರ ಸಂಪೂರ್ಣ ವಿಫಲವಾಗಿದೆ ಎಂದು ಕಲ್ಕತ್ತ ಹೈಕೋರ್ಟ್ ಶುಕ್ರವಾರ ತರಾಟೆಗೆ ತೆಗೆದುಕೊಂಡಿದೆ.

ಈ ಘಟನೆ ಸಂಬಂಧ ನೈಜ ಅಂಶಗಳಿಂದ ಕೂಡಿದ ಪೂರ್ಣ ವಿವರಗಳನ್ನು ಪೊಲೀಸರು ಮತ್ತು ಆಸ್ಪತ್ರೆ ಆಡಳಿತ ಮಂಡಳಿ ಪ್ರತ್ಯೇಕವಾಗಿ ಪ್ರಮಾಣಪತ್ರ ಸಲ್ಲಿಸಬೇಕು ಎಂದು ಕೋರ್ಟ್ ನಿರ್ದೇಶಿಸಿದೆ.

‘ದುಷ್ಕರ್ಮಿಗಳು ನಡೆಸಿದ ದಾಳಿಯಲ್ಲಿ ಪೊಲೀಸರೂ ಗಾಯಗೊಂಡಿದ್ದಾರೆ ಮತ್ತು ದಾಳಿ ನಿಯಂತ್ರಿಸಲು ಪೊಲೀಸರಿಂದ ಸಾಧ್ಯವಾಗಿಲ್ಲ ಎಂದರೆ ಕಾನೂನು ಮತ್ತು ಸುವ್ಯವಸ್ಥೆ ವಿಫಲವಾಗಿದೆ ಎಂದೇ ಅರ್ಥ’ ಎಂದು ಮುಖ್ಯ ನ್ಯಾಯಮೂರ್ತಿ ಟಿ.ಎಸ್. ಶಿವಜ್ಞಾನಂ, ನ್ಯಾಯಮೂರ್ತಿ ಹಿರಣ್ಮಯ್ ಭಟ್ಟಾಚಾರ್ಯ ಅವರ ವಿಭಾಗೀಯ ಪೀಠ ಖಾರವಾಗಿ ಹೇಳಿದೆ.

‘ನಂಬಲು ಆಗದು’: ‘ಪೊಲೀಸ್ ಇಲಾಖೆಯಲ್ಲೇ ಗುಪ್ತಚರ ವಿಭಾಗ ಇರುತ್ತದೆ. ದೊಡ್ಡ ಪ್ರಮಾಣದಲ್ಲಿ ಜನರು ಸೇರುವುದಿದ್ದರೆ ಅದರ ಮಾಹಿತಿ ಅವರಿಗಿರುತ್ತದೆ. ಆದರೆ 7,000ಕ್ಕೂ ಹೆಚ್ಚು ಜನರು ಗುಂಪು ಸೇರಿದ್ದರ ಬಗ್ಗೆ ಗುಪ್ತಚರ ವಿಭಾಗಕ್ಕೆ ಮಾಹಿತಿ ಇರಲಿಲ್ಲ ಎಂಬುದನ್ನು ನಂಬಲು ಆಗುವುದಿಲ್ಲ. ಇದು ಆಡಳಿತದ ಯಂತ್ರದ ಸಂಪೂರ್ಣ ವೈಫಲ್ಯವನ್ನು ತೋರಿಸುತ್ತದೆ’ ಎಂದು ಪೀಠ ಕಿಡಿಕಾರಿದೆ.

‘ಆಸ್ಪತ್ರೆ ಮೇಲಿನ ಹಿಂಸಾತ್ಮಕ ದಾಳಿಯು, ಪ್ರತಿಭಟನನಿರತ ವೈದ್ಯರ ಮನಸ್ಥಿತಿ ಮೇಲೆ ಖಂಡಿತವಾಗಿಯೂ ಪರಿಣಾಮ ಬೀರುತ್ತದೆ. ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ವೈದ್ಯರಿಗೆ ರಕ್ಷಣೆ ನೀಡದಿದ್ದರೆ ಅವರು ತಮ್ಮ ಕರ್ತವ್ಯವನ್ನು ಹೇಗೆ ನಿರ್ವಹಿಸುತ್ತಾರೆ’ ಎಂದು ಪೀಠ ಪ್ರಶ್ನಿಸಿದೆ.

ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆಯನ್ನು ಖಂಡಿಸಿ ಕೋಲ್ಕತ್ತದಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ನೇತೃತ್ವದಲ್ಲಿ ಟಿಎಂಸಿ ಬೆಂಬಲಿಗರು ಶುಕ್ರವಾರ ಪ್ರತಿಭಟನಾ ರ್‍ಯಾಲಿ ನಡೆಸಿದರು ಪಿಟಿಐ ಚಿತ್ರ

‘ಆಸ್ಪತ್ರೆ ಮುಚ್ಚಿಸಲು ಆದೇಶಿಸಬಹುದು’

‘ಆಸ್ಪತ್ರೆಯ ಸಭಾಂಗಣದ ನವೀಕರಣದ ತುರ್ತು ಅಗತ್ಯವೇನಿತ್ತು’ ಎಂದು ಪ್ರಶ್ನಿಸಿದ ಮುಖ್ಯ ನ್ಯಾಯಮೂರ್ತಿ, ‘ಹಾಗಾದರೆ, ನಾನು ಆಸ್ಪತ್ರೆಯನ್ನು ಮುಚ್ಚಿಸಿ ಅಲ್ಲಿನ ರೋಗಿಗಳನ್ನು ಇತರ ಸರ್ಕಾರಿ ಆಸ್ಪತ್ರೆಗಳಿಗೆ ಸ್ಥಳಾಂತರಿಸಲು ಆದೇಶಿಸಬಹುದಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅರ್ಜಿದಾರರೊಬ್ಬರ ಪರ ಹಾಜರಾದ ಹಿರಿಯ ವಕೀಲ ಬಿಕಾಸ್ ರಂಜನ್ ಭಟ್ಟಾಚಾರ್ಯ ಅವರು, ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ ಘಟನೆ ನಡೆದಿರುವ ಆಸ್ಪತ್ರೆಯ ನಾಲ್ಕನೇ ಮಹಡಿಯ ಸೆಮಿನಾರ್ ಸಭಾಂಗಣದ ಭಾಗವೊಂದರ ನವೀಕರಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಇದನ್ನು ವಿರೋಧಿಸಿ ವೈದ್ಯರು ಪ್ರತಿಭಟನೆ ನಡೆಸಿದ ಬಳಿಕವಷ್ಟೇ ನವೀಕರಣ ಕಾರ್ಯವನ್ನು ನಿಲ್ಲಿಸಲಾಗಿದೆ ಎಂಬುದನ್ನು ನ್ಯಾಯಾಲಯದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಸರ್ಕಾರದ ವಕೀಲರು, ವೈದ್ಯರ ಬಹು ದಿನಗಳ ಬೇಡಿಕೆಯ ಮೇರೆಗೆ ನವೀಕರಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ರಾಜ್ಯ ಲೋಕೋಪಯೋಗಿ ಇಲಾಖೆ ಇದನ್ನು ಮಾಡುತ್ತಿದೆ. ಅದಾಗ್ಯೂ ಅಪರಾಧ ನಡೆದ ಸ್ಥಳ ಸುರಕ್ಷಿತವಾಗಿದೆ ಎಂದು ಮಾಹಿತಿ ನೀಡಿದಾಗ, ಆಕ್ರೋಶಗೊಂಡ ಮುಖ್ಯ ನ್ಯಾಯಮೂರ್ತಿಯವರು, ‘ಹಾಗಾದರೆ ನಾನು ಆಸ್ಪತ್ರೆಯನ್ನು ಮುಚ್ಚಿಸಲು ಆದೇಶಿಸಬಹುದು’ ಎಂದರು.

‘ಇದು ಪೂರ್ವ ಯೋಜಿತ ದಾಳಿಯಾಗಿದ್ದು, ಇದಕ್ಕಾಗಿ ಲಾರಿಗಳ ಮೂಲಕ ಜನರನ್ನು ತಂದು ಆಸ್ಪತ್ರೆ ಬಳಿ ಬಿಡಲಾಗಿದೆ’ ಎಂದು ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರ ಪರ ವಕೀಲರು ಪ್ರತಿಪಾದಿಸಿದರು.

ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಸಿಬಿಐ ತಂಡವು ತನಿಖೆಯ ಪ್ರಗತಿ ಕುರಿತು ಮಧ್ಯಂತರ ವರದಿ ಸಲ್ಲಿಸುವಂತೆ ನಿರ್ದೇಶಿಸಿದ ಪೀಠ, ಮುಂದಿನ ವಿಚಾರಣೆಯನ್ನು ಇದೇ 21ಕ್ಕೆ ನಿಗದಿಪಡಿಸಿತು.

25 ಜನರ ಬಂಧನ

ಆಸ್ಪತ್ರೆ ಮೇಲೆ ನಡೆದ ದಾಳಿ ಮತ್ತು ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ 25 ಜನರನ್ನು ಬಂಧಿಸಲಾಗಿದೆ.

ಬಂಧಿತರನ್ನು ನಗರದ ನ್ಯಾಯಾಲಯವು ಇದೇ 22ರವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ ಎಂದು ಕೋಲ್ಕತ್ತ ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಆಸ್ಪತ್ರೆ ಮೇಲಿನ ದಾಳಿಯಲ್ಲಿ ವಿಪಕ್ಷಗಳ ಕೈವಾಡವಿದೆ ಎಂದಿರುವ ಮಮತಾ ದೀದಿ ಅವರು ಅಪರಾಧಿಗಳನ್ನು ರಕ್ಷಿಸುತ್ತಿರುವಂತಿದೆ
ಧರ್ಮೇಂದ್ರ ಪ್ರಧಾನ್
ಕೇಂದ್ರ ಶಿಕ್ಷಣ ಸಚಿವ

ಘಟನೆ ನಡೆದ 6 ಗಂಟೆಯೊಳಗೆ ಎಫ್‌ಐಆರ್ ದಾಖಲಿಸಿ; ಆರೋಗ್ಯ ಸಚಿವಾಲಯ

ನವದೆಹಲಿ (ಪಿಟಿಐ): ಆಸ್ಪತ್ರೆ ಅಥವಾ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಮೇಲೆ ಯಾವುದೇ ರೀತಿಯ ದಾಳಿ, ಹಿಂಸಾತ್ಮಕ ಘಟನೆಗಳು ನಡೆದರೆ, ಗರಿಷ್ಠ ಆರು ಗಂಟೆಗಳ ಅವಧಿಯೊಳಗೆ ಎಫ್‌ಐಆರ್ ದಾಖಲಿಸುವ ಜವಾಬ್ದಾರಿ ಆಯಾ ಸಂಸ್ಥೆಯ ಮುಖ್ಯಸ್ಥರದ್ದಾಗಿರುತ್ತದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶುಕ್ರವಾರ ತಿಳಿಸಿದೆ.

ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಖಂಡಿಸಿ ದೇಶದಾದ್ಯಂತ ಪ್ರತಿಭಟನೆಗಳು ನಡೆಯುತ್ತಿರುವ ಬೆನ್ನಲ್ಲೇ, ಆರೋಗ್ಯ ಸಚಿವಾಲಯ ಈ ಕುರಿತು ಜ್ಞಾಪನಾ ಪತ್ರ ಹೊರಡಿಸಿದೆ.

ಈ ಕುರಿತು ಆರೋಗ್ಯ ಸೇವೆಗಳ ಮಹಾನಿರ್ದೇಶಕ (ಡಿಜಿಎಚ್‌ಎಸ್) ಡಾ. ಅತುಲ್ ಗೋಯಲ್ ಅವರು, ‘ಏಮ್ಸ್’ ಸೇರಿದಂತೆ ಕೇಂದ್ರ ಸರ್ಕಾರದ ಆಸ್ಪತ್ರೆಗಳ ನಿರ್ದೇಶಕರು, ವೈದ್ಯಕೀಯ ಅಧೀಕ್ಷಕರು, ದೇಶದ ಎಲ್ಲ ವೈದ್ಯಕೀಯ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಚಿಸಿದ್ದಾರೆ.

ಇತ್ತೀಚೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಇತರ ಆರೋಗ್ಯ ಸಿಬ್ಬಂದಿ ಮೇಲೆ ದಾಳಿ ಪ್ರಕರಣಗಳು ಹೆಚ್ಚಾಗಿವೆ. ಹಲವು ಆರೋಗ್ಯ ಕಾರ್ಯಕರ್ತರು ತಮ್ಮ ಕರ್ತವ್ಯದ ಅವಧಿಯಲ್ಲಿ ದೈಹಿಕ ಹಿಂಸೆ ಅನುಭವಿಸುತ್ತಿದ್ದಾರೆ. ಅನೇಕರನ್ನು ಬೆದರಿಸಲಾಗುತ್ತಿದೆ. ರೋಗಿಗಳು ಅಥವಾ ಅವರ ಪರಿಚಾರಕರು ಈ ಕೃತ್ಯಗಳನ್ನು ಎಸಗುತ್ತಿರುವುದು ತಿಳಿದು ಬಂದಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಶಂಕಿತರ ಮಾಹಿತಿ ನೀಡಿದ ಪೋಷಕರು

ಕೋಲ್ಕತ್ತ (ಪಿಟಿಐ):‘ಮಗಳ ಮೇಲಿನ ಅತ್ಯಾಚಾರ ಮತ್ತು ಕೊಲೆ ಕೃತ್ಯದಲ್ಲಿ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಕೆಲ ಇಂಟರ್ನಿಗಳು ಮತ್ತು ವೈದ್ಯರು ಭಾಗಿರುವ ಸಾಧ್ಯತೆ ಇದೆ’ ಎಂದು ಸಂತ್ರಸ್ತೆಯ ಪೋಷಕರು ಸಿಬಿಐಗೆ ತಿಳಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲ ಶಂಕಿತ ವ್ಯಕ್ತಿಗಳ ಹೆಸರನ್ನೂ ನೀಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಕೆಲ ವೈದ್ಯರು ಮತ್ತು ಕೋಲ್ಕತ್ತ ಪೊಲೀಸ್ ಅಧಿಕಾರಿಗಳನ್ನು ಪ್ರಶ್ನಿಸಬೇಕಿದೆ. ಈ ಸಂಬಂಧ ನಮ್ಮ ಬಳಿ 30 ಜನರ ಹೆಸರುಗಳಿದ್ದು, ಈಗಾಗಲೇ ಪ್ರಶ್ನಿಸುವ ಕಾರ್ಯ ಆರಂಭಿಸಿದ್ದೇವೆ’ ಎಂದು ಅವರು ಹೇಳಿದ್ದಾರೆ.

ವೈದ್ಯ ವಿದ್ಯಾರ್ಥಿನಿಯ ಕೊಲೆಯಾದ ದಿನ ಆಸ್ಪತ್ರೆಯಲ್ಲಿ ರಾತ್ರಿ ಪಾಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇಬ್ಬರು ಸ್ನಾತಕೋತ್ತರ ಟ್ರೈನಿ ಮತ್ತು ಒಬ್ಬರು ವೈದ್ಯರನ್ನು ಸಿಬಿಐ ವಿಚಾರಣೆಗೆ ಒಳಪಡಿಸಿತ್ತು. ಈ ಪ್ರಕರಣದಲ್ಲಿ ಬಂಧಿತನಾಗಿರುವ ಆರೋಪಿಯನ್ನು ಸಿಬಿಐ ತಂಡ ಶುಕ್ರವಾರ ಆಸ್ಪತ್ರೆಗೆ ಕರೆತಂದು, ಅಪರಾಧದ ಸನ್ನಿವೇಶವನ್ನು ಮರುಸೃಷ್ಟಿಸಿತು ಎಂದು ಮೂಲಗಳು ತಿಳಿಸಿವೆ.

ಮಹಾರಾಷ್ಟ್ರದ ಪುಣೆಯಲ್ಲಿ ಸ್ಥಾನಿಕ ವೈದ್ಯರು ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ವೈದ್ಯರ ಪ್ರತಿಭಟನೆ; ಸೇವೆಯಲ್ಲಿ ವ್ಯತ್ಯಯ

- ಕೋಲ್ಕತ್ತ ಸೇರಿದಂತೆ ಪಶ್ಚಿಮ ಬಂಗಾಳದ ವಿವಿಧೆಡೆ ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಸದಸ್ಯರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.
- ಮಹಾರಾಷ್ಟ್ರದಲ್ಲಿ ನಾಲ್ಕು ದಿನಗಳಿಂದ ನಡೆಯುತ್ತಿರುವ ಸ್ಥಾನಿಕ ವೈದ್ಯರ ಪ್ರತಿಭಟನೆಗೆ ಶುಕ್ರವಾರ ಹಿರಿಯ ವೈದ್ಯರೂ ಕೈಜೋಡಿಸಿದರು. ಇದರಿಂದ ರಾಜ್ಯದ ಹಲವೆಡೆ ರೋಗಿಗಳು ಚಿಕಿತ್ಸೆ ಪಡೆಯಲು ಪರದಾಡಿದರು.
- ಆಂಧ್ರ ಪ್ರದೇಶದ ಮಂಗಳಗಿರಿ ‘ಏಮ್ಸ್’ ವಿದ್ಯಾರ್ಥಿಗಳು ತುರ್ತು ಅಲ್ಲದ ಸೇವೆಗಳನ್ನು ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಿದರು.
- ಜಾರ್ಖಂಡ್‌ನ ಐದು ವೈದ್ಯಕೀಯ ಕಾಲೇಜುಗಳ ಕಿರಿಯ ವೈದ್ಯರು ಒಪಿಡಿ ಮತ್ತು ತುರ್ತು ಅಲ್ಲದ ಸೇವೆಗಳನ್ನು ಬಹಿಷ್ಕರಿಸಿ ಪ್ರತಿಭಟಿಸಿದರು.
- ಕೋಲ್ಕತ್ತದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ನೇತೃತ್ವದಲ್ಲಿ ಟಿಎಂಸಿ ಬೆಂಬಲಿಗರು ಪ್ರತಿಭಟನಾ ರ್‍ಯಾಲಿ ನಡೆಸಿದರು.
- ದೆಹಲಿಯ ವಿವಿಧ ಆಸ್ಪತ್ರೆಗಳ ಕಿರಿಯ ವೈದ್ಯರು ಶುಕ್ರವಾರವೂ ಪ್ರತಿಭಟನೆ ಮುಂದುವರಿಸಿದರು

ಸಿಬಿಐ ಈ ಪ್ರಕರಣವನ್ನು ಭಾನುವಾರದೊಳಗೆ ಇತ್ಯರ್ಥಪಡಿಸಿ, ತಪ್ಪಿತಸ್ಥರಿಗೆ ಗಲ್ಲು ಶಿಕ್ಷೆಯಾಗುವಂತೆ ಮಾಡಬೇಕು
ಮಮತಾ ಬ್ಯಾನರ್ಜಿ, ಮುಖ್ಯಮಂತ್ರಿ

ಖಾಸಗಿ ಆಸ್ಪತ್ರೆ ಒಪಿಡಿ 24 ಗಂಟೆ ಬಂದ್

ಒಂದನೇ ಪುಟದಿಂದ...

ಖಾಸಗಿ ಆಸ್ಪತ್ರೆಗಳಲ್ಲಿ ತುರ್ತು ಸೇವೆಗಳು ಮಾತ್ರ ದೊರೆಯಲಿವೆ. ಸರ್ಕಾರಿ ಆಸ್ಪತ್ರೆಗಳು ಎಂದಿನಂತೆ ಕಾರ್ಯ ನಿರ್ವಹಿಸಲಿವೆ. ಆದರೆ, ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುವ ಕೆಲ ವೈದ್ಯರು ಐಎಂಎ ಸದಸ್ಯರೂ ಆಗಿರುವುದರಿಂದ ಅವರು ಸೇವೆಗೆ ಗೈರಾಗುವ ಸಾಧ್ಯತೆಯಿದೆ. ಇದರಿಂದ ಸೇವೆಯಲ್ಲಿ ವ್ಯತ್ಯಯವಾಗುವ ಸಂಭವವಿದೆ. ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಆಂಬುಲೆನ್ಸ್ ಸೇವೆ ಎಂದಿನಂತೆ ಇರಲಿದ್ದು, ಔಷಧ ಮಳಿಗೆಗಳೂ ಯಥಾ ಪ್ರಕಾರ ಕಾರ್ಯನಿರ್ವಹಿಸಲಿವೆ.

ಮುಷ್ಕರಕ್ಕೆ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಸೇರಿ ವಿವಿಧ ವೈದ್ಯಕೀಯ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿದ್ದು, ಕೋಲ್ಕತ್ತದ ವೈದ್ಯ ವಿದ್ಯಾರ್ಥಿನಿ ಕೊಲೆ ಪ್ರಕರಣದಲ್ಲಿ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿವೆ. ವೈದ್ಯರ ಮೇಲಿನ ಹಲ್ಲೆ ತಡೆಗೆ ಕಠಿಣ ಕಾನೂನು ತಂದು, ವೈದ್ಯಕೀಯ ಸಂಸ್ಥೆಗಳಲ್ಲಿ ಸುರಕ್ಷಿತ ವಾತಾವರಣ ನಿರ್ಮಿಸಬೇಕು ಎಂದು ಒತ್ತಾಯಿಸಿವೆ.

ಈ ಪ್ರಕರಣ ಖಂಡಿಸಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯಲ್ಲಿನ (ನಿಮ್ಹಾನ್ಸ್) ಸ್ಥಾನಿಕ ವೈದ್ಯರು ಐದು ದಿನಗಳಿಂದ ಹೊರ ರೋಗಿ ವಿಭಾಗ ಬಹಿಷ್ಕರಿಸಿ, ಪ್ರತಿಭಟನೆ ನಡೆಸುತ್ತಿದ್ದಾರೆ. ಶನಿವಾರದಿಂದ ಒಳರೋಗಿ ವಿಭಾಗ ಸೇವೆ ಸ್ಥಗಿತಗೊಳಿಸುವುದಾಗಿ ನಿಮ್ಹಾನ್ಸ್ ಸ್ಥಾನಿಕ ವೈದ್ಯರ ಸಂಘ ತಿಳಿಸಿದೆ.

ರಜೆ ಮಂಜೂರು ಮಾಡದಂತೆ ಸೂಚನೆ

ಬೆಂಗಳೂರು: ವೈದ್ಯ ವಿದ್ಯಾರ್ಥಿನಿ ಕೊಲೆ ಪ್ರಕರಣ ಖಂಡಿಸಿ ರಾಜ್ಯದಲ್ಲಿಯೂ ಮುಷ್ಕರ ಹಮ್ಮಿಕೊಂಡಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ವೈದ್ಯರಿಗೆ ಶನಿವಾರ ರಜೆ ನೀಡಬಾರದು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರೆಗೆ ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘವು ಬೆಂಬಲ ಸೂಚಿಸಿದ್ದು, ತುರ್ತು ಸೇವೆ ಹೊರತುಪಡಿಸಿ ಇತರ ಎಲ್ಲ ವೈದ್ಯಕೀಯ ಸೇವೆಗಳನ್ನು ಸ್ಥಗಿತಗೊಳಿಸುವುದಾಗಿ ಆರೋಗ್ಯ ಸಚಿವರಿಗೆ ಪತ್ರ ನೀಡಿದೆ. ಇದರಿಂದಾಗಿ ಸಾರ್ವಜನಿಕ ಆರೋಗ್ಯ ಸೇವೆಗೆ ಧಕ್ಕೆಯಾಗುವ ಸಾಧ್ಯತೆಯಿದೆ. ಆದ್ದರಿಂದ ಎಲ್ಲ ಜಿಲ್ಲಾ ಶಸ್ತ್ರಚಿಕಿತ್ಸಕರು, ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳು ಅಗತ್ಯ ಮುನ್ನೆಚ್ಚರಿಕೆ ಕ್ರಮ ವಹಿಸಿ, ಸಾರ್ವಜನಿಕ ತುರ್ತು ವೈದ್ಯಕೀಯ ಸೇವೆಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ಕ್ರಮವಹಿಸಬೇಕು ಎಂದು ಆಸ್ಪತ್ರೆಗಳ ವೈದ್ಯಕೀಯ ಅಧೀಕ್ಷಕರು ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ.

₹400 ಕೋಟಿ ವಂಚನೆ; ನಾಲ್ವರ ಬಂಧನ

ಬೆಟ್ಟಿಂಗ್ ಆ್ಯಪ್

ನವದೆಹಲಿ (ಪಿಟಿಐ): ಚೀನಾ ಪ್ರಜೆಗಳು ಭಾಗಿಯಾಗಿದ್ದಾರೆ ಎನ್ನಲಾದ ಆನ್‌ಲೈನ್ ಬೆಟ್ಟಿಂಗ್ ಅಪ್ಲಿಕೇಷನ್ ಮೂಲಕ ₹400 ಕೋಟಿ ‘ವಂಚಿಸಿದ’ ಪ್ರಕರಣದಡಿ ನಾಲ್ವರನ್ನು ಬಂಧಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ತಿಳಿಸಿದೆ.

ಅರುಣ್ ಸಾಹು, ಅಲೋಕ್ ಸಾಹು, ಚೇತನ್ ಪ್ರಕಾಶ್ ಮತ್ತು ಜೋಸೆಫ್ ಸ್ಟಾಲಿನ್ ಬಂಧಿತರು. ಇವರನ್ನು ‘ಫೀವಿನ್’ ಹೆಸರಿನ ಅಪ್ಲಿಕೇಷನ್‌ಗೆ ಸಂಬಂಧಿಸಿದ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆ ತಡೆ (ಪಿಎಂಎಲ್‌ಎ) ಕಾಯ್ದೆಯಡಿ ಬಂಧಿಸಲಾಗಿದೆ ಎಂದು ಇ.ಡಿ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಕೋಲ್ಕತ್ತದ ಕಾಸಿಪೋರ್ ಪೊಲೀಸ್ ಠಾಣೆಯಲ್ಲಿ ಅಪರಿಚಿತರ ವಿರುದ್ಧ ದಾಖಲಾಗಿದ್ದ ಸಂಚು ಮತ್ತು ವಂಚನೆ ಕುರಿತ ಎಫ್‌ಐಆರ್‌ಗೆ ಸಂಬಂಧಿಸಿದ ಪ್ರಕರಣ ಇದಾಗಿದೆ.

ಫೀವಿನ್ ಅಪ್ಲಿಕೇಷನ್ ಮೂಲಕ ಸುಮಾರು ₹400 ಕೋಟಿ ಸಂಗ್ರಹಿಸಲಾಗಿತ್ತು. ಬಳಿಕ ಮೊತ್ತವನ್ನು ಚೀನಾದ ಪ್ರಜೆಗಳ ಹೆಸರಿನಲ್ಲಿ ಎಂಟು ಬಿನಾನ್ಸ್ (ಜಾಗತಿಕ ಕ್ರಿಪ್ಟೊವಿನಿಮಯ) ಖಾತೆಗಳಿಗೆ ಜಮೆ ಮಾಡಲಾಗಿತ್ತು.

ಈ ಖಾತೆಗಳನ್ನು ಚೀನಾದಿಂದ ನಿರ್ವಹಣೆ ಮಾಡಲಾಗುತ್ತಿತ್ತು. ಐ.ಪಿ ವಿಳಾಸದ ಮಾಹಿತಿ ಆಧರಿಸಿ ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಚೀನಾದ ಪ್ರಜೆಗಳು ಈಗ ಬಂಧಿತರಾಗಿರುವ ನಾಲ್ವರಿಗೆ ಟೆಲಿಗ್ರಾಂ ಅಪ್ಲಿಕೇಷನ್‌ನ ಖಾತೆಯ ಮೂಲಕ ಮಾಹಿತಿ ರವಾನಿಸುತ್ತಿದ್ದರು ಎಂದು ಹೇಳಿದ್ದಾರೆ.

ನಾಲ್ವರನ್ನು ಯಾವಾಗ ಬಂಧಿಸಲಾಯಿತು ಎಂಬುದನ್ನು ಇ.ಡಿ ವಿವರಿಸಿಲ್ಲ. ಆದರೆ, ಕೋಲ್ಕತ್ತದ ಪಿಎಂಎಲ್‌ಎ ಕೋರ್ಟ್ ನಾಲ್ವರನ್ನು 14 ದಿನ ಇ.ಡಿ ವಶಕ್ಕೆ ಒಪ್ಪಿಸಿದೆ ಎಂದು ಮಾಹಿತಿ ನೀಡಿದೆ.

ಕಾಶ್ಮೀರ: ಮತ್ತೆ ಮತಹಬ್ಬ

ಒಂದನೇ ಪುಟದಿಂದ...

ಈ ಎರಡೂ ರಾಜ್ಯಗಳ ಚುನಾವಣೆ ಆಡಳಿತ ಪಕ್ಷ ಎನ್‌ಡಿಎ ಹಾಗೂ ವಿಪಕ್ಷ ‘ಇಂಡಿಯಾ’ ಮೈತ್ರಿಕೂಟಗಳಿಗೆ ಮಹತ್ವದ್ದು. ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿದ ಬಿಜೆಪಿಯು ಮಿತ್ರ ಪಕ್ಷಗಳೊಂದಿಗೆ ಸರ್ಕಾರ ರಚಿಸಿದ ಮೂರೇ ತಿಂಗಳಲ್ಲಿ ಮತ್ತೊಂದು ಚುನಾವಣೆ ಎದುರಿಸುತ್ತಿದೆ. ಹರಿಯಾಣದಲ್ಲಿ ಸತತ ಎರಡು ಬಾರಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಬಿಜೆಪಿಯು ಹ್ಯಾಟ್ರಿಕ್ ಸಾಧನೆಯ ಕನವರಿಕೆಯಲ್ಲಿದೆ. ಆದರೆ, ರಾಜ್ಯದಲ್ಲಿ ಪಕ್ಷ ಪ್ರಬಲ ಆಡಳಿತ ವಿರೋಧಿ ಅಲೆ ಎದುರಿಸುತ್ತಿದೆ. ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಐದು ಕ್ಷೇತ್ರಗಳಲ್ಲಿ ಗೆದ್ದು ಕಾಂಗ್ರೆಸ್ ಬೀಗಿತ್ತು. ಅಲ್ಲಿ ಅಧಿಕಾರದ ಗದ್ದುಗೆ ಹಿಡಿಯುವ ವಿಶ್ವಾಸದಲ್ಲಿ ‘ಕೈ’ ಪಾಳಯ ಇದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಕಳೆದ ಚುನಾವಣೆಯು 2014ರಲ್ಲಿ ಐದು ಹಂತಗಳಲ್ಲಿ ನಡೆದಿತ್ತು. 2018ರ ನವೆಂಬರ್‌ನಲ್ಲಿ ವಿಧಾನಸಭೆಯನ್ನು ವಿಸರ್ಜಿಸಲಾಗಿತ್ತು. ನಂತರ ಚುನಾವಣಾ ಪ್ರಕ್ರಿಯೆ ನಡೆಸಿರಲಿಲ್ಲ. ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದುಗೊಳಿಸಿದ ಕೇಂದ್ರದ ನಿರ್ಧಾರವನ್ನು ಎತ್ತಿ ಹಿಡಿದಿದ್ದ ಸುಪ್ರೀಂ ಕೋರ್ಟ್, ಸೆಪ್ಟೆಂಬರ್ 30ರೊಳಗೆ ವಿಧಾನಸಭೆ ಚುನಾವಣೆ ನಡೆಸುವಂತೆ ಆಯೋಗಕ್ಕೆ ನಿರ್ದೇಶನ ನೀಡಿತ್ತು.

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಜಮ್ಮು – ಕಾಶ್ಮೀರದಲ್ಲಿ ಮತ ಪ್ರಮಾಣ ಶೇ 30ರಷ್ಟು ಹೆಚ್ಚಳ ಆಗಿತ್ತು. ಆದರೂ, ಭಯೋತ್ಪಾದಕ ಚಟುವಟಿಕೆ ಹೆಚ್ಚುತ್ತಿರುವುದರಿಂದ ಭದ್ರತೆ ಒದಗಿಸುವುದು ಪ್ರಮುಖ ಸವಾಲು ಆಗಲಿದೆ. ‘ರಾಜ್ಯದ ಜನರು ಬುಲೆಟ್ ಹಾಗೂ ಬಹಿಷ್ಕಾರದ ಬದಲು ಬ್ಯಾಲೆಟ್ ಅನ್ನು ಆಯ್ಕೆ ಮಾಡಿದ್ದಾರೆ. ಜನರು ಭಯೋತ್ಪಾದಕರಿಗೆ ಸವಾಲು ಒಡ್ಡಲು ಸಿದ್ಧರಿದ್ದಾರೆ. ಎಲ್ಲ ಅಭ್ಯರ್ಥಿಗಳಿಗೆ ಸೂಕ್ತ ಭದ್ರತೆ ಒದಗಿಸಲಾಗುತ್ತದೆ. ಲೋಕಸಭಾ ಚುನಾವಣೆಯಲ್ಲಿ ಕಾಶ್ಮೀರ ವಲಸಿಗರಿಗೆ ಆರಂಭಿಸಿದ್ದ ಸರಳೀಕೃತ ಮತದಾನದ ವ್ಯವಸ್ಥೆಯು ವಿಧಾನಸಭಾ ಚುನಾವಣೆಯಲ್ಲಿ ಮುಂದುವರಿಯಲಿದೆ’ ಎಂದು ಕುಮಾರ್ ತಿಳಿಸಿದರು.

ಕೇಂದ್ರಾಡಳಿತ ಪ್ರದೇಶದಲ್ಲಿ ಸರಣಿ ವರ್ಗಾವಣೆಗಳು ಹಾಗೂ ನೇಮಕಾತಿ ಪ್ರಕ್ರಿಯೆ ನಡೆದಿರುವ ಕುರಿತು ಪ್ರತಿಕ್ರಿಯಿಸಿದ ಚುನಾವಣಾ ಆಯುಕ್ತರು, ‘ಮಾದರಿ ನೀತಿಸಂಹಿತೆ ಜಾರಿಗೆ ಬರುವ ಮೊದಲು ಸರ್ಕಾರವು ಅಧಿಕಾರಿಗಳನ್ನು ವರ್ಗಾವಣೆ ಮಾಡಬಹುದು. ಆದರೆ, ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗೆ ಧಕ್ಕೆಯಾಗುವಂತೆ ಈ ಪ್ರಕ್ರಿಯೆ ನಡೆದರೆ ಆಯೋಗ ಮಧ್ಯ ಪ್ರವೇಶಿಸಲಿದೆ’ ಎಂದು ಹೇಳಿದರು.

ಚುನಾವಣೆ ಹೊತ್ತಿನಲ್ಲಿ ಅತ್ಯಾಚಾರ ಅಪರಾಧಿ ಸ್ವತಂತ್ರ ಹಕ್ಕಿ !

ಚಂಡೀಗಢ: ಇಬ್ಬರು ಭಕ್ತೆಯರ ಮೇಲೆ ಅತ್ಯಾಚಾರ ಮಾಡಿದ್ದಕ್ಕಾಗಿ 20 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿರುವ ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಂ ಅವರು ಮತ್ತೆ 21 ದಿನಗಳ ಪೆರೋಲ್/ಫರ್ಲೋ (ತಾತ್ಕಾಲಿಕ ಅವಧಿಗೆ ಬಿಡುಗಡೆ) ಮೇಲೆ ಹರಿಯಾಣದ ರೋಹ್ಟಕ್‌ನ ಸುನಾರಿಯಾ ಜೈಲಿನಿಂದ ಬಿಡುಗಡೆಗೊಂಡಿದ್ದಾರೆ.

ಅತ್ಯಾಚಾರ ಆರೋಪ ಸಾಬೀತಾಗಿ 2017ರಲ್ಲಿ ಜೈಲು ಶಿಕ್ಷೆ ಅನುಭವಿಸಲು ಆರಂಭಿಸಿದ ನಂತರ ಅವರು ಪೆರೋಲ್ ಮೂಲಕ ಬಿಡುಗಡೆಯಾಗುತ್ತಿರುವುದು ಇದು 10ನೇ ಬಾರಿ. ಈವರೆಗೆ, ಪೆರೋಲ್ ಅಡಿಯಲ್ಲಿ 235 ದಿನಗಳ ಕಾಲ ಅವರು ಕಾರಾಗೃಹದಿಂದ ಹೊರಗಿದ್ದರು.

ಹರಿಯಾಣ ಚುನಾವಣೆ ಹತ್ತಿರದಲ್ಲಿ ಇರುವಾಗ ಅವರು ಜೈಲಿನಿಂದ ಬಿಡುಗಡೆಯಾಗಿದ್ದಾರೆ. ಅಚ್ಚರಿ ಎಂದರೆ, ಹರಿಯಾಣ, ಪಂಜಾಬ್ ಅಥವಾ ರಾಜಸ್ಥಾನಗಳಲ್ಲಿ ನಡೆಯುವ ಒಂದಿಲ್ಲೊಂದು ಚುನಾವಣೆ ಸಂದರ್ಭದಲ್ಲೇ ರಹೀಂ ಜೈಲಿನಿಂದ ಹೊರಗಡೆ ಬರುತ್ತಿದ್ದಾರೆ. 10 ಬಾರಿಯ ಪೆರೋಲ್‌ಗಳಲ್ಲಿ, ಆರು ಬಾರಿ ಚುನಾವಣೆಯ ಸಂದರ್ಭಗಳಲ್ಲೇ ಸಿಕ್ಕಿದೆ!

ಹರಿಯಾಣ, ಪಂಜಾಬ್, ರಾಜಸ್ಥಾನ ಹಾಗೂ ಸುತ್ತಮುತ್ತಲಿನ ರಾಜ್ಯಗಳಲ್ಲಿ ಸಾಕಷ್ಟು ಅನುಯಾಯಿಗಳನ್ನು ಹೊಂದಿರುವ ಗುರ್ಮೀತ್ ರಾಮ್ ರಹೀಂ ಅವರು ರಾಜಕೀಯವಾಗಿ ಪ್ರಭಾವಿಯಾಗಿದ್ದಾರೆ.

ರಾಜಕೀಯ ಪಕ್ಷಗಳ ಮುಖಂಡರೊಂದಿಗೂ ಆತ್ಮೀಯ ಒಡನಾಟ ಹೊಂದಿರುವ ಅವರು, ಚುನಾವಣೆಗಳ ಸಂದರ್ಭದಲ್ಲಿ ಬಿಜೆಪಿ ಸೇರಿದಂತೆ ಹಲವು ಪಕ್ಷಗಳಿಗೆ ಈ ಹಿಂದೆ ಬೆಂಬಲವನ್ನೂ ನೀಡಿದ್ದರು.

ಇಬ್ಬರು ಭಕ್ತೆಯರ ಮೇಲೆ ಅತ್ಯಾಚಾರ ಮಾಡಿದ್ದಕ್ಕಾಗಿ ರಹೀಂ ಅವರು 2017ರ ಆ.25ರಿಂದ ಜೈಲು ಶಿಕ್ಷೆ ಅನುಭವಿಸುತ್ತಿದ್ದಾರೆ.

ಉತ್ತರಾಖಂಡ: ಆರೋಪಿಯ ಬಂಧನ

ನರ್ಸ್ ಮೇಲೆ ಅತ್ಯಾಚಾರ, ಕೊಲೆ

ರುದ್ರಪುರ(ಉತ್ತರಾಖಂಡ)(ಪಿಟಿಐ): ಖಾಸಗಿ ಆಸ್ಪತ್ರೆಯೊಂದರ ನರ್ಸ್ ಮೇಲೆ ವ್ಯಕ್ತಿಯೊಬ್ಬ ಅತ್ಯಾಚಾರ ಎಸಗಿ, ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ.

ಆರೋಪಿಯು ನರ್ಸ್ ಶವವನ್ನು ಉತ್ತರಾಖಂಡ ಗಡಿ ಸಮೀಪ ಇರುವ, ಉತ್ತರ ಪ್ರದೇಶದ ಗ್ರಾಮವೊಂದರ ಖಾಲಿ ನಿವೇಶನದಲ್ಲಿ ಎಸೆದಿದ್ದಾನೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

‘ಘಟನೆಗೆ ಸಂಬಂಧಿಸಿ, ಆರೋಪಿ ಧರ್ಮೇಂದ್ರ ಎಂಬಾತನನ್ನು ಬಂಧಿಸಲಾಗಿದೆ’ ಎಂದು ಉತ್ತರಾಖಂಡದ ಉಧಂಪುರ ಸಿಂಗ್ ನಗರ ಜಿಲ್ಲೆಯ ಎಸ್ಪಿ ಟಿ.ಸಿ.ಮಂಜುನಾಥ ಹೇಳಿದ್ದಾರೆ.

ಉತ್ತರ ಪ್ರದೇಶದ ಬರೇಲಿಯ ಧರ್ಮೇಂದ್ರ, ಉತ್ತರಾಖಂಡದ ಗದರ್‌ಪುರದಲ್ಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದರು. ಅವರನ್ನು ರಾಜಸ್ಥಾನದಲ್ಲಿ ಆಗಸ್ಟ್ 13ರಂದು ಬಂಧಿಸಲಾಗಿದೆ ಎಂದು ಮಂಜುನಾಥ ತಿಳಿಸಿದ್ದಾರೆ.

ಕೆಲಸ ಮುಗಿಸಿ, ಆಸ್ಪತ್ರೆಯಿಂದ ಮನೆಗೆ ಮರಳುತ್ತಿದ್ದ ವೇಳೆ, ಜುಲೈ 30ರಿಂದ ನರ್ಸ್ ನಾಪತ್ತೆಯಾಗಿದ್ದರು. ಅವರ ಮೃತದೇಹ ಆಗಸ್ಟ್ 8ರಂದು ಉತ್ತರಾಖಂಡ ಗಡಿ ಸಮೀಪದ ದಿಬ್‌ದಿಬಾ ಗ್ರಾಮದಲ್ಲಿ ಪತ್ತೆಯಾಗಿತ್ತು ಎಂದು ತಿಳಿಸಿದ್ದಾರೆ.

ಆರೋಪಿಯು ಕಲ್ಲಿನಿಂದ ಜಜ್ಜಿರುವ ಕಾರಣ, ನರ್ಸ್ ಮುಖ ಗುರುತು ಸಿಗಲಾರದಷ್ಟು ವಿರೂಪಗೊಂಡಿತ್ತು. ಅಪರಾಧ ಎಸಗಿದ ನಂತರ, ಆರೋಪಿಯು ಆಕೆಯಲ್ಲಿದ್ದ ಹಣ, ಮೊಬೈಲ್ ಹಾಗೂ ಮೌಲ್ಯಯುತ ವಸ್ತುಗಳೊಂದಿಗೆ ಪರಾರಿಯಾಗಿದ್ದ ಎಂದು ಎಸ್ಪಿ ತಿಳಿಸಿದ್ದಾರೆ.

ಮೃತ ನರ್ಸ್ ಮನೆ ಉತ್ತರಪ್ರದೇಶದ ರಾಂಪುರ ಜಿಲ್ಲೆಯ ಗಡಿಯಲ್ಲಿದೆ. ಮನೆ ಸಮೀಪದ ನಿವೇಶನವೊಂದರಲ್ಲಿ ನರ್ಸ್ ಶವ ಪತ್ತೆಯಾಗಿದೆ. ಈ ಜಾಗ ಉತ್ತರಾಖಂಡದ ಉಧಮ್‌ಸಿಂಗ್ ನಗರ ಜಿಲ್ಲೆಗೆ ಸೇರಿದೆ. ನರ್ಸ್ ಕಾಣೆಯಾದ ಕುರಿತು ಆಕೆಯ ಸಹೋದರಿ ಜುಲೈ 31ರಂದು ದೂರು ನೀಡಿದ್ದರು.

‘ಸಿ.ಸಿ.ಟಿವಿ ದೃಶ್ಯಗಳ ನೆರವು ಹಾಗೂ ಮೃತಳ ಮೊಬೈಲ್ ಲೊಕೇಶನ್ ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು’ ಎಂದು ಎಸ್ಪಿ ಮಂಜುನಾಥ ತಿಳಿಸಿದ್ದಾರೆ.

ಆರೋಪಿ ಹೇಳಿದ್ದೇನು: ‘ನನಗೆ ಹಣದ ಅವಶ್ಯಕತೆ ಇತ್ತು. ನರ್ಸ್ ಬಳಿಯ ಹಣ ದೋಚುವ ಸಲುವಾಗಿ, ಕೆಲಸ ಮುಗಿಸಿ ಮನೆಗೆ ಮರಳುತ್ತಿದ್ದ ಆಕೆಯನ್ನು ಹಿಂಬಾಲಿಸಿದೆ. ನಿರ್ಜನ ಪ್ರದೇಶದಲ್ಲಿದ್ದಾಗ, ಬಲವಂತದಿಂದ ಆಕೆಯನ್ನು ಗಿಡಕಂಟಿಗಳ ಕಡೆಗೆ ಎಳೆದೊಯ್ದೆ ಎಂಬುದಾಗಿ ವಿಚಾರಣೆ ವೇಳೆ ಆರೋಪಿ ತಿಳಿಸಿದ್ದಾನೆ’ ಎಂದು ಎಸ್ಪಿ ಮಂಜುನಾಥ ಹೇಳಿದ್ದಾರೆ.

‘ಆಕೆ ಕಿರುಚಲು ಯತ್ನಿಸಿದಳು. ಸ್ಕಾರ್ಫ್‌ನಿಂದ ಉಸಿರುಗಟ್ಟಿಸಲು ಮುಂದಾದಾಗ ಆಕೆ ಪ್ರಜ್ಞಾಹೀನಳಾದಳು. ಆಕೆ ಮೇಲೆ ಅತ್ಯಾಚಾರ ಎಸಗಿ, ನಂತರ ಮುಖಕ್ಕೆ ಕಲ್ಲಿನಿಂದ ಜಜ್ಜಿದೆ ಎಂದೂ ವಿಚಾರಣೆ ವೇಳೆ ಆರೋಪಿ ತಿಳಿಸಿದ್ದಾನೆ’ ಎಂದು ಹೇಳಿದ್ದಾರೆ.

ಇಸ್ರೊ ಸಾಧನೆಗೆ ಮತ್ತೊಂದು ಗರಿ • ಎಸ್‌ಎಸ್‌ಎಲ್‌ವಿ–ಡಿ3 ರಾಕೆಟ್ ಬಳಕೆ

ಕಿರು ಉಪಗ್ರಹ ‘ಇಒಎಸ್–08’ ಕಕ್ಷೆಗೆ

ಶ್ರೀಹರಿಕೋಟ (ಆಂಧ್ರಪ್ರದೇಶ) (ಪಿಟಿಐ): ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡಿರುವ ಭೂವೀಕ್ಷಣೆ ಕಿರು ಉಪಗ್ರಹ ‘ಇಒಎಸ್-08’ ಅನ್ನು ಶ್ರೀಹರಿಕೋಟದಿಂದ ಶುಕ್ರವಾರ ಯಶಸ್ವಿಯಾಗಿ ಉಡ್ಡಯನ ಮಾಡಲಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೊ) ತಿಳಿಸಿದೆ.

ಇದೇ ವೇಳೆ, ದೂರಸಂವಹನ ಉದ್ದೇಶದ ಉಪಗ್ರಹ ‘ಎಸ್‌ಆರ್-0 ಡಿಇಎಂಒಎಸ್‌ಟಿ’ಯನ್ನು ಸಹ ಯಶಸ್ವಿಯಾಗಿ ಉಡ್ಡಯನ ಮಾಡಲಾಗಿದೆ.

‘ಸಣ್ಣ ಉಪಗ್ರಹ ಉಡ್ಡಯನ ವಾಹನ’ (ಎಸ್‌ಎಸ್‌ಎಲ್‌ವಿ–ಡಿ3) ಬಳಸಿ ಈ ‘ಇಒಎಸ್-08’ ಅನ್ನು ಉಡ್ಡಯನ ಮಾಡಲಾಗಿದ್ದು, ಈ ಸಾಧನೆಯು ಭವಿಷ್ಯದ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ಮತ್ತಷ್ಟು ಬಲ ತುಂಬಲಿದೆ ಎಂದು ಇಸ್ರೊ ಹೇಳಿದೆ.

ಸಣ್ಣ ಉಪಗ್ರಹಗಳ ಉಡ್ಡಯನಕ್ಕಾಗಿಯೇ ಎಸ್‌ಎಸ್‌ಎಲ್‌ವಿ ಸರಣಿಯ ರಾಕೆಟ್‌ಗಳನ್ನು ಇಸ್ರೊ ಅಭಿವೃದ್ಧಿಪಡಿಸಿದೆ.

ಇಲ್ಲಿನ ‘ಮಿಷನ್ ಕಂಟ್ರೋಲ್ ಸೆಂಟರ್’ನಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್, ‘ಎಸ್‌ಎಸ್‌ಎಲ್‌ವಿ–ಡಿ3, ಭೂವೀಕ್ಷಣೆ ಕಿರುಉಪಗ್ರಹವನ್ನು ನಿರ್ದಿಷ್ಟ ಕಕ್ಷೆಯಲ್ಲಿ ಕರಾರುವಾಕ್ಕಾಗಿ ಸೇರಿಸಿದೆ’ ಎಂದರು.

ಭೂವೀಕ್ಷಣೆ ಕಿರುಉಪಗ್ರಹ ‘ಇಒಎಸ್–08’ ಹೊತ್ತ ರಾಕೆಟ್ ‘ಎಸ್‌ಎಸ್‌ಎಲ್‌ವಿ–ಡಿ3’ ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಶುಕ್ರವಾರ ನಭಕ್ಕೆ ಚಿಮ್ಮಿತು ಪಿಟಿಐ ಚಿತ್ರ

‘ಇಒಎಸ್-08’, ‘ಎಸ್‌ಆರ್-0 ಡಿಇಎಂಒಎಸ್‌ಟಿ’ ಉಪಗ್ರಹಗಳ ಉಡ್ಡಯನಕ್ಕೆ ಸಂಬಂಧಿಸಿದ ಎಲ್ಲ ಮಾನದಂಡಗಳು ಸಮರ್ಪಕವಾಗಿದ್ದವು ಎಂಬುದು ಸಹ ದೃಢಪಟ್ಟಿದೆ’ ಎಂದ ಅವರು, ‘ಎಸ್‌ಎಸ್‌ಎಲ್ ವಿ–ಡಿ3’ ಪ್ರಾಜೆಕ್ಟ್‌ನ ತಂಡಕ್ಕೆ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

‘ಎಸ್‌ಎಸ್‌ಎಲ್‌ವಿಗೆ ಸಂಬಂಧಿಸಿದ ತಂತ್ರಜ್ಞಾನವನ್ನು ಉದ್ದಿಮೆಗಳಿಗೆ ವರ್ಗಾಯಿಸುವ ಪ್ರಕ್ರಿಯೆ ನಡೆಯುತ್ತಿದೆ’ ಎಂದು ಇಸ್ರೊ ಅಧ್ಯಕ್ಷ ಸೋಮನಾಥ್ ಹೇಳಿದರು.

‘ಇಒಎಸ್-08’ ಕಾರ್ಯಕ್ರಮ ನಿರ್ದೇಶಕ ಎಸ್.ಎಸ್.ವಿನೋದ್, ‘ಎಸ್‌ಎಸ್‌ಎಲ್‌ವಿ ಅಭಿವೃದ್ಧಿ ಮತ್ತು ಬಳಕೆ ವಿಷಯದಲ್ಲಿ ಇಂದಿನ ಯಶಸ್ಸು ಮಹತ್ವದ ಮೈಲಿಗಲ್ಲು. ಈ ರಾಕೆಟ್ ಉಡ್ಡಯನಕ್ಕೆ ಸಂಬಂಧಿಸಿದ ಅಂತಿಮ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಿಭಾಯಿಸಲಾಗಿದೆ’ ಎಂದರು.

ಆ.15ರ ಬದಲು 16ರಂದು ಉಡ್ಡಯನ: 34 ಮೀಟರ್ ಎತ್ತರವಿರುವ ಎಸ್‌ಎಸ್‌ಎಲ್‌ವಿ–ಡಿ3 ರಾಕೆಟ್ ಅನ್ನು ಆ. 15ರಂದು ಬೆಳಿಗ್ಗೆ 9.17ಕ್ಕೆ ಉಡ್ಡಯನ ಮಾಡಲು ಯೋಜಿಸಲಾಗಿತ್ತು. ಬಳಿಕ ಆಗಸ್ಟ್ 16 ಬೆಳಿಗ್ಗೆ 9.17ಕ್ಕೆ ಮುಂದೂಡಲಾಗಿತ್ತು.

ಭೂವೀಕ್ಷಣೆ ಉಪಗ್ರಹ–08

- ಇಸ್ರೊದ ವಾಣಿಜ್ಯ ಅಂಗ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಈ ಕಿರುಉಪಗ್ರಹವನ್ನು ಅಭಿವೃದ್ಧಿಪಡಿಸಿದೆ
- 175.5 ಕೆ.ಜಿ ತೂಕದ ಈ ಕಿರುಉಪಗ್ರಹ ಮೂರು ಪೇಲೋಡ್‌ಗಳನ್ನು ಒಳಗೊಂಡಿದೆ
- ಭೂಮಿಯಿಂದ 475 ಕಿ.ಮೀ ಎತ್ತರದಲ್ಲಿರುವ ಕೆಳಹಂತದ ಕಕ್ಷೆಯಲ್ಲಿ ವೃತ್ತಾಕಾರದಲ್ಲಿ ಪರಿಭ್ರಮಣೆ ನಡೆಸಲಿದೆ
- ಮಣ್ಣಿನ ತೇವಾಂಶದ ಮಾಲ್ಯಮಾಪನದಿಂದ ಪ್ರಾಕೃತಿಕ ನಿರ್ವಹಣೆವರೆಗಿನ ಕಾರ್ಯನಿರ್ವಹಿಸುತ್ತದೆ

ಎಸ್‌ಎಸ್‌ಎಲ್‌ವಿ–ಡಿ3

- ಮೂರು ಹಂತಗಳ, ಕಡಿಮೆ ವೆಚ್ಚದ ಉಡ್ಡಯನ ವಾಹನ
- ಭವಿಷ್ಯದ ಉಪಗ್ರಹಗಳ ಕಾರ್ಯಾಚರಣೆ ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಪಡಿಸಲಾಗಿದೆ
- ಸುಮಾರು 500 ಕೆ.ಜಿ ತೂಕದವರೆಗಿನ ಉಪಗ್ರಹಗಳನ್ನು ಉಡಾವಣೆ ಮಾಡುವ ಸಾಮರ್ಥ್ಯ ಹೊಂದಿದೆ.

ಇಸ್ರೊ ಸಾಧನೆ: ಮೋದಿ ಶ್ಲಾಘನೆ

ಸಣ್ಣ ಉಪಗ್ರಹಗಳ ಉಡಾವಣೆ ಉದ್ದೇಶದ ರಾಕೆಟ್, ‘ಎಸ್‌ಎಸ್‌ಎಲ್‌ವಿ–ಡಿ3’ ಬಳಸಿ ಭೂವೀಕ್ಷಣೆ ಕಿರುಉಪಗ್ರಹ ಉಡ್ಡಯನ ಮಾಡಿದ ಇಸ್ರೊ ಸಾಧನೆಯನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಶ್ಲಾಘಿಸಿದ್ದಾರೆ.

ಅಗ್ನಿ ಕ್ಷಿಪಣಿ ಪಿತಾಮಹ ನಿಧನ

ಹೈದರಾಬಾದ್ (ಪಿಟಿಐ): ದೇಶದ ಅಗ್ನಿ ಕ್ಷಿಪಣಿಗಳ ಪಿತಾಮಹ, ಪದ್ಮಭೂಷಣ ಪುರಸ್ಕೃತರಾಗಿದ್ದ ಆರ್.ಎನ್. ಅಗರ್ವಾಲ್ (84) ಅವರು ವಯೋಸಹಜ ಅನಾರೋಗ್ಯದಿಂದ ಗುರುವಾರ ಇಲ್ಲಿ ನಿಧನರಾದರು.

ಅಗ್ನಿ ಯೋಜನೆಯ ನಿರ್ದೇಶಕರಾಗಿ ಕೆಲಸ ಮಾಡಿದ್ದ ಅವರು, ಹೈದರಾಬಾದ್‌ನ ಎಎಸ್‌ಎಲ್ (ಅಡ್ವಾನ್ಸ್ಡ್ ಸಿಸ್ಟಮ್ಸ್ ಲ್ಯಾಬೊರೇಟರಿ) ನಿರ್ದೇಶಕರಾಗಿಯೂ ಕರ್ತವ್ಯ ನಿರ್ವಹಿಸಿದ್ದರು.

ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರೊಂದಿಗೆ ಐಜಿಎಂಡಿಪಿ (ಇಂಟಿಗ್ರೇಟೆಡ್ ಗೈಡೆಡ್ ಮಿಸೈಲ್ ಡೆವಲಪ್‌ಮೆಂಟ್ ಪ್ರೋಗ್ರಾಮ್) ಆರಂಭಿಸಿದ್ದರು. ಅಗ್ನಿ ಸರಣಿಯ ಕ್ಷಿಪಣಿಗಳನ್ನು ತಯಾರಿಸುವಲ್ಲಿ ಅಗರ್ವಾಲ್ ಪ್ರಮುಖ ಪಾತ್ರ ವಹಿಸಿದ್ದರು.

ಅಗರ್ವಾಲ್ ಅವರ ಅಂತ್ಯಕ್ರಿಯೆಯನ್ನು ಆ.17ರಂದು ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಸಲು ತೆಲಂಗಾಣ ಸರ್ಕಾರ ಶುಕ್ರವಾರ ನಿರ್ಧರಿಸಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ವೈದ್ಯ ವಿದ್ಯಾರ್ಥಿನಿ ಮಾನಭಂಗ ಯತ್ನ: ವಲಸೆ ಕಾರ್ಮಿಕನ ಬಂಧನ

ಪ್ರಜಾವಾಣಿ ವಾರ್ತೆ

ಕೊಯಮತ್ತೂರು: ವಲಸೆ ಕಾರ್ಮಿಕನೊಬ್ಬ, ಕೊಯಮತ್ತೂರು ವೈದ್ಯಕೀಯ ಕಾಲೇಜು ಆಸ್ಪತ್ರೆಯ (ಸಿಎಂಸಿಎಚ್) ವೈದ್ಯ ವಿದ್ಯಾರ್ಥಿನಿಯ ಮಾನಭಂಗಕ್ಕೆ ಯತ್ನಿಸಿದ ಆರೋಪ ಕೇಳಿಬಂದಿದೆ.

ಪ್ರಕರಣಕ್ಕೆ ಸಂಬಂಧಿಸಿ ಆರೋಪಿ, ಮಧ್ಯಪ್ರದೇಶದ ಮಯಂಕ್ ಗಲ್ಲರ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳಾ ಸಹೋದ್ಯೋಗಿಗಳ ಸುರಕ್ಷತೆಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ, 150 ತರಬೇತಿ ವೈದ್ಯರು ಕಾಲೇಜಿನ ಡೀನ್ ಕಚೇರಿ ಮುಂದೆ ಗುರುವಾರ ಧರಣಿ ನಡೆಸಿದ್ದಾರೆ.

‘ವೈದ್ಯ ವಿದ್ಯಾರ್ಥಿನಿಯ ಹಾಸ್ಟೆಲ್ ಮತ್ತು ಆಡಳಿತ ವಿಭಾಗದ ನಡುವೆ ದ್ವಿಚಕ್ರ ವಾಹನಗಳ ಪಾರ್ಕಿಂಗ್ ಜಾಗವಿದೆ. ತನ್ನ ದ್ವಿಚಕ್ರ ವಾಹನ ತೆಗೆದಕೊಳ್ಳಲು ಹೋದಾಗ ಆಕೆಯ ಮಾನಭಂಗದ ಯತ್ನ ನಡೆದಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ತನ್ನ ಮಾನಭಂಗಕ್ಕೆ ಯತ್ನಿಸಿದ್ದ ಎನ್ನಲಾದ ವ್ಯಕ್ತಿಯನ್ನು ತಳ್ಳಿ, ಆಕೆ ಆ ಸ್ಥಳದಿಂದ ಪರಾರಿಯಾಗಿದ್ದಾಳೆ. ತನಗಾದ ತೊಂದರೆ ಕುರಿತು ಆಕೆ ನೀಡಿದ ಮಾಹಿತಿ ಮೇರೆಗೆ, ವಿದ್ಯಾರ್ಥಿಗಳ ಗುಂಪೊಂದು ಸ್ಥಳಕ್ಕೆ ಬಂದಿದೆ. ಆಗ, ಆರೋಪಿ ಪರಾರಿಯಾದ. ನಂತರ, ಆತನನ್ನು ಬಂಧಿಸಲಾಯಿತು’ ಎಂದಿದ್ದಾರೆ.

ಘಟನೆಗೆ ಸಂಬಂಧಿಸಿ, ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 74 ಹಾಗೂ ತಮಿಳುನಾಡು ಮಹಿಳೆಯರ ವಿರುದ್ಧ ದೌರ್ಜನ್ಯ ತಡೆ ಕಾಯ್ದೆ ಸೆಕ್ಷನ್ 4ರಡಿ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ದೂರು: ‘ಬುಧವಾರ ರಾತ್ರಿ 9.30ರ ಹೊತ್ತಿಗೆ ಈ ಘಟನೆ ನಡೆದಿದೆ. ಘಟನೆ ಕುರಿತು ಆಸ್ಪತ್ರೆಯ ಆಡಳಿತಕ್ಕೆ ಹಾಗೂ ಪೊಲೀಸರಿಗೆ ತಕ್ಷಣವೇ ಮಾಹಿತಿ ನೀಡಲಾಯಿತು’ ಎಂದು ಆಸ್ಪತ್ರೆಯ ಡೀನ್ ಡಾ.ನಿರ್ಮಲಾ ಹೇಳಿದ್ದಾರೆ.

ಪ್ರೊ ಕಬಡ್ಡಿ ಲೀಗ್: ಹರಾಜು ಪ್ರಕ್ರಿಯೆ ಮುಕ್ತಾಯ; ಸಿ ಕೆಟಗರಿ ಆಟಗಾರರಿಗೆ ಉತ್ತಮ ಮೌಲ್ಯ

ಅಜಿತ್, ಭಗವಾನ್‌ಗೆ ಶುಕ್ರದೆಸೆ

ಮುಂಬೈ(ಪಿಟಿಐ): ಅಜಿತ್ ವಿ ಕುಮಾರ್, ಜೈ ಭಗವಾನ್ ಮತ್ತು ಅರ್ಜುನ್ ರಾಠಿ ಅವರು ಪ್ರೊ ಕಬಡ್ಡಿ 11ನೇ ಆವೃತ್ತಿಗಾಗಿ ನಡೆದ ಆಟಗಾರರ ಹರಾಜು ಪ್ರಕ್ರಿಯೆಯಲ್ಲಿ ಉತ್ತಮ ಮೊತ್ತ ಪಡೆದರು.

ಹರಾಜು ಪ್ರಕ್ರಿಯೆಯ ಎರಡನೇ ದಿನವಾದ ಶುಕ್ರವಾರ ಫ್ರ್ಯಾಂಚೈಸಿ ಮಾಲೀಕರು ಒಟ್ಟು ₹ 16 ಕೋಟಿ ಖರ್ಚು ಮಾಡಿದರು. ಈ ದಿನ ಸಿ ಕೆಟಗರಿಯಲ್ಲಿದ್ದ ಅಜಿತ್ ಅವರನ್ನು ಪುಣೇರಿ ಪಲ್ಟನ್ ತಂಡವು (₹ 66 ಲಕ್ಷ), ಭಗವಾನ್ (₹ 63 ಲಕ್ಷ) ಅವರನ್ನು ಬೆಂಗಳೂರು ಬುಲ್ಸ್ ತಂಡವು ಖರೀದಿಸಿತು. ಡಿ ಕೆಟಗರಿಯಲ್ಲಿದ್ದ ಅರ್ಜುನ್ ಅವರನ್ನು ಬೆಂಗಾಲ್ ವಾರಿಯರ್ಸ್ ತಂಡವು ₹ 41 ಲಕ್ಷಕ್ಕೆ ಖರೀದಿಸಿತು.

ಮೊದಲ ದಿನವಾದ ಗುರುವಾರ ಎಂಟು ಆಟಗಾರರು ಒಂದು ಕೋಟಿಗೂ ಹೆಚ್ಚು ಮೊತ್ತ ಪಡೆದಿದ್ದು ವಿಶೇಷ. ಒಟ್ಟು 12 ತಂಡಗಳು ಆಟಗಾರರ ಖರೀದಿ ಮಾಡಿದವು.

'ಈ ಬಾರಿಯದ್ದು ಅಮೋಘವಾದ ಹರಾಜು ಪ್ರಕ್ರಿಯೆಯಾಗಿದೆ. ಎಂಟು ಆಟಗಾರರು ಒಂದು ಕೋಟಿಗೂ ಹೆಚ್ಚು ಮೊತ್ತ ಪಡೆದರು. ಸಿ ಕೆಟಗರಿಯ ಆಟಗಾರರಾದ ಅಜಿತ್ ವಿ ಕುಮಾರ್ ಮತ್ತು ಜೈ ಭಗವಾನ್ ಅವರು ₹ 60 ಲಕ್ಷ ಕ್ಕೂ ಹೆಚ್ಚು ಮೊತ್ತ ಗಳಿಸಿದರು. ಎಲ್ಲ ಫ್ರ್ಯಾಂಚೈಸಿಗಳು ಸಮತೋಲನವಾದ ತಂಡಗಳನ್ನು ರಚಿಸಿವೆ. ಮುಂಬರುವ ಋತುವಿನ ಟೂರ್ನಿಯು ಅತ್ಯಂತ ಸ್ಪರ್ಧಾತ್ಮಕವಾಗುವ ನಿರೀಕ್ಷೆ ಇದೆ' ಎಂದು ಲೀಗ್ ಮುಖ್ಯಸ್ಥ, ಮಶಾಲ್ ಸ್ಪೋರ್ಟ್ಸ್ ಮತ್ತು ಲೀಗ್ ಕಮಿಷನರ್ ಅನುಪಮ್ ಗೋಸ್ವಾಮಿ ಸಂತಸ ವ್ಯಕ್ತಪಡಿಸಿದರು.

ಹರಾಜಿನ ಮೊದಲ ದಿನವಾದ ಗುರುವಾರ ನಡೆದ ಎ ಕೆಟಗರಿಯ ಬಿಡ್‌ನಲ್ಲಿ ಸಚಿನ್ ತನ್ವರ್ ₹ 2.15 ಕೋಟಿ ಗಳಿಸಿದರು. ಈ ಋತುವಿನಲ್ಲಿ ಅತಿ ಹೆಚ್ಚು ಮೌಲ್ಯ ಗಳಿಸಿದ ಆಟಗಾರನಾದರು.

ಬೆಂಗಳೂರು ಬುಲ್ಸ್ ತಂಡವು ಅಜಿಂಕ್ಯ ಪವಾರ್ ಅವರಿಗೆ 1.107 ಕೋಟಿ ಕೊಟ್ಟು ಖರೀದಿಸಿದೆ. ಥಾಯ್ಲೆಂಡಿನ ಹಸುನ್ ತೊಂಗ್‌ಕ್ರುವಿಯಾ ಅವರನ್ನು 13 ಲಕ್ಷಕ್ಕೆ ಖರೀದಿಸಿದೆ.

ಬೆಂಗಳೂರು ಬುಲ್ಸ್ ತಂಡ

ಅಜಿಂಕ್ಯ ಪವಾರ್ (1.107 ಕೋಟಿ), ಪ್ರದೀಪ್ ನರ್ವಾಲ್ (70 ಲಕ್ಷ), ಹಸುನ್ ತೊಂಗ್‌ಕ್ರುವಿಯಾ (13 ಲಕ್ಷ), ಪ್ರಮೋದ್ ಸಾಯಿಸಿಂಗ್ (13 ಲಕ್ಷ), ನಿತಿನ್ ರಾವಳ್ (13 ಲಕ್ಷ), ಜೈ ಭಗವಾನ್ (63 ಲಕ್ಷ), ಜತಿನ್ (13 ಲಕ್ಷ).

ಉಳಿಕೆ: ಸೌರಭ್ ನಂದಾಲ್, ಪೊನಪಾರ್ಥಿಬನ್ ಸುಬ್ರಮಣಿಯನ್, ಸುಶೀಲ್, ರೋಹಿತ್ ಕುಮಾರ್, ಆದಿತ್ಯ ಶಂಕರ ಪವಾರ್, ಅಕ್ಷಿತ್, ಅರುಳನಂತಬಾಬು, ಪ್ರತೀಕ್.

ತಂಡಗಳು ಖರ್ಚು ಮಾಡಿದ ಮೊತ್ತ (₹ ಕೋಟಿ)

ತಂಡ	ಮೊತ್ತ
ಬೆಂಗಾಲ್ ವಾರಿಯರ್ಸ್	4.90
ಬೆಂಗಳೂರು ಬುಲ್ಸ್	4.94
ದಬಂಗ್ ಡೆಲ್ಲಿ	4.12
ಗುಜರಾತ್ ಜೈಂಟ್ಸ್	4.93
ಹರಿಯಾಣ ಸ್ಟೀಲರ್ಸ್	4.99
ಜೈಪುರ್ ಪಿಂಕ್ ಪ್ಯಾಂಥರ್ಸ್	4.86
ಪಟ್ನಾ ಪೈರೆಟ್ಸ್	4.64
ಪುಣೇರಿ ಪಲ್ಟನ್	4.67
ತಮಿಳ್ ತಲೈವಾಸ್	4.96
ತೆಲುಗು ಟೈಟನ್ಸ್	4.68
ಯು ಮುಂಬಾ	4.91
ಯುಪಿ ಯೋಧಾ	4.87

• ಪ್ರೊ ಕಬಡ್ಡಿ ಹರಾಜಿನಲ್ಲಿ ದೊಡ್ಡ ಮೊತ್ತ ಗಳಿಸಿ ಗಮನ ಸೆಳೆದ ಸಿ ವಿಭಾಗದ ಆಟಗಾರರು

ಬಿ ಕೆಟಗರಿ

ಹೆಸರು	ಮೌಲ್ಯ (₹)	ತಂಡ
ಭರತ್	1.30 ಕೋಟಿ	ಯು.ಪಿ. ಯೋಧಾಸ್
ಅಜಿಂಕ್ಯ ಪವಾರ್	1.107ಕೋಟಿ	ಬೆಂಗಳೂರು ಬುಲ್ಸ್
ಮಂಜೀತ್	80 ಲಕ್ಷ	ಯು ಮುಂಬಾ
ಪ್ರದೀಪ್ ನರ್ವಾಲ್	70 ಲಕ್ಷ	ಬೆಂಗಳೂರು ಬುಲ್ಸ್
ಶುಭಂ ಶಿಂಧೆ	70 ಲಕ್ಷ	ಪಟ್ನಾ ಪೈರೆಟ್ಸ್

ಸಿ ಕೆಟಗರಿ

ಹೆಸರು	ಮೌಲ್ಯ (₹)	ತಂಡ
ಅಜಿತ್ ವಿ ಕುಮಾರ್	66 ಲಕ್ಷ	ಪುಣೇರಿ ಪಲ್ಟನ್
ಜೈ ಭಗವಾನ್	63 ಲಕ್ಷ	ಬೆಂಗಳೂರು ಬುಲ್ಸ್
ಗುರದೀಪ್	59 ಲಕ್ಷ	ಪಟ್ನಾ ಪೈರೆಟ್ಸ್
ದೀಪಕ್ ರಾಜಿಂದರ್ ಸಿಂಗ್	50 ಲಕ್ಷ	ಪಟ್ನಾ ಪೈರೆಟ್ಸ್
ಭವಾನಿ ರಜಪೂತ್	45 ಲಕ್ಷ	ಯುಪಿ ಯೋಧಾಸ್

ಡಿ ಕೆಟಗರಿ

ಹೆಸರು	ಮೌಲ್ಯ (₹)	ತಂಡ
ಅರ್ಜುನ್ ರಾಠಿ	41 ಲಕ್ಷ	ಬೆಂಗಾಲ್ ವಾರಿಯರ್ಸ್
ಮೊಹಮ್ಮದ್ ಅಮಾನ್	16.20 ಲಕ್ಷ	ಪುಣೇರಿ ಪಲ್ಟನ್
ಸ್ಟುವರ್ಟ್ ಸಿಂಗ್	14.20 ಲಕ್ಷ	ಯು. ಮುಂಬಾ
ಪ್ರವಿಂದರ್	13 ಲಕ್ಷ	ಪಟ್ನಾ ಪೈರೆಟ್ಸ್
ಕೆ. ಧರಣೀಂದ್ರನ್	13 ಲಕ್ಷ	ಜೈಪುರ್ ಪಿಂಕ್ ಪ್ಯಾಂಥರ್ಸ್

ನಾವು ಶರಣಾಗಲಿಲ್ಲ: ವಿನೇಶ್



ವಿನೇಶ್ ಫೋಗಟ್

ನವದೆಹಲಿ (ಪಿಟಿಐ): 'ಈಗ ಹೇಳಬೇಕಾಗಿರುವುದೆಲ್ಲವೂ ಇಷ್ಟೇ. ನಾವು ಸೋತು ಕೈಚೆಲ್ಲಲಿಲ್ಲ. ನಮ್ಮ ಪ್ರಯತ್ನಗಳು ನಿಲ್ಲಲಿಲ್ಲ ಮತ್ತು ನಾವು ಶರಣಾಗಲೂ ಇಲ್ಲ. ಆದರೆ ಸಮಯ ಸ್ತಬ್ಧವಾಯಿತು ಹಾಗೂ ಕಾಲ ಸರಿಯಿರಲಿಲ್ಲ. ಅದು ನನ್ನ ಹಣೆಬರಹ'–

ಒಲಿಂಪಿಯನ್ ಕುಸ್ತಿಪಟು ವಿನೇಶ್ ಫೋಗಟ್ ಅವರು ಶುಕ್ರವಾರ ಸಾಮಾಜಿಕ ಜಾಲತಾಣದಲ್ಲಿ ಬರೆದಿರುವ ಭಾವನಾತ್ಮಕ ಪೋಸ್ಟ್ ಇದು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ಕುಸ್ತಿಯ 50 ಕೆ.ಜಿ ವಿಭಾಗದ ಫೈನಲ್ ತಲುಪಿದ್ದ ವಿನೇಶ್ ಅವರು ದೇಹತೂಕದಲ್ಲಿ 100 ಗ್ರಾಂ ಹೆಚ್ಚಾದ ಕಾರಣಕ್ಕೆ ಅನರ್ಹಗೊಂಡಿದ್ದರು. ಆಗಲೇ ಅವರು ತಮ್ಮ ಕ್ರೀಡಾಜೀವನಕ್ಕೆ ವಿದಾಯ ಹೇಳಿದ್ದರು. ಸೆಮಿಫೈನಲ್ ಜಯಿಸುವವರೆಗೂ ತೂಕ ನಿಯಮಬದ್ಧವಾಗಿದ್ದ ಕಾರಣಕ್ಕೆ ಬೆಳ್ಳಿ ಪದಕವನ್ನು ನೀಡಲು ಕ್ರೀಡಾ ಮಧ್ಯಸ್ಥಿಕೆ ನ್ಯಾಯಮಂಡಳಿಗೆ (ಸಿಎಎಸ್) ಮೇಲ್ಮನವಿ ಸಲ್ಲಿಸಿದ್ದರು. ಆದರೆ ಅವರ ಮನವಿಯನ್ನು ತಿರಸ್ಕರಿಸಿದ ಸಿಎಎಸ್ ಬುಧವಾರ ತೀರ್ಪು ಪ್ರಕಟಿಸಿತ್ತು. ಇದರ ನಂತರ ಅವರೀಗ ತಮ್ಮ ಮನದಾಳದ ಮಾತುಗಳನ್ನು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

'ಯಾವ ಗುರಿಗಾಗಿ ಶ್ರಮಿಸಿದ್ದೇವೋ ಅದು ಪೂರ್ಣವಾಗಲಿಲ್ಲ ಎಂಬ ಭಾವ ನನ್ನ ತಂಡಕ್ಕೆ, ದೇಶವಾಸಿಗಳಿಗೆ ಮತ್ತು ನನ್ನ ಕುಟುಂಬದವರಿಗೆ ಇದೆ. ಆ ಕೊರಗು ಯಾವಾಗಲೂ ಇರುತ್ತದೆ. ಮುಂದೆ ಎಲ್ಲವೂ ಒಂದೇ ರೀತಿ ಇರುವುದಿಲ್ಲ. ವಿಭಿನ್ನ ಸನ್ನಿವೇಶಗಳಲ್ಲಿ ನಾನು 2032ರವರೆಗೆ ಆಡಬಹುದು. ಏಕೆಂದರೆ ನನ್ನೊಳಗಿನ ಹೋರಾಟ ಮತ್ತು ಕುಸ್ತಿ ಯಾವಾಗಲೂ ಇದ್ದೇ ಇರುತ್ತದೆ. ಭವಿಷ್ಯ ನನಗಾಗಿ ಏನನ್ನೂ ಯೋಜಿಸಿದೆ ಎಂದು ಊಹಿಸಲು ಸಾಧ್ಯವಿಲ್ಲ. ಈ ಪಯಣದಲ್ಲಿ ಮುಂದಿನದ್ದು ಏನಿದೆ ಎಂದೂ ಗೊತ್ತಿಲ್ಲ. ಆದರೆ ಒಂದಂತೂ ಖಚಿತ. ನಾನು ನಂಬಿರುವ ಸಂಗತಿಗಳಿಗಾಗಿ ಹೋರಾಟ ನಿಲ್ಲಿಸುವುದಿಲ್ಲ' ಎಂದು ಬರೆದಿದ್ದಾರೆ.

ತಮಗೆ ಮಾರ್ಗದರ್ಶನ ನೀಡಿದ ಬೆಲ್ಜಿಯನ್ ಕೋಚ್ ಅಕೋಸ್ ಕುರಿತು ಬರೆದಿರುವ ವಿನೇಶ್, 'ಅವರ ಬಗ್ಗೆ ನಾನೇನು ಬರೆದರೂ ಅದು ಕಡಿಮೆಯೇ. ಮಹಿಳೆಯರ ಕುಸ್ತಿ ಲೋಕದಲ್ಲಿ ನಾನು ಕಂಡ ಉತ್ತಮ ಕೋಚ್ ಅವರು. ಒಳ್ಳೆಯ ವ್ಯಕ್ತಿ. ಸಂಯಮ, ಸಹನೆ ಮತ್ತು ವಿಶ್ವಾಸದಿಂದ ಯಾವುದೇ ಪರಿಸ್ಥಿತಿ ನಿಭಾಯಿಸುತ್ತಿದ್ದರು. ಅವರ ನಿಘಂಟಿನಲ್ಲಿ ಅಸಾಧ್ಯ ಎನ್ನುವ ಪದವೇ ಇಲ್ಲ. ಮ್ಯಾಟ್‌ನಲ್ಲಿ ಅಥವಾ ಹೊರಗೆ ಯಾವುದೇ ಕಠಿಣ ಪರಿಸ್ಥಿತಿ ಎದುರಾದಾಗ ಅವರು ಪರ್ಯಾಯ ಯೋಜನೆಯೊಡನೆ ಸಜ್ಜಾಗಿರುತ್ತಾರೆ. ನನ್ನ ಸಾಮರ್ಥ್ಯದ ಮೇಲೆ ನನಗೆ ಸಂದೇಹ ಬಂದ ಸಂದರ್ಭಗಳಿವೆ. ನನ್ನನ್ನು ಹೇಗೆ ಮರಳಿ ದಾರಿಗೆ ತರಬೇಕು ಎಂದು ತಿಳಿದಿದ್ದರು. ನನ್ನ ಯಶಸ್ಸಿಗೆ ಅಕೋಸ್ ಎಂದೂ ಶ್ರೇಯಸ್ಸು ತೆಗೆದುಕೊಂಡವರಲ್ಲ. ಆದರೆ ಅವರಿಗೆ ಸಲ್ಲಬೇಕಾದ ಮಾನ್ಯತೆ ನೀಡಲು ಬಯಸಿದ್ದೆ' ಎಂದೂ ಉಲ್ಲೇಖಿಸಿದ್ದಾರೆ.

ತಂಡದ ವೈದ್ಯ ಡಾ. ದಿನ್‌ಷಾ ಪಾರ್ದಿವಾಲಾ ಅವರ ಕುರಿತೂ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ಭಾರತ ತಂಡದ ನೆರವಿಗೆ 13 ವೈದ್ಯಕೀಯ ಸಿಬ್ಬಂದಿಯ ಮುಖ್ಯಸ್ಥರಾಗಿ ಪಾರ್ದಿವಾಲಾ ಕಾರ್ಯನಿರ್ವಹಿಸಿದ್ದರು.

'ನನಗೆ ಹಾಗೂ ಭಾರತದ ಇನ್ನೂ ಹಲವಾರು ಅಥ್ಲೀಟ್‌ಗಳಿಗೆ ಅವರು ಬರೀ ವೈದ್ಯರಲ್ಲ. ದೇವತಾ ಸ್ವರೂಪಿಯಾಗಿದ್ದರು. ಆ ದೇವರೇ ಅವರನ್ನು ನಮಗಾಗಿ ಕಳಿಸಿರಬೇಕು. ಗಾಯದ ಸಮಸ್ಯೆಗಳಿಂದಾಗಿ ನನ್ನ ಆತ್ಮವಿಶ್ವಾಸ ಕುಸಿದ ಸಂದರ್ಭದಲ್ಲಿ ಧೈರ್ಯ ತುಂಬಿದರು. ನನ್ನ ಮೇಲೆ ಅವರಿಗೆ ಅಪಾರ ಭರವಸೆ ಇತ್ತು. ನನ್ನ ಕಾಲುಗಳ ಮೇಲೆ ನಿಲ್ಲುವಂತೆ ಮಾಡಿದರು. ಮೊಣಕಾಲು ಮತ್ತು ಮೊಣಕೈ ಶಸ್ತ್ರಚಿಕಿತ್ಸೆಯನ್ನು ಮಾಡಿದ್ದಾರೆ. ಭಾರತದ ಕ್ರೀಡೆಯ ಬಗ್ಗೆ ಅವರ ಸಮರ್ಪಣಾ ಭಾವ, ಪ್ರಾಮಾಣಿಕತೆ ಮತ್ತು ಮಮತೆಯ ಗುಣಗಳ ಬಗ್ಗೆ ಯಾರೂ ಸಂದೇಹ ಪಡಲಾರರು. ದೇವರೂ ಸಹ. ಅವರು ಮತ್ತು ಅವರ ತಂಡದ ನೆರವಿಗೆ ಆಭಾರಿಯಾಗಿರುವೆ' ಎಂದು ಉಲ್ಲೇಖಿಸಿದ್ದಾರೆ.

ಮಹಾರಾಜ ಟ್ರೋಫಿ ಕ್ರಿಕೆಟ್

ಹುಬ್ಬಳ್ಳಿ ಟೈಗರ್ಸ್ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಮವೇಗಿ ಎಲ್.ಆರ್. ಕುಮಾರ್ ಮತ್ತು ತಿಪ್ಪಾರೆಡ್ಡಿ ಅವರ ಉತ್ತಮ ಆಟದ ಬಲದಿಂದ ಹಾಲಿ ಚಾಂಪಿಯನ್ ಹುಬ್ಬಳ್ಳಿ ಟೈಗರ್ಸ್ ತಂಡವು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಮಳೆಯಿಂದಾಗಿ ತಡೆಯುಂಟಾದ ಪಂದ್ಯದಲ್ಲಿ ಮನೀಷ್ ಪಾಂಡೆ ನಾಯಕತ್ವದ ಹುಬ್ಬಳ್ಳಿ ತಂಡವು 15 ರನ್‌ಗಳಿಂದ (ವಿ. ಜಯದೇವನ್ ಪದ್ಧತಿ) ಮಂಗಳೂರು ಡ್ರ್ಯಾಗನ್ಸ್ ವಿರುದ್ಧ ಜಯಿಸಿತು.

ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮಂಗಳೂರು ತಂಡವು 16 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 143 ರನ್ ಗಳಿಸಿತು. ರೋಹನ್ ಪಾಟೀಲ (24; 11ಎ) ಮತ್ತು ಸಿದ್ಧಾರ್ಥ್ (44; 27ಎ) ಉತ್ತಮ ಮೊತ್ತ ಕಲೆಹಾಕಲು ನೆರವಾದರು.

ಇದಕ್ಕುತ್ತರವಾಗಿ ಹುಬ್ಬಳ್ಳಿ ತಂಡದ ಆರಂಭಿಕ ಬ್ಯಾಟರ್ ತಿಪ್ಪಾರೆಡ್ಡಿ (ಔಟಾಗದೆ 19) ಮತ್ತು ಮನೀಷ್ ಪಾಂಡೆ (ಔಟಾಗದೆ 24) ಬ್ಯಾಟ್ ಬೀಸಿದರು. ತಂಡವು 5.1 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 69 ರನ್ ಗಳಿಸಿದ ಸಂದರ್ಭದಲ್ಲಿ ಮಳೆ ಜೋರಾಗಿ ಸುರಿಯಿತು. ಇದರಿಂದಾಗಿ ಪಂದ್ಯವನ್ನು ಸ್ಥಗಿತಗೊಳಿಸಲಾಯಿತು. ವಿ. ಜಯದೇವನ್ ಪದ್ಧತಿಯಡಿಯಲ್ಲಿ ರನ್‌ರೇಟ್ ಲೆಕ್ಕಾಚಾರದಲ್ಲಿ ಹುಬ್ಬಳ್ಳಿ ಜಯಗಳಿಸಿತು. ಪಾಂಡೆ ಫೀಲ್ಡಿಂಗ್‌ನಲ್ಲಿಯೂ ಮಿಂಚಿದರು. ಅವರು ಎರಡು ಕ್ಯಾಚ್ ಪಡೆದರು.

ಬೆಂಗಳೂರು ತಂಡಕ್ಕೆ ಎರಡನೇ ಜಯ: ಎಂ.ಜಿ. ನವೀನ್ (25ಕ್ಕೆ4) ಅವರ ಅಮೋಘ ಬೌಲಿಂಗ್ ಮತ್ತು ಭುವನ್ ರಾಜು (51; 24ಎ) ಅವರ ಅರ್ಧಶತಕದ ನೆರವಿನಿಂದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಜಯ ದಾಖಲಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ ತಂಡವು ಹರ್ಷಿಲ್ ಧರ್ಮಾನಿ (50; 32ಎ) ಮತ್ತು ಮನೋಜ್ ಭಾಂಡಗೆ (ಔಟಾಗದೆ 58; 33ಎ, 4X5, 6X3) ಅವರ ಅರ್ಧಶತಕಗಳ ಬಲದಿಂದ 18 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 182 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಬೆಂಗಳೂರು ತಂಡವು 17.1 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 183 ರನ್ ಗಳಿಸಿತು. 4 ವಿಕೆಟ್‌ಗಳಿಂದ ಜಯಿಸಿತು.

ಮನೀಷ್ ಪಾಂಡೆ ಬ್ಯಾಟಿಂಗ್ ವೈಖರಿ

ಸಂಕ್ಷಿಪ್ತ ಸ್ಕೋರು: ಮಂಗಳೂರು ಡ್ರ್ಯಾಗನ್ಸ್: 16 ಓವರ್‌ಗಳಲ್ಲಿ 7ಕ್ಕೆ 143 (ಮ್ಯಾಕ್ನಿಲ್ ನೊರೊನಾ 23, ರೋಹನ್ ಪಾಟೀಲ 24, ನಿಕಿನ್ ಜೋಸ್ 33, ಸಿದ್ಧಾರ್ಥ್ 44, ಎಲ್.ಆರ್. ಕುಮಾರ್ 30ಕ್ಕೆ3) **ಹುಬ್ಬಳ್ಳಿ ಟೈಗರ್ಸ್:** 5.1 ಓವರ್‌ಗಳಲ್ಲಿ 1 ವಿಕೆಟ್‌ಗೆ 69 (ತಿಪ್ಪಾರೆಡ್ಡಿ ಔಟಾಗದೆ 19, ಮೊಹಮ್ಮದ್ ತಹಾ 12, ಮನೀಷ್ ಪಾಂಡೆ ಔಟಾಗದೆ 24, ಎಂ.ಬಿ. ದರ್ಶನ್ 24ಕ್ಕೆ1) **ಫಲಿತಾಂಶ:** ಹುಬ್ಬಳ್ಳಿ ಟೈಗರ್ಸ್ ತಂಡಕ್ಕೆ 15 ರನ್ ಜಯ. **ಪಂದ್ಯದ ಆಟಗಾರ:** ತಿಪ್ಪಾರೆಡ್ಡಿ.

ಮೈಸೂರು ವಾರಿಯರ್ಸ್: 18 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 182 (ಸಿ.ಎ. ಕಾರ್ತಿಕ್ 27, ಹರ್ಷಿಲ್ ಧರ್ಮಾನಿ 50, ಮನೋಜ್ ಭಾಂಡಗೆ ಔಟಾಗದೆ 58, ಎಂ.ಜಿ. ನವೀನ್ 25ಕ್ಕೆ4) **ಬೆಂಗಳೂರು ಬ್ಲಾಸ್ಟರ್ಸ್:** 17.1 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 183 (ಎಲ್. ಆರ್. ಚೇತನ್ 33, ಭುವನ್ ರಾಜು 51, ಸೂರಜ್ ಅಹುಜಾ 39, ಶುಭಾಂಗ್ ಹೆಗಡೆ ಔಟಾಗದೆ 27, ವಿದ್ಯಾಧರ್ ಪಾಟೀಲ 32ಕ್ಕೆ2, ಕೋದಂಡ ಅಜಿತ್ ಕಾರ್ತಿಕ್ 37ಕ್ಕೆ2) **ಫಲಿತಾಂಶ:** ಬೆಂಗಳೂರು ಬ್ಲಾಸ್ಟರ್ಸ್‌ಗೆ 4 ವಿಕೆಟ್‌ಗಳ ಜಯ (ಮಳೆಯಿಂದಾಗಿ ಉಭಯ ತಂಡಗಳಿಗೂ ತಲಾ 18 ಓವರ್ ನಿಗದಿ)

ದೆಹಲಿ ಹೈಕೋರ್ಟ್ ಆದೇಶ ಪ್ರಶ್ನಿಸಲು ಡಬ್ಲ್ಯುಎಫ್‌ಐ ಸಿದ್ಧತೆ

ಐಒಎ ಅಡ್‌ಹಾಕ್ ಸಮಿತಿ ಮರುಸ್ಥಾಪನೆಗೆ ಆದೇಶ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ನ ಆಡಳಿತ ನಿರ್ವಹಿಸಲು ಅಡ್‌ಹಾಕ್ ಸಮಿತಿಯ ಮರುಸ್ಥಾಪನೆ ಮಾಡುವಂತೆ ಭಾರತ ಒಲಿಂಪಿಕ್ ಸಂಸ್ಥೆಗೆ (ಐಒಎ) ನಿರ್ದೇಶಿಸಿ ದೆಹಲಿ ಹೈಕೋರ್ಟ್ ಶುಕ್ರವಾರ ಮಧ್ಯಂತರ ಆದೇಶ ನೀಡಿದೆ.

ಐಒಎ ಅಡ್‌ಹಾಕ್ ಸಮಿತಿಯನ್ನು ಮರುಸ್ಥಾಪನೆ ಮಾಡಬೇಕೆಂದು ಒಲಿಂಪಿಯನ್ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ವಿನೇಶ್ ಫೋಗಟ್, ಸಾಕ್ಷಿ ಮಲಿಕ್ ಮತ್ತು ಅವರ ಪತಿ ಸತ್ಯವ್ರತ ಕಡಿಯಾನ್ ಅವರು ಸಲ್ಲಿಸಿದ್ದ ಮನವಿಯ ವಿಚಾರಣೆಯ ನಂತರ ಹೈಕೋರ್ಟ್ ಈ ಅದೇಶ ನೀಡಿದೆ. ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರನ್ನು ಕುಸ್ತಿ ಫೆಡರೇಷನ್‌ಗೆ ಆಡಳಿತಾಧಿಕಾರಿಯಾಗಿ ನೇಮಕ ಮಾಡಬೇಕೆಂಬ ಅರ್ಜಿದಾರರ ಕೋರಿಕೆಯನ್ನು ನ್ಯಾಯಮೂರ್ತಿ ಸಚಿನ್ ದತ್ತಾ ತಳ್ಳಿಹಾಕಿದರು. ಅಡ್‌ಹಾಕ್ ಸಮಿತಿಯ ಪುನಾರಚನೆಗೆ ಸಂಬಂಧಿಸಿ ತೀರ್ಮಾನ ಕೈಗೊಳ್ಳಲು ಐಒಎ ಮುಕ್ತವಾಗಿದೆ ಎಂದೂ ಅವರು ಹೇಳಿದರು.

ಸದ್ಯ ಅಧಿಕಾರದಲ್ಲಿರುವ ಅಧ್ಯಕ್ಷ ಸಂಜಯ್ ಸಿಂಗ್ ನೇತೃತ್ವದ ಸಮಿತಿಯು ಈ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಮುಂದಾಗಿದೆ.

ಸಂಜಯ್ ಸಿಂಗ್

ಈ ಆದೇಶದಿಂದ ಮುಂಬರುವ ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ದೇಶದ ಕುಸ್ತಿಪಟುಗಳು ಭಾಗವಹಿಸಲು ತೊಡಕಾಗಲಿದೆ ಎಂದು ಅಧ್ಯಕ್ಷ ಸಂಜಯ್ ಸಿಂಗ್ ಹೇಳಿದ್ದಾರೆ.

'ನಾವು ಈ ಆದೇಶವನ್ನು ದ್ವಿಸದಸ್ಯ ಪೀಠದಲ್ಲಿ ಪ್ರಶ್ನಿಸಲಿದ್ದೇವೆ. ಐಒಎಯು ಅಡ್‌ಹಾಕ್ ಸಮಿತಿಯನ್ನು ವಿಸರ್ಜಿಸಿದೆ. ನಾವು ಅಂತರರಾಷ್ಟ್ರೀಯ ಕುಸ್ತಿ ಸಂಘಟನೆ (ಯುಡಬ್ಲ್ಯುಡಬ್ಲ್ಯು) ಮತ್ತು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ)ಗಳೊಂದಿಗೂ ಮಾತನಾಡುತ್ತೇವೆ. ಡಬ್ಲ್ಯುಎಫ್‌ಐ ಆಡಳಿತದಲ್ಲಿ ಬಾಹ್ಯ ವ್ಯಕ್ತಿ ಅಥವಾ ಸಮಿತಿಯ ಹಸ್ತಕ್ಷೇಪದಿಂದ ನಕಾರಾತ್ಮಕ ಪರಿಣಾಮ ಬೀರುವ ಕುರಿತು ಈ ಹಿಂದೆಯೇ ಯುಡಬ್ಲ್ಯುಡಬ್ಲ್ಯು ಎಚ್ಚರಿಕೆ ನೀಡಿದೆ. ಮುಂಬರಲಿರುವ ಎರಡು ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ಗಳಲ್ಲಿ ನಮ್ಮ ಕುಸ್ತಿಪಟುಗಳಿಗೆ ಭಾಗವಹಿಸಲು ಅವಕಾಶ ಸಿಗದಿರುವ ಸಾಧ್ಯತೆ ಇದೆ' ಎಂದು ಸಂಜಯ್ ಸಿಂಗ್ ಹೇಳಿದ್ದಾರೆ.

ಇದೇ ತಿಂಗಳು 19 ರಿಂದ 25ರವರೆಗೆ ಜೋರ್ಡಾನ್‌ನ ಅಮಾನ್‌ನಲ್ಲಿ 17 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್ ಮತ್ತು ಸೆ. 2ರಿಂದ 8ರವರೆಗೆ ಸ್ಪೇನ್‌ನಲ್ಲಿ 20 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್ ನಡೆಯಲಿದೆ.

'ರಾಷ್ಟ್ರೀಯ ಫೆಡರೇಷನ್‌ನಲ್ಲಿ ಅಡ್ ಹಾಕ್ ಸಮಿತಿಯು ಆಡಳಿತವನ್ನು ತಾವು ಸಮ್ಮತಿಸುವುದಿಲ್ಲ ' ಎಂದು ಯುಡಬ್ಲ್ಯುಡಬ್ಲ್ಯು ಕಳೆದ ಏಪ್ರಿಲ್ 25ರಂದು ನೀಡಿದ್ದ ಪತ್ರದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದೆ.

'ನಿಮ್ಮ ಫೆಡರೇಷನ್ ವಿರುದ್ಧ ಯಾವುದೇ ನಿರ್ಣಯ ಅಥವಾ ತೀರ್ಪು ನೀಡಿದರೆ, ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಮೂರನೇ ಪಕ್ಷ ಅಥವಾ ವ್ಯಕ್ತಿಯ ನೇಮಕ ಮಾಡಿದರೆ ಯುಡಬ್ಲ್ಯುಡಬ್ಲ್ಯು ನಿಯಮಕ್ಕೆ ವಿರುದ್ಧವಾಗಲಿದೆ. ಇದರಿಂದಾಗಿ ಫೆಡರೇಷನ್ ಮೇಲೆ ತಾತ್ಕಾಲಿಕ ಅಮಾನತು ಹಾಕುವುದು ಅನಿವಾರ್ಯವಾಗುತ್ತದೆ' ಎಂದು ಆ ಪತ್ರದಲ್ಲಿ ಯುಡಬ್ಲ್ಯುಡಬ್ಲ್ಯು ಅಧ್ಯಕ್ಷ ಲಾಲೊವಿಕ್ ಉಲ್ಲೇಖಿಸಿದ್ದರು.

ಡಬ್ಲ್ಯುಎಫ್‌ಐ ಅಧ್ಯಕ್ಷರಾಗಿದ್ದ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ದೂರಿ ಹೋದ ವರ್ಷ ಖ್ಯಾತನಾಮ ಕುಸ್ತಿಪಟುಗಳು ದೆಹಲಿಯಲ್ಲಿ ಧರಣಿ ನಡೆಸಿದ್ದರು. ಈ ಹಿನ್ನೆಲೆಯಲ್ಲಿ 2023ರ ಡಿಸೆಂಬರ್ 24ರಂದು ಕೇಂದ್ರ ಸರ್ಕಾರವು ಡಬ್ಲ್ಯುಎಫ್‌ಐ ಸಮಿತಿಯನ್ನು ಅಮಾನತು ಮಾಡಿತ್ತು. ಭಾರತ ಒಲಿಂಪಿಕ್ ಸಮಿತಿ (ಐಒಎ) ಅಡ್‌ಹಾಕ್ ಸಮಿತಿ ನೇಮಕವಾಗಿತ್ತು. ಆಗ ಭೂಪಿಂದರ್ ಸಿಂಗ್ ಬಜ್ವಾ ಅವರು ಈ ಸಮಿತಿಯ ಮುಖ್ಯಸ್ಥರಾಗಿದ್ದರು.

ಆಗ ಅಂತರರಾಷ್ಟ್ರೀಯ ಕುಸ್ತಿ ಫೆಡರೇಷನ್ (ಯುಡಬ್ಲ್ಯುಡಬ್ಲ್ಯು) ಡಬ್ಲ್ಯುಎಫ್‌ಐ ಮೇಲೆ ಅಮಾನತು ನೀಡಿತ್ತು. ಇದೇ ವರ್ಷ ಡಬ್ಲ್ಯುಎಫ್‌ಐ ಚುನಾವಣೆಗಳನ್ನು ನಡೆಸಿ ಸಮಿತಿ ರಚಿಸಲಾಗಿತ್ತು. ಫೆಬ್ರುವರಿ 13ರಂದು ಯುಡಬ್ಲ್ಯುಡಬ್ಲ್ಯು ತನ್ನ ಅಮಾನತು ಆದೇಶವನ್ನು ಹಿಂಪಡೆದಿತ್ತು. ಏಪ್ರಿಲ್ 4ರಂದು ಐಒಎಯು ತನ್ನ ಅಡ್‌ಹಾಕ್ ಸಮಿತಿಯನ್ನು ವಿಸರ್ಜಿಸಿತ್ತು. ಆದರೆ ಚುನಾಯಿತ ಸಮಿತಿಯ ವಿರುದ್ಧ ಕುಸ್ತಿಪಟುಗಳು ಮನವಿ ಸಲ್ಲಿಸಿದ್ದರು.

ಡೇವಿಸ್ ಕಪ್: ಮರಳಿದ ನಗಾಲ್

ನವದೆಹಲಿ (ಪಿಟಿಐ): ಸುಮಿತ್ ನಗಾಲ್ ಅವರು ಸ್ವೀಡನ್ ವಿರುದ್ಧ ನಡೆಯಲಿರುವ ಡೇವಿಸ್ ಕಪ್ ವಿಶ್ವ ಗುಂಪಿನ ಪಂದ್ಯದಲ್ಲಿ ಆಡುವ ಭಾರತ ತಂಡಕ್ಕೆ ಮರಳಿದ್ದಾರೆ. ಆದರೆ, ಸೆಪ್ಟೆಂಬರ್ 14–15ರಂದು ನಡೆಯಲಿರುವ ಈ ಪಂದ್ಯದಿಂದ ಇನ್ನೊಬ್ಬ ಪ್ರಮುಖ ಆಟಗಾರ ಯೂಕಿ ಭಾಂಬ್ರಿ ಹಿಂದೆಸರಿದಿದ್ದಾರೆ.

ಮಾಜಿ ರಾಷ್ಟ್ರೀಯ ಚಾಂಪಿಯನ್ ಅಶುತೋಷ್ ಸಿಂಗ್ ಅವರು ರಾಷ್ಟ್ರೀಯ ತಂಡಕ್ಕೆ ಹೊಸ ಕೋಚ್ ಆಗಿದ್ದಾರೆ. ಈ ಡೇವಿಸ್ ಕಪ್ ಪಂದ್ಯ ನಡೆಯಲಿದೆ.

ಇಸ್ಲಾಮಾಬಾದಿನಲ್ಲಿ ಪಾಕಿಸ್ತಾನ ವಿರುದ್ಧ ಈ ಹಿಂದಿನ ಡೇವಿಸ್ ಕಪ್ ಪಂದ್ಯದಲ್ಲಿ ನಗಾಲ್ ಆಡಲಿರಲಿಲ್ಲ. ಈಗ ಸ್ಟಾಕ್‌ಹೋಮ್‌ನಲ್ಲಿ ಒಳಾಂಗಣ ಹಾರ್ಡ್‌ಕೋರ್ಟ್ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಅವರು ತಂಡವನ್ನು ಮುನ್ನಡೆಸಲಿದ್ದಾರೆ.

ಸಿಂಗಲ್ಸ್‌ನಲ್ಲಿ ಶಶಿಕುಮಾರ್ ಮುಕುಂದ್ ಅವರನ್ನು ಪರಿಗಣಿಸಲಾಗಿಲ್ಲ. ಅವರು ಪಾಕಿಸ್ತಾನ ವಿರುದ್ಧ ನಡೆದ ಪಂದ್ಯದಲ್ಲಿ ಆಡಲು ನಿರಾಕರಿಸಿದ್ದರಿಂದ ಅವರ ಮೇಲೆ ಡೇವಿಸ್ ಕಪ್ ಎರಡು ಪಂದ್ಯಗಳಿಗೆ ನಿಷೇಧ ಇದೆ.

ಟಿಟಿ: ಅರ್ಣವ್, ಅಭಿನವ್, ತನಿಷ್ಕಾಗೆ ಪ್ರಶಸ್ತಿ

ಹೊಸಪೇಟೆ: ಅರ್ಣವ್ ಎನ್. ಅವರು 11 - 6 , 11 - 7 , 11 - 8 ನೇರ ಸೆಟ್‌ಗಳಿಂದ ಗೌರವ್ ಗೌಡ ಅವರನ್ನು ಸೋಲಿಸಿ, ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 15 ವರ್ಷದೊಳಗಿನ ಬಾಲಕರ ವಿಭಾಗದ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

ಇಲ್ಲಿ ಟಿ.ಬಿ.ಡ್ಯಾಮ್ ರಿಕ್ರಿಯೇಷನ್ ಕ್ಲಬ್ ವಿಜಯನಗರ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ಟೂರ್ನಿ ನಡೆಯುತ್ತಿದೆ.

ಸೆಮಿಫೈನಲ್ ಪಂದ್ಯಗಳಲ್ಲಿ ಗೌರವ್ ಗೌಡ ಅವರು 9-11, 11-9, 11-4, 9-11, 11-7ರಿಂದ ಅಥರ್ವ ನವರಂಗೆ ಅವರನ್ನು ಮತ್ತು ಅರ್ಣವ್ ಎನ್. 12-10, 3-11, 11-6 , 11 - 5ರಿಂದ ಸಿದ್ಧಾಂತ್ ಧರಿವಾಲ್ ಅವರನ್ನು ಮಣಿಸಿದರು.

ತನಿಷ್ಕಾ ಕಪಿಲ್ ಕಾಲಭೈರವ್ ಅವರು 11-6, 11-1, 11-2ರಿಂದ ಮಿಹಿಕಾ ಆರ್.ಉಡುಪ ಅವರನ್ನು ಮಣಿಸಿ ಬಾಲಕಿಯರ 13 ವರ್ಷದೊಳಗಿನ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡರು. ಅಭಿನವ್ ಪ್ರಸನ್ನ ಅವರು 11-6, 6-11, 10-12, 11-9, 11-7ರಿಂದ ಶ್ರೀರಾಮ್ ಕಿರಣ್ ಅವರನ್ನು ಸೋಲಿಸಿ 13 ವರ್ಷದೊಳಗಿನ ಬಾಲಕರ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಪ್ರಶಸ್ತಿಯೊಂದಿಗೆ (ಎಡದಿಂದ) ಅರ್ಣವ್ ಎನ್, ತನಿಷ್ಕಾ, ಅಭಿನವ್ ಪ್ರಸನ್ನ

ಆಸ್ಟ್ರೇಲಿಯಾ 'ಎ' ಮಹಿಳೆಯರಿಗೆ ಜಯ

ಮ್ಯಾಕೆ (ಪಿಟಿಐ): ಆರಂಭ ಆಟಗಾರ್ತಿ ಮ್ಯಾಡಿ ಡಾರ್ಕ್ ಅವರ ಅಜೇಯ ಶತಕದ ನೆರವಿನಿಂದ ಆಸ್ಟ್ರೇಲಿಯಾ 'ಎ' ತಂಡ ಮಹಿಳೆಯರ ಏಕದಿನ ಕ್ರಿಕೆಟ್ ಸರಣಿಯ ಎರಡನೇ ಪಂದ್ಯವನ್ನು ಶುಕ್ರವಾರ ಎಂಟು ವಿಕೆಟ್‌ಗಳಿಂದ ಸುಲಭವಾಗಿ ಗೆದ್ದುಕೊಂಡಿತು.

ಆ ಮೂಲಕ ಮೂರು ಪಂದ್ಯಗಳ ಸರಣಿಯಲ್ಲಿ 2–0 ಗೆಲುವಿನ ಮುನ್ನಡೆ ಪಡೆದಿದೆ.

ಗೆಲುವಿಗೆ 219 ರನ್ ಗಳಿಸಬೇಕಾಗಿದ್ದ ಆಸ್ಟ್ರೇಲಿಯಾ 40.3 ಓವರುಗಳಲ್ಲಿ 2 ವಿಕೆಟ್ ನಷ್ಟದಲ್ಲಿ 221 ರನ್ ಹೊಡೆಯಿತು. ಮ್ಯಾಡಿ 115 ಎಸೆತಗಳಲ್ಲಿ 7 ಬೌಂಡರಿಗಳಿದ್ದ ಅಜೇಯ 106 ರನ್ ಬಾರಿಸಿದರು. ಮೊದಲ ವಿಕೆಟ್‌ಗೆ ಕೇಟಿ ಮ್ಯಾಕ್ (68, 78ಎ) ಜೊತೆ 131 ರನ್ ಸೇರಿಸಿದ್ದರು. ಇದಕ್ಕೆ ಮೊದಲು ಭಾರತದ ಕಡೆ ತೇಜಲ್ ಹಸಬ್ನಿಸ್ (63, 86ಎ) ಮತ್ತು ರಾಘವಿ ಬಿಷ್ಟ್ (70, 93ಎ) ಮತ್ತೊಮ್ಮೆ ಉತ್ತಮ ಆಟವಾಡಿದ್ದರು.

ಸ್ಕೋರುಗಳು: ಭಾರತ 'ಎ' ಮಹಿಳೆಯರ ತಂಡ: 48 ಓವರುಗಳಲ್ಲಿ 218 (ಶುಭಾ ಸತೀಶ್ 24, ತೇಜಲ್ ಹಸಬ್ನಿಸ್ 63, ರಾಘವಿ ಬಿಷ್ಟ್ 70; ಮೈತ್ಲಾನ್ ಬ್ರೌನ್ 36ಕ್ಕೆ2, ನಿಕೋಲಾ ಹನ್ಕಾಕ್ 27ಕ್ಕೆ2, ಚಾರ್ಲಿ ನಾಟ್ 49ಕ್ಕೆ2); ಆಸ್ಟ್ರೇಲಿಯಾ 'ಎ' ಮಹಿಳೆಯರ ತಂಡ: 40.2 ಓವರುಗಳಲ್ಲಿ 2 ವಿಕೆಟ್‌ಗೆ 221 (ಕೇಟಿ ಮ್ಯಾಕ್ 68, ಮ್ಯಾಡಿ ಡಾರ್ಕ್ ಔಟಾಗದೇ 106, ತಹ್ಲಿಯಾ ಮೆಕ್‌ಗ್ರಾತ್ ಔಟಾಗದೇ 32).

ಪ್ಯಾರಿಸ್‌ಗೆ ತೆರಳಲಿರುವ 84 ಮಂದಿಯ ಭಾರತ ತಂಡ

ಪ್ಯಾರಾಲಿಂಪಿಕ್ಸ್ ತಂಡಕ್ಕೆ ಬೀಳ್ಕೊಡುಗೆ

ನವದೆಹಲಿ (ಪಿಟಿಐ): ಇದೇ ತಿಂಗಳ 28 ರಿಂದ ಸೆಪ್ಟೆಂಬರ್ 8ರವರೆಗೆ ಪ್ಯಾರಿಸ್‌ನಲ್ಲಿ ನಡೆಯಲಿರುವ ಪ್ಯಾರಾಲಿಂಪಿಕ್ಸ್ ಕೂಟದಲ್ಲಿ ಪಾಲ್ಗೊಳ್ಳುವ ಭಾರತ ಪ್ಯಾರಾಲಿಂಪಿಕ್ಸ್ ತಂಡಕ್ಕೆ ಶುಕ್ರವಾರ ಬೀಳ್ಕೊಡುಗೆ ನೀಡಲಾಯಿತು.

ಭಾರತ ಪ್ಯಾರಾಲಿಂಪಿಕ್ ಸಮಿತಿ (ಪಿಸಿಐ) ಮತ್ತು ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಈ ಸಮಾರಂಭ ಆಯೋಜಿಸಿತ್ತು. ವಿವಿಧ 12 ಕ್ರೀಡೆಗಳಲ್ಲಿ ಪಾಲ್ಗೊಳ್ಳಲು 84 ಮಂದಿ ಪ್ಯಾರಾ ಕ್ರೀಡಾಪಟುಗಳು ಪ್ಯಾರಿಸ್‌ಗೆ ತೆರಳಲಿದ್ದಾರೆ.

ಭಾರತದ ಸ್ಪರ್ಧಿಗಳು– ಆರ್ಚರಿ, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಕೆನೊಯಿಂಗ್, ಸೈಕ್ಲಿಂಗ್, ಅಂಧರ ಜುಡೊ, ಪವರ್‌ಲಿಫ್ಟಿಂಗ್, ರೋಯಿಂಗ್, ಶೂಟಿಂಗ್, ಈಜು, ಟೇಬಲ್ ಟೆನಿಸ್ ಮತ್ತು ಟೇಕ್ವಾಂಡೊ ಕ್ರೀಡೆಗಳಲ್ಲಿ ಸ್ಪರ್ಧಿಸಲಿದ್ದಾರೆ.

'ಅಡೆತಡೆಗಳನ್ನು ದಾಟಿ,ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸುವ ಅಸಾಧಾರಣ ಸಾಮರ್ಥ್ಯವನ್ನು ನಮ್ಮ ಪ್ಯಾರಾ ಅಥ್ಲೀಟುಗಳು ಹೊಂದಿದ್ದಾರೆ. ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಸಿದ್ಧತೆಗಾಗಿ ಅಸಾಧಾರಣ ಮನೋಸ್ಥೈರ್ಯ ಮತ್ತು ಅವಿರತ ಪ್ರಯತ್ನವನ್ನು ಅವರು ನಡೆಸಿದ್ದಾರೆ' ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಹೇಳಿಕೆಯಲ್ಲಿ ಶ್ಲಾಘಿಸಿದ್ದಾರೆ.

ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿದ್ದ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಅವರೊಂದಿಗೆ ಪ್ಯಾರಿಸ್ ಪ್ಯಾರಾಲಿಂಪಿಕ್ ಕೂಟದಲ್ಲಿ ಭಾಗವಹಿಸುವ ಭಾರತದ ಕ್ರೀಡಾಪಟುಗಳು –ಪಿಟಿಐ ಚಿತ್ರ

'ಹೆಚ್ಚಿನ ಅಥ್ಲೀಟುಗಳು ಖೇಲೊ ಇಂಡಿಯಾ ಉಪಕ್ರಮದ ಲಾಭ ಪಡೆದಿದ್ದಾರೆ. ಈ ಯೋಜನೆಯಲ್ಲಿ ತೊಡಗಿದ ಅಥ್ಲೀಟುಗಳಲ್ಲಿ ಬಹುಪಾಲು ಮಂದಿ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ಗೆ ಹೋಗುತ್ತಿದ್ದಾರೆ. ಅತ್ಯುನ್ನತ ಮಟ್ಟದಲ್ಲಿ ಸಾಧನೆ ತೋರಲು ಅವರಿಗೆ ಬೇಕಾದ ಬೆಂಬಲ ಮತ್ತು ಸಂಪನ್ಮೂಲಗಳನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ' ಎಂದು ಮಾಂಡವೀಯ ತಿಳಿಸಿದ್ದಾರೆ.

ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ 19 ಪದಕಗಳನ್ನು ಗೆದ್ದುಕೊಂಡಿತ್ತು. 'ದೇಶದ ಅಥ್ಲೀಟುಗಳು ಈ ಬಾರಿಯೂ ಉತ್ತಮ ಪ್ರದರ್ಶನ ನೀಡಲಿದ್ದಾರೆ' ಎಂದು ಪಿಸಿಐ ಅಧ್ಯಕ್ಷ ದೇವೇಂದ್ರ ಜಝಾರಿಯಾ ವಿಶ್ವಾಸ ವ್ಯಕ್ತಪಡಿಸಿದರು.

'ಸಮರ್ಪಣೆ ಮತ್ತು ಶ್ರದ್ಧೆಯಿಂದ ತರಬೇತಿಯಲ್ಲಿ ತೊಡಗಿಸಿಕೊಂಡ ನಮ್ಮ ಅಥ್ಲೀಟುಗಳ ಬಗ್ಗೆ ಅತೀವ ಹೆಮ್ಮೆಯಿದೆ' ಎಂದರು. ಸಂಗೀತ ನಿರ್ದೇಶಕ ವಿವೇಕ್ ಅಭಿಷೇಕ್ ರಚಿಸಿರುವ 'ಮಚಾ ಧೂಮ್..' ಎಂಬ ವಿಶೇಷ ಧ್ಯೇಯಗೀತೆಯನ್ನು ಈ ವೇಳೆ ಬಿಡುಗಡೆ ಮಾಡಲಾಯಿತು.

ಧ್ವಜಧಾರಿಗಳಾಗಿ ಸುಮಿತ್, ಭಾಗ್ಯಶ್ರೀ

ನವದೆಹಲಿ (ಪಿಟಿಐ): ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನದ ಗೆದ್ದಿದ್ದ ಸುಮಿತ್ ಅಂಟಿಲ್ ಮತ್ತು ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದ ಭಾಗ್ಯಶ್ರೀ ಜಾಧವ್ ಅವರು ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಉದ್ಘಾಟನಾ ಸಮಾರಂಭದಲ್ಲಿ ಭಾರತದ ಧ್ವಜಧಾರಿಗಳಾಗಿದ್ದಾರೆ.

ಪಿಸಿಐ ಮುಖ್ಯಸ್ಥ ದೇವೇಂದ್ರ ಜಝಾರಿಯಾ ಈ ವಿಷಯ ತಿಳಿಸಿದರು.ಹರಿಯಾಣದವರಾದ ಜಾವೆಲಿನ್ ಥ್ರೊ ಪಟು ಸುಮಿತ್, ಟೋಕಿಯೊದಲ್ಲಿ 68.55 ಮೀ. ದೂರ ಎಸೆದು ಎಫ್64 ವಿಭಾಗದಲ್ಲಿ ವಿಶ್ವದಾಖಲೆಯೊಡನೆ ಚಿನ್ನ ಗೆದ್ದಿದ್ದರು. ಕಳೆದ ವರ್ಷ ವಿಶ್ವ ಪ್ಯಾರಾ ಗೇಮ್ಸ್‌ನಲ್ಲೂ ಸ್ವರ್ಣ ವಿಜೇತರಾಗಿದ್ದ ಅವರು ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ 73.29 ಮೀ. ಎಸೆತದೊಡೆ ತಮ್ಮದೇ ದಾಖಲೆ ಸುಧಾರಿಸಿದ್ದರು. ಷಾಟ್‌ಪುಟ್ ಥ್ರೋವರ್ ಆಗಿರುವ ಭಾಗ್ಯಶ್ರೀ ಎಫ್34 ವಿಭಾಗದಲ್ಲಿ ಸ್ಪರ್ಧಿಸಿ ಏಷ್ಯನ್ ಪ್ಯಾರಾ ಕ್ರೀಡೆಗಳಲ್ಲಿ ಬೆಳ್ಳಿ ಗೆದ್ದಿದ್ದರು.

ಮುನ್ನಡೆಯಲ್ಲಿ ಅಲಿರೇಜಾ

ಸೇಂಟ್ ಲೂಯಿಸ್ (ಅಮೆರಿಕ), (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಪ್ರಜ್ಞಾನಂದ ಅವರ ನಿರಾಶೆಯ ಪ್ರದರ್ಶನ ಬ್ಲಿಟ್ಜ್ ವಿಭಾಗದಲ್ಲೂ ಮುಂದುವರಿಯಿತು. ಸೇಂಟ್ ಲೂಯಿ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯ ಬ್ಲಿಟ್ಜ್ ಮೊದಲ 9 ಪಂದ್ಯಗಳ ನಂತರ ಅವರು ಕೊನೆಯ ಸ್ಥಾನದಲ್ಲೇ ಇದ್ದಾರೆ.

ರ‍್ಯಾಪಿಡ್ ವಿಭಾಗದಲ್ಲಿ ಕೊನೆಯವರಾಗಿದ್ದ ಅವರು ಬ್ಲಿಟ್ಜ್ ಸ್ಪರ್ಧೆಗಳ ಮೊದಲ ದಿನವಾದ ಗುರುವಾರ 9 ಪಂದ್ಯಗಳ ಪೈಕಿ ಎರಡು ಗೆದ್ದು, ಒಂದು ಡ್ರಾ ಮಾಡಿಕೊಂಡು ಉಳಿದ ಆರನ್ನು ಸೋತರು. ಬ್ಲಿಟ್ಜ್‌ನಲ್ಲಿ ಇನ್ನು ಅಂತಿಮ 9 ಸುತ್ತುಗಳ ಪಂದ್ಯಗಳು ಬಾಕಿಯಿವೆ. ಅವರು ಒಟ್ಟು ಆರೂವರೆ ಅಂಕಗಳನ್ನಷ್ಟೇ ಪಡೆದಿದ್ದಾರೆ.

ಬುಧವಾರ ರ‍್ಯಾಪಿಡ್ ವಿಭಾಗದಲ್ಲಿ ಮುನ್ನಡೆಯಲ್ಲಿದ್ದ ರಷ್ಯಾದ ಇಯಾನ್ ನಿಪೊಮ್‌ನಿಷಿ ಮತ್ತು ಅಮೆರಿಕದ ಹಿಕಾರ ನಕಾಮುರಾ ವಿರುದ್ಧ ಜಯಗಳಿಸಿದ ಅವರು ಈಗ ಮುನ್ನಡೆಯಲ್ಲಿರುವ ಅಲಿರೇಜಾ ಫಿರೋಜ್ ಜೊತೆ 'ಡ್ರಾ' ಮಾಡಿಕೊಂಡರು. ಅಲಿರೇಜಾ ಒಟ್ಟು 17.5 ಪಾಯಿಂಟ್ಸ್ ಕಲೆಹಾಕಿದ್ದು, ಎರಡನೇ ಸ್ಥಾನದಲ್ಲಿರುವ ವೆಸ್ಲಿ ಸೊ ಮತ್ತು ನಿಪೊಮ್‌ನಿಷಿ ಅವರಿಗಿಂತ 1.5 ಪಾಯಿಂಟ್ಸ್ ಹೆಚ್ಚು ಹೊಂದಿದ್ದಾರೆ. ಬ್ಲಿಟ್ಜ್ ವಿಭಾಗದಲ್ಲಿ ವೆಸ್ಲಿ ಸೊ ಉತ್ತಮ ಪ್ರದರ್ಶನ ನೀಡಿ 9 ಪಂದ್ಯಗಳ ಪೈಕಿ ಏಳನ್ನು ಗೆದ್ದರು. ಮ್ಯಾಕ್ಸಿಂ ವೇಷಿಯರ್ ಲಗ್ರಾವ್ (15.5) ಅವರು ನಾಲ್ಕನೇ ಸ್ಥಾನದಲ್ಲಿದ್ದಾರೆ.

Divisa
www.divisastore.com

ಕಣ್ಣುಗಳ ಆಯಾಸವನ್ನು ನಿವಾರಿಸುವ ಸುಲಭ ಪರಿಹಾರ

3 ಕಣ್ಣುಗಳ 3 ಸಮಸ್ಯೆಗಳಿಗೆ ಪರಿಹಾರ

Helps in:
• BURNING
• DRYNESS
• IRRITATION

ಬಳಸುವ ವಿಧಾನ: ದಿನಕ್ಕೆ ಮೂರು ಬಾರಿ 2-3 ಹನಿ ಹಾಕಿಸಿಕೊಳ್ಳಿ ಅಥವಾ ವೈದ್ಯರ ಸಲಹೆ ಮೇರೆಗೆ ಉಪಯೋಗಿಸಿ.

'ಐ ಮಂತ್ರ ಪ್ಲಸ್' ಆಯುರ್ವೇದಿಕ್ ಐ ಡ್ರಾಪ್ ಅನ್ನು ಗುಲಾಬಿ, ಹರದ್, ಬಹೇರ, ಆಮ್ಲಾ, ಅರಿಶಿನ, ಪುನರಾವ, ಪುದಿನಾ ಮತ್ತು ಸುಹಾಗಾದಂತಹ ಮುಂತಾದ 10 ಪರಿಣಾಮಕಾರಿ ಆಯುರ್ವೇದ ಗಿಡಮೂಲಿಕೆಗಳ ಮಿಶ್ರಣದಿಂದ ತಯಾರಿಸಲಾಗಿದೆ. ಇದು ಕಣ್ಣಿನ ಆಯಾಸ, ಕಣ್ಣುಗಳಲ್ಲಿ ಶುಷ್ಕತೆ ಮುಂತಾದ ಕಣ್ಣಿನ ಸಮಸ್ಯೆಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಮತ್ತು ಕಣ್ಣಿನ ಆಯಾಸವನ್ನು ಕಡಿಮೆ ಮಾಡುತ್ತದೆ ಹಾಗೂ ಕಣ್ಣುಗಳನ್ನು ಆರೋಗ್ಯಕರವಾಗಿರುವಂತೆ ರಕ್ಷಿಸುತ್ತದೆ. ಇದು ಆಯುರ್ವೇದ ಆದ್ದರಿಂದ, ಸುರಕ್ಷಿತ ಮತ್ತು ಬಳಸಲು ಪರಿಣಾಮಕಾರಿಯಾಗಿದೆ. ಅಲ್ಲದೆ, ಇದು ಕಣ್ಣುಗಳ ಮೇಲೆ ಯಾವುದೇ ತರಹದ ಅಡ್ಡ ಪರಿಣಾಮಗಳನ್ನು ಉಂಟುಮಾಡುವುದಿಲ್ಲ.

AYURVEDIC EYE RELIEF DROPS
24x7 Helpline: 8196822222 • www.eyemantra.com